ರಾಮಾಶ್ವಮೇಧಸಾರಸಂಗ್ರಹ.

ಮ. ಪ್ರ. ಪೂಜಾರ.

ಬೆಲೆ ೧॥ ರೂಪಾಯಿ.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ
ಮಾಳಮಡ್ಡಿ, ಧಾರವಾಡ.

ಶ್ರೀ

ರಾಮಾಶ್ವಮೇಧಸಾರಸಂಗ್ರಹ.

ಇದನ್ನು

ಮಹಾದೇವ ಪ್ರಭಾಕರ ಪೂಜಾರ
ಕನ್ನಡ ಪಂಡಿತ ಟ್ರೇನಿಂಗ್ ಕಾಲೇಜ್
ಫಾರ್ ಮೆನ್ ಧಾರವಾಡ
ಇವರು ಸಂಗ್ರಹಿಸಿದರು.

೧೯೨೦.

ಶ್ರೀ ಮಹಾವೀರ ಪ್ರೆಸ್ ಬೆಳಗಾಂವ.

ಬೆಳಗಾವಿಯೊಳಗೆ

ದೇವೇಂದ್ರ ಷಡೆಪ್ಪಾ ಚೌಗುಲೆಯುವರು ತಮ್ಮ ಶ್ರೀಮಹಾವೀರ ಮುದ್ರಣಾಲಯದಲ್ಲಿ ಮುದ್ರಿಸಿದರು.

ಧಾರವಾಡದೊಳಗೆ

ಮ। ರಾ। ರಾಮಚಂದ್ರ ಮಧ್ವ ಮಹಿಷಿ ಬಿ. ಎ. ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜ ಇವರು ಪ್ರಕಟಿಸಿದರು.

ಪ್ರಸ್ತಾವನೆ.

ಯಾವದೊಂದು ಜನಾಂಗದಲ್ಲಿ ಯಾವದೊಂದು ಕಾಲಕ್ಕೆ ರೂಢವಾಗಿರುವ ಭಾಷೆಯು ಆಯಾ ಜನಾಂಗದ ಆಯಾಕಾಲದ ಆಚಾರ ವಿಚಾರ ನಡೆನುಡಿ ಇವುಗಳ ದ್ಯೋತಕವಾಗಿರುವದೆಂದು ಭಾಷಾಶಾಸ್ತ್ರಜ್ಞರ ಸಿದ್ಧಾಂತವುಂಟು. ಈ ಸಿದ್ಧಾಂತವನ್ನು ಒರೆಗಲ್ಲಿಗೆ ಹಚ್ಚಿ ಕನ್ನಡ ಭಾಷೆಯ ವಿಷಯವಾಗಿ ವಿಚಾರಮಾಡಿ ನೋಡಿದರೆ ನೃಪತುಂಗನು ಕವಿರಾಜಮಾರ್ಗವನ್ನು ಬರೆದ ಕಾಲದಿಂದ ಆಚೆಗೆ ಅಂದರೆ ಕ್ರಿಸ್ತಶಕದ ೯ನೆಯ ಶತಮಾನದ ಪೂರ್ವದಲ್ಲಿ ಕನ್ನಡ ಭಾಷೆಯ ಸ್ವರೂಪವೂ, ಅದರ ಮೇಲಿಂದ ಕನ್ನಡಿಗರ ಆಚಾರ ವಿಚಾರಗಳೂ, ನಡೆನುಡಿಗಳೂ ಇಂಥವೇ ಇದ್ದವೆಂದು ನಿರ್ಣಯಿಸುವಷ್ಟು ಗ್ರಂಥಗಳು ಇನ್ನೂ ಉಪಲಬ್ಧವಾಗಿರುವದಿಲ್ಲ.

ಕನ್ನಡ ಭಾಷೆಯು ಪಂಚದ್ರಾವಿಡ ಭಾಷೆಗಳ ವರ್ಗಕ್ಕೆ ಸೇರಿಕೊಂಡಿದ್ದು, ಅದು ಸಮಕಾಲೀನವಾದ ಸಂಸ್ಕೃತ ಭಾಷೆಗೆ ಪ್ರತಿಸ್ಪರ್ಧಿಯಾಗಿತ್ತೆಂಬುವದರಲ್ಲಿ ಸಂದೇಹವಿಲ್ಲ. ಕನ್ನಡ ಭಾಷೆಯು ಸಂಸ್ಕೃತಭಾಷೆಯಿಂದ ಪೋಷಿತವಾದಂತೆ ಸಂಸ್ಕೃತ ಭಾಷೆಯಾದರೂ ಕೆಲಮಟ್ಟಿಗೆ ಕನ್ನಡ ಭಾಷೆಯಿಂದ ಪುಷ್ಟವಾಗಿರುವದು. ಶಾರೀರಿಕ ಶಾಸ್ತ್ರಕ್ಕೆ ಸಂಬಂಧಪಟ್ಟ ಅನೇಕ ಶಬ್ದಗಳು ಕನ್ನಡ ಭಾಷೆಯಿಂದ ಸಂಸ್ಕೃತಭಾಷೆಯಲ್ಲಿ ಸೇರಿಕೊಂಡಿರುವವೆಂಬದನ್ನು ಭಾಷಾಶೋಧಕರು ಕಂಡು ಹಿಡಿದಿರುವರು. ಈ ವಿಚಾರವು ಹೇಗೇ ಇರಲಿ; ಕನ್ನಡ ಹಾಗೂ ಸಂಸ್ಕೃತ ಈ ಭಾಷೆಗಳಲ್ಲಿ ಜನ್ಯಜನಕ ಭಾವ ಸಂಬಂಧವಿಲ್ಲವೆಂಬುವ ಮಾತು ನಿರ್ವಿವಾದವಾದದ್ದು.

ಕನ್ನಡದಲ್ಲಿ ಬರೆದ ತೀರ ಪ್ರಾಚೀನ ಗ್ರಂಥಗಳು ಉಪಲಬ್ಧವಿಲ್ಲದ ಮೂಲಕ ಅತಿಪ್ರಾಚೀನ ಕಾಲದಲ್ಲಿ ಕನ್ನಡ ಭಾಷೆಯ ಸ್ವರೂಪವು ಇಂಥದೇ ಇತ್ತೆಂದು ನಿರ್ಣಯಿಸುವದು ಶಕ್ಯವಿಲ್ಲ. ಆ ಕಾಲದಲ್ಲಿ ಕನ್ನಡ ಭಾಷೆಗೆ ಸ್ವತಂತ್ರವಾದ ಲಿಪಿಯು ಇತ್ತೋ ಇಲ್ಲವೋ ಎಂಬುವದು ಕೂಡ ಸಂಶಯಾಸ್ಪದವಾಗಿದೆ. ಅಶೋಕನ ಕಾಲದಿಂದೀಚೆಗೆ ಕನ್ನಡ ಭಾಷೆಯ ಲಿಪಿಯು, ಆತನ ಶಾಸನಲಿಪಿಯು ರೂಪಾಂತರಹೊಂದಿ ಮಾರ್ಪಟ್ಟಿತೆಂದೂ, ಅದು ಪ್ರಾಯಃ ಸಂಸ್ಕೃತ ಲಿಪಿಯನ್ನೇ ಹೋಲುವದೆಂದೂ ಊಹಿಸಬೇಕಾಗುವದು. ಇಂಥ ಸ್ಥಿತಿಯಲ್ಲಿ ಭಾಷೆಯಿಂದ ಆ ಕಾಲದ

ಕನ್ನಡಿಗರ ನಡೆನುಡಿಗಳನ್ನೂ, ಆಚಾರವಿಚಾರಗಳನ್ನೂ ನಿರ್ಣಯಿಸುವದು ದೂರಾಪಾಸ್ತವು. ನೃಪತುಂಗನಿಂದೀಚೆಗೆ ಕನ್ನಡ ಗ್ರಂಥಗಳು ಉಪಲಬ್ಧವಾಗಿರುವವೆಂದು ಮೇಲೆ ಸೂಚಿಸಿದೆ. ಆದರೆ ಆ ಗ್ರಂಥಗಳ ಭಾಷೆಯು ಸಹಜವಾದದ್ದಿರದೆ ಸಂಸ್ಕೃತ ಹಾಗೂ ಕನ್ನಡ ಇವುಗಳ ಸಮ್ಮಿಶ್ರಣದಿಂದುಂಟಾದ ಒಂದು ಬಗೆಯ ಕೃತ್ರಿಮ ಭಾಷೆಯಾಗಿದೆ.

ಕನ್ನಡ ಭಾಷೆಯ ಏಳ್ಗೆಯನ್ನು ಮಾಡುವದಕ್ಕೆ ಪೂರ್ವಕವಿಗಳಲ್ಲಿ ಹಲವರು ಹಲವು ಮಾರ್ಗಗಳಿಂದ ಪ್ರಯತ್ನಿಸಿರುವರು. ಜೈನಕವಿಗಳೂ ವೀರಶೈವ ಕವಿಗಳೂ ಕನ್ನಡದಲ್ಲಿ ತಮ್ಮ ಧರ್ಮ ಮತಗಳ ಪುರಾಣ ಗ್ರಂಥಗಳನ್ನೂ ಕಾವ್ಯ ಗ್ರಂಥಗಳನ್ನೂ ಬಹಳವಾಗಿ ಬರೆದರು. ಕೆಲವರು ಬ್ರಾಹ್ಮಣಕವಿಗಳೂ ಕಾವ್ಯಗಳನ್ನು ಬರೆದರು. ಈ ಮಾರ್ಗದಿಂದ ಆದ ಕನ್ನಡದ ಬೆಳವಣಿಗೆಗೆ ಸಂಸ್ಕೃತವು ಬಹಳವಾಗಿ ಸಹಾಯ ಮಾಡಿತು. ಕನ್ನಡ ಕವಿಗಳು ಸಂಸ್ಕೃತ ಕವಿಗಳನ್ನು ಹಿಂಬಾಲಿಸಿ ತಮ್ಮ ಭಾಷೆಗೆ ಸುಸ್ವರೂಪವನ್ನು ತಂದು ಕೊಡುವದರಲ್ಲಿ ಬಹಳವಾಗಿ ಹೆಣಗಿದರು. ಬರಬರುತ್ತ ಕನ್ನಡಕ್ಕೆ ಸಂಸ್ಕೃತದ ಸಹಾಯವು ಮೇರೆದಪ್ಪಿತು. ಸಂಸ್ಕೃತ ಶಬ್ದಗಳು ಕನ್ನಡ ಶಬ್ದಗಳ ಸ್ಥಾನವನ್ನು ಆಕ್ರಮಿಸತೊಡಗಿದವು. ಹೊಸ ಶಬ್ದಗಳ ರಚನೆಯು ಕಟ್ಟಾಯಿತು. ಕನ್ನಡ ಶಬ್ದಗಳು ಹಿಂದೆಬಿದ್ದವು. ಸಂಸ್ಕೃತ ಶಬ್ದಗಳೆದುರಿಗೆ ಕನ್ನಡ ಶಬ್ದಗಳ ಸಾಮರ್ಥ್ಯವು ಕುಗ್ಗಿದಂತೆ ಕಾಣಿಸತೊಡಗಿತು; ಸಂಸ್ಕೃತ ಶಬ್ದಗಳ ಸ್ವಾರಸ್ಯವೂ ಸಾಮರ್ಥ್ಯವೂ ಶೋಭೆಯೂ ಕನ್ನಡ ಶಬ್ದಗಳಲ್ಲಿ ಇಲ್ಲವೆಂಬಂತೆ ಎನಿಸಹತ್ತಿತು. ಆದರಿಂದ ಸಂಸ್ಕೃತ ಶಬ್ದಗಳು ರಾಶಿ ರಾಶಿಯಾಗಿ ಕನ್ನಡದಲ್ಲಿ ತುಂಬ ಹತ್ತಿದವು. ಕನ್ನಡದ ವಿಭಕ್ತಿ ಪ್ರತ್ಯಯಗಳು ಮಾತ್ರ ಇರುವಂಥ ಬರಿಯ ಸಂಸ್ಕೃತ ಶಬ್ದಗಳಿಂದ ತುಂಬಿದ ಕವಿತೆಗಳು ತಲೆದೋರಹತ್ತಿದವು.

ಭಾಷೆಯ ಬೆಳವಣಿಗೆಯ ಈ ದಾರಿಯು ಕೆಲಮಟ್ಟಿಗೆ ಸರಿಯಾದದ್ದಲ್ಲವೆಂದು ಕೆಲವು ಜನ ವಿದ್ವಾಂಸರ ಮನಸ್ಸಿಗೆ ಹೊಳೆಯಿತು. ಹೆಸರಿಗೆ ಕನ್ನಡ ಗ್ರಂಥಗಳೆನಿಸಿದರೂ ಅವುಗಳಲ್ಲಿ ನೂರಕ್ಕೆ ೭೦-೮೦ ಸಂಸ್ಕೃತ ಶಬ್ದಗಳಿರುವದು ಅವರಿಗೆ ಸರಿದೋರಲಿಲ್ಲ. ತಮ್ಮ ಭಾಷೆಯ ಶಬ್ದಗಳನ್ನು ಹಿಂದೆ ದೂಡಿ ಪರಭಾಷೆಯ ಶಬ್ದಗಳನ್ನು ಬಳಕೆಯಲ್ಲಿ ತರುತ್ತ ಹೋಗುವದು ನಿಜವಾದ ಭಾಷೆಯು ಏಳಿಗೆಯಲ್ಲವೆಂದು ಅವರಿಗೆ ತೋರಿತು.

ಮೇಲಿನ ವಿವರಣೆಯಿಂದ ಸಾಧಾರಣವಾಗಿ ನಾವು ಹಳಗನ್ನಡ ಭಾಷೆಯೆಂದು ಕರೆಯುವ ಗ್ರಂಥಸ್ಥ ಭಾಷೆಯಲ್ಲಿ ಸಂಸ್ಕೃತ ಭಾಷೆಯ ಅಂಶವು ಮಿತಿ ಮೀರಿ ಇರುವದೆಂಬುವದು ಸ್ಪಷ್ಟವಾಗುವದು. ಸಂಸ್ಕೃತ ಭಾಷೆಯು ತನ್ನ ವರ್ಚಸ್ಸನ್ನು ಕನ್ನಡ ಭಾಷೆಯ ಮೇಲೆ ಹೆಚ್ಚು ಹೆಚ್ಚು ಬೀಳಿಸುತ್ತ ಹೋದಂತೆ ಆ ಭಾಷೆಯ ಪದಲಾಲಿತ್ಯದ ಮುಂದೆ ಸಮಾನಾರ್ಥಕವಾದ ಕನ್ನಡ ಶಬ್ದಗಳು ಒರಟಾಗಿದ್ದಂತೆ ತೋರಹತ್ತಿದವು. ಕ್ರಮ ಕ್ರಮದಿಂದ ಅಚ್ಚಗನ್ನಡ ಶಬ್ದಗಳು ಬಳಕೆಯಲ್ಲಿ ಬಾರದೆ ಅವುಗಳ ಸ್ಥಳವನ್ನು ಸಂಸ್ಕೃತ ಶಬ್ದಗಳು ಆಕ್ರಮಿಸಿಕೊಂಡವು. ಇದರಿಂದ ಕಾಲಕ್ರಮದಿಂದ ಅಚ್ಚಗನ್ನಡ ಶಬ್ದಗಳು ಅಪರಿಚಿತವಾಗತೊಡಗಲು ಕನ್ನಡಭಾಷೆಯುಲ್ಲಿ ಹಳಗನ್ನಡ ಹಾಗೂ ಹೊಸಗನ್ನಡ ಎಂಬ ಎರಡು ಪ್ರಭೇದಗಳುಂಟಾಗಿ ಅವುಗಳ ನಡುವಿನ ಅಂತರವು ಕ್ರಮವಾಗಿ ಬೆಳೆಯುತೊಡಗಿತು.

ಯಾವದೊಂದು ಭಾಷೆಯಲ್ಲಿ ಒಮ್ಮೆ ಬಂದು ಸೇರಿದ ಪರಭಾಷೆಯ ಶಬ್ದಗಳನ್ನು ಹೊರದೂಡುವದು ಸುಲಭಸಾಧ್ಯವಲ್ಲ. ಹೀಗೆ ಹೇಳುವಾಗ ಒಂದು ಭಾಷೆಯಲ್ಲಿ ಮತ್ತೊಂದು ಭಾಷೆಯ ಶಬ್ದಗಳು ಸೇರ್ಪಡೆಹೊಂದುವದು ಆ ಭಾಷೆಗೆ ಅಷ್ಟೊಂದು ಹೀನತೆಯನ್ನುಂಟು ಮಾಡುತ್ತದೆಯೆಂದು ಹೇಳಿದಂತಲ್ಲ. ವಾಙ್ಮಯವು ಪ್ರಗಮನಶೀಲವಾದುದರಿಂದ ಆ ಪ್ರಗಮನಶೀಲ ವಾಙ್ಮಯದಲ್ಲಿ ಪರಭಾಷೆಗಳಿಂದ ಎಷ್ಟೋ ಹೊಸ ಹೊಸ ಶಬ್ದಗಳು ಯಾವದೊಂದು ಭಾಷೆಯಲ್ಲಿ ಬಂದು ಸೇರಿ ಅದರ ನಿರ್ವಾಹವು ಸಾಗುವಂತೆಯೂ ಅದು ಪರಿಪೂರ್ಣವಾಗುವಂತೆಯೂ ಮಾಡಲೇಬೇಕಾಗುವದು. ಈ ವಿಚಾರವು ನಾವು ಹಳಗನ್ನಡವೆಂದು ಕರೆಯುವ ಭಾಷೆಗೆ ಸರಿಬೀಳುವದಿಲ್ಲ. ಆ ಭಾಷೆಯಲ್ಲಿ ಪ್ರಚಾರದಲ್ಲಿದ್ದ ಶಬ್ದಗಳನ್ನು ಬದಿಗೊತ್ತಿ ಉದ್ದಾಮ ಕವಿಗಳೆನಿಸಿಕೊಂಡವರು ತಮ್ಮ ಪಾಂಡಿತ್ಯದ ದ್ಯೋತಕವೆಂದು ಪ್ರೌಢವಾದ ಶೈಲಿಯುಂಟಾಗುವಂತೆ ಮಿತಿಮೀರಿ ಸಂಸ್ಕೃತ ಶಬ್ದಗಳನ್ನು ಪ್ರಯೋಗಿಸಿದ್ದದ್ದು ಕನ್ನಡ ಭಾಷೆಯ ಸ್ವತಂತ್ರವಾದ ಏಳಿಗೆಗೆ ಕುಂದನ್ನುಂಟು ಮಾಡಿತು.

ಹಳಹೊಸಗನ್ನಡಗಳಲ್ಲಿ ಕಂಡುಬರುವ ಅಭ್ಯಂತರಗಳನ್ನು ಷಟ್ಪದೀಕಾವ್ಯಗಳು ಕೆಲಮಟ್ಟಿಗಾದರೂ ಹೋಗಲಾಡಿಸಿದವು. ಆದರೂ ಸಂಸ್ಕೃತ ಶಬ್ದಗಳ ಆಕ್ರಮಣವನ್ನು ಅವು ತಡೆಯುಲಿಲ್ಲ. ಸಂಸ್ಕೃತ ಶಬ ಗಳು ಮೊದಲಿನಂತೆಯೇ ಕನ್ನಡ ಗ್ರಂಥಗಳಲ್ಲಿ ಮೆರೆಯುತ್ತಿದ್ದವು. ಸಂಸ್ಕೃತ ಭಾಷೆಯ ಸಹಾಯದಿಂದ

ಕನ್ನಡ ಭಾಷೆಯು ಪರಿಪೂರ್ಣತೆಯನ್ನು ಹೊಂದಿ ಎಷ್ಟೋ ವಿಚಾರಗಳನ್ನು ವ್ಯಕ್ತಪಡಿಸುವದಕ್ಕೆ ಸಮರ್ಥವಾದದ್ದಕ್ಕಾಗಿ ಸಂಸ್ಕೃತಕ್ಕೆ ಕನ್ನಡಭಾಷೆಯು ಅತ್ಯಂತ ಋಣಿಯಾಗಿರುವದೇನೋ ನಿಜ. ಆದರೆ ಸಂಸ್ಕೃತಭಾಷೆಯ ಶಬ್ದಗಳು ಸಮಾನಾರ್ಥಕವಾದ ಕನ್ನಡ ಶಬ್ದಗಳನ್ನು ಬದಿಗೊತ್ತಿ ಆಧುನಿಕರಾದ ಕನ್ನಡಿಗರಿಗೆ ಅವುಗಳ ಅರ್ಥವು ತಿಳಿಯದಂತೆ ಮಾಡಿರುವದು ಖೇದಕರವಾದ ಸಂಗತಿಯು. ಕನ್ನಡ ಶಬ್ದಗಳು ಇಲ್ಲದ ಪಕ್ಷದಲ್ಲಿ ಸಂಸ್ಕೃತದಿಂದ ಇಲ್ಲವೆ ಬೇರೆ ಭಾಷೆಗಳಿಂದ ಆಯಾಶಬ್ದಗಳನ್ನು ಆರಿಸಿ ತೆಗೆದುಕೊಂಡು ಅವುಗಳನ್ನು ಕನ್ನಡದಲ್ಲಿ ಉಪಯೋಗಿಸಬಹುದು. ಆದರೆ ಅನೇಕ ವರ್ಷಗಳಿಂದ ಕನ್ನಡದಲ್ಲಿ ರೂಢವಾಗಿರುವ ಶಬ್ದಗಳನ್ನು ಬದಿಗೊತ್ತಿ ಅವುಗಳ ಸ್ಥಳದಲ್ಲಿ ಪರಭಾಷೆಯ ಶಬ್ದಗಳನ್ನು ಪ್ರಯೋಗಿಸುವದು ಕೇವಲ ಸ್ವಾಭಿಮಾನ ಶೂನ್ಯತೆಯನ್ನು ವ್ಯಕ್ತಪಡಿಸುವದು.

ಕೆಲವುಜನ ಕನ್ನಡದ ಉದ್ದಾಮಕವಿಗಳು ಸ್ವಾಭಾವಿಕವಾದ ಕನ್ನಡಶಬ್ದಗಳಿಗೆ ಅರ್ಧಚಂದ್ರವನ್ನೀಯುವದೂ ಅವು ತಲೆಯೆತ್ತಿದಾಗ ಬಗ್ಗುಬಡಿಯುವ ಪ್ರಯತ್ನವನ್ನು ಮಾಡತೊಡಗಿದುದೂ ಸ್ವಾಭಿಮಾನಪ್ರೇರಿತರಾದ ಎಷ್ಟೋ ಭಾಷಾಭಿಮಾನಿಗಳಿಗೆ ಸರಿದೋರಲಿಲ್ಲ. ಅವರು ಸಮಾಧಿಹೊಂದಿದ ಅಚ್ಚಗನ್ನಡ ಶಬ್ದಗಳು ಪುನರ್ಜನ್ಮಹೊಂದಿ ಬಳಕೆಯಲ್ಲಿ ಬರುವಂತೆ ಕೆಲವೊಂದು ಉದ್ದೇಶವೆನ್ನಿಟ್ಟುಕೊಂಡು ಗ್ರಂಥಗಳನ್ನು ಬರೆಯಲು ಯತ್ನಿಸಿದರು. ಸಂಸ್ಕೃತ ಶಬ್ದಗಳಿಗೆ ಪ್ರತಿಯಾದ ಎಷ್ಟೋ ಕನ್ನಡ ಶಬ್ದಗಳನ್ನು ಹೊಸದಾಗಿ ರಚಿಸಿಕೊಂಡು ಅವುಗಳನ್ನು ತಮ್ಮ ಗ್ರಂಥಗಳಲ್ಲಿ ಪ್ರಯೋಗಿಸಿದರು. ಕ್ರಿ. ಶ. ೧೧೧೨ರಲ್ಲಿದ್ದ ನಯಸೇನನೆಂಬ ಕವಿಯು—

ಪೊಸಗನ್ನಡದಿಂವ್ಯಾವ ।
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ ॥
ತಿಸಿಕೂಡಲಾರದಕ್ಕಟ ।
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ? ॥ ೧ ॥
ಸಕ್ಕದಮಂ ಪೇಳ್ವೊಡೆನೆರೆ ।
ಸಕ್ಕದಮಂ ಪೇಳ್ಗೆ ಶುದ್ಧಕನ್ನಡದೊಳ್ ತಂ ॥
ದಿಕ್ಕುವುದೆ ಸಕ್ಕದಂಗಳ ।
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ॥ ೨ ॥

ಎಂದು ಹೇಳಿ ಕನ್ನಡದಲ್ಲಿ ಸಂಸ್ಕೃತದ ಅನಾವಶ್ಯಕ ಶಬ್ದಗಳನ್ನು ಸೇರಿಸಬಾರದೆಂದು ಸಾರಿ ಹೇಳಿದನು. ಆಂಡಯ್ಯನೆಂಬ ಕವಿಯು ಕಾಲದಲ್ಲಿ (ಕ್ರಿ. ಶ. ೧೨೩೫) ಸಂಸ್ಕೃತ ಶಬ್ದಗಳನ್ನು ಪ್ರಾಚೀನ ಕವಿಗಳು ನಿರರ್ಗಳವಾಗಿ ಪ್ರಯೋಗಿಸುವದನ್ನು ನೋಡಿ, ಸಂಸ್ಕೃತದ ಸಹಾಯವಿಲ್ಲದೆ ಕನ್ನಡದಲ್ಲಿ ಕಾವ್ಯವನ್ನು ಬರೆಯಲು ಶಕ್ಯವೇ ಇಲ್ಲವೆಂಬ ಭಾವನೆಯು ಜನರಲ್ಲಿ ಉಂಟಾಗಿರಲು, ಅದನ್ನು ನೀನು ಕಳೆಯಬೇಕೆಂದು ಕೆಲವರು ಭಾಷಾಭಿಮಾನಿಗಳು ಕೇಳಿಕೊಳ್ಳಲು ಈ ಆಂಡಯ್ಯಕವಿಯು ತನ್ನ ಕಾಲದಲ್ಲಿ ಬಳಕೆಗೆ ಬಂದು ಕನ್ನಡದವೆನಿಸಿಕೊಂಡ ತದ್ಭವ ಶಬ್ದಗಳನ್ನು ಸೇರಿಸಿಕೊಂಡು ಸಂಸ್ಕೃತ ಶಬ್ದಗಳನ್ನು ಮಾತ್ರ ಸೇರಿಸಿಕೊಳ್ಳದೆ ಉತ್ತಮವಾದ ಕಾವ್ಯವನ್ನು ಬರೆದು ತೋರಿಸಿ ಸಂಸ್ಕೃತ ಶಬ್ದಗಳು ಅನಾವಶ್ಯಕವಾಗಿ ಭಾಷೆಯಲ್ಲಿ ಸೇರುತ್ತಿವೆಯೆಂಬುವ ಭಾವವನ್ನು ವ್ಯಕ್ತಮಾಡಿದ್ದಲ್ಲದೆ ಕಾವ್ಯಗಳಲ್ಲಿ ಮತ್ತೆ ಕವಿಗಳಿಂದ ಪ್ರಯೋಗಿಸಲ್ಪಟ್ಟರೆ ಹಳೆಯ ಕನ್ನಡ ಶಬ್ದಗಳು ಮತ್ತೆ ಬಳಕೆಯಲ್ಲಿ ಬರಬಹುದೆಂಬ ವಿಚಾರವನ್ನು ಜನರ ಮುಂದೆ ಇಟ್ಟನು. ಇದಕ್ಕೂ ಮುಂದಿನ ಕಾಲದಲ್ಲಿ ಆಗಿಹೋದ ಅನೇಕ ಕವಿಗಳು ಕನ್ನಡವು ಹೀನವಾದ ಭಾಷೆಯಲ್ಲವೆಂದೂ "ಸುಲಿದಬಾಳೆಯ ಹಣ್ಣಿನಂದದೆ" ಸುಲಲಿತವಾದುದೆಂದೂ ಕನ್ನಡದಲ್ಲಿ ಕನ್ನಡಿಯಲ್ಲಿ ಹೇಗೋ ಹಾಗೆ ಎಲ್ಲ ವಿಚಾರಗಳು ಪ್ರತಿಫಲಿಸಬಹುದೆಂದು ಹೇಳಿ ಕನ್ನಡದಲ್ಲಿ ಜನರ ಆದರವನ್ನು ಹೆಚ್ಚಿಸುವದಕ್ಕೆ ಪ್ರಯತ್ನಮಾಡಿದರು. ಇವರೆಲ್ಲರ ಪ್ರಯತ್ನಗಳಿಂದ ಕನ್ನಡದ ಏಳ್ಗೆಯು ಆವಶ್ಯಕವಾಗಿಯೂ ಶಕ್ಯವಾಗಿಯೂ ಇರುವದೆಂಬ ವಿಚಾರವೂ, ಅಪರಿಚಿತವೆನಿಸಿದ ಕನ್ನಡ ಶಬ್ದಗಳು ಮತ್ತೆ ಪರಿಚಿತವಾಗಿ ಬಳಕೆಯಲ್ಲಿ ಬರಬಹುದೆಂಬ ವಿಚಾರವೂ ತಲೆದೋರಿದವು.

ಕನ್ನಡ ಶಬ್ದಗಳನ್ನು ಗ್ರಂಥಗಳಲ್ಲಿ ಪ್ರಯೋಗಿಸುತ್ತ ನಡೆದರೆ ಅವು ಮತ್ತೆ ಬಳಕೆಯಲ್ಲಿ ಬರಬಹುದೆಂಬೀ ವಿಚಾರದಿಂದ ಪ್ರೇರಿತರಾಗಿ ಕನ್ನಡದ ಅಭಿವೃದ್ಧಿಯನ್ನು ಮಾಡಲೆಳಸಿದ ಸ್ವಭಾಷಾಭಿಮಾನಿಗಳಲ್ಲಿ ರಾಮಾಶ್ವಮೇಧಕಾರನು ಪ್ರಮುಖನಾಗಿದ್ದಾನೆ. ಈತನು ತನ್ನ ಮನೋಹರವಾದ ಗದ್ಯಕಾವ್ಯದಲ್ಲಿ ಹಳೆಯ ಶಬ್ದಗಳನ್ನು ಬಹಳವಾಗಿ ಪ್ರಯೋಗಿಸಿರುವನು. ಸಂಸ್ಕೃತ ಶಬ್ದಗಳನ್ನು ಸಂಪೂರ್ಣವಾಗಿ ಪ್ರಯೋಗಿಸಬಾರದೆಂದು ಈತನ ಮತವಲ್ಲ. ಅನಾವಶ್ಯಕವಾಗಿದ್ದರೂ ಅಲ್ಲಲ್ಲಿ ಸಂಸ್ಕೃತ ಶಬ್ದಗಳನ್ನು ಪ್ರಯೋಗಿಸಿ ಸಂಸ್ಕೃತ ಶಬ್ದ ಮಿಶ್ರಕಾವ್ಯ

ಗಳನ್ನೋದುವ ರೂಢಿಯುಳ್ಳ ಕನ್ನಡಿಗರನ್ನೂ ತನ್ನ ಗ್ರಂಥದ ಕಡೆಗೆ ಎಳೆದುಕೊಂಡಿರುವನು. ಆದರೂ ಮುಖ್ಯವಾಗಿ ಬಳಕೆದಪ್ಪಿದ ಎಷ್ಟೋ ಕನ್ನಡ ಶಬ್ದಗಳನ್ನು ವಿಪುಲವಾಗಿ ಪ್ರಯೋಗಿಸಿದನು. ಸಂಸ್ಕೃತ ಶಬ್ದಗಳನ್ನು ಪ್ರಯೋಗಿಸುವದರಿಂದ ಕನ್ನಡದ ಶೋಭೆಯು ಹೆಚ್ಚುವದೆಂಬ ಮೋಹವು ಈತನನ್ನು ಪೂರ್ಣವಾಗಿ ಬಿಡಲಿಲ್ಲ. "ಸಕ್ಕದಮೊಂದೆ ರನ್ನವಣಿಯಂ ಪೊನ್ನಿಂ ಬಿಗಿದಂತೆ ಎಸೆಗುಂ" ಎಂದೂ, ಕನ್ನಡ ಶಬ್ದಗಳ ನಡುವೆ ಅಲ್ಲಲ್ಲಿ ಸಂಸ್ಕೃತ ಶಬ್ದಗಳ ಸೇರುವೆಯು "ಕರ್ಮಣಿ ಸರದೊಳ್ ಚೆಂಬವಳಮಂ ಕೋದಂತಿರೆ" ಆಗುವದೆಂದೂ ಅಭಿಪ್ರಾಯಪಟ್ಟಿರುವನು. ಆದರೆ "ಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರ ಮಣಿಮುಕುಟ ತಟಘಟಿತ" ಈ ತರದ ಉದ್ದುದ್ದ ಸಂಸ್ಕೃತ ಸಮಾಸ ಪದಗಳು ಕನ್ನಡದಲ್ಲಿ ಸೇರುವದು ಈತನಿಗೆ ಸ್ವಲ್ಪವೂ ಇಷ್ಟವಿರಲಿಲ್ಲವೆಂಬುವದನ್ನು ಗ್ರಂಥಾರಂಭದಲ್ಲಿ ತೋರ್ಪಡಿಸಿರುವನು. ಈ ಕಾರಣಗಳಿಂದ ಈತನ ಭಾಷೆಯು ಸಂಸ್ಕೃತಾನುಯಾಯಿಗಳಾದ ಪ್ರಾಚೀನ ಕವಿಗಳ ಭಾಷೆಗಿಂತ ಹೆಚ್ಚಾಗಿ ಕನ್ನಡ ಶಬ್ದ ಪ್ರಚುರವಾಗಿದೆ. ಇದರಿಂದ ಈತನ ಗ್ರಂಥವು ಭಾಷಾಭ್ಯಾಸಿಗಳ ಆದರಕ್ಕೆ ಪಾತ್ರವಾಗಿರುವದು. ಪದ್ಯಕಾವ್ಯಗಳ ವಿಷಯದಲ್ಲಿ ಈ ಕವಿಯು ತನ್ನ ಗ್ರಂಥದಲ್ಲಿ "ಪದ್ಯಂ ವಧ್ಯಂ ಗದ್ಯಂ ಹೃದ್ಯಂ ಹೃದ್ಯಮಪ್ಪಗದ್ಯದೊಳೆ ಪೇಳ್ವುದು" ಎಂದು ಮನೋರಮೆಯ ಬಾಯಿಂದ ನುಡಿಯಿಸಿ ಪದ್ಯಕಾವ್ಯಕ್ಕಿಂತ ಗದ್ಯಕಾವ್ಯವೇ ಶ್ರೇಷ್ಠವೆಂಬ ಭಾವವನ್ನು ವ್ಯಕ್ತಪಡಿಸಿರುವನು. ಆದರೆ ಈ ಮಾತು ಸರ್ವಮಾನ್ಯವಾಗಲಾರದೆಂಬುವದನ್ನು ಬೇರೆ ಹೇಳಬೇಕಾಗಿಲ್ಲ.

ರಾಮಾಶ್ವಮೇಧವು ಸಂಸ್ಕೃತದಲ್ಲಿ ಒಂದು ಪುರಾಣವು. ಅದರಲ್ಲಿ ಶ್ರೀರಾಮನು ಅಶ್ವಮೇಧವನ್ನು ಮಾಡಿದ ಕಥೆಯು ವಿಸ್ತಾರವಾಗಿ ಹೇಳಲ್ಪಟ್ಟಿರುವದು. ಅಲ್ಲಲ್ಲಿ ಪುರಾಣೋಚಿತವಾದ ಬೇರೆ ವಿಷಯುಗಳೂ ಸೇರಿರುವವು. ಅದರಲ್ಲಿ ೬೮ ಅಧ್ಯಾಯಗಳಿರುವವು. ಇಷ್ಟು ವಿಸ್ತಾರವಾದ ಗ್ರಂಥದಿಂದ ಕಥಾನಕವನ್ನಷ್ಟೇ ತೆಗೆದುಕೊಂಡು ಋತು, ವನ, ಪುರ, ಯುದ್ಧ ವರ್ಣನ ಮೊದಲಾದ ಕಾವ್ಯಾಂಗ ವರ್ಣನೆಗಳನ್ನು ಸೇರಿಸಿ ಕನ್ನಡದಲ್ಲಿ ಗದ್ಯಕಾವ್ಯವೆನಿಸುವಂತೆ ಗ್ರಂಥವನ್ನು ರಚಿಸಿದ್ದು ಕವಿಯ ಯೋಗ್ಯತೆಯನ್ನು ಚೆನ್ನಾಗಿ ತೋರ್ಪಡಿಸುವದು. ಈ ಕವಿಯು ಪ್ರಾಚೀನ ಕವಿಗಳ ಮಾರ್ಗವನ್ನೇ ಹಿಂಬಾಲಿಸಬೇಕೆಂಬ ನಿಯಮವನ್ನು ಇಟ್ಟುಕೊಳ್ಳಲಿಲ್ಲ. ತನ್ನ ಗ್ರಂಥವು ಆಧುನಿಕರಿಗೆ ಮನೋಹರವಾಗ

ಬೇಕೆಂದು ಸಾಧ್ಯವಿದ್ದಮಟ್ಟಿಗೆ ಯತ್ನಿಸಿರುವನು. ಗ್ರಂಥಾರಂಭದಲ್ಲಿರುವ ವರ್ಷ ಋತುವರ್ಣನವು ಹೊಸತರದ್ದಾಗಿದೆ. ನಡುನಡುವೆ ಕವಿಯು ತನ್ನ ಪತ್ನಿಯೊಡನೆ ಮಾಡಿದ ಸಂಭಾಷಣಗಳು ಹೃದಯಂಗಮವಾಗಿವೆ. ಯುದ್ಧ ಪ್ರಸಂಗದ ವೀರಾಲಾಪಗಳು ಸ್ವಾರಸ್ಯವಾಗಿವೆ. ಓದುವವರಿಗೆ ಬೇಸರವೆನಿಸದಂತೆ ರಸಗಳ ಜೋಡಣೆಯು ಶ್ಲಾಘ್ಯವಾಗಿದೆ. ಈ ಮೇರೆಗೆ ಸರ್ವಾಂಗ ಸುಂದರವಾದ ತನ್ನ ಗ್ರಂಥದಲ್ಲಿ ಕವಿಯು ಪ್ರಯೋಗ ಮಾರ್ಗದಿಂದ ದೂರದಲ್ಲುಳಿದ ಕನ್ನಡ ಶಬ್ದಗಳನ್ನು ಹೇರಳವಾಗಿ ಪ್ರಯೋಗಿಸಿ ಅವು ಮತ್ತೆ ಪ್ರಯೋಗ ಮಾರ್ಗಕ್ಕೆ ಬರುವಂತೆ ಮಾಡಬೇಕೆಂದು ಪ್ರಯತ್ನಿಸಿದ ಶ್ರಮವು ತಕ್ಕಮಟ್ಟಿಗೆ ಸಫಲವಾಗಿರುವದಾದರೂ ಶ್ಲಾಘ್ಯವಾದದ್ದೆಂಬುದರಲ್ಲಿ ಸಂಶಯವಿಲ್ಲ.

ಹಳೆಯ ಶಬ್ದಗಳು ಬಹಳವಾಗಿ ಸೇರಿರುವದರಿಂದ ಈ ಕಾವ್ಯವು ಸಾಮಾನ್ಯ ವಾಚಕರಿಗೆ ತಿಳಿಯುವಂತಿಲ್ಲ. ವಿದ್ಯಾರ್ಥಿಗಳ ವಾಚನಕ್ಕೆ ಅನುಚಿತವಾದ ಶೃಂಗಾರಪರ ವಿಷಯಗಳು ಅಲ್ಲಲ್ಲಿ ಸೇರಿವೆ. ಅಂಥವುಗಳನ್ನೂ ಕೆಲವು ಕ್ಲಿಷ್ಟಭಾಗವನ್ನೂ ಬಿಟ್ಟು ಪೂರ್ಣಕಥೆಯು ಮಾತ್ರ ಓದುವದಕ್ಕೆ ದೊರೆಯುವಂತೆ ಗ್ರಂಥವನ್ನು ಸಣ್ಣದನ್ನಾಗಿ ಮಾಡಿ ಅಪರಿಚಿತ ಶಬ್ದಗಳ ಅರ್ಥವನ್ನು ಟಿಪ್ಪಣಿಯ ರೂಪದಿಂದ ಬರೆದು ಸೇರಿಸಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಈ ರಾಮಾಶ್ವಮೇಧಸಾರವನ್ನು ಮಿ॥ ಪೂಜಾರ ಇವರು ಸಂಗ್ರಹಿಸಿರುವರು. ಇದಕ್ಕೆ ರಾಮಾಶ್ವಮೇಧಸಾರಸಂಗ್ರಹವೆಂಬ ಹೆಸರನ್ನಿಟ್ಟದ್ದರಿಂದ ಇದರಲ್ಲಿ ಬಂದ ಭಾಗವಷ್ಟೇ ಸಾರವಾದುದೆಂದೂ ಉಳಿದ ಭಾಗವು ಅಸಾರವಾದುದೆಂದೂ ಯಾರೂ ಗ್ರಹಿಸಬಾರದು. ಎಲ್ಲವೂ ಸಾರವತ್ತಾಗಿರುವ ಗ್ರಂಥವನ್ನು ಸಣ್ಣದನ್ನಾಗಿ ಮಾಡುವದಕ್ಕೆ ಮಾತ್ರ ಕೆಲಕೆಲವು ಭಾಗಗಳನ್ನು ಬಿಟ್ಟಿರುವರು. ಮನೋರಮಾ ಮುದ್ದಣರ ಸಂಭಾಷಣ ಮೊದಲಾದ ಸ್ವಾರಸ್ಯದ ಕೆಲವು ಭಾಗಗಳನ್ನು ಬಿಟ್ಟದ್ದು ಒಂದು ನ್ಯೂನತೆಯೆನಿಸಬಹುದಾದರೂ ಸಂಕ್ಷೇಪಕ್ಕೋಸ್ಕರ ಹಾಗೆ ಮಾಡಲೇಬೇಕಾಯಿತೆಂದು ತೋರುವದು.

ಆದಿಪಂಪ, ಅಭಿನವಪಂಪ, ರನ್ನ ಮೊದಲಾದ ಪ್ರಾಚೀನ ಮಹಾಕವಿಗಳ ಕಾವ್ಯಗಳೊಳಗಿನ ಮನೋಹರವಾದ ವಿಷಯವನ್ನು ಸಂಗ್ರಹಿಸಿ ಸಾಮಾನ್ಯ ವಾಚಕ ವರ್ಗಕ್ಕೆ ಒದಗಿಸಿದರೆ ಅದರಿಂದ ವಾಚನಾಭಿರುಚಿಯುಂಟಾಗಬಹುದ

ಲ್ಲದೆ ಪ್ರಾಚೀನ ಕಾವ್ಯಗಳಲ್ಲಿ ವಾಚಕರ ಆದರವೂ ಹೆಚ್ಚುವದು. ಈ ದೃಷ್ಟಿಯಿಂದ ಈ ತರದ ಹಲವು ಗ್ರಂಥಗಳ ಮಾಲೆಯು ಉಂಟಾಗುವದು ಅವಶ್ಯವಿರುವದು. ಆ ಮೇರೆಗೆ ಮಿ॥ ಪೂಜಾರ ಇವರು ದುರ್ಗಸಿಂಹ ಕವಿಯ ಪಂಚತಂತ್ರದ ಪ್ರಥಮ ತಂತ್ರದ ಸಾರವನ್ನು ಸಂಗ್ರಹಿಸಿ ಬರೆದ "ದುರ್ಗಸಿಂಹ ಪಂಚತಂತ್ರ ಸಾರ"ವೆಂಬ ಪುಸ್ತಕವು ಈ ಮಾಲೆಯ ಪ್ರಥಮ ಪುಷ್ಪವಾಗಿರುವದು. ಶ್ರೀ ರಾಮಾಶ್ವಮೇಧ ಸಾರಸಂಗ್ರಹವೆಂಬ ಈ ಪುಸ್ತಕವು ಆ ಮಾಲೆಯ ೨ನೆಯ ಪುಷ್ಪವು.

ದುರ್ಗಸಿಂಹ ಪಂಚತಂತ್ರಸಾರದ ಪ್ರಸ್ತಾವನೆಯಲ್ಲಿ ನಾವು ಇನ್ನು ಮುಂದೆ ಮುಂಬಯಿ ಕರ್ನಾಟಕದಲ್ಲಿಯೂ ಕನ್ನಡಕ್ಕೆ ಉಚ್ಚಪ್ರತಿಯ ಶಿಕ್ಷಣದಲ್ಲಿ ಹೆಚ್ಚಿಗೆ ಪ್ರಾಶಸ್ತ್ಯವು ದೊರೆಯಬಹುದೆಂದು ಸೂಚಿಸಿದಮೇರೆಗೆ ಕೆಲವು ದಿವಸಗಳ ಪೂರ್ವದಲ್ಲಿ ಮುಂಬಯಿ ವಿಶ್ವವಿದ್ಯಾನಿಲಯ ಸಂಘದವರು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆಯು ಐಚ್ಛಿಕ ವಿಷಯಗಳಲ್ಲೊಂದಾಗಿ ಇರುವಂತೆ ಏರ್ಪಾಡು ಮಾಡಿರುವದರಿಂದ ಕನ್ನಡಕ್ಕೆ ಮುಂಬಯಿ ಕರ್ನಾಟಕದಲ್ಲಿಯೂ ಹೆಚ್ಚಿಗೆ ಪ್ರಾಶಸ್ತ್ಯವು ಬರಲಾರಂಭಿಸಿರುವದು. ಈ ಕಾಲದಲ್ಲಿ ಕನ್ನಡ ಭಾಷೆಯ ಏಳ್ಗೆಗೆ ಸಹಾಯವಾಗುವಂಥವೂ ಕನ್ನಡ ಪ್ರಾಚೀನ ಗ್ರಂಥಗಳ ವಾಚನಾಭಿರುಚಿಯನ್ನು ಹೆಚ್ಚಿಸುವಂಥವೂ ಆದ ಗ್ರಂಥಗಳು ಅವಶ್ಯಕವಾಗಿರುವವು. ಈ ಪುಸ್ತಕವು ಆ ತರದ ಗ್ರಂಥಗಳಲ್ಲೊಂದಾಗಿರುವದು.

ಮಿ॥ ಪೂಜಾರ ಇವರ ದುರ್ಗಸಿಂಹ ಪಂಚತಂತ್ರಸಾರದ ವಿಷಯದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ ಮೊದಲಾದವುಗಳಲ್ಲಿ ಸದಭಿಪ್ರಾಯಗಳು ಬಂದಿರುವವು. ಇದರಿಂದ ಅದು ವಿದ್ವಾಂಸರ ಆದರಕ್ಕೆ ತಕ್ಕದ್ದಾಗಿರಬಹುದು. ಆದರೆ ವಾಚಕ ವರ್ಗವು ಹೆಚ್ಚಿದರೆ ಗ್ರಂಥದಿಂದ ತಕ್ಕಷ್ಟು ಉಪಯೋಗವಾಯಿತೆಂದು ಹೇಳಬಹುದು. ಆದದರಿಂದ ಈ ಗ್ರಂಥಕ್ಕೆ ವಾಚಕವರ್ಗವು ಹೆಚ್ಚಿದಲ್ಲಿ ಮೂಲ ಗ್ರಂಥಕಾರನ ಉದ್ದೇಶವು ಈಡೇರಿದಂತಾಗುವದಲ್ಲದೆ ಮಿ॥ ಪೂಜಾರ ಇವರ ಶ್ರಮಕ್ಕೆ ತಕ್ಕ ಪ್ರತಿಫಲವೂ ದೊರೆತಂತಾಗುವದೆಂದು ಭಾವಿಸುವೆವು.

ಧಾರವಾಡ ಟ್ರೇನಿಂಗ್ ಕಾಲೇಜ್.
ತಾರೀಖು ೨೦-೧೨-೯೨೦

R M. Mahishi
ಪ್ರಿನ್ಸಿಪಾಲ್.

ಸಂಪಾದಕನ ನಿವೇದನೆ.

ಶ್ರೀರಾಮಾಶ್ವಮೇಧವು ಕನ್ನಡದಲ್ಲಿ ಒಂದು ಶ್ರೇಷ್ಠವಾದ ಗದ್ಯಗ್ರಂಥವು. ಇದರಲ್ಲಿಯ ಹಲವು ಭಾಗಗಳು ಬಹಳ ಸ್ವಾರಸ್ಯವಾಗಿಯೂ, ಹೃದಯಂಗಮ ವಾಗಿಯೂ ಇರುವವೆಂದು ಹೇಳುವದು ಪುನರುಕ್ತವೇಸರಿ. ಯಾಕಂದರೆ ಅದು ಕನ್ನಡಿಗರ ವಿಶೇಷವಾದ ಆದರಕ್ಕೆ ಪಾತ್ರವಾಗಿರುವದೇ ಅದರ ಯೋಗ್ಯತೆ ಯನ್ನು ತೋರ್ಪಡಿಸುವದು. ಆ ಮೂಲಗ್ರಂಥವನ್ನೇ ಓದುವದರಿಂದಾಗುವಷ್ಟು ಸಂಸ್ಕಾರವೂ ಆನಂದವೂ ಈ ಸಂಗ್ರಹವನ್ನೋದುವದರಿಂದ ಆಗಲಾರವೆಂಬುವ ದನ್ನು ಬಲ್ಲೆನಾದರೂ, ಅಂತಹ ಅಮೌಲ್ಯಗ್ರಂಥದ ವಾಚನಲಾಭವು ಸಾಮಾನ್ಯ ವಾಚಕರಿಗೂ ವಿದ್ಯಾರ್ಥಿಗಳಗೂ ಆಗಬೇಕೆಂದು ಅದನ್ನು ಸಂಕ್ಷೇಪಿಸಿ ಟಿಪ್ಪಣಿ ಯೊಡನೆ ಬರೆದೆನು. ವಿದ್ಯಾರ್ಥಿಗಳ ವಾಚನಕ್ಕೆ ಅನುಚಿತವಾದ ಕೆಲವು ಭಾಗ ವನ್ನು ಬಿಡುವದೂ, ಕ್ಲಿಷ್ಟತೆಯನ್ನು ಕೆಲವುಮಟ್ಟಿಗೆ ಕಡಿಮೆಮಾಡುವದೂ, ನನ್ನ ಈ ಪ್ರಯತ್ನದ ಮುಖ್ಯೋದ್ದೇಶ್ಯವಾಗಿವೆ. ಭಾಷಾಭ್ಯಾಸಿಗಳು ಈ ಪುಸ್ತಕವನ್ನೋ ದಿದಬಳಿಕ ಮೂಲಗ್ರಂಥವನ್ನೋದಲು ಉತ್ಸಾಹಗೊಳ್ಳುವರೆಂದು ಭಾವಿಸಿರು ವೆನು.

ಈ ಪುಸ್ತಕವನ್ನು ಬರೆಯಿಸಿ, ಪ್ರಕಾಶಗೊಳಿಸಿ, ಪ್ರಸ್ತಾವನೆಯನ್ನು ಬರೆದು ತಮ್ಮ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವನ್ನಾಗಿ ಮಾಡಿ ಪ್ರಸಾರಗೊಳಿಸಿ, ಪ್ರೋತ್ಸಾಹಿಸಿದ ಇಲ್ಲಿಯ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮ॥ ರಾ॥ ರಾಮರಾವ ಮುಹಿಷಿಯುವರಿಗೆ ಸಂಪಾದಕನು ಸಂಪೂರ್ಣ ಋಣಿಯಾಗಿರುವನು.

ಶ್ರೀ ಮಹಾವೀರ ಮುದ್ರಣಾಲಯದ ಒಡೆಯರು ಅಂದವಾಗಿ ಮುದ್ರಿಸಿ ದುದಕ್ಕಾಗಿ ಅವರಿಗೆ ಕೃತಜ್ಞನಾಗಿರುವೆನು. ದುರ್ಗಸಿಂಹ ಪಂಚತಂತ್ರಸಾರ ಕ್ಕಿಂತ ಈ ಪುಸ್ತಕಕ್ಕೆ ಱ ೞ ಅಕ್ಷರಗಳ ಆವಶ್ಯಕತೆಯು ಹೆಚ್ಚಿಗೆ ಇದ್ದದರಿಂದ ಅವುಗಳನ್ನು ಅಲ್ಲಲ್ಲಿ ಸೇರಿಸುವ ವ್ಯವಸ್ಥೆಯನ್ನು ಮಾಡಿದ್ದರೆ ಬಹಳ ಉಪಕಾರ ವಾಗುತ್ತಿತ್ತೆಂಬುವದನ್ನು ಅವರಿಗೆ ಹೇಳದಿರಲಾರೆನು.

ಟಿಪ್ಪಣಿಗೆ ಈ ಪುಸ್ತಕದ ಪುಟಗಳ ಅನುಕ್ರಮಾಂಕವನ್ನು ಕೊಟ್ಟಿದೆ. ಒಮ್ಮೆ ಅರ್ಥವನ್ನು ಬರೆದ ಶಬ್ದಗಳಿಗೆ ಮತ್ತೆ ಅರ್ಥವನ್ನು ಬಹುಶಃ ಬರೆದಿಲ್ಲ.

ಮೂಲವನ್ನು ಸಂಗ್ರಹಿಸುವಲ್ಲಿಯೂ, ಟಿಪ್ಪಣಿಯನ್ನು ಬರೆಯುವಲ್ಲಿಯೂ, ಹಲವು ನ್ಯೂನತೆಗಳಾಗಿರಬಹುದು; ಅವುಗಳನ್ನೂ, ಬೇರೆ ತಪ್ಪುಗಳನ್ನೂ, ವಿದ್ವಾಂಸರು ದಯೆಯಿಂದ ತಿಳುಹಿಸಲೆಂದು ಪ್ರಾರ್ಥಿಸುವೆನು.

ಧಾರವಾಡ ಟ್ರೇನಿಂಗ್ ಕಾಲೇಜ್
ತಾರೀಖು ೨೨-೧೨-೧೯೨೦.

ಸಂಪಾದಕ.

ಕವಿಚರಿತ್ರೆ.

ಪಾಠಕರ ಆಕಾಂಕ್ಷೆಯು ತೃಪ್ತವಾಗುವಷ್ಟು ಕವಿಚರಿತ್ರೆಗಳು ನಮ್ಮ ದೇಶದಲ್ಲಿ ಉಪಲಬ್ಧವಾಗುವದಿಲ್ಲ. ಕವಿಗಳು ತಮ್ಮ ಚರಿತ್ರೆಯನ್ನು ತಾವಾಗಿ ಹೇಳಿಕೊಳ್ಳುವದು ಅಭಿಮಾನದರ್ಶಕವೆಂದು ಬಗೆದು ಬಿಟ್ಟರು. ಉಳಿದವರು ಮಾನವರ ಚರಿತ್ರೆಯನ್ನು ಬರೆದಿಡುವದರಲ್ಲಿ ಹುರುಳಿಲ್ಲವೆಂದು ಉದಾಸೀನ ಮಾಡಿದರು.

ಕನ್ನಡಭಾಷೆಯ ಪೂರ್ವಕವಿಗಳು ಪಾಠಕರ ಕುತೂಹಲನಿವೃತ್ತಿಗಾಗಿ ತಮ್ಮ ಚರಿತ್ರದ ಕೆಲವಂಶವನ್ನಾದರೂ ಗ್ರಂಥಗಳಿಂದ ತಿಳಿಯುವಂತೆ ಮಾಡಿರುವರು. ಅದರಲ್ಲಿ 'ಬಿರುದು' ಮೊದಲಾದ ತಮ್ಮ ಪ್ರತಿಷ್ಠಾದರ್ಶಕ ವಿಷಯಗಳನ್ನು ಹೇಳುವದನ್ನು ಅವರು ಮರೆತಿಲ್ಲ. ಲೋಕೋತ್ತರ ಕೃತಿಯನ್ನು ಮಾಡಿಯೂ "ಮಂದಃ ಕವಿಯಶಃಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಮ್" ಎಂದು ತಮ್ಮನ್ನು ಹೀಯಾಳಿಸಿಕೊಳ್ಳುವ ಲೋಕವಿಲಕ್ಷಣಪುರುಷರೇ ಎಲ್ಲರೂ ಇರುವರೇನು ?

ಕನ್ನಡ ರಾಮಾಶ್ವಮೇಧವನ್ನು 'ಮುದ್ದಣ'ನೆಂಬ ಕವಿಯು ಮಾಡಿದನೆಂದು ಆ ಗ್ರಂಥದ 'ಕಥಾಮುಖ'ದಿಂದ ತಿಳಿದು ಬರುವದು. ಕೆಲವರು ಈ ಗ್ರಂಥವನ್ನೂ ಅದ್ಭುತರಾಮಾಯಣವನ್ನೂ ಶ್ರೀರಾಮಪಟ್ಟಾಭಿಷೇಕವನ್ನೂ ಕುಂದಾಪುರದ ಗವರ್ನ್ನರ್ಮೆಂಟ್ ಬೋರ್ಡ್ ಹಾಯ್‌ಸ್ಕೂಲ್ ಮಾಸ್ತರರಾದ ಮ. ರಾ. ನಂದಳಿಗೆ ಲಕ್ಷ್ಮೀನಾರಾಯಣಪ್ಪನವರು ಬೇರೆ ಬೇರೆ ಹೆಸರಿನಿಂದ ಬರೆದರೆಂದು ಹೇಳುತ್ತಾರೆ. ಈ ಮಾತು ನಿಜವಿದ್ದರೆ ತಮ್ಮ ಹೆಸರನ್ನು ವ್ಯಕ್ತ ಮಾಡದ ಇವರು ತಮ್ಮ ಪ್ರತಿಷ್ಠೆಯ ವಿಷಯದಲ್ಲಿ ಪೂರ್ಣ ನಿರಿಚ್ಛರಾಗಿದ್ದರೆಂದೂ ಇದರಲ್ಲಿ ಅವರು ಆರ್ಯೋಚಿತ ಸೌಜನ್ಯವನ್ನು ವ್ಯಕ್ತಮಾಡಿರುವರೆಂದೂ ಹೇಳಬಹುದು.

ಮೇಲೆ ಉಲ್ಲೇಖಿಸಿದ ಮೂರೂ ಗ್ರಂಥಗಳನ್ನೂ ಮ. ರಾ. ನಂದಳಿಗೆ ಲಕ್ಷ್ಮೀನಾರಾಯಣಪ್ಪನವರೇ ತಮಗೆ ಬರೆದುಕಳುಹಿದರೆಂದೂ, ಉಳಿದ ಎರಡು ಗ್ರಂಥಗಳಲ್ಲಿ ಅಲ್ಲಲ್ಲಿ ಗ್ರಂಥಪಾತಗಳೂ ಅಪೂರ್ವಪದಪ್ರಯೋಗಗಳೂ ಇದ್ದ ದ

ರಿಂದ ಆಯಾ ಭಾಗಗಳನ್ನು ಸರಿಮಾಡಿಕೊಳ್ಳುವದಕ್ಕಾಗಿ ಆ ಗ್ರಂಥಗಳ ಮಾತೃಕೆಗಳನ್ನು ಕಳುಹಿಸಿಕೊಡಿರೆಂದು ಬರೆದಾಗ ಅದಕ್ಕೆ ಪ್ರತ್ಯುತ್ತರವಾಗಿ—ಆ ಮಾತೃಕೆಗಳನ್ನು ಆ ಆ ಜನರಿಗೆ ಹಿಂದಿರುಗಿ ಕೊಟ್ಟುಬಿಟ್ಟ ಹಾಗೂ, ತಾವು ಮಾತೃಕೆಗಳನ್ನು ಯಥಾವತ್ತಾಗಿ ಪ್ರತಿಮಾಡಿ ಕಳುಹಿದ ಹಾಗೂ ಆ ಗ್ರಂಥಗಳಲ್ಲಿರುವ ಕೆಲವು ಪದಗಳಿಗೂ ಪ್ರಯೋಗಗಳಿಗೂ ತಮಗೂ ಅರ್ಥ ತಿಳಿಯದ ಹಾಗೂ ಬರೆದಿರುವರೆಂದೂ ಇದರಿಂದ ನಂದಳಿಗೆ ಲಕ್ಷ್ಮೀನಾರಾಯಣಪ್ಪನವರೇ ಗ್ರಂಥಕರ್ತರೆಂಬ ತಾತ್ಪರ್ಯವು ಹೊರಪಡುವದಿಲ್ಲವೆಂದೂ ಈ ಮಾತು ಎಷ್ಟುಮಟ್ಟಿಗೆ ನಿಜವೆಂಬುವದನ್ನು ಅವರ ಮಿತ್ರರು ನಿರ್ಣಯಿಸಬೇಕೆಂದೂ ರಾಮಾಶ್ವಮೇಧವನ್ನು ಅಚ್ಚುಹಾಕಿಸಿದ ಕರ್ಣಾಟಕ ಕಾವ್ಯಮಂಜರಿ ಮಾಸಪತ್ರಿಕೆಯ ಪ್ರವರ್ತಕರು ಅದರ ಆರಂಭದಲ್ಲಿ ಬರೆದಿರುತ್ತಾರೆ. ಹಾಗೆ ನಿರ್ಣಯವೇನಾದರೂ ಆಗಿದೆಯೋ ಇಲ್ಲವೋ ನಮಗೆ ತಿಳಿದಿಲ್ಲ.

ಅನುಪಲಬ್ಧ ಕವಿಚರಿತ್ರವನ್ನು ಕಂಡುಹಿಡಿಯುವದಕ್ಕೆ ಗ್ರಂಥವೇ ಮುಖ್ಯಸಾಧನವಾಗಿರುವದರಿಂದ ಗ್ರಂಥದಿಂದ ತಿಳಿದು ಬರುವ ಚರಿತ್ರಾಂಶವನ್ನು ಇಲ್ಲಿ ಹೇಳಿರುವೆವು. ಆಧಾರವಾಗಿಟ್ಟುಕೊಂಡ ಗ್ರಂಥಪ್ರಯೋಗಗಳಿಗೆ ಕಾವ್ಯಮಂಜರಿಯಲ್ಲಿ ಅಚ್ಚಾದ ಪ್ರತಿಯ ಪುಟಸಂಖ್ಯೆಯನ್ನು ಕೊಟ್ಟಿರುವೆವು.

ಈ ಕವಿಯು ಬ್ರಾಹ್ಮಣನು—ಎನ್ನ ಜನ್ನದಾರದಾಣೆ ೧೦೧; ಎನ್ನ ಜನ್ನದಾರದಾಣೆ, ಉತ್ತರಿಗೆಯಾಣೆ ೧೩೭. **ಅದ್ವೈತಮತದವನು**—ಹರಿಹರರೊಳ್ ಭೇದಮನೆಣಿಸದರೊಳ್ ನೀನುಂ ಭೇದಮನೆಣಿಸದಿರ್ ೫೩. ರಾಮಂ—ತನಗಂ ಶಿವಂಗಮಿನಿಸುಂ ಭೇದಮಿಲ್ಲೆಂಬ ಮಾಳ್ಕೆಯಿಂ ೧೫೬. ಕಾಮಾಕ್ಷಿ—ಆದಿಶಕ್ತಿಯೆನಿಸಿರ್ದುಂ ಮೂಗವಲಿಂ ಹರಿಹರಬ್ರಹ್ಮರ್ಕಳಂ ಮೋಹಿಸಿದ ೭೧. **ಶಿವೋಪಾಸಕನು**—ಎಮ್ಮೊಳ್ ದೀರ್ಘಾಯುವಂ ಶಿವಂ ನೆಲೆಗೆಯ್ಗೆ ೫೨. ಎನ್ನ ನಿಚ್ಚದ ಪೂಜೆಯ ಕಟ್ಟಚ್ಚಿನ ಪ್ರಾಣಲಿಂಗಮೆ! ೮೨. ವಾಲ್ಮೀಕಿವರ್ಣನೆಯಲ್ಲಿ—ಭಸಿತೋದ್ಧೂಳಿತಲಲಾಟಂ; ಕಂಠದೊಳ್ ಏಕಮುಖೀ ರುದ್ರಾಕ್ಷಂ ತೆರಂಬೊಳೆಯೆ ೮೫. **ಯಾವುದೋ ಒಂದು ರಾಜಾಸ್ಥಾನದಲ್ಲಿ ಆಶ್ರಿತನಾಗಿ ಇದ್ದಿರಬಹುದು**—ಓಲಗಂ ಪರಿಯೆ "ಕಬ್ಬಿಗರ ಬಲ್ಲಹಂ" ಮುದ್ದಣನರಮನೆಯಿಂ ಪೊರಮಟ್ಟು ೪. ಇಂತಪ್ಪ ನಲ್ಗತೆಯುಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮುಂ ಪೊನ್ನಕಂಠಿಕೆಯುಂ ಮೆಚ್ಚನೀವರ್ ೬. **ಯಾವಕಾ**

ಆದ ಯೂವರಾಜನ ಆಸ್ಥಾನದಲ್ಲಿದ್ದನೋ ತಿಳಿಯದು. ಈ ಕವಿಯು ದಕ್ಷಿಣ ಕನ್ನಡ ಸೀಮೆಯವನೆಂದು ತೋರುವದು. ಆಧಾರಗಳು—ವೈದ್ಯ ಎಂಬರ್ಥದಲ್ಲಿ ಪಂಡಿತ ಶಬ್ದವನ್ನು ಪ್ರಯೋಗಿಸಿರುವನು. ನೀಂ ಪಂಡಿತಂ ದಿಟಮಾದೊಡೆ ನೀರ್ಗುತ್ತಕ್ಕೆ ಮರ್ದನುಸಿರ್ ೨. ಉತ್ತರದ ಕಡೆಗೆ ಈ ಪ್ರಯೋಗವು ಕಂಡುಬರುವದಿಲ್ಲ. ಕವಿಯ ಹೆಂಡತಿಯಾದ ಮನೋರಮೆಯು—ಎನ್ನೀ ಜೋಲ್ಮುಡಿಯ **ಪೂ**ಸರದಾಗೆ ೧೦೪. ಎನ್ನುತ್ತಾಳೆ. ಉತ್ತರದ ಕಡೆಗೆ ಜೋಲುವ ಮುಡಿಯಿಲ್ಲ. ಪೆರ್ಗಡೆಮಾಸಾವಂತಮನ್ನೆಯರ್. ೬೦. ಪೆರ್ಗಡೆ (ಹೆಗ್ಗಡೆ)ಗಳು ಕಾರವಾರ ಮಂಗಳೂರುಗಳ ಕಡೆಗೆ. **ಬೈಲುನಾಡಿನವನಲ್ಲ**—ಮನೋರಮೆ-ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿಂ ಎನ್ನ ಬಗೆಯುಂ ಬೇಸತ್ತುದು ೪. ಬೈಲು ಸೀಮೆಯಲ್ಲಿ ಮಳೆಗಾಲದಲ್ಲಿಯೂ ಕೂಡ ಇಷ್ಟು ಮಳೆಯಿರುವದಿಲ್ಲ. ವಸಂತವು—ನೇರಿಲ ದೋರೆವಣ್ಣಂ ತೀದು ನಕ್ಕಿಸುತರಗಿಳಿಯ ನಾಲಗೆಯುಂ ತೆಳ್ಳನಾಗಿಸಿ ೧೮. ಧಾರವಾಡ ಬೆಳಗಾಂವ ನಾಡುಗಳಲ್ಲಿ ವಸಂತದಲ್ಲಿ ನೇರಿಲಮರಕ್ಕೆ ದೋರೆಹಣ್ಣುಗಳಾಗುವದು ಕಡಿಮೆ. ಕಾರವಾರ ಮಂಗಳೂರುಗಳ ಕಡೆಗೆ ಆಗುವದುಂಟು. ಈ ಕಡೆಗೆ ಗ್ರೀಷ್ಮಾಂತ್ಯದಲ್ಲಾಗುವವು. ದಕ್ಷಿಣದ ಕಡೆಯ ಕೆಲವು ಶಬ್ದಗಳ ಪ್ರಯೋಗಗಳು ಅಲ್ಲಲ್ಲಿ ಇರುವವು. 'ಕಣಾ' ೨೪. ೪೬. ೯೫. ನೇವಾಳ, ನೇವಳ. ೭೩. ೧೪೪. ೧೫೫. ಈ ಶಬ್ದವು ಕಾರವಾರ ಮಂಗಳೂರುಗಳ ಕಡೆಗೆ ಈಗಲೂ ಬಳಕೆಯಲ್ಲಿದೆ. ಆಲಿಸು ಎಂಬ ಅರ್ಥದಲ್ಲಿ 'ಲಾಲಿಸು' ಎಂಬ ಧಾತುವನ್ನು ಪ್ರಯೋಗಿಸುವುದು ಈ ಸೀಮೆಯಲ್ಲಿ ಕಂಡುಬರುವದಿಲ್ಲ. ಮಂಗಳೂರು ಮೈಸೂರುಗಳ ಕಡೆಗೆ ಉಂಟು. ಈ ಗ್ರಂಥದಲ್ಲಿ "ಲಾಲಿಸು" ಪ್ರಯೋಗವು—೬೨. ೭೨. ೯೦. ೯೬. 'ಅಯ್ಯಾ' ೬೫. ಏನಯ್ಯ ೧೨೩. ಅಯ್ಯ ಮಾರಾಯ ೧೭೯. ಮೇಲೆ ಹೇಳಿದುವೆಲ್ಲ ಬಲವತ್ತರ ಕಾರಣಗಳಲ್ಲದಿದ್ದರೂ ಊಹಿಸುವದಕ್ಕೆ ಅಸ್ಪದವನ್ನುಂಟು ಮಾಡಿವೆ.

ಈ ಕಾರಣಗಳಿಂದಲೂ, ಹಸ್ತಲಿಖಿತ ಪ್ರತಿಯು ಮಂಗಳೂರ ಕಡೆಯಿಂದಲೇ ದೊರೆತುದರಿಂದಲೂ ಕವಿಯು ಮಂಗಳೂರ ಕಡೆಯವನಾಗಿರಬಹುದೆಂದು ತೋರುವದು. ಗ್ರಂಥದಲ್ಲಿ ಕೆಲವೆಡೆಯ ವಾಕ್ಯರಚನೆಯನ್ನು ನೋಡಿದರೆ ಕವಿಯ ಕಾಲವು ಬಹಳ ಈಚೆಗೆ ಇರಬೇಕೆಂದು ತೋರುವದು. ಶಬ್ದಮಣಿದರ್ಪಣದಲ್ಲಿ

ಹೇಳಿದ ಧಾತುಪಾಠವನ್ನೂ ಪ್ರಯೋಗಸಾರವನ್ನೂ ಈ ಕವಿಯು ನೋಡಿರ ಬೇಕು. ಅಭಿನವಪಂಪನ ರಾಮಾಯಣವನ್ನು ನೋಡಿದಂತೆ ತೋರುತ್ತದೆ. ಹಾರಾಮಾ! ಹಾರಾಮಾ! ಬಾರಿಪರಾರೆಂದು ಸೀತೆ ಬಾಯುಳಿದಳ್ತಳ್.—ಪಂಪ ರಾಮಾಯಣ. ಹಾರಾಮಾ! ಹಾರಾಮಾ! ಎಂದು ಸೀತೆ ಬಾಯುಳಿದಳ್ತಳ್.— ರಾಮಾಶ್ವಮೇಧ ೪೧. ಶಬ್ದಮಣಿದರ್ಪಣಕಾರನು ಉದಾಹರಿಸಿದ ಕೆಲವು ಪ್ರಯೋಗಗಳೊಳಗಿನ ವಾಕ್ಯಗಳು ರಾಮಾಶ್ವಮೇಧದಲ್ಲಿ ಕಾಣಿಸುವವು- "ಏನೆಂಬ ಪೆಂಪೊ ಮನುವುಂ ತಾನುಂ" ಶ. ದ. ಸೂತ್ರ ೧೪೪. ಏನೆಂಬ ಪೆಂಪೊ! ರಾಮಾಶ್ವ ೬೬. "ಅವುವು ಮನಕೇರುವುವಳ್ಕರಿನವನಾಯ್ದುಕೊಳ್ಳಿ ಮೆಂದು ನವರತ್ನಮುಮಂ" ಶ. ದ. ಸೂ. ೯೫. ಇವರೊಳಾವುದು ಮನಕೇರು ವುದದಂ ಪೇಳಿಂ. ರಾಮಾಶ್ವ. ೧೪. ಈ ಕವಿಯು ಜೈಮಿನಿಭಾರತವನ್ನು ನೋಡಿ ರಬಹುದು. ಪೂದೋಂಟಮಂ ತೊತ್ತಳದುಳಿವುದು. ಜೈ. ಭಾ. ಸಂಧಿ ೨೦. ಪದ್ಯ ೬. ಪೂದೋಂಟಮಂ ತೊತ್ತಳದುಳಿದು. ರಾಮಾಶ್ವ. ೧೭೮. ಸಮಿತ್ಪುಷ್ಪಂಗ ಳಂ ನೆತ್ತಿಯೊಳ್ ಪೊತ್ತುಕೊಂಡು ಜೈ. ಭಾ. ಸಂಧಿ ೨೦. ಪದ್ಯ ೨೧. ಕುಶಂ ಕುಶಸಮಿತ್ಫಲ ಪುಷ್ಪಂಗಳಂ ಪೊತ್ತು. ರಾಮಾಶ್ವ. ೧೮೨. **ಇವುಗಳಿಂದ ಇವ ರೆಲ್ಲರಿಗಿಂತ ಈಚೆಯವನಾಗಿರಬಹುದೆಂದು ತೋರುವುದು.**

ಕೆಲವು ಶಬ್ದಗಳ ಮತ್ತು ವಾಕ್ಯಗಳ ಪ್ರಯೋಗವು ಬಹಳ ಈಚೆಯವನೆಂದು ತೋರ್ಪಡಿಸುತ್ತವೆ. ಬಡಿವಾರ ೯೩. ಪುಟ್ಟಕುವರಂ ೭೫. ಟೊಪ್ಪಿಗೆ ೯೬. ಮಿಕ್ಕಿನ ೧೦೮.

ಈತನ ಕಾಲದಲ್ಲಿ ಕನ್ನಡಕ್ಕೆ ಮರಾಠಿ ಹಿಂದುಸ್ಥಾನಿಗಳ ಸಂಪರ್ಕವು ಆಗಿತ್ತು. ಗಲಬೆ ೨೯. ಇದು ಅರೆಬಿಕ್ ಶಬ್ದವು. ಚಪ್ಪನ್ನ ದೇಶಂಗಳಂ ೫೨. ಬಂಗಿಯುಂಡಂ ೧೫೭. **ಕವಿಯು ದಕ್ಷಿಣದೇಶದ ಶ್ರೀವೈಷ್ಣವರನ್ನೂ ಅಲ್ಲಿಯ ದೇವಾಲಯಗಳನ್ನೂ ನೋಡಿದವ ನಾಗಿರಬಹುದು.** ಪುರುಷೋತ್ತಮನ ನಿಡುವಣೆಯ ತ್ರಿಪುಂಡ್ರದೊಂದು ಮಾ ಳ್ಕೆಯಿಂ ೮೩. "ಪಣೆಯ ಮೂರುಂಗವಲ ನಿಡುನಾಮಮೆಸೆಯೆ" ೮೮. "ನೀಲಾ ಚಲಶಿಖರಮನಾರೋಹಣಂಗೆಯ್ದು ಶ್ರೀಪುರುಷೋತ್ತಮ ಮೂರ್ತಿಯಂ ಕಂಡು ಸಿಕ್ಥಕಮನುಂಡು" ೯೫. ಪ್ರಸಾದವೆಂದು ದಕ್ಷಿಣ ದೇಶದಶ್ರೀವೈಷ್ಣವರ ದೇವಾ ಲಯಗಳಲ್ಲಿ ಸಿಕ್ಥಕವನ್ನು (ಅನ್ನವನ್ನು) ಕೊಡುವುದುಂಟು.

ಪತ್ನಿಯೊಡನೆ ಬಹಳ ಪ್ರೇಮದಿಂದ ಇದ್ದನೆಂಬುವದು ಅವರ ಸಲ್ಲಾಪಗಳಿಂದಲೂ ಪತ್ನಿಗೆ ಸಂಬೋಧಿಸಿದ ವಿಶೇಷಣಗಳಿಂದಲೂ ಕಂಡುಬರುವದು. ಕವಿಯು ವಿನೋದಿ ಸ್ವಭಾವದವನು. ಮಡದಿಯೊಡನೆ ಕಥಾಮುಖದಲ್ಲಿಯೂ ಕಥೋಪಸಂಹಾರದಲ್ಲಿಯೂ ನಡುವೆ “ಭವತಿ ಭಿಕ್ಷಾಂದೇಹಿ” ಎಂಬ ಕವಿಗಳ ಸಪ್ತಾಕ್ಷರಿ ಮಂತ್ರವನ್ನು ಹೇಳುವಾಗಲೂ ಹೆಂಡತಿಯನ್ನು ರತಿದೇವಿಯನ್ನಾಗಿ ವರ್ಣಿಸಿ ಹೇಳುವಾಗಲೂ ಈ ಸ್ವಭಾವವು ಕಂಡುಬರುವದು. ಎಂತಹ ಜಾಣೆಗೂ ಮೋಸಹೋಗದವನು. ಮುದ್ದಣನುಮಂ ಟಕ್ಕಿಪ ಪೆಂಡಿರೊಳರೇ? ೧೯೬. ತನ್ನ ಗ್ರಂಥವು ಅತ್ಯುತ್ಕೃಷ್ಟವಾದುದೆಂಬುವದನ್ನು ಪರ್ಯಾಯದಿಂದ ಹೇಳಿಕೊಂಡಿರುವನು. “ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು ೧೯೩. ಈತನ ಕನ್ನಡ ಶಬ್ದಭಾಂಡಾರವು ಅದ್ಭುತವಾದದ್ದು. ವರ್ಣನಸಾಮರ್ಥ್ಯವು ಮೇಲ್ತರದ್ದು. ಕವಿಗೆ ಕನ್ನಡಭಾಷೆಯಲ್ಲಿ ಬಹಳ ಅಭಿಮಾನವಿತ್ತು. ಕನ್ನಡಂ ಕತ್ತುರಿಯಲ್ತೆ ಎಂದಿರುವನು. “ಮುದ್ದ” (ಮುದ್ದು) ಎಂಬ ಹೆಸರು ಕನ್ನಡ ನಾಡಿನಲ್ಲಿ ಬಳಕೆಯಲ್ಲಿರುವದು. ಅಪ್ಪ, ಅಣ್ಣ ಶಬ್ದಗಳನ್ನು ಅದರ ಮುಂದೆ ಸೇರಿಸಿದ ಮುದ್ದಪ್ಪ ಮುದ್ದಣ್ಣ ಎಂಬ ಹೆಸರುಗಳು ಕಂಡುಬರುವವು. ಆದರೆ ಮುದ್ದಣ ಎಂದು ಹೇಗಾಯಿತೊ? ಮಲ್ಲಣ, ಚಿಕದೇವರಾಜ ಎಂಬಂತೆ ಆಗಿರಬಹುದು. ಕವಿಗೆ ಪದ್ಯರಚನೆಯ ಮೇಲೆ ಆದರವಿಲ್ಲ. ಹೆಂಡತಿಯಿಂದ ಪದ್ಯಂ ವಧ್ಯಂ, ಗದ್ಯಂ ಹೃದ್ಯಂ, ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು ಎಂದು ನುಡಿಯಿಸಿರುತ್ತಾನೆ.

[ನಂದಳಿಗೆ ಲಕ್ಷ್ಮೀನಾರಾಯಣಪ್ಪನವರೇ ಈ ಗ್ರಂಥವನ್ನು ಬರೆದ ವಿಷಯದಲ್ಲಿ ವಿಶ್ವಸನೀಯವಾದ ವರ್ತಮಾನವನ್ನು ಮೊನ್ನೆ ಮೈಸೂರ ಒಬ್ಬ ಸದ್ಗೃಹಸ್ಥರು ಹೇಳಿದರು:—ಮ॥ ಲಕ್ಷ್ಮೀನಾರಾಯಣಪ್ಪನವರು ಕುಂದಾಪುರ ಹಾಯ್ ಸ್ಕೂಲಿನ ಜಿಮ್ನಾಸ್ಟಿಕ್ ಇನ್‌ಸ್ಟ್ರಕ್ಟರರು. ಮೊದಲು ಹೆಚ್ಚಾಗಿ ವಿದ್ಯಾಭ್ಯಾಸ ಮಾಡಿದವರಲ್ಲ. ಪುರಾಣಶ್ರವಣ ಮಾಡುತ್ತಿದ್ದರು. ಕಾವ್ಯಮಂಜರಿಯಲ್ಲಿ ಅಚ್ಚಾದ ಕನ್ನಡ ಕಾವ್ಯಗಳನ್ನೋದಿ ಗ್ರಂಥಲೇಖನವನ್ನಾರಂಭಿಸಿದರು. ಒಂದು ಯಕ್ಷಗಾನ ಕಥೆ, ಶ್ರೀರಾಮಪಟ್ಟಾಭಿಷೇಕ (ಪದ್ಯ), ಅದ್ಭುತರಾಮಾಯಣ (ರಚನಾಕಾಲ ೧೮೯೫.), ರಾಮಾಶ್ವಮೇಧ (ರಚನಾಕಾಲ ೧೯೦೦.) ಈ ಗ್ರಂಥಗಳು ಉಪ

ಲಬ್ಧವಾಗಿರುವವು. ಈ ಕವಿಗೆ ಅಕಾಲಮರಣವೊದಗಿದುದು ಕನ್ನಡ ವಾಙ್ಮಯಾಭಿವೃದ್ಧಿಗೆ ದೊಡ್ಡ ಹಾನಿಯುನ್ನು ಮಾಡಿತು. ಕವಿಯು ಹೆಂಡತಿ, ತಮ್ಮ ಮೊದಲಾದವರು ಶಿವಮೊಗ್ಗಾ ಡಿ॥ ನಲ್ಲಿ ಇರುವರು.]

ಕಾವ್ಯವಿಮರ್ಶೆ.

ಸಂಸ್ಕೃತದಲ್ಲಿ ರಾಮಾಶ್ವಮೇಧವೆಂಬುದೊಂದು ಪುರಾಣವು. ಅದು ಪದ್ಮಪುರಾಣದ ಪಾತಾಲಖಂಡಕ್ಕೆ ಸೇರಿದುದು. ಈ ಕಥೆಯುನ್ನು ಶೇಷನು ವಾತ್ಸ್ಯಾಯನಮುನಿಗೆ ಹೇಳಿರುವನು. ಇದರಿಂದ ಅದಕ್ಕೆ ಶೇಷರಾಮಾಯಣವೆಂದೂ ಹೆಸರು. ವಿಸ್ತೃತವಾದ ಈ ಪುರಾಣದೊಳಗಿನ ಮುಖ್ಯ ಕಥೆಯುನ್ನು ಅವಲಂಬಿಸಿ ಕನ್ನಡ-ರಾಮಾಶ್ವಮೇಧವು ಬರೆಯಲ್ಪಟ್ಟಿರುವದು. ಕಥೆಯ ಸಂವಿಧಾನಪ್ರಕಾರವೂ, ಕಾವ್ಯಾಂಗವರ್ಣನೆಗಳೂ ಇವುಗಳನ್ನು ಈ ಕವಿಯು ಹೊಸದಾಗಿಯೇ ಮಾಡಿರುವನಲ್ಲದೆ ಸಂಸ್ಕೃತದಿಂದ ಸಂಗ್ರಹಿಸಿಲ್ಲ. ಆರಂಭದಿಂದ ಕೊನೆಯುವರೆಗೆ ಪ್ರತಿಯೊಂದು ಆಶ್ವಾಸದಲ್ಲಿಯೂ ಸ್ವಾರಸ್ಯವೆನಿಸುವಂತೆ ಒಂದೊಂದು ವರ್ಣನೆಯುನ್ನು ಸೇರಿಸಿರುವನು. ಅಲ್ಲಲ್ಲಿ ಶೃಂಗಾರರಸವೂ, ಪುಷ್ಕಲಾದಿ ವೀರರ ವೀರಾಲಾಪಗಳಲ್ಲಿ ಬರುವ ವೀರರಸವೂ, ಯುದ್ಧವರ್ಣನೆಗಳಲ್ಲಿಯ ರೌದ್ರರಸವೂ, ಹೆಂಡತಿಯೊಡನೆ ಮಾಡಿದ ವಿನೋದಗಳಲ್ಲಿಯ ಹಾಸ್ಯರಸವೂ ಉಪಭೋಗ್ಯವಾಗಿವೆ. ೫-೬-೭ನೆಯ ಆಶ್ವಾಸಗಳಲ್ಲಿ ಸೀತಾಪರಿತ್ಯಾಗ ಮೊದಲಾದೆಡೆಗಳಲ್ಲಿ ಶೋಕರಸವು ಪರಿಪೂರ್ಣವಾಗಿದೆ. ಅಲ್ಲಿ—“ ಅಳಲ್‌ಕೊರಲನೌಂಕುಗುಂ ” ಎಂದು ಕವಿಯು ಹೇಳಿರುವಂತೆ ವಾಚಕರು ಗದ್ಗದಿತಕಂಠರಾಗುವರು. ಸೀತೆಯುನ್ನು ಘೋರಾರಣ್ಯದಲ್ಲಿಳುಹಿ ಲಕ್ಷ್ಮಣನು ಹಿಂದಿರುಗಿ ಹೋದನೆಂದು ಹೇಳಿ “ ಅತ್ತಲಯೋಧ್ಯಾನಗರದೊಳ್ ಜನ್ನಗುದುರೆಯುಂ ” ಎಂದು ಮುಂದಿನ ಕಥೆಯುನ್ನು ಕವಿಯು ಆರಂಭಿಸುವಾಗ ಸೀತೆಯ ಅವಸ್ಥೆಗೆ ಮರುಗುತ್ತಿದ್ದ ವಾಚಕರು ಮನೋರಮೆಯಂತೆ “ ಸುಡು ಸುಡು ನಿನ್ನ ಜನ್ನಗುದುರೆಯುಂ ಅಕತೆಗೀಗಳೆ ಪೊಳ್ತೆ ” ಎಂದು ಸೀತಾವೃತ್ತಾಂತವನ್ನು ಕೇಳುವಲ್ಲಿ ಉತ್ಕಂಠಿತರಾಗುವರು.

ಕೆಲವು ವರ್ಣನೆಗಳು ಹೃದಯಂಗಮವಾಗಿರುವವಲ್ಲದೆ ಅಪೂರ್ವವಾಗಿವೆ. ಗ್ರಂಥಾರಂಭದಲ್ಲಿರುವ ವರ್ಷರ್ತುವರ್ಣನ, ೪ನೆಯ ಆಶ್ವಾಸದಲ್ಲಿರುವ ವಸಂತ ವರ್ಣನ, ೬ನೆಯ ಆಶ್ವಾಸದಲ್ಲಿರುವ ವಾಲ್ಮೀಕಿವರ್ಣನ, ವಾಲ್ಮೀಕ್ಯಾಶ್ರಮ ವರ್ಣನ, ೧೧ನೆಯ ಆಶ್ವಾಸದಲ್ಲಿರುವ ವೀರಾಲಾಪ, ೧೨ನೆಯ ಆಶ್ವಾಸದಲ್ಲಿರುವ ಬಾಹ್ಯೋದ್ಯಾನವರ್ಣನ, ಅಲ್ಲಿರುವ ಜೋಳ, ರಾಗಿ ಬೆಳೆಗಳ ವರ್ಣನ, ತೇಜಃ ಪುರವರ್ಣನ, ಅಲ್ಲಿರುವ ಲೋಹಕಾರರ ಮನೆ, "ತಿಸುಳಿಯಂತೆ ಮುಕ್ಕಣ್ಣನುಂ ತೊವಲ್ವೊದೆಯನುಂ ಮುಗಿಲಂತೆ ನೀರೊಡಲನುಂ ಎನಿಪ ತೆಂಗಾಯ್" ಹರನೆಂತಂತು ಜಟಾಧಾರಿಯು, ಹರಿಯೆಂತಂತು ಪೀತಾಂಬರಧಾರಿಯುಂ" ಆಗಿರ್ಪ ನೀರುಳ್ಳಿ, "ಕೊಟ್ಟಂ, ಕೆಟ್ಟಂ" ಎಂಬೊಂದು ಶಬ್ದವು ಹುಟ್ಟುವಂತೆ ಸುತ್ತಿಗೆಯಿಂದ ಅಡಗಲ್ಲ ಮೇಲೆ ಬಡಿವ ಸೊನ್ನೆಗಾರರ ಸಾಲೆ ಮೊದಲಾದ ವರ್ಣನೆಗಳು ಪಾಠಕರ ಮನಸ್ಸಿಗೆ ರಂಜನೆಮಾಡುವವು.

ಕೆಲವು ಪ್ರಯೋಗಗಳು ವ್ಯಾಕರಣಕ್ಕೆ ಅಸಮ್ಮತವಾದುವೂ, ಈಚೆಯುವೂ ಇರುವವು. ಕಲ್ಲೆಡಹಿ ಮುಳ್ನಾಂಟಿ ಕಾಲಿಂ ಬಸಿವ ನೆತ್ತರಂ (ಭಿನ್ನಕರ್ತೃಕ.) ೨೭. ಧರಣೀಮಂಡಲಗಳ್. ೧೧೬ ಇದು ಹೊಸಗನ್ನಡರೂಪವು. ಕೆಲವು ರೂಪಗಳು ಹಳಗನ್ನಡ ವ್ಯಾಕರಣದಿಂದ ಸಿದ್ಧವಾಗುವದಿಲ್ಲ. ತೆಂಕಲ್ಗೆ ೭,೮೫. (ಅದ್ಭುತರಾಮಾಯಣದಲ್ಲಿಯೂ ಈ ಪ್ರಯೋಗವುಂಟು.) ಎನ್ನನುಮಂ ೧೬. (ಸಮ್ಮತ ರೂಪ ಎನ್ನುಮಂ.) ತಮ್ಮನುಮಂ ಸಮಂತು ಎಮ್ಮನುಮಂ ೧೫೬. (ಸಮ್ಮತ ರೂಪ—ತಮ್ಮುಮಂ ಸಮಂತು ಎಮ್ಮುಮಂ.) ನೋವದೆ ೯೫ (ಸಮ್ಮತ ರೂಪ—ನೋಯದೆ) ಕೆಲವು ಅರಿಸಮಾಸಗಳುಂಟು. ಕೈಗುಣಮಂ .೧೨೧. ತೋಳ್ಬಲಮಂ ೧೦೦. ಕೆಲವು ಸಂಸ್ಕೃತ ಸಮಾಸರೂಪಗಳು ಸರಿಯಾಗಿಲ್ಲ. ಹನುಮಂತ ಸುಗ್ರೀವ ನೀಲನಳ ಜಾಂಬವಾದಿಯಪ್ಪ. ೫೪. ಹನುಮಜ್ಜಾಂಬವ ಪುಷ್ಕಲಾದಿ ೧೬೦. ನಿಕೃಷ್ಟ ಬ್ರಾಹ್ಮಣವಾಚಕವಾದ "ಬ್ರಹ್ಮಬಂಧು" ಶಬ್ದವು ಸದ್‌ಬ್ರಾಹ್ಮಣಾರ್ಥದಲ್ಲಿ ಪ್ರಯೋಗಿಸಲ್ಪಟ್ಟದೆ. ತನ್ನೊಂದಿರವಂ ಕೇಳಿಸಿದ ಬ್ರಹ್ಮ ಬಂಧುವಂ ೮೯. ಪ್ರಾತಃಕಾಲವರ್ಣನೆಯುಲ್ಲಿ ಜಂಪತಿವಕ್ಕಿ ಕಂಗೆಟ್ಟುವು ೨೯. ಎನ್ನುತ್ತಾನೆ. ಜೊನ್ನವಕ್ಕಿ ಇರಬಹುದಾಗಿತ್ತೋ ಏನೋ?

೪ನೆಯ ಆಶ್ವಾಸದಲ್ಲಿ— ಅತ್ತೆನಿರೇಂ ಬಯ್ದರೆ ಎನ್ನೊತ್ತಿನ ಸಹಜಾತರಂತುಟು ಅಣಕಿಸೆ ನಿನಗಾದತ್ತೆ ವಿಷಾದಂ? ದೂಸರಿದೆತ್ತಣೆನಾಯ್ತುರಸಿ ನಿನಗೆ

ಸರಸಿರುಹಾಕ್ಷೀ ಈ ವಾಕ್ಯಗಳಲ್ಲಿ ಅಂತುಟು ಅಣಿಕಿಸೆ ಇವೆರಡು ಶಬ್ದಗಳನ್ನು ಸೇರಿಸಿದರೆ ಪದ್ಯದ ಶೈಲಿಯುಳ್ಳ ಒಂದು ಕಂದವಾಗುವದು. ಕವಿಗೆ ಗೊತ್ತಾಗದಂತೆ ಪ್ರಾಸಬದ್ಧವಾದ ಪದ್ಯೋಚಿತಶೈಲಿಯ ಛಂದೋಮಯಿವಾಣಿಯು ತಾನಾಗಿ ಹೊರಟಿತೋ ಇಲ್ಲವೆ ಪದ್ಯವಿದ್ದುದನ್ನೇ ಅಚ್ಚಿನವರು ತಪ್ಪಿ ವಾಕ್ಯರೂಪವಾಗಿ ಮುದ್ರಿಸಿದರೋ ಎಂಬ ವಿಷಯವು ಸಂಶಯಾಸ್ಪದವಾಗಿರುವದು.

ಈ ಗ್ರಂಥದಲ್ಲಿ ೭೧೮ ಕಂದಪದ್ಯಗಳಿರುವವು. ಅವುಗಳಲ್ಲಿ ಅಷ್ಟೊಂದು ಕವಿತ್ವವು ಕಂಡುಬರುವದಿಲ್ಲ.

ಈ ಕವಿಯು ಈಗ ಬಳಕೆಯಲ್ಲಿಲ್ಲದ ಅಚ್ಚಗನ್ನಡ ಶಬ್ದಗಳನ್ನು ಗ್ರಂಥದಲ್ಲಿ ಪ್ರಯೋಗಿಸಿ ಮತ್ತೆ ಅವುಗಳನ್ನು ಬಳಕೆಯಲ್ಲಿ ತರುವ ಪ್ರಯತ್ನಮಾಡಿರುವನು. ತನ್ನ ಕನ್ನಡ ಭಾಷೆಯ ಕಾವ್ಯವನ್ನೋದುವದರಿಂದಲೂಕೂಡ ಸಂಸ್ಕೃತ ಕಾವ್ಯವನ್ನೋದಿದಷ್ಟೇ ಆನಂದವೂ ಸಂಸ್ಕಾರವೂ ಉಂಟಾಗುವಂತೆ ಮಾಡಿರುವನು. ಈ ಮೇರೆಗೆ ಆತನ "ನುಡಿಗಬ್ಬ" (ವಚನ ಕಾವ್ಯವು) ಮೇಲ್ತರದ್ದಾಗಿರುವದೆಂಬ ವಿಷಯದಲ್ಲಿ ಸಂಶಯವಿಲ್ಲ.

ಕವಿಯು ಒಂದೆಡೆಯಲ್ಲಿ ಕವಿಗಳ ಅಘಟಿತ ಘಟನಾ ಸಾಮರ್ಥ್ಯವಿಷಯದಲ್ಲಿ "ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊರತೆಯೊ? ನಾಡಂ ಕಾಡಂ, ಕಾಡಂ ಪೀಡಂ ಗೆಯ್ವೊಂದು ಪೆರ್ಮೆಯು ಬಲ್ಮೆಯು ಕಬ್ಬಿಗರೇಂ ಕಕ್ಕುಲಿತೆಯು ಮುದುದವಸಿಗಳತ್ತಣಿಂ ಪಿರಿಯರಾಗರೆ! ನುಡಿವರೇನದುವೆ ಪುರುಳ್, ಪಿಡಿವರೇನದುವೆ ತಿರುಳ್; ಪಲವೇಂ ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮಂ ಅಳಿಯಿಸುವ ಪೊಗಳ್ವ ಕೊಳ್ವಾಳ್ವ ತಾಳ್ವ ತೂಳ್ವ ಪೂಳ್ವ ಪೇಳ್ವ ಬಾಳ್ವ ಸಿಂಗರದ ಬಣ್ಣಗಬ್ಬಿಗರೆಮ್ಮ ತೆರಸಂ ಇನ್ನುಂ ನೀನರಿಯುಯ್" ಎಂದು ವರ್ಣಿಸಿದುದನ್ನು ತನ್ನ ಕಾವ್ಯದಿಂದ ಯಥಾರ್ಥವಾಗಿ ಮಾಡಿ ತೋರಿಸಿರುವನು.

ವಿಷಯಾನುಕ್ರಮ.

ಶ್ರೀ

ರಾಮಾಶ್ವಮೇಧಸಾರಸಂಗ್ರಹ.

೧. ಕಥಾಮುಖಂ.

ಓವೊ! ಕಾಲಪುರುಷಂಗೆ ಗುಣಮಣಮಿಲ್ಲಂಗಡ! ನಿಸ್ತೇಜಂಗಡ! ಜಡಂಗಡ! ಒಡಲೊಳ್ ಗುಡುಗುಟ್ಟುಗುಂ ಗಡ! ಏನರಮನೆವಾಗಿಲಂ ಮುಗಿಲ್ದೆರೆಯಿಂ ಬಾಸಣಿಸಿರ್ಪರ್? ಆರ್ಗಂ ಪುಗಲಾಣತಿಯಿಲ್ಲದಿರ್ಕುಂ. ಮಡದಿ ಬಾನ್ನೀರೆಯೊರ್ವಳ್ ಚಂಚಲದೃಷ್ಟಿಯಿಂ ಅತ್ತಮಿತ್ತಂ ನೋೞ್ಪಳ್; ಮೂಲಿಗೆ ಮರ್ದಂ ಕೊಂಡುಯ್ವೊಡಕ್ಕುಂ, ಸಿಡಿಲಾಳ್ ತಡೆಯುದೆಡೆಯು ಬೆಟ್ಟುಗಳ್ಗೆ ಕಟ್ಟುಬ್ಬರದಿಂ ಬಂದೆರಗುಗುಂ. ಕುತ್ತಮೇಂ? ಸುಗ್ಗಿಯೊಳುಂಡುದಂ ಕಾರೊಳ್ ಕಾರುವನಕ್ಕುಂ; ಕಾಲಂ ಕಷ್ಟಂ ಕಷ್ಟಂ!

ಎಲೆಲೆ ಸೋಗೆನವಿಲೆ, ಏಂ ನಲಿವೈ? ನಿನಗಮಾತಂಗಮನಿತ್ತು ಪಗೆಯೇಂ? ಕಟ್ಟಾಸುರದ ಬೇಸಗೆಯೊಳ್ ಗಾಸಿಗೆಯ್ದನೆನುತೆಯೆ? ಚಿಃ, ಪೆರವರ ಕಿಡುದೆಸೆಯೊಳ್ ಸಂತಸಕೆಡೆಗುಡದಿರ್. ಪೋ, ಸೊರ್ಕನುೞಿದು ನಿನ್ನಿರ್ಕೆಗೆ. ಏನೆನ್ನ ನುಡಿಯುಂ ಕಡೆಗಣ್ಚಿ ಮತ್ತಂ ಮತ್ತಂ ಮುತ್ತ ಪೊೞ್ತಿನಂತೆ ವೈವೆರ್ಚುವೈ? ಇದರ್ಕೆಯೆ ನಿನಗಿಂತು ವಿಜಾತಿಯೊಳಮಧೋಗತಿಯೊದವಿದತ್ತು.

ಬಾಯ್ಬಿಡದಿರೆಲೆ ಚಾದಗೆಯೆ! ಪೆರರ ಸಿರ್ಕಿನೊಳ್ ಮರುಕಮುಳ್ಳರೊಳ್ ನಿನ್ನನ್ನರೊಳರೆ? ನಿರ್ನೆರಮುೞಲದಿರ್. ಆವೆಯಾದೊಡಮೇವರ್? ಕತಿಪಯ ದಿನಂಗಳೊಳೆ ಎರೆಯುಂಗೆ ಕ್ಷೇಮಮುಕ್ಕುಮೆಂದು ಗ್ರಹಗತಿಯನಾರಯ್ದು ಜೋಯಿಸರೆಂದರ್. ಅದರಿಂದೆ*ರ್ದೆಗಿಡದಿರ್.

ಬಗ್ಗಿಸಲೆ ಕೋಗಿಲೆ! ಏನೀಮಾಮರದ ಸೆಳೆಗೊಂಬಿನೊಳ್ ಮೂಗುವಟ್ಟಿರ್ಪಯ್? ಕಣ್ಮರಲ್ ಕೆಂಪಾದುವೇಕೆ? ಏತರ್ಕೆ ಬೆರಗುವಡುವಯ್? ಅಕ್ಕೆ ನುಡಿಯೊಳೆಂಬುದೇಂ? ತಳಿರಿಲ್ಲಮೆಂಬೆಯ? ಅಲ್ತು, ಕಾಲಪುರುಷಂ ಜಡಭವಿತನೆಂಬೆಯ? ಇಂತಿದನರಿತುಂ ಸೋಂಬನಾಗಿರ್ಪುದೊಳ್ಳಿತೆ? ಅರಯ್ವುದಾರಯ್ವುದು.

ಇತ್ತಲಿದೆಕೊಳ್ ತಾಮ್ರತುಂಡನೇನನೊ ಗೊಣಗುತಿರ್ಕುಂ. ಪಂಡಿತವಕ್ಕೀ, ನಿನಗೀಪೆಸರನಾರಿಟ್ಟರ್? ನೀಂ ಪಂಡಿತಂ ದಿಟವಾದೊಡೆ ನೀರ್ಗುತ್ತಕ್ಕೆ ಮರ್ದನುಸಿರ್. ಏಂ ಮಾಂಬಳಂ? ನೇರಿಲ್? ಮಾರ್ನುಡಿಯದೆ ಬೀಗಿರ್ಪುದೇಂ? ಇರ್ಕೆ; ಕೂರಿದರೊಳ್ ಕೂರದೆ ನುಡಿಸಿದರೊಳ್ ನುಡಿಯದಿರ್ಪೀಕತದಿಂ ನಿನಗೆ ವನವಾಸಮಕ್ಕೆ; ಲೋಗರ ಕೈಗೆ ಸಿಲ್ಕಲೊಡಂ ಬಂಧನಮಕ್ಕೆ; ಮತ್ತಂ ಪಂಜರದೊಳಾನುಂ ಮಂಜರನೊಳಾನುಂ ಸಾವಕ್ಕೆ. ಇದೆನ್ನ ಸಾಪಂ!

ಈಗಡೆ ಉಳಿಗಂ ಸಗುಣಮುಂ ನುಡಿಗುಂ. ಒಂದು, ಎರಡು, ಮೂರು. ಭದ್ರಂ, ಶುಭಂ, ಮಂಗಳಂ. ಹಿಹೀ! ನೋವು ಮಾಯ್ತುದು. ಸಂದೆಯಮಣಮಿಲ್ಲಂ.

ಇದೇನೀಪಶ್ಚಿಮಾನಿಲನ ಹರಿಮೇಖಲೆ! ತಾಂ ಮೆಯ್ದೋರಿ ಮೆಲ್ಲನೆ ಊದಲೊಡಂ ಮೊಲ್ಲೆ ಮುಗುಳ್ತುದು; ವನಮಲ್ಲಿಗೆ ಗಂಟೊಡೆದುದು; ನಾಗವಲ್ಲಿ ಚಿಳ್ಸಳಿವಿಟ್ಟುದು; ಗರಿವೂ ಗರಿಗಟ್ಟಿದತ್ತು.

ಪಡುಗಡೆಯೊಳಿದೇಂ ಪೊಗೆ! ಕಡಲೊಡಲ ವಡಬಂ ಬಿಡದೆ ತೀಡುವ ಬಿರುಗಾಳಿಯಿಂ ದಳ್ಳಿಸಲೊಡಮೆಡೆಗೊಂಡ ಬೆಟ್ಟುಗಳ್ ಸುಟ್ಟು ಸೀಕರಿವೋಗೆ ಪುಟ್ಟಿತಕ್ಕುಂ. ಓ! ತಪ್ಪಿದೆಂ, ಪೊಗೆಯುಲ್ತು; ನೀರೊಳ್ ಕಿರ್ಚು ಚುರ್ಚುಗುಮೆ? ಮತ್ತಮೇಂ? ಅಂದು ಸೆರಗಂ ಪಾರ್ದು ಕಡಲಂ ಮರೆಗೊಂಡ ಬೆಟ್ಟುಗಳೀಗಳ್ ಪೂರ್ವವೈರಮಂ ಬಗೆದು ಗರ್ಜಿಸುತೆ ಗೆಂಟುಗೆಂಟಿನೊಳ್ ಪೊಳೆವ ಬಳ್ಳಿಮಿಂಚೆಂಬ ಕೈಗೇಣಂ ಬೀಸುತೆ ಬರ್ದಿಲನಾಡಿಂಗೆ ದಾಳಿಡಲ್ಕೆ ಪೋಪುವಕ್ಕುಂ.

ಸಗ್ಗಿಗರಾಣ್ಮನ ಘನಕರಿಘಟೆಗಳ್ ಬೇಸಗೆಯ ಬಿಸರಕ್ಕೆ ಬಾಯಾರೆ ಮುನ್ನೀರಂ ಕಂಡು ಪಿಂಡುಗೊಂಡು ಬಂದು ಮನಂ ತಣಿವನ್ನಮೋಲಾಡಿ ಪೊಡೆಕೋಡುವನ್ನಂ ಪೀರ್ದು ಸೊರ್ಕಿ ಪೋಪೆಡೆಯೊಳ್ ಗೀಳಿಟ್ಟು ನಿಡುವಲ್ ಬೆಳಗೆ ಭರಿಕೆಯ್ಯೊಳಿಂಬುಗೊಂಡ ನೀರಂ ಘೂತ್ಕರಿಸಿದಪುವೆಂಬಂತಿರೆ ಬಲ್ಸರಿ ಸುರಿಯೆ ಮಳೆಗಾಲಂ ಚೆಲ್ವಾಯ್ತು. ಮೇಘರಾಜನ ಬರವಿನ ಪೇರುಕ್ಕೈವದೊಳ್ ಸೊರ್ಕಿದುವೆನೆ ಪೊಚ್ಚಂಗಳ್ ಮೆಯ್ವೆರ್ಚಿ ಪರಿದುವು; ಪಸದನಂಗೊಂಡಂತಿರೆ ಬಳ್ಳಿವೊದರ್ಗಳ್ ಮಡಲ್ತು ಸೊಂಪೇರಿದುವು; ನವಿರೆಳ್ದು ನಿಂದುದೆನೆ ಪಸಲೆಯಿಂ ತಿರೆಯೆಸೆದುದು.

ಮತ್ತಂ ಗುಡುಗುಡಿಪ ಮೊಳಗಂ ಕಡುಕಾಯ್ಪೇರಿದ ಸಿಂಗದ ದನಿಗೆತ್ತು ಬೆಗುರ್ತೋಡಿ ಅಡಂಗುವುವೆನೆ ಕರ್ಮುಡುವಂ ಪುಗುವಾನೆವಿಂಡಿನಿಂದೆಯುಂ, ಪಸುರ್ಪುಲ್ಲಂ ಪಸಿವಡಂಗೆ ಮೇದು ಕೊರ್ಬಿ ಮೆಲ್ಲೊಕ್ಕುತ್ತಿತೆ ಪಟ್ಟಿರ್ಪ ಕಾಳ್ಕೋಣ ವಳಗದಿಂದೆಯುಂ, ಸೂಸುವ ಸೋನೆಯುಂ ಸೈರಿಸದೆ ಪಕ್ಕೆಯೊಳೆ ಪಟ್ಟು ಕಣಸಂ ಉಣ್ಗೆಗೆಯ್ಯುತಿರೆ ಸಿಡಿಲ್ ಸಿಡಿಯೆ ಆ ಬಿರುಸರಮಂ ಕೇಳ್ದು ಕೊಡಂಕೆ ನಿಮಿರೆ ನವಿ ಕೊರ್ಕ್ಕರಿಸೆ ತಳರ್ನೋಟದಿಂ ನೋಳ್ಪ ಹರಿಣಸಂದೋಹದಿಂದೆಯುಂ, ಜಡಿಗೆ ಕಡುಸುಗಿವ ಕುಳಿರ್ವೆಲರ ಕೋಡಿಂಗೆ ನಡುಗುವ ಕಿರುವರಿಗಳನೆರಂಕೆಯೊಳ್ ಪುದುಗಿ ಬಳ್ಳಿವರಿವ ಮಿಂಚಂ ಕಂಡು ತಳ್ಳಂಕಂಗೊಂಡು ಗೂಡಿನೊಳ್ ಮೆಯ್ಗ ರೆವ ಪಕ್ಕಿಗಳ ತಂಡದಿಂದೆಯುಂ ವನಾಂತರಂ ಮನೋಹರವಾದುದು.

ಈ ತೆರದೆ ಮನೋಜ್ಞಮಾಗಿ ಸಂಪ್ರಾಪ್ತಮಾದ ವರ್ಷಾಕಾಲದೊಳೊಂದು ದಿವಸಂ ಬೈಗುಂಬೊಳ್ತಿನೊಳ್ ಎಂದಿನಂತಿರೋಲಗಂ ಪರಿಯೆ ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಬೀಡಿಂಗೈತಂದು ಮಡದಿ ಮನೋರಮೆಯುಂ ತಾನುಂ ಇಂತು ಸುಖಸಲ್ಲಾಪಂಗೊಳುತಿರ್ದರ್:—

ಮನೋರಮೆ:—(ಮೆಲ್ನುಡಿಯಿಂ) ನಾಥ, ನೋಳ್ಪುದೀಪಗಲ್ಗಳೆಂತೊ ಪಿರಿಯುವು. ಪಗಲುಮಿರುಳುಂ ಸುರಿವ ಸೋನೆಯುತ್ತಣಿನೆನ್ನ ಬಗೆ ಬೇಸತ್ತುದು. ಅದರಿನೇನಾನುಮೊಂದು ನಲ್ಗತೆಯುಂ ಪೇಳ.

ಮುದ್ದಣಂ:—ಸ್ತ್ರೀಯುರ್ಗಿನಿತೊಂದು ಬಯಕೆ ತಲೆದೋರೆ ಆವ ಗಹ ನಂ? ಆವನಲ್ಗತೆಯುಂ ಪೇಳ್ವೆಂ? ಏಂ ಭೋಜಪ್ರಬಂಧಂ? ವಿಕ್ರಮವಿಜಯಂ? ಮಹಾವೀರಚರಿತಂ?

ಮನೋರಮೆ:— ಇಸ್ಸಿ; ಇವರೊಳೆನಗಳ್ಕರಿಲ್ಲ; ಉಳಿದೊಡಮಳಿದೊಡಂ ಬಟ್ಟೆದೋರಿಪ ರಾಮಾಯಣಂಗಳೊಳೊಂದಂ ಪೇಳ್ವುದು.

ಮುದ್ದಣಂ:—ನೀನೆ ಒಂದನಾಯ್ದು ಕೊಳ್ವುದು.

ಮನೋರಮೆ:—ಶ್ರೀರಾಮಂ ಅಶ್ವಮೇಧಮಂ ಕೈಕೊಂಡನೆಂಬರತ್ತೆ?

ಮುದ್ದಣಂ:—ಅರಿತೆಂ; ಶೇಷಂ ವಾತ್ಸ್ಯಾಯನಂಗೆ ಪೇಳ್ದ ಶೇಷರಾಮಾ ಯಣಮಂ ಪೇಳ್ವುದೆಂಬೆಯು? ಆವ ಧಾಟಿಯೊಳ್ ಪೇಳ್ವೆನೊ?

ಮನೋ:—ಹೃದ್ಯಮಪ್ಪ ಗದ್ಯದೊಳ್ ಪೇಳ್ವುದು.

ಮುದ್ದ:— ಆದೊಡಾಲಿಸು. ಸ್ವಸ್ತಿ ಶ್ರೀಮತ್ಸುರಾಸುರೇಂದ್ರನರೇಂದ್ರ ಮುನೀಂದ್ರಫಣೀಂದ್ರಮಣಿಮಕುಟತಟಘಟಿತ..................

ಮನೋ:—ಓ ಓ! ವಸುಧೆಗೊಡೆಯನಪ್ಪ ರಾಮಚಂದ್ರನ ಕತೆಯುಂ ಪೇಳೆನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯುಂ ಪೇಳ್ವುದೇಂ?

ಮುದ್ದ:—ನಲ್ನುಡಿಯಿದು ಮಡದೀ; ರಾಮಚಂದ್ರನ ಕತೆಯನೆ ಪೊಗಳ್ದು ಪೇಳ್ವುದಿದು ಸಕ್ಕದದೊಂದು ಚೆಲ್ವು.

ಮನೋ:— ಲೇಸು ಲೇಸು; ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು. ಕನ್ನಡದ ಸೊಗಸನರಿಯಲಾರ್ತೆನಿಲ್ಲೆನಗೆ ಸಕ್ಕದದ ಸೊಗಸಂ ಪೇಳ್ವುದು ಗಡ.

ಮುದ್ದ:—ಅಪ್ಪೊಡೆ ಇನ್ನೆಂತೊರೆವೆನೊ?

ಮನೋ:—ತಿರುಳ್ಗನ್ನಡದೊಳ್ ಪುರುಳೊಂದೆ ಪೇಳ್ವುದು.

ಮುದ್ದ:—ಅಪ್ಪುದು. ಆದೊಡಂ ಸಕ್ಕದವೊಂದೆ ರನ್ನವಣಿಯುಂ ಪೊನ್ನಿಂ ಜಿಗಿದಂತೆಸೆಗುಂ. ಅದರಿಂ ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ ರಸವೊಸರೆ ಲಕ್ಕಣವೊಂದಿರೆ ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ; ಕೇಳ್.

---

೧. ಅಗಸ್ತ್ಯದರ್ಶನಂ.

ಇಪೊಡವಿಯೊಳ್ ಚೈತನ್ಯರಾಯಂ ಮಾಯಾದೇವಿಯುಂ ಮದುವೆಸಿಂದ ಪೇರುಕ್ಕೆನದೊಳ್ ಅಕ್ಕಿಯಿಂ ಬೊಮ್ಮನೆತ್ತಿದ ಚಾಂದಳೆಯು ಪೊಂಗಾವೆನೆ ಪೊಂಬೆಟ್ಟಂ ಕಣ್ಗೊಳಿಕುಂ. ಆ ಸೊನ್ನೆವೆಟ್ಟಂಗೆ ತೆಂಕಣ್ಗೆ ಭೂರಮೆಯ ಸೀಮಂತರತ್ನಂಬೊಲ್ ರಂಜಿಪ ಅಯೋಧ್ಯಾನಗರದೊಳ್ ನೇಸರ ಬಳಿಯ ಪಲಂಬರರಸರ್ ಅರಸುಗೆಯ್ಯುತಿರ್ದರ್. ಕಡೆಗವರೊಳ್ ಅಬ್ಧಿಗಬ್ಜಂ ಚಾಂಗೆ ಭಾನು ಪುಟ್ಟಿದಂತಿರೆ ದಶರಥನರನಾಥಂ ಪುಟ್ಟಿ ಪಳಿ ಪೊರ್ದದ ಬಳಿಯರಂ ಕಳೆಗುಂದದ ತೋಳ್ಪೆರಂ ತನ್ನೊಳಾನೆ ಪಳನುಡಿಯುಂ ಬಳಿಸಂದು ಪಲವಗಲ್ ತಿರೆಯುಂ ಪೊರೆಯುತಿ ಒಳಿಯುಂ ಯಶಃಶೇಷನಪ್ಪಿನಂ ಆತಂಗೆ ನೆರವಾಂತ ನಾಲ್ಕುಪಾಯಂಗಳುಂ ನಾಲ್ಕು

ಪುರುಷಾರ್ಥಂಗಳುಂ ಮೈಗೊಂಡು ಪುಟ್ಟಿದುವೆನೆ ಒಗೆದ ನಾಲ್ವರ್ ಕುವರರೊಳ್ ಪಿರಿಯುಂ ರಾಮಂಗೆ ಪಟ್ಟಾಭಿಷೇಕಮಾಯ್ತು. ಎಳೆಯ ತಾಳ್ಮೆಯುಂ, ಗುರುವಿನ ರಿವ್ಪುಂ, ಬೆಂಗದಿರನ ಕಾಯ್ಪುಂ, ತಣ್ಗದಿರನ ತಣ್ಪುಂ, ಸಿಂಗದ ಚಲಮುಂ, ಮಾತಂಗ ದ ಬಲಮುಂ, ಸಿಡಿಲ ಪೊಡವುಂ, ಕಡಲ ಗುಣ್ಪುಂ ತನ್ನೊಳ್ ನೆಲೆಗೊಳೆ ದಶರಥಕುಮಾರಂ ರಾಜ್ಯಮನಾಳುತಿರ್ದಂ.

ಆತನಾಳ್ವನಾಡು ಕೈಲಾಸಮಲ್ಲದೊಡಂ ಸರ್ವಮಂಗಳಾಶ್ರಯಂ, ವೈಕುಂಠ ಮಲ್ಲದೊಡಂ ಲಕ್ಷ್ಮೀಮನೋಹರಂ; ಸತ್ಯಲೋಕಮಲ್ಲದೊಡಂ ಸರಸ್ವತೀವಿಲಾ ಸಾಸ್ಪದಂ. ಅದಲ್ಲದೆಯುಂ ಪಳಿಗಜ್ಜಂ ಪಟ್ಟಸಾಲಿಗರೊಳ್ ಇಳಿನೇಹಂ ತಾಣ ದೀವಿಗೆಯೊಳ್ ಕೀಳ್ಗೈಮೆ ಕಮ್ಮರರೊಳಲ್ಲದೆ ಆ ನಾಡಿಗರೊಳಿಲ್ಲಂ. ಪಲವೇಂ? ಮಧುಪಾನಮಾರಡಿಯೊಳ್ ಆರಡಿ ಪಾದರಿಯೊಳ್ ಪಾದರಿ ಬನದೊಳಲ್ಲದಾ ನಾಡೊಳಿಲ್ಲ. ಮಡದೀ, ಇಚ್ಛಾರ್ಥಸಿರಸಾಲಗೆಯಿರ್ದುಮೀರಾಮರಾಜ್ಯಮಂ ಸೇಸಂ ಬಣ್ಣಿಸಲಾರ್ತನಿಲ್ಲಂ, ಇಂತಿರೆ ಗಾಂಪಂ ಕಾಲುರಿಚಂ ಎನಗಳವೆ?

ಶ್ರೀರಾಮಚಂದ್ರಮಂ ಇಂತರಸುಗೆಯ್ಯುತಿರಲೊಡನೊರ್ಮೆ ದರ್ಶನಾರ್ಥಂ ಅಗಸ್ತ್ಯಮುನಿ ಶಿಷ್ಯಂಬೆರಸು ಅಯೋಧ್ಯೆಗೈತರುತಿರ್ದಂ. ಆತನ ಬರವಂ ಕಂಡು ಚಾವಡಿಯೊಳಿರ್ದ ರಾಘವಂ ಗದ್ದುಗೆಯುನಿಳಿದು ನಾಲಡಿಯೊಳ್ ಮುನಿ ಯನಿದಿರ್ಗೊಂಡು ಪೊಡೆಮಟ್ಟು ಭದ್ರಾಸನದೊಳ್ ಕುಳ್ಳಿರಿಸಿ ಅರ್ಘ್ಯಪಾದ್ಯಂಗ ಳನಿತ್ತು ಮಧುಪರ್ಕಮಂ ಸಮರ್ಪಿಸಿ ಕುಶಲಮಂ ಬೆಸಗೊಂಡುಪಚರಿಸುತಿರ್ದಂ.

ಬಳಿಕಿರ್ವರುಂ ಸುಖಸಲ್ಲಾಪಂಗೊಳುತಿರಲಗಸ್ತ್ಯಂ ರಾಮಚಂದ್ರಮನ ಮೊಗಮಂ ನಿಟ್ಟಿಸಿ— ರಾಯ, ಎಮ್ಮೀಮಾನಿಸರ ಮನೋವಿಕಾರಮಂ ನುಡಿಯಿಂ ಗೆಯ್ಮೆಯಿಂ ಮೊಗದ ಮಾರ್ಪಾಟದಿಂ ಅರಿಯಲಕ್ಕುಮೆಂದು ಬಲ್ಲರ ಬಗೆ. ಈಗ ಳ್ನಿನ್ನೀ ಮೊಗಸಿರಿಗೆ ಕಂದುಂ ನುಡಿಗೆ ಕುಂದುಂ ತಲೆದೋರಿದಂತಿರೆ ತೋರ್ಕುಂ. ಅದರಿಂ ಬಗೆಯೊಳೇನಾನುಮೊಂದು ಬೇವಸಮಿರ್ಕುಮೆಂದರಿವೆಂ; ಅಂತು ನರರ್ಗೆ ಮರುಕಮೊದವಿದೊಡಂ ಮಾಂಜಿಸಲ್ಕೆಂದು ಪೊಸನುಡಿಯು ಬಿನ್ನಣಮಂ ಪುಸಿನ ಗೆಯು ಸನ್ನಣಮಂ ತೋರ್ಪಡಿಸುತುಂ ಅದಂ ಮರೆಗೆಯ್ವುದುಂಟು; ಎಂದಂ.

ಅದರ್ಕಾರಾಘವಂ ಮುನಿಕುಲಲಲಾಮ, ಅಂತುಟಪ್ಪುದು ಸಾಜಂ. ಸಂಸಾರಬಂಧನದಿಂ ಬಿಗಿವಡೆದೀಬಗೆಯೇಗಳುಂ ಚಿಂತಾಪರಂಪರೆಯಿಂ ಪೊದೆ

ದಿರ್ಕುಂ. ಒರ್ಮೆ ಅಮರ್ಚುಗುಂ ಮತ್ತಮೊರ್ಮೆ ಸಡಿಲ್ಚುಗುಮ್ಮೈಸೆ ಎಂದು ಪಡಿನುಡಿದಂ.

ಆಗಳ್ ಲೋಪಾಮುದ್ರಾಪತಿ—ರಾಘವ, ಸೊಲ್ಲಿದು ನಿನಗಲ್ತು; ಲೋಗರ್ಗೆ. ಸಾಕ್ಷಾನ್ನಾರಾಯಣಂ ತಿರೆಯ ತಿಣ್ಪಂ ತವಿಸಲ್ಕೆಂದು ಪುಟ್ಟಿದಂಗೆ ಚಿಂತೆ ಗಡ! ಗಾಳಿ ಬೆಮರ್ತಂದು ನೇಸರ್ ಕಂಗಳನಾದಂದು ನಿನಗೆ ಬಾಗುಳ್. ಆನೊಂದಂ ಕೇಳ್ದೊಡೆ ನೀನೊಂದಂ ಪೇಳ್ದೈ; ಆರನೊ ಉದ್ಧರಿಸಲ್ಕೆಂದಕ್ಕುಮೀಯೆಣಿಕೆ; ಅಂತದರೊಳಂ ಲೋಕಸಮ್ಮತದಿಂ ಪೇಳ್ವೊಡಂ ನೀನೊಂದೆಕೊಡೆಯೊಳಾಳ್ವರಾಯಂ. ಸಾಮಂತರಾಜರ್ ವಶವರ್ತಿಗಳಾಗಳುಂ ಕಾಣ್ಕೆಯನೀಗುಂ ಸಾಸಿರ್ವರ್. ಪೊನ್ನೊಡೆಯನ ಭಂಡಾರದತ್ತಣಿಂ ಮಿಗಿಲ್ಕೈಸಿರಿ. ಪೊಡವಿ ಬಯಕೆವಟ್ಟಲ್. ಮಾರಿಯ ಕೋರೆವಲ್ಲಂ ಮುರಿವ, ಭೈರವನ ನಿಡುಜಡೆಯಂ ಪಿಡಿವ, ಕಾಳರಕ್ಕಸಿಯ ಕೊರ್ವಾಳಂ ಸೆಳೆವ ಪಡೆವಳರೊಳರ್. ಗುರುಕವಿಗಳಿಂ ಬಳಕೆವೆತ್ತ ಸಚಿವರುಂಟು. ಬಳಿಯೋಜಂ ವಸಿಷ್ಠಂ. ಮೊಲನ ಸಿಂಗಮಂ, ಮಣಲನೆಯ್ಯಂ ತಂದೀವ ಸೋದರರ್ ಬಳಿಯೊಳಿರ್ಪರ್. ನಂಟರೆಲ್ಲರುಂ ನೇಹಿಗರ್. ನಾಡಿಗರ್ ನುಡಿಯೊಳ್ ನಡೆವರ್. ಐವಾಯ್ವುಲಿಯೆನೆ ನಗರರಕ್ಷಕನಿರ್ಕುಂ. ಅಂತುಮಲ್ಲದೆಯುಂ ಲೋಕಕಂಟಕನೆನಿಸಿ ಭೂಭಾರಮಾಗೆ ಪುಟ್ಟಿದ ರಾವಣಕುಂಭಕರ್ಣಾದಿ ದುಷ್ಟರಾಕ್ಷಸರಂ ತತ್ತರಂದರಿದುದರಿಂ ಮೂಜಗಮುಂ ಸೊಗದಿಂ ಬಾಳ್ವುದು. ಇನ್ನೇತರ ಚಿಂತೆ? ಕೈವಲ್ಯಸುಂದರೀವದನಾರವಿಂದಮಕರಂದಪಾನಕಿದು ಪೊಳ್ತಲ್ತೆ? ಎಂದುಸಿರ್ದಂ. ಬಳಿಕ್ಕಂ ರಾಘವಂ -- ಸ್ವಾಮೀ, ನರರ ಸುರರ ಮುನಿವರರ ಮನದಳಲುರಿ ಪಿರಿದಾಗೆ ಆಯು ಬರಿದಾಗೆ ಸಿರಿ ಕೈವಿಡೆ ತಂತಮ್ಮ ದುಷ್ಕೃತಂಗಳ ಫಲಂಗಳಿನಾರಕ್ಕಸರ್ ಪೊಂದಿದರಲ್ಲಮೊನೆಯೊಳಾತಂಗಳಂ ಗೆಲ್ವಕೊಲ್ವ ಬಲ್ಮೆ ತನಗೆತ್ತಣ್ತು? ಆದೊಡಮಾರಾವಣಕುಂಭಕರ್ಣರೆಂದೊಡಾರವರ್? ಪುಟ್ಟೇತರ್ಕೆ? ಎಂತು? ಇಂತಿದಂ ಕೂರ್ಮೆಯಿಂ ಪೇಳಲಕ್ಕುಂ ಎನೆ; ಜಿತವಾತಾಪಿ ತಾಂ ಮಂದಹಾಸದಿಂ ರಘುಕುಲಪಯೋಧಿರಾಕಾಸುಧಾಕರ, ಈಕುಲಕೀಸೌಜನ್ಯಕೀನುಡಿ ತಗುಗುಂ, ಪೊಂಬಚ್ಚಮಂ ಪಣ್ಣಿಬಣ್ಣಮಂ ಕೇಳ್ದಯ್. ಪೋ, ಎನಗರಿವು ನಿನಗೆ ಜಿನದಂ ಕೇಳಾ ಆಳಿರಕ್ಕಸರ ಪುಟ್ಟಂ ಎನುತೆ ಪೇಳ್ವುದರ್ಕುಜ್ಜುಗಿಸಿದಂ:—

ಮುನ್ನಮೊರ್ಮೆ ಸನಕಸನಂದನಾದಿ ದೇವರ್ಷಿವಿರ್ ವಿಷ್ಣುವಂ ಪೂಜಿಸಲ್ಕೆಂದು ವೈಕುಂಠಕ್ಕೈತಂದು ಓಲಗಮಂ ಪುಗುತರ್ಪಂದು ಬಾಗಿಲೊಳ್ ಜಯವಿಜಯರೆನಿಪ ಪಡಿಯರರ್ ತಡೆದರ್. ಮೂಗುದುದಿಯೊಳತ್ತೆ ಮುನಿಸು ಮುನಿಗಳ್ಗೆ. ಒಡನೆಯೆ ಮುನಿಗಳ್ ಕೋಪದಿಂ ಪೊಡವಿಯೊಳ್ ರಕ್ಕಸರಾಗಿ ಪುಟ್ಟಿಮೆಂದಾಕಾವಲರಂ ಬಯ್ದು ಪೋಪುದುಂ ಅವರ್ ಮನದೆ ತಲ್ಲಳಂಗೊಂಡು ನಾಥನೆಡೆಗೆ ಪರಿತಂದು ಗೆಯ್ದ ಗೆಯ್ಮೆಯುಂ ಬಯ್ದ ಬಯ್ಗುಳಂ ಬಿನ್ನವಿಸಿದರ್. ನಾರಾಯಣನಿದಂ ಪರಿಭಾವಿಸಿ ದ್ವಾರಪಾಲಕರ್ಗೆ—ನಿಗ್ರಹಾನುಗ್ರಹಸಮರ್ಥರ್ ವಲಂ ಮುನಿಗಳ್. ತೊದಳಾಗದವರ ನುಡಿ; ಅದೊಡಂ ನಿಮ್ಮನಿನಿತೊಂದು ಕೇಳ್ವೆಂ—ಎನ್ನನೇಹಿಗರೆನಿಸುತೆ ಏಳುಂ ಮೆಯ್ಗಳಂ ಕಳಿದು ಬಳಿಯುಮೆನ್ನಂ ಸಾರ್ವುದೊಂದು, ಪಗೆದು ಮೂರುಂ ಮೆಯ್ಗಳಂ ಕಳೆದು ಬಳಿಯುಮೆನ್ನಂ ಕಾಣ್ಬುದು ಪೆರತೊಂದು. ಇವರೊಳಾವುದು ಮನಕೇರುವುದದಂ ಪೇಳಿಮೆನೆ, ಮಣಿದು ಜಯವಿಜಯರ್—ಜೀಯ, ಏಳುಂ ಜನ್ಮದೊಳ್ ಅನಿವಿರಿದುಕಾಲಮುಗಲ್ವುದಾಗದು; ಪಗೆಗಳೆನಿಸಿಯುಮೆಂತಾನುಂ ಮೂರುಜನ್ಮಂಗಳಂ ಕಳಿದು ಮತ್ತಂ ನಿನ್ನಂ ಸಾರ್ವುದೆ ಲೇಸು; ಎನುತೆ ಬೇಡಿದರ್. ಅದರ್ಕೆ ಸಿರಿಯರಸಂ ಅಂತೆಯೆ ಅಕ್ಕೆ ಎಂದು ಕಳಿಪಿದಂ. ಕೇಳಯ್, ಆ ರುಷಿಸಾಪದ ದೂಸರಿಂ ಜಯವಿಜಯರ್ ಮರುವುಟ್ಟಿಂ ಹಿರಣ್ಯಾಕ್ಷ ಹಿರಣ್ಯಕಶಿಪುವೆಸರ ದೈತ್ಯರಾಗಿ ಪುಟ್ಟಿ ಹರಿವೈರದಿನಳಿದರ್. ಈಗಳವರ್ಗೆರಡನೆಯ ಪುಟ್ಟು. ಎಂತೆನೆ—ಬ್ರಹ್ಮಂಗೆ ಪೌಲಸ್ತ್ಯನೆನಿಪ ಮಾನಸಪುತ್ರನೊರ್ವನುಂಟು. ಈತನಿಂ ವಿಶ್ರವಸ್ಸು ಪುಟ್ಟಿದಂ; ಈತಂಗೆ ಮಂದಾಕಿನೀಕೈಕಸೆಯರೆಂಬಿರ್ವರ್ ಪೆಂಡಿರೊಳರ್. ಪಿರಿಯಳ್ಗೆ ಧನದಂ, ಕಿರಿಯಳ್ಗೆ ರಾವಣಕುಂಭಕರ್ಣವಿಭೀಷಣಶೂರ್ಪಣಖೆಯರುದ್ಭವಿಸಿದರ್; ಇಂತು ಬ್ರಹ್ಮನಿನೀಬಳಗಮಿಳಿದತ್ತೆನುತೆ ಮೇಲಿಂಮೇಲುಸಿರ್ದಂ.

ಕೊಡನ ಕುವರನಿಂತು ಪೇಳ್ವುದುಂ ರಾಮಂಗೆ ದುಗುಡಮಿರ್ಮಡಿಯಾದುದು. ಮೊಗಂ ಕಳೆಗೆಟ್ಟುದು. ಮೆಯ್ ಬೆಮರ್ತುದು. ಆಗಳಾತಂ ಮತ್ತಂಮತ್ತಂ ಬಿಸುಸುಯ್ದು ಮುನಿಗೆಂದಂ:—

“ ಆಃ ಇಕ್ಕುವಂ ಪೊಲ್ಲದ ಕಜ್ಜಮಂ ಪಣ್ಣಿದೆನ್ನೈಸೆ! ಲೋಕದೊಳೆನ್ನಂ ಕೂಳನೆನರೆ? ರಿಕ್ಕಟಮಾದುದೀಬಳಿಯೇಳ್ಗೆ; ಪೆಣ್ಣವದಿಂ ಪಾತಕದಿನಿತೊಂದು ತಿಣ್ಣಮಂ ಪೊರುವೊಡೆಂದೇಂ ಬಿದಿ ಮಾಡಿದನೆ? ಅಕ್ಕಟಾ ಬ್ರಹ್ಮದ್ರೋಹಿಯಾದೆ

ನಲಾ! ಪೋ. ಪಾಳ್ಗೆಯ್ಮೆಯುಳಲಿಂತುಟು. ಇಂದು ಪಳಿಗೆ ಕಾರಣಂ; ಪೊಂದಿದಂದು ನರಕಕಾರಣಂ. ಏವೆಂ? ಮುಂತೇಂ ಬಟ್ಟೆ? ಆವ ಜನ್ಮಮಾವ ಜಪಮಾವ ತಪಮೀ ಪಾಪರಾಶಿಯಿನೇಳಲಾಟಿಪೆನಗೆ ಕೆಯ್ಯೀಗುಂ ಮುನಿ ಪೇಳ”

ಇಂತು ಮರ್ತ್ಯರಂತಿರೆ ಉಮ್ಮಳಂಬಡುವ ರಾಜಪರಮೇಶ್ವರಂಗೆ ಜಿಂಜದೋಜಂ—ಲೇಸುಲೇಸೆಲೆ ಸೀತಾರಮಣ, ಈ ಕಪಟನಟನೆಯುನಾರ್ಗೆ ತೋರಿಪ್ಪೆ? ಬಹ್ಮಹತ್ಯಂಗಡ! ಪಾಪಂ ಗಡ! ಇಂತಿದಂ ಕಾಣುತೆ ನೋಯುಲಾಮುಂ ಭ್ರಾಂತರಲ್ತು. ಏಂ ಕೇಳ್ದರಿಯೆವೆ ರಕ್ಕಸರುಪಟಳಕೆ ಬಾರ್ತೆಗೆಟ್ಟು ದೂರಿದ ಬ*ರ್ದಿಲರ್ಗೆ ನಾರಾಯಣಂ ಸೈರಿಪುದು ಸೈರಿಪುದು ಪಂತಿದೇರಂಗೆ ರಾಮವೆಸರಿಂ ಪುಟ್ಟುವನ್ನಮೆಂದು ಸೈತಿಟ್ಟು ಬುರಲ್ಚಿದ ತೆರನಂ? ಆ ಆದಿನಾರಾಯಣನಿಂತು ಮೈವೆತ್ತು ಪುಟ್ಟಿ ಬಂಡಣದೊಳವರಂ ಸೈಮಿನಿಗಟ್ಟಿದುದಂ ಜನಮೆ ನುಡಿಗುಂ ಎನುತೆ ಪಡಿನುಡಿದಂ.

ಅದರ್ಕೆ ಶ್ರೀರಾಘವಂ—ಮಾಂಜದುಸಿರ್ದೊಡಿದು ಬಲ್ಲರ ನುಡಿ. ಎಗ್ಗರೆನರೆ ಲೋಗರಾಡರೆ ಮಡದಿಗೆಂದು ಬ್ರಹ್ಮಹತ್ಯಂಗೆಯ್ದನೆಂದು? ಇಂತಿದಂ ಬಗೆಯುಲ್ವೇಡಾ? ಎಂಬುದುಂ ಮುನಿಪಂ—ಎಗ್ಗರೆಂಗೆ, ಲೋಗರಾಡುಗೆ, ಬರಿದೂರಂ ತಡೆಯುಲಾವಂ ಸಾಲ್ವಂ? ಅಂತುಮಲ್ಲದೆ ಪಾತಕಂ ಜ್ಞಾನಕೃತಮಜ್ಞಾನಕೃತಮೆಂದಿರ್ವಗೆಯಿರ್ಕುಂ. ಜ್ಞಾನಕೃತಮಾದೊಡೆ ದೋಷಂ; ಅಜ್ಞಾನಕೃತಮಾದೊಡೇಂ? ಕಿರಿದೊಂದು ಪ್ರಾಯಶ್ಚಿತ್ತಂ; ಎನೆ ರಘುಪುಂಗವಂ—ಇಂತಿದು ತಗದು. ಕಿಚ್ಚನರಿತೊಡಮರಿಯದೊಡಂ ಕಿಟ್ಟಿ ಸುಡದೆ? ಅದರಿನೆನ್ನಿಮರಿಯದೊಗೆದಳಿಗೆಯ್ಮೆಗೊಂದು ಪರಿಹಾರೋಪಾಯಮಂ ತೋರಿ ಎನ್ನನುದ್ಧರಿಸಲ್ವೇಳ್ಕುಮೆಂದು ಕಾಲ್ಗೆರಗಿದಂ.

ಇಂತೆರಗಿದ ರಘುಪುಂಗವನಂ ಮುನಿಪುಂಗವಂ ಕೂರ್ಮೆಯಿನೆತ್ತಿ ತಳ್ಕೈಸಿ—ಇನಿತೊಂದುಬ್ಬೆಗಮೆಡೆಗೊಂಡಿರೆ ತೊಡಂಕೇಂ? ಬೆದಕಲೇಕೆ? ಕೈಕೊಳ್ವುದಶ್ವಮೇಧಮಂ. ನಿನ್ನೀ ಬಳಿಯ ಪಿರಿಯರಾಯರುಮಿದಂ ಬೇಳ್ದು ಬೆಳ್ಗಸದಿಂ ದೆಸೆವೆಂಡಿರ್ಗೆ ಪಸದನಂಗೆಯ್ದು ಬ*ರ್ದಿಲವೆಣ್ಗಳಂ ತೊಳ್ತುಗೊಂಡರ್. ಇಂತೀ ಸಪ್ತತಂತುವಿಂ ಪಂಚಮಹಾಪಾತಕಂಗಳುಮೊರ್ಮೊದಲೊಳೆ ಪಡಲಿಡುಗುಂ; ಕ್ಷಾಮಡಾಮರಂಗಳ್ ಬೇರುಡಿದು ಪಾಳ್ಪೋಕುಂ; ನಿನ್ನ ಬಗೆಯ ಸಂದೆಗಮುಂ

ಪೆಡಂಮೆಟ್ಟುಗುಂ; ಲೋಗರ್ಗೆ ಕಲ್ಯಾಣಮುಂ ನಿನಗಿಷ್ಟಾರ್ಥಮುಂ ನೆರೆಗುಂ ಎಂದು ಬೋಧಿಸಿದಂ. ಆಗಳ್ ದಾಶರಥಿ—ಅಕ್ಕುಂ, ಆನುಂ ತಗುಬಗೆಯೊಳೊಪ್ಪುವೆಂ; ಆದೊಡಂ ಜನ್ನಕ್ಕೆ ಪೇಳ್ದ ಕುದುರೆಯು ಲಕ್ಷಣಮಾವುದು? ವಿಧಿಯೆಂತುಟು? ಮೇಣೆಮ್ಮಂದಿಗರ್ಗೆ ಸಾಧ್ಯವೊ ಇವರೊಳ್ಮನಮೆಣಿಕೆಗೊಳ್ವುದು ಎಂಬುದುಂ, ಮುನಿ—ನಿಮಗಲ್ಲ ಮೇಣಾರ್ಗೆ ಸಾಧ್ಯಂ? ಬಲ್ವಡೆಯು ಬಲಂ, ನೆರೆ ರಾಯರ ನೆರಂ, ಪಿರಿಯರೊಲ್ಮೆ, ಐಸಿರಿಯು ಪೆರ್ಮೆ, ಪೆರರ್ಗಾರ್ಗೆರ್ೞವು? ಇವರೊಳ್ ಸಂಕೆವೇಡಂ. ಜನ್ನಗುದುರೆಗೆ ಮೆಯ್ಯೊಳ್ ಬೆಳ್ಪು, ಮೊಗದೊಳ್ ಕೆಂಕಂ, ಕೊಡಂಕೆಯೊಳ್ ಕರ್ಪು, ಬಾಲದೊಳ್ ಪೊಂಬಣ್ಣಂ ಒಪ್ಪಿರವೇಳ್ಕುಂ. ವಿಧಿಯಿಂತುಟು—ಬೇಸಗೆಯು ಹುಣ್ಣಿವೆಯೊಳಂತಪ್ಪ ಹಯಮನರ್ಚಿಸಿ ಪಣೆಯೊಳ್ ಬಳಿನಿರುದುಮಂ ತನ್ನಗ್ಗಳಿಕೆಯುಮಂ ಬರೆದೋಲೆಯುಂ ಬಿಗಿದು ಒರ್ಕಾಲಂ ಯಥೇಚ್ಛಂ ತೊಳಲಲ್ಕೆ ಬಿಡುವುದು. ಎಂತೆಂತು ಕುದುರೆಯು ಬಟ್ಟೆಯಂತಂತು ಬೆಂಬತ್ತುವುದು ಕಾಪಿನ ಭಟರ್. ಬಲ್ಲುಳ್ಳರ್ ಕಟ್ಟಿದೊಡೆ ಮೊನೆಯೊಳ್ ಮಾರ್ಕೊಳ್ವುದು, ಸೋಲ್ತು ಕಪ್ಪಮನಿತ್ತೊಡೆ ಕೈಕೊಳ್ವುದು ಕಾವಲರ್. ಎನ್ನೆವರಮಶ್ವಮಿಳೆಯೊಳ್ ಸಂಚರಿಕುಮನ್ನೆವರಂ ಯಜಮಾನಂ ಮೃಗಶೃಂಗಧರಂ ನವನೀತವಿಲಿಪ್ತಸುಗಾತ್ರಂ ಬ್ರಹ್ಮಚರ್ಯಮನಪ್ಪುಕೆಯ್ದು ನಮೆವ ದೀನಾಂಧ ಬಧಿರರಂ ದಾನದಿಂ ಪಾಲಿಸುತುಂ, ಬ್ರಾಹ್ಮಣರಂ ಭೋಜನದಿಂ ತೃಪ್ತಿಗೊಳಿಸುತುಂ, ಐದೆಯುರನ್ನೆದೆ ಪೂಜಿಸುತುಂ ಕಾಲಮುಂ ಕಳಿವುದು. ಕಡೆಯೊಳ್ ಯಥಾ ವಿಧಿ ಯಜ್ಞಪರಿಸಮಾಪ್ತಿಗೆಯ್ದು ಬ್ರತಮನುಳಿವುದೈಸೆ. ಇಂತೀ ಜನ್ನಮಂ ಬೇಳ್ದು ಲೋಕಮಂ ಕಾಯ್ವೈ; ಮೇಣ್ ನಿನಗಕ್ಕೆಮ ಸರ್ವಂ ಮಂಗಳಂ ಎಂದುಪದೇಶಿಸಿದಂ.

೩. ಸೀತಾಗರ್ಭಧಾರಣಂ.

ಆವುಪದೇಶಂ ರಾಮಂಗವೊಡಂಬಟ್ಟುದು. ವಸಿಷ್ಠಂಗಂ ಸರಿವಟ್ಟುದು. ಸೋದರರ್ಗಂ ಸಮ್ಮತಮಾದುದು. ಒಡನೆಯೆ ಸರಯೂತೀರದೊಳ್ ನಾಲ್ಗಾವುದದಳತೆಯೊಳ್ ಯಾಗಶಾಲೆಯುಂ ನೇರ್ಪಡಿಸಿ ಸಂಭಾರಂಗಳಂ ನೆರೆಯಿಸುತಿರ್ದರ್. ಆಗಡೆ ವಸಿಷ್ಠಶಿಷ್ಯರ್ ಪೋಗಿ ಮುನಿಸಂದೋಹಮುಂ

ಕರೆವುದುಂ ಶ್ರೀರಾಮಚಂದ್ರದರ್ಶನಲಾಲಸರ್ ನಾರದ ಪರ್ವತ ಕಪಿಲ ಯಾಜ್ಞವಲ್ಕ್ಯಸಂವರ್ತಾದಿ ಋಷಿಗಳ್ ನಿಜಾಶ್ರಮಂಗಳಿಂ ತಳರ್ದು ತಳ್ವದೆ ಕೋಸಲೆಗೆ ನಡೆತಂದು ರಾಯನಂ ಕಾಣಿಸಿಕೊಂಡರ್.

ಇಂತು ಬಿಜಯಂಗೈದ ಮುನಿವರ್ಗಮನಾತನರ್ಘ್ಯಪಾದ್ಯಾಸನಾದಿಗಳಿಂ ಮನ್ನಿಸಿ ತಪೋವೃದ್ಧಿಯಂ ಕೇಳ್ದು ಗೋಪ್ರದಾನಾದಿಗಳಿಂ ಸತ್ಕರಿಸಿದಂ. ಮತ್ತಂ ಹೃಷ್ಟಚಿತ್ತರಾದಾತವಸಿಗಳುಂ ವರ್ಣಾಶ್ರಮ ಧರ್ಮಂಗಳಂ ರಾಘವಂಗೆ ನಿರವಿಸುತುಮಿರ್ದರ್. ಆಸಮಯದೊಳ್—

ಮಾಮರನೆಳದಳಿರ ರಸಮಂ ಪಿಳಿದು ಕಳಕಂಠನ ಕಂಠನಾಳಕ್ಕೆರೆದುಬ್ಬಸಮಂ ಕಳೆದು ಕಲನಾದಮಂ ಪೆರ್ಚಿಸಿಯುಂ, ಅರನೇರಿಲ ದೋರೆವಣ್ಣಂ ತೇದು ನಕ್ಕಿಸುತರಗಿಳಿಯ ನಾಲಗೆಯಂ ತೆಳ್ಳನಾಗಿಸಿ ತೊದಳ್ನುಡಿಯಂ ತಿರ್ದಿಯುಂ, ಪುಷ್ಪಧೂಳಿಯಂ ಲೆಪ್ಪಂಬಳಿದದಿರ್ಮೂರ್ತ್ತಿಯ ಸುರಯಿಯ ಪೊಸಬಂಡನೊಡಲ್ಗಿತ್ತು ಮರಿದುಂಬಿಗಳ್ಗೆ ಸಂಪಗೆಯುತ್ತಣಿನೊದವಿದ ಶಿರೋಭ್ರಮಣಮನಳಿಯಿಸಿಯುಂ ಬಸಂತಂ ಬೆಜ್ಜನೆನೆ ಮೆಯ್ದೋರಲೊಡಂ ತನ್ನಾಕೆಳೆಯಂಗೆ ತಾನುಂ ನೆರೆವಾದನೆನೆ ದಕ್ಷಿಣಾನಿಲಂ ಮಂದಂ ಮಂದಂ ವಹಿಸುತಿರೆ ಮರಂಗಳೆಲ್ಲಂ ಚೆಂದಳಿರ್ಗಳಿಂ ಮಿಡಿಗಾಯ್ಗಳಿಂ, ಬಳ್ಳಿಗಳ್ ನನೆಗಳಿಂ ಮರಲ್ಗಳಿಂ ಸೊಗಯಿಸುತಿರೆ ಮನೋಹರಮಾದುದು ಪೊಸಸುಗ್ಗಿ.

ಇಂತು ಬಸಂತಂ ಬರೆವರೆ ಕಂಡು ವಸಿಷ್ಠಂ ರಾಘವಂಗೆ—ಇದೀಗಳ್ ಸಮಯಂ ಯಜ್ಞಿಯಾಶ್ವಮಂ ಪೂಜಿಸಲ್ಕೆ, ದಿಗ್ದೇಶಂಗಳಿಂ ಕಪ್ಪಕಾಣ್ಕೆಗಳಂ ತರಲ್ಕೆ, ನೆರೆದ ವಿಪ್ರಸಂದೋಹಮಂ ದಾನಂಗಳಿಂ ಸಮ್ಮಾನಿಸಲ್ಕೆ. ಅಂತರಿಂ ನೀಂ ಪೊನ್ನ ಸೀತೆವೆರಸು ವ್ರತಮನಪ್ಪುಕೆಯ್ವುದೆಂದೆಚ್ಚರಿಸಿದಂ.

ಮನೋರಮೆ—ರಮಣ, ಇಂತಿದೇಂ? ಪೊನ್ನಸೀತೆಯೆಂಬುಯ್, ರನ್ನಸೀತೆಯೆತ್ತವೋದಳ್? ಜನಕಂ ಜನಕಂ ಕರೆದುಯ್ದಿರ್ದನೇಂ? ಅಂತಿರೆಯುಂ ಮಗುಳ್ದುಂ ಕರೆಯಿಸಿಕೊಳ್ವುದಲ್ತೆ ನೋಂಪಿಗೆ?

ಮುದ್ದಣ—ಓ, ಮರೆತೆನೀಯಿರವಂ ಪೇಳಲ್ಕೆ. ಸಂದೆಯಂ ಸಾಜಂ. ಕೇಳ್-ರಾಘವಂ ರಾವಣಕುಂಭಕರ್ಣಾದ್ಯರಂ ಮರುವುಟ್ಟಿಂ ಬರ್ಪುದೆಂದಟ್ಟಿ ದೇವರ್ಕಳ ಬಂದಿಯಂ ಬಿಡಿಸಿ ಲಂಕಾಧಿಪತ್ಯಮಂ ಶರಣಂಗೊಪ್ಪಿಸಿ ತಾಂ ಸೀತಾ

ಸಮೇತಂ ಅಯೋಧ್ಯೆಯೊಳ್ ಅರಸುಗೆಯ್ಯುತಿರ್ದನೆಂಬುದನಾಗಳೆ ಕೇಳ್ದಿರ್ಪಿ ಯತ್ತೆ? ಸಾಸಿರಗಾಲಂ ಕಳಿದೊಡಮವರ್ಗೆ ಸಂತಾನಂ ಪುಟ್ಟಿತಿಲ್ಲಂ. ಪೆರಂಗಿ ರ್ಕ್ಮಮೇ ಪೇಳ್ವೊಡಿನಿತೊಂದುಮ್ಮಳಂ ಪುತ್ರಹೀನರ್ಗೆ ಬದ್ಧಮಿರ್ಕುಂ. ಇವ ರೊಳಂ ಪುರುಷರತ್ತಣಿಂ ಸ್ತ್ರೀಯರ್ಗಧಿಕಮೀದುಗುಡಂ. ಸೀತೆಯೊರ್ಮ್ಮೆ ತನಗ ಪತ್ಯಂ ಪುಟ್ಟಿತಿಲ್ಲೆಂಬೊಂದು ಪಂಬಲ್ ಪಿರಿದಾಗೆ ಬಾಡಿ ಬೆಂಡಾಗಿ ಕಂಡರಿಸಿದ ಬೆಳ್ಮರನ ಪಾಪೆಗೆನಗೇಕೆ ಭೋಜನಮೇಕೆ ಸಿಂಗರಮೆನುತಿವನುಳಿದು ಆರೊಳಮೇ ನುಮನಾಡದೆ ಸಜ್ಜೆವನೆಗೆ ಪೋದಳ್. ಒಡನೆಯೆ ಚಂದ್ರಮತಿವೆಸರ ಕೆಳದಿಯುಂ ನಲ್ಪಾತಿನುಪಚರಿಸುತೆ ಬೆನ್ನೊಳೆ ಪೋದಳ್.

ದೇವಿಯರಾ ಇರವಂ ಕಂಡು ತೊಟ್ಟನೆ ದೂತಿಯೊರ್ವ್ವಳ್ ರಾಯನೆಡೆಗೆ ಯ್ತಂದು ಜೀಯ, ಅಕ್ಕನಿಂದು ಕಟ್ಟುಬ್ಬೆಗದೊಳಿರ್ಕುಂ; ಏನೆಂದರಿಯೆಂ, ದೇವರೆ ದೇವಿಯರಿರವನರಿಯಲಕ್ಕುಂ; ಎಂದು ಬಿನ್ನವಿಸೆ ಸೀತಾರಾಮಂ ದಿಗ್ಭ್ರಮೆಯಿಂ ಕಣ್ಗೆಟ್ಟು ಚಿಂತಾಪರವಶತೆಯಿಂ ನಡೆಗಂಬಂ ಬರ್ಪುದೆನೆ ಬಂದು ಪೆಂಡವಾಸಮಂ ಪುಗುತಂದು ಇದಿರೇಳ್ವಳಂ ಮಾಣಿಸಿ ದೇವೀ, ನಿನಗೀತೆರದ ದುಗುಡಂ ತಲೆ ದೋರಿತೆಂತು? ಎನ್ನಿಂ ಪುಟ್ಟಿತ್ತೆ? ನಿನ್ನ ಪರಿಜನರ್ ಪೊಲ್ಲದ ಕಜ್ಜಮಂ ತಗುಳ್ಚ ಲ್ಕಾದುದೇ? ಮೆಯ್ಯೊಳ್ ಬೇನೆಯಾಗಿರೆ ತನ್ನಿಂ ತಾನೆ ಮನಕ್ಕೆ ಬೇವಸಮಾಯ್ತೇ?

ಅತ್ತೆವಿರೇಂ ಬಯ್ದರೆ ಎ।
ನ್ನೊತ್ತಿನ ಸಹಜಾತರಂತುಟಣಕಿಸೆ ನಿನಗಾ ॥
ದತ್ತೆವಿಷಾದಂ ದೂಸರಿ।
ದೆತ್ತಣಿನಾಯ್ತರಸಿ ನಿನಗೆ ಸರಸಿರುಹಾಕ್ಷೀ? ॥

ಇಂತು ಮೆಲ್ನುಡಿಯಿನಾರಯ್ವ ಜೀವಿತೇಶನ ನುಡಿಗೆ ಪಡಿನುಡಿಗುಡೆಯುಂ ನುಡಿಯುದಿರೆಯುಂ ಆರದೆ ಸೀತೆ ಕೆಲನ ಕೆಳದಿಯುಂ ಮಾಲಿಪಂದವಳ್—ಜೀಯ, ಮರೆವೊಕ್ಕರ್ಗೆ ಕಾಮಿತವನೀವ ಕಲ್ಪಾಂಘ್ರಿಪನಂತಿರೆ ನೀಂ ಬಳಿಯೊಳಿರೆ ದೇವಿ ಯರ್ಗೆ ಪೆರತಾವುದುಂ ನೋವಲ್ತು. ಮಕ್ಕಳಂ ಪೆತ್ತೋವ ಸೈಪು ತನ್ನೊಳಿನ್ನ ಮಾಯ್ತಿಲ್ಲಮೆಂಬುದೊಂದುಬ್ಬೆಗಮೆಂದಾನರಿವೆಂ, ಪೆಣ್ಗಳ್ಗಿದು ಸಾಜಮೆ ಎಂದಳ್.

ಚಂದ್ರಮತಿಯಿಂತೆಂಬುದುಂ ರಘುಪ್ರವರನುಂ ಮನಮರುಗಿ ಇನಿಸುಂ ಬೊಳ್ತು ಜಾನಿಸಿ ನಿಜಕಾಂತೆಗೆ—ರಮಣೀ, ನಿರ್ಸೆರಂ ಮರುಗಲೇನಕ್ಕುಂ? ವಿಧಿ

ವಶಮಲ್ತೇ ಇದು? ದೈವಮೊಂದು ಕಣ್ದೆರೆಯೆ ಗುರುಜನಮನುಗ್ರಹಿಸೆ ಪಿರಿಯರ್ ಪರಸೆ ದೊಡ್ಡಿತೇಂ? ಇದರ್ಕೆಮ್ಮಯ್ಯನೆ ಪ್ರಮಾಣಂ. ಅಂತದರಿಂ ನೀಂ ಭಕ್ತಿಯಿಂ ಕುಲದೈವಮನರ್ಚಿಸುತುಂ ಗುರುಜನಂಗಳಂ ಪೂಜಿಸುತುಂ, ಗೋಬ್ರಾಹ್ಮಣರಂ ಸೇವಿಸುತುಮಿರೆ ಎಮ್ಮೊಳೆಲ್ಲರುಮನುಗ್ರಹಿಸೆ ಸಂತಾನಮಕ್ಕುಮೆಂದರಿವೆಂ; ಆನುಂ ವ್ರತಹೋಮಾದಿಗಳಿಂ ದೇವರ್ಕಳಂ ಮೆಚ್ಚಿಸಿ ಸಗ್ಗಿಗರೊಡನಾಡಿಗನಪ್ಪಂತೆಯುಂ ಸೂರ್ಯಾನ್ವಯಮೆನ್ನೊಳ್ ತಡೆವುದೆಂಬ ಲೋಗರಪವಾದಂ ಪೊದ-ದಂತೆಯುಂ ಮಾಳ್ಪೆನೆಂದು ಕಾಂತೆಯುಂ ಸಂತವಿಟ್ಟು ತಾನೋಲಗಕ್ಕೆ ಬಿಜಯಂಗೆಯ್ದಂ.

ಇಂತು ಕೆಲವ್ಗಾನುಂ ದಿನಂಗಳ್ ಕಳಿಯೆ ಸೀತೆ ಬಸಿರಿಯಾದಳ್.

೪. ಸೀತಾಪರಿತ್ಯಾಗಂ.

ಇಂತವನೀಸುತೆ ಗರ್ಭಿಣಿಯಾಗೆ ನಾಡೆ ನಾಡೆ ಸಂತಸಗಡಲೊಳೋಲಾಡುತಿರ್ದುದು. ಬಂಧುಜನಂಗಳ ಸಮ್ಮೋದಮುಂ, ಪರಿಜನಂಗಳುತ್ಕೈವಮುಂ ಪಿರಿದಾಯ್ತು. ಎತ್ತಲುಮೊಸಗೆವರೆ ಮೊಳಗಿದತ್ತು. ಭೂಸುರರ್ ದಾನದಕ್ಷಿಣೆಗಳಿಂ ತಣಿದರ್. ದೀನಾಂಧ ಬಧಿರ ಕುಬ್ಜವರ್ಗಂ ಸ್ವರ್ಗಸುಖದೊಳಿರ್ದತ್ತು.

ಆ ವೇಳೆಯೊಳೊರ್ಮೆ ಬೈಗುಂಬೊತ್ತಿನೊಳ್ ಶ್ರೀರಾಮಂ ಕಾಂತೆವೆರಸು ರಾಣಿವಾಸದ ಮೊಗಸಾಲೆಯೊಳ್ ಕಟ್ಟೆರಕದ ಸಲ್ಲಾಪದೊಳಿರೆ ಸೀತೆ ಕಾಂತಂಗೆ–ನಾಥ, ಬಲ್ಬೇಸರ್‍ಗಡ! ಅವುದುಮನೊಳಕೊಂಡಿತಿಲ್ಲೆನ್ನ ಮನಂ. ತಪೋವನದೊಳ್ ರಿಸಿವೆಂಡಿರಂ ಕಂಡು ಸುಖಸಲ್ಲಾಪಂಗೊಂಡು ಅವರೊಡನಾಟದಿನಾನುಂ ಕೆಲದಿನಮಿರಲ್ ಬಯಸುವೆನೆನೆ ರಾಯಂ—ಅಂತೆಯೆ ಅಕ್ಕೆ; ಆದೊಡೊರ್ವಳೆ ಪೋಪುದಲ್ತು. ಕೂಡಿ ಪೋಗೆ ಲಕ್ಷ್ಮಣನನಟ್ಟುವೆಂ ಎಂದು ಮಾರ್ನುಡಿದಂ.

ಆಗಳ್ ಸಪ್ತಾಶ್ವಂ ನಿಚ್ಚವಯಣದೊಳ್ ಬಳಲ್ದಶ್ವಸಪ್ತಕಮುಂ ಕಡಲೊಳ್ ಮೆಯ್ಗರ್ಚಿ ನೀರ್ಗುಡಿಸಲ್ಕೆಂದು ಸಾರಥಿಯನೇರ್ಪಡಿಸಿ ತಾಂ ತೇರಿನಿಳಿದನೆನೆ ಪಡುವೆಟ್ಟಿನೆಡೆಯೊಳ್ ಮೆಯ್ಗರೆಯುಲೊಡಂ ಲೋಕಯಾತ್ರೆಗೆಯ್ದು ಮನೆಗೆ ಬರ್ಪಿನಿಯಂಗೆ ಚರಮದಿಕ್ಕಾಂತೆ ರನ್ನವಟ್ಟಲೊಳೆತ್ತಿದಾರತಿಯು ಕೆಂಬೆಳಗೆನೆ ಸಂಜೆಗೆಂಪೆತ್ತಂ ಪಸಿಯೆ, ಆವಗಂ ನೀನೆ ಗತಿಯೆಂದು ನಂಬಿದಳಂ ಮರೆತು ಸವತಿಯು ಪಿಸು

ಸ್ಸೆರೆಯುಂ ಮಾರುವೋದನೆಂಬುಬ್ಬೆಗದಿಂ ಕೊರಗಿದಳೆನೆ ಪದ್ಮಿನಿ ಬಾಡೆ, ಬೇಡ ಗಡಾ ಮುನಿಸು ನಿನಗಿನಿಯನೊಳ್; ಬೇಟದ ಸೂಡಿಂ ಬಾಡಿ ಬಸಂಗೆಟ್ಟುದನಿಂದು ನಿಂದು ಕಾಂತಂಗರಿಪಿ ಆತನನಟ್ಟುವೆವನಿತುವರಂ ಸೈತಿರ್ಪುದೆಂದು ಸಂತಯಿಸಿ ದೂದುಪೋಪುವೆನೆ ಮುಬ್ಬೀರಡಿಗಳೋಡೆ ಪಗಲ್ ಜಗುಳ್ದುದು. ಪಕ್ಕಿಗಳೋರೊಂದೆಡೆಯು ಮೇಪಿಂ ತಣಿದು ದಿನಾವಸಾನದೊಳ್ ಆಗಳಾಗಳ್ ಕಂಡ ಜಿನದಮಂ ತಂತಮ್ಮ ಬಳಗಕ್ಕೆ ಪೇಳುತೆ ಪೋಪುವೆನೆ ಕುವಿಯುತೆ ನಿಜನೀಡಂಗಳಂ ಸಾರ್ದುವು. ಮತ್ತಂ ವಿಪ್ರರ್ ಎತ್ತಿದ ಸೇರೆಗೈಯೊಳ್ ಸಂಧ್ಯಾಮಂಡಪಮನಲಂಕರಿಸೆಯುಂ, ವೈಹಾಳಿಯನುಳಿದು ಬಾಹುಜನಿವಹಂ ಬೀಡಂ ಪುಗುತರೆಯುಂ, ಬೇರದವಸರದಿಂ ಮೆಯ್ದೆಗೆದು ಬಣಂಜಿಗರ ನೆರವಿ ಪೊಸವರದಿನೆಣಿಕೆಯೊಳಿರೆಯುಂ, ಬವಸಿನ ಕಜ್ಜಮಂ ತವಿಸಿ ಬೇಸರ್ಗೆ ಕುಡಿಯರ್ ಕಡುಸುವ್ವಾನದಿನೊಂದೆಡೆಯೊಳ್ ನೆರೆದು ಶ್ರೀರಾಮ ಲೀಲಾವಿನೋದಮಂ ಪಾಡುತಿರೆಯುಂ, ಬಾಲಕರಾಟಪಾಟಂಗಳಂ ತೊರೆದು ತಾಯ್ವಿರೊತ್ತಂ ಪತ್ತಿರೆಯುಂ, ಮುಚ್ಚಂಜೆ ಸೊಗಯಿಸಿದುದು. ಅನಿತರೊಳ್ ನಾಡಿದು ಕಾಡಿದು ನೆಲನಿದು ಬೆಟ್ಟಿದು ತಿಟ್ಟಿದು ದರಿಯಿದೋವರಿಯಿದೆಂದು ಬಗೆಯಲ್ಬಾರದಂತು ಕಳ್ತಲೆಯೆತ್ತಂ ಪರ್ಬಿದುದು. ಪಗೆಯಪ್ಪ ಕಳ್ತಲೆಯ ಸುಳಿವನರಿವೊಡೆಂದು ಬಿಸುಗೈಯನಟ್ಟಿದ ಬೇಹುಕಾರರೆನಲಾಗಸದೆಡೆಯೊಳರಿಲುಂ ಮನೆಮನೆಯೊಳ್ ಸೊಡರುಮೆಸೆದುವು. ದೇಗುಲದ ಭೇರಿ ವೊಳಗೆ ಸಂಕಿನ ನಿಡುಸರಂ ಪೆರ್ಚೆ ಡಕ್ಕೆಯ ಜೇಗಟೆಯ ಬಿರುಸರಂ ಜಿರಿಸಾಗೆ ರಜನೀಮುಖಮೆಡ್ಡಮಾದುದು.

ಇಂತಿರೆ ಅತ್ತಲರಸುಗೆಯ್ಮೆಗಿದುಚಿತಮೆನೆಮಾಗೆ ನಾಡಿಗರಿರವನಾರಯ್ದು ಕಂಡುದನರಿಪಲ್ಕೆಂದು ರಾಯನಟ್ಟಿದ ಬೇಹಿನವರ್ ಮರೆರೂವಿಂ ನಾಡಂ ಸುತ್ತಿಬಂದು ಸೋದರರಿಂ ಬಳಸಿ ಬಣ್ಣದ ಚೌಕಿಗೆಯೊಳಿರ್ಪ ರಾಯನಂ ಕಂಡು ದೂರದಿಂ ತಲೆವಾಗಿ ನಿಲ್ತಿರೆ ಕಂಡು ರಾಘವಂ—ನಾಡೊಳ್ ಲೋಗರ್ಗೆ ಸೊಗಕೆ ಕುಂದಿಲ್ಲ ಮತ್ತೆ? ಆಜ್ಞೆಗೆ ಭಂಗಮಿರದಲೇ? ರಾಯನಂ ನಿಂದಿಸರಲೇ? ಇಂದಿನ ವಾರ್ತೆಯೇಂ? ಪೇಳಿಮೆಂದಂ. ಆಗಳಾ ಬೇಹುಕಾರರ್—ಜೀಯ, ಮೂಜಗಮಂ ಕಾವ ನೀಂ ತಿರೆಯುಂ ಪೊರೆವಂದು ಲೋಗರ ಸೊಗಕ್ಕೆ ಕುಂದೇ? ವಿಶ್ವಮೆಲ್ಲಂ ನಿನ್ನಾಣತಿಯೊಳಿರ್ಪಿನಂ ಪುಳುವಾನಿಸರ್ ದೂರಲಾರ್ಪರೆ? ನಾಮಮೊಂದು ದೇಹಿಗಳ್ಗೆ ತಾರಕಮಂತ್ರಮಾಗಿರ್ಪಿನಂ ಪಳಿಯುಲುಂಟೆ? ಮೇಣ್ ಮುಮ್ಮೆಯ್ಯ ದುಷ್ಕೃತಿ

ಗಳ್ ನಿಗುಂಬಿಸೆ ಬಾಳ್ಕೆ ತಗಡೆ ನಿಳ್ತು ಪೊಳ್ತಂ ಪಾರೆ ಚೋರರ್ ಚಂದ್ರಮನಂ ಪಳಿವಂತಿರೆ ಪಾಪರ್. ದೇವರಂ ತೆಗಳಿಸಲೊಡಮೇನಕ್ಕುಂ? ಎಂಬುದುಂ ಅಳ್ಪಂ ಮತ್ತಮಾಚರರ್ಗೆ ಮೊಂಜದುಸಿರಿಂ, ನುಡಿಯು ಜಾಣ್ಮೆಗವಸರಮಲ್ತು; ಕಂಡುದಂ ಪೇಳ್ವುದೆನೆ ಒರ್ವನೊರ್ವನ ಮೊಗಮನವಲೋಕಿಸುತೆ ಮೋನಮಿರ್ದರ್. ಇಂತಿರೆ ರಾಯನೇನಾನುಮೊಂದು ಪೊಸವಾರ್ತೆಯಿರ್ಕುಮೆಂದು ಚಾರರ ಭಂಗಿಯಿನರಿತು, ಎನ್ನಾಣೆ, ಇರ್ದುದಂ ಪೇಳಿಂ ಎಂದು ಗದರೆ ಅವರೊಳೊರ್ವಂ ಕಂಪಿತಕಾಯಂ ಪಾದಾವನತಶಿರನಾಗಿಂತು ಬಿನ್ನವಿಸಿದಂ:—ದೇವ, ಕಾವಂ ನೀಂ ಮೆಯ್ವೆತ್ತಿರೆ ಪೆಳರಲುಂಟೆ? ಮೇಣ್ ನನ್ನಿಯನಾಣ್ಮನೊಳ್ ಬಯ್ತಿಡಲೊಡಮೆಮಗಾವ ಬಟ್ಟೆ? ಗಾವಿಲಂ ಅರಿಯಮೆಯಿಂ ನುಡಿದುದೊಂದು ನಿಷ್ಠುರೋಕ್ತಿಯಂ ದೇವರ್ಗೆ ನಿವೇದಿಸುವುದನುಚಿತಮೆಂದು ಮಾಣ್ದೆವೈಸೆ? ಬಲ್ಲರ ಬಲ್ಲಹಂ ಕಾವೊಡಿಂತಿದು—ನಡುಗೇರಿಯೊಳೊರ್ವನಸಗಂ ಪೆಂಡತಿ ಮುಳಿಸಿಂ ಪೇಳದೆ ತವರ್ಮನೆಗೆ ಪೋಪುದುಂ ಕಳ್ದುವಂದಳ್ಗೆ ಬುದ್ಧಿವೇಳ್ದ ತಾಯ್ತಂದೆನಿರಳಿಯಂಗೊಪ್ಪಿಸಲೆಂದು ಬಳಿವಂದು ತಿಳಿಪಲೊಡಂ—"ಅಗಲ್ದ ಮಡದಿಯನಾಳ್ವೊಡಾನೇಂ ರಾಮನೆ" ಎಂದು ನುಡಿದಂ. ಅದು ಕರ್ಣಕಠೋರಮಾಗೆ ಕೊಡಂಕೆಗಳಂ ಮುಚ್ಚುತಲ್ಲಿಂ ತಳರ್ದೆವು. ಇಂತಿದೊಂದು ವಾರ್ತೆಯುಲ್ಲದಾವುದುಮಂ ಕೇಳ್ದುದಿಲ್ಲೆಂದು ಮಗುಳ್ದಿರಗೆ ರಾಯನವರಂ ಕೈಸನ್ನೆಯಿಂ ಕಳಿಪಿದಂ.

ಮುಂಗಾರ ಮೊಳಗಿನತ್ತಣಿಂ ಪೊಡೆಗಿಡುವೆಳಕಳಿಲೆಯೆನೆ ಮಂಡಲೇಶ್ವರಂ ರಜಕನ ಪರುಷೋಕ್ತಿಗೆ ಮನಗೆಟ್ಟು ಮರವಟ್ಟು ಮತ್ತಂ ನೀಡುಮೆಣಿಕೆಯೊಳ್ ನಿಟ್ಟುಸಿರ್ವಿಟ್ಟು ಕಟ್ಟುಬ್ಬಸದಿಂ ಹಾ ಹಾ! ಪೊಂಜುರಿಗೆಯೆಂದೇ ಎರ್ದೆಗೊತ್ತಿದೆಂ; ಇಂತು ಕರುಳಂ ಕೊರೆಗುಮೆಂದರಿತೆನಿಲ್ಲಕ್ಕಟಾ! ಪಾವನೆಯೆಂದೇ ಒಪ್ಪುಗೊಂಡೆನದರಿನೀವಿಲಗಕ್ಕೆ ತಲೆಮಟ್ಟೆಂ; ಅಃ! ರಜಕನೆನ್ನನೇಳಿಸಿದನಿಲ್ಲಮಾದಮೆಚ್ಚರಿಸಿದಂ. ಸಾಜಂ, ಆಗಳ್ ರಕ್ಕಸನ ಬಂದಿಯೊಳ್ ಬಾಳ್ದಳಂ ಮಗುಳ್ವಮಾನಾಳ್ವೊಡಕ್ಕುಮೆ? ಇನ್ನೇವೆಂ? ಕೆಯ್ವೊಲನೊಳ್ ಬೆಳೆದ ಕುಜುಂಬುಲ್ಲಂ ಕಿಳ್ತು ಬಿಸುಡುವಂತಿರೆ ಸೀತೆಯಂ ಬಿಡುವೆನೆಂದು ನುಡಿದು ಬಳಿಯಂ ಬಳಿಯ ಲಕ್ಷ್ಮಣಂಗೆ—ಕೇಳ್ದೈ ತಮ್ಮ, ಎಮ್ಮ ಬಳಿಗಡರ್ದ ಪಳಿಯಂ? ಮುನ್ನಂ ಲಂಕೆಯೊಳ್ ನೀನೆ ಪೇಳ್ದೆಯಲ್ತೆ ಸೀತೆ ಪೂತೆ; ಕೈಕೊಳ್ವುದೆಂದು? ಈಗಳೇನಾಯ್ತು ಎನೆ ಶತ್ರುಹಂ—ಅಣ್ಣಯ್ಯ, ಸೌಮಿತ್ರಿ ಪೇಳ್ವುದೇಂ? ದೇವಿ ಸಾಕ್ಷಾಲ್ಲಕ್ಷ್ಮೀದೇವಿ

ಯೆಂಬುದಂ ನೀನರಿಯೆಯು? ಬಿಡುವೆನೆಂಬರೆ? ಕಿರುಗೂಸಂ ನಿನ್ನ ಕೈಯೊಳೀ ವಂದು ಜನಕನೇನೆಂದಂ? ನೀನೆ ಏನೆಂದಯ್? ಹಾ! ರಾಘವಾ, ಪಾವಕಪಾವನೆಯುಂ ತೊರೆಯಲ್ಕೆಂತು ಮನಂದಂದಯ್? ದೇವಾ, ಕರುಣಾಕರನೆಂಬೀ ಬಿರುದಿಂಗಿದು ತಗುಗುಮೆ? ಅಕ್ಕಟಾ! ನರಿಯೂಳಿಡೆ ಸುರಲೋಕಂ ಪಾಳ್ಪೋಕುಮೆ? ಕೂಳಂ ಕೊರಚಾಡೆ ನೀನೊಂದಾಡುವುದೆ? ಎನ್ನಾಣೆ ಸೀತೆ ನೀತಿಗೆಟ್ಟಳಿಲ್ಲಂ; ಕಾವುದೆಂದು ಕೈಯೊಡ್ಡಿ ಬೇಡುವುದುಂ ರಾಘವಂ—ಬಲ್ಲೆಂ ಪಾವನೆಯೆಂಬುದಂ; ಆದೊಡಮಿಾಗಳೆನ್ನಳವಲ್ತು; ತೆಗಳ್ಗೆ ಮಾರುವೋದೆಂ; ಜನರಿಂತು ರೋಡಿಸೆ ಪುದುವಾಳ್ವೆನೆಂತೊ? ಫಣಿ ನಿರ್ಮೋಕಮಂ ಬಿಡುವಂತಿರೆ ಸೀತೆಯುಂ ತೊರೆದೇ ಸೊಗಂ ಬಾಳ್ವೆಂ, ಇದು ಸಿದ್ಧಂ ನೀಂ ತಡೆಯದೆ ಪೋಗಿಮೆಂದು ನುಡಿವಗ್ರಜನಂ ಕಂಡು ಶತ್ರುಘ್ನಾದ್ಯರ್ ಪಿಂಜರಿದರ್. ಆಗಳ್ ರಾವಣಾರಿ ಕೆಲದೊಳ್ ಕೈಗಟ್ಟಿನಿಂದ ಲಕ್ಷ್ಮಣನಂ ಕರೆದು ಅಣುಗದಮ್ಮ, ಈ ಜಾನಕಿಯು ದೂಸರಿಂ ಎನ್ನೀ ಬಳಿಗೆ ಪಳಿಯೊದವಿದತ್ತು. ಆಕೆಯುಂ ಕಾನನಕುಯ್ದು ತೊರೆದು ಬಾರ ಎಂದಂ. ಆಗಳ್ ಸೌಮಿತ್ರಿ ಜೀಯ, ಅಣ್ಣನಾಜ್ಞೆಯುಂ ಮಿಾರಿ ನಡೆಯೆ ಕುಂಭೀಪಾಕಂ; ನಿರ್ದುಷ್ಟೆಯಾದೀ ಅತ್ತಿಗೆಯನರಿದುಂ ನಟ್ಟಡವಿಗುಯ್ದು ಬಿಡೆ ರೌರವಂ; ಅದರೊಳಂ ತುಂಬಿದ ಬಸಿರಿಯುಲ್ತೆ? ಎಂತಯ್ ಕೊಂಡುಯ್ದು ಪಾಪಿ ಕೈವಲ್ಯಲಕ್ಷ್ಮಿಯುಂ ಬಿಡುವಂತಿರೆ ನಿರ್ಘೃಣನಾಂ ಭಾಗ್ಯಲಕ್ಷ್ಮಿಯುಂ ಬಿಡುವೆಂ? ಎಂಬುದುಂ ರಾಘವಂ ಚಲಮಂ ಪಿಡಿದು ಬಾಲ, ಇಂತುಸಿರಲಾಗದೈ, ವೀಸಂ ದೋಸಮಿಲ್ಲ. ಮಾರ್ನುಡಿಯದಿರ್ ಪೋಗೆಂದುಸಿರ್ದಂ. ಇಂತಾಗೆ ಲಕ್ಷ್ಮಣಂ ಬೀರದ ಮೆಯ್ಗೊಂಡು ಮನಮುಂ ದಿಟಗೆಯ್ದು ಅಗ್ರಜಾತಂಗೆ—ಎಲೆ ಅಣ್ಣ, ಇದೆಕೊಳ್, ಚಂಡಾಲಂ ಸಿದ್ಧನಿರ್ಪೆಂ. ಆಣತಿಯೆಂತಂತು ನಡೆವೆಂ; ಮುನ್ನಂ ಭಾರ್ಗವಂ ತಂದೆಯ ನನ್ನಿಗೆ ಮಾತೆ ರೇಣುಕೆಯುಂ ಕೊಲ್ಲನೆ? ಈಗಳಾನುಂ ಕೊಲ್ವೆನೊ ಮೇಣ್ ಕಾಡೊಳ್ ಬಿಸುಳ್ವೆನೊ ಪೇಳ ಎನೆ ರಾಘವಂ—ಸೀತೆ ತಾನೆ ದೋಹದದಿಂ ರಿಸಿವೆಣ್ಗಳಂ ಕಾಣಲ್ಕೆ ಅಡವಿಗೆ ಪೋಪೆನೆಂದು ಬಯಸಿದಳಂತರಿಂ ಈ ನೆವದಿನಡವಿಯೊಳುಳಿದು ಬಾರೆಂದಾಡಿದಂ. ಲಕ್ಷ್ಮಣಂ—ಅಂತೆಯೆಸಗುವೆಂ; ಸಂದೆಯುಮಣಂ ಬೇಡವೆಂದು ದಿಮ್ಮನೆಳ್ದು ನಡೆದಂ.

ಅವೇಳೆಯೊಳ್ ರಾಮರಾಜ್ಯದೊಳಿಂತರಂಗೆಟ್ಟುದೆಂದು ಬೆದರಿದುವೆನೆ ತಾರೆಗಳ್ ದೆಸೆಗೆಟ್ಟುವು; ಚಂದ್ರಮಂ ಕಳೆಗೆಟ್ಟಂ; ಜಂಪತಿವಕ್ಕಿ ಕಂಗೆಟ್ಟುವು; ಕೋವ

ಳೆ ಬಣ್ಣಂಗೆಟ್ಟಳ್; ಕಮಲಿನಿ ಬಾಯ್ಬಿಟ್ಟಳ್; ತುಂಬಿ ಮೊರೆಯಿಟ್ಟುದು. ಇಂತಿದೇನನ್ನೆಯದ ಗಲಬೆ, ಇದರಡಿಯರಿಯಲ್ವೇಳ್ಕುಮೆಂದು ತಡೆತಡೆದು ಕುಳಿರ್ಗಾಳಿ ಸುಳಿಯಲ್ತೊಡಂಗೆ, ಪಕ್ಕಿಗಳ್ ಗಜಬಜಿಸೆ, ಭಾಸ್ಕರಂ ತಾನುಮುಪ್ಪವಡಿಸಿ ಮೂಡುವೆಟ್ಟಿನ ಕೋಡುಗಲ್ಲನೇರಿ ನಿಟ್ಟಿಸುತಿರ್ದಂ.

ಇಂತು ನೇಸರ್ಮೂಡೆ ಸೌಮಿತ್ರಿ ಸರಯೂತೀರಮಂ ಸಾರ್ದು ಕಾಲ್ಯಮನಾಗಿಸಿ ಆದಿತ್ಯಂಗರ್ಘ್ಯಮನೀಯಲ್ ಅಂಜಲಿಯನೆತ್ತಿ ಅಶ್ರುಪೂರಿತವಿಲೋಚನಂ ವಿಶ್ವಲೋಚನಂಗೆ—ಎಲೈ ಸೂರ್ಯನಾರಾಯಣ! ಎಂತೊ ತೊಳಚಿದೋಂಟದೊಳ್ ತುರುಚೆ ಪುಟ್ಟುವಂತಿರೆ ನಿನ್ನೀಬಳಿಯೊಳ್ ಜಾಳನೆ ಪಂಚಮನಾಂ ಪುಟ್ಟಿದೆಂ; ರಾಯದವಸಿಯ್ಗು ಕುವರಿ, ಅಯೋನಿಜೆ, ಸೀತೆಯಂ ಕಾಡೊಳ್ ಬಿಸುಡಲ್ಕೆ ಬದ್ಧನಾದೆಂ; ಜಗಚ್ಚಕ್ಷು ನೀಂ ಕುಂದುಕೊರತೆಯಂ ಕಡೆಗೊತ್ತುತೆ ಎನ್ನನುದ್ಧರಿಸೈ ಎಂದು ಕೈಮುಗಿದು ನಡೆತಂದಂ.

ಅಂತು ಬಂದು ಪೊಂದೇರನಣಿಗೈಯ್ದು ದೇವಿಯರ ಕನ್ನೆವಾಡದ ಕಟ್ಟಿದಿರೊಳಿರಿಸಿ ಬಾಗಿಲೊಳ್ನಿಂದಾದಂ ಕಲ್ಮನನಾಗಿ—ಇದೆ ಬಣ್ಣದೇರ್, ವನಕುಯ್ವೆಡೆಂದು ರಾಘವನಟ್ಟಿದಂ; ತಳ್ವದೆ ಪೊರಮಡಿಂ ಎಂದಂ.

ಋಷಿಗಳ ಪುಣ್ಯಾಶ್ರಮಂಗಳಂ ಮೇಣೊರ್ಮೆಯುಂ ಕಂಡು ಪಾವನೆಯಪ್ಪೆನೆಂದು ಬಗೆದ ಪಂಬಲ್ ಬೆಟ್ಟಿತಾಗೆ ಕಣ್ಣೊಳೆ ಬೆಳಗಪ್ಪುದುಂ ಸೀತೆ ಪಡಿದೆರೆದು ಪೊರವಂದು ಸೌಮಿತ್ರಿಗೆ—ಏನೈ ಮೈದುನ, ಜೀವಿತೇಶನೆನ್ನ ಬಿನ್ನಪಮಂ ತೂರದೆ ನಲ್ಮೆಮಿಗೆ ಪೊರೆದನೆ! ಕರುಣಾಕರನತ್ತೆ! ಮಡದಿಯ ಬಯಕೆಯುಂ ನಲ್ಲನಲ್ಲ ಮೇಣಾವಂ ಸಲಿಸುವಂ? ಆಳ್ದನಡಿದಾವರೆಗಳಾವಗಂ ಸೊಗಮಿರ್ಕೆ ಎಂದಳ್.

ಕವಡನರಿಯದ ಬಾಲೆ ನಲ್ಲನೊಲ್ಮೆ ತನ್ನೊಳಿಂತು ನನ್ನಿಯೆಂದೇ ಬಗೆದು ನುಡಿಯೆ ಕೇಳ್ದು ಮನಮರುಗದರಾರೊ? ಪಾಲ್ಗಡಲೊಳಮರ್ದು ಪುಟ್ಟಿದುದಂ ನೆನೆದಳಲ್ಲದೆ ನಂಜುರ್ಕಿದುದನೇಗೆಯ್ದುಂ ಬಗೆಯದಾದಳ್. ಆಃ ಭಾಗ್ಯಲಕ್ಷ್ಮೀ! ಕಾಡೊಳ್ ಕಾಳ್ಮೆಗಂಗಳೊಳೊಡಂಬಾಳ್ವ ಬವಣೆ ನಿನಗೆ ನೇರ್ಪಟ್ಟುದೇ!

ಅಗಳೂರ್ಮಿಳೆಯರಸಂ ಜಾನಕಿಗೆ— ಮಾತೆ, ವನಕೆ ಪೋಪೆನೆಂದು ಕಾಂತನನೇತರ್ಕೆ ಬೇಡಿದಾ? ಏಂ ಸೊಗಮಂ ಕಾಣ್ಬುದುಂಟು? ಮುನ್ನಂಡುದು

ಸಾಲದೆ? ಎಂಬುದುಂ ಸೀತೆ—ಏನಯ್ ಇಂತೇಕುಸಿರ್ವಯ್? ಎಂತೆಂತೆನಿ ಕಾಂತನಂ ಕಾಡಿ ಬೇಡಿ ಅನುಗೊಂಡೆನಿದಂ ತಡೆವುದಂದವೆ? ಶ್ರೀರಘುಕುಲ ವಾರ್ಧಿಪೂರ್ಣಚಂದ್ರನೊಲ್ಮೆ ಎಮ್ಮೊಳಿರೆ ಬನ್ನಮಾವುದುಮೊಂದದಯ್; ತಳ್ವದೆ ಪೋಪಂ ಎನುತುಸಿರ್ದಳ್. ಇಂತಾಗೆ ಲಕ್ಷ್ಮಣಂ-ದೇವಿಯರ್ ಬಯಸುವಂತಿರೆ ಪಯಣಂ ಲೇಸಕ್ಕೆ ಎನುತೆ ಮನದೊಳ್ ಭಾಸ್ಕರನಂ ಪ್ರಾರ್ಥಿಸಿ—ಇದೆ ರಥಂ ಸಿದ್ಧಂ, ಅಡರಿಂ ಎಂದಂ. ಅನಿತರೊಳ್–ಓ ಇರಿರ್ ಬಂದೆಂ, ಆತುರದೊಳ್ ಮುನಿ ಪತ್ನಿಯರ್ಗೆಂದು ಕಟ್ಟಿದ ಬಾಯನಂಗಳಂ ಮರೆತೆನಲಾ, ತಂದಪೆಂ ಎನುತೆ ಸೀತೆ ಒಳವೊಕ್ಕಳ್.

ಅಂತು ದೇವಿ ಒಳವುಗುವುದುಂ ಲಕ್ಷ್ಮಣಂ ಮುಂತಿರ್ಪ ತೇರಂ ದಿಟ್ಟಿಸಿ ಎಲೆ ಪೊಂದೇರೆ! ನೀನುಮೆನ್ನಂತಿರೆ ಮುನ್ನಿನ್ಮೆಯ್ಯೊಳೇಂ ದುಷ್ಕೃತಿಯಂ ಕಟ್ಟಿ ದೆಯೊ? ಸೂಳ್ಪಿಪ ಕಾಳೆಗವರೆಗಳ್ ಮುಂತಿರೆ, ಕಿಳಿರ್ವ ತುರಗದಳಂ ಪಿಂತೆವರೆ, ನಡೆವ ಕಾಲಾಳ್ಪಡೆ ಕೆಲಬಲನೊಳಿರೆ ಚಂಡಭಂಡನಕೆಂದರಿರಾಜರೊಳೆತ್ತಿ ಪೋಪ ಗಂಡುಗಲಿಯಂ ಕುಳ್ಳಿರಿಸಿಕೊಂಡುಯ್ವ ಸೈಪುಳ್ಳಂಗೆ ನಿನಗಿಂದು ಪೆಣ್ಣಂ ಪೆಸ್ಗೊಲೆ ಗೆಂತಂತು ವನಕೆ ಕೊಂಡುಯ್ವುದಾಯ್ತೆ? ತುರಂಗಮುಂಗಳಿರ! ನೀಮುಂ ಏನಂ ಆಚರಿಸಿದಿರಯ್! ಇನ್ನೆವರಂ ರಾಯನ ಹಯಶಾಲೆಯೊಳ್ ಬಳೆದುಂ ಬಾಳ್ದುಂ ಈಗಳೀಕೀಳ್ಗ್ರಮೆಯುಂ ಮಾಳ್ಪ ಯೋಗಂ ದೊರೆಕೊಂಡುದೆ? ಎಂದಾಡಿ ಮತ್ತಂ ಜಿಸುಸುಯ್ದು—ಓ! ಕೊಲೆಗನಾನಿರೆ ನಿರ್ನರಂ ನಿಮ್ಮನೇನೆಂದು ಪಳಿವೆನೊ? ದೇವಿಯರನೀವೊಳ್ತುಂ ಸೇವಿಸಿಯುಂ ಇಂದು ಪುಲಿಕರಡಿಸಿಂಗಂಗಳ ಬಾಯೊಳ್ ತೂಂಕಲೆಂದು ಕೊಂಡುಯ್ದಪೆಂ; ಅಕ್ಕಟಾ! ಮುನ್ನಮೀರೇಳ್ಗಲಂ ವನಂಬೊಕ್ಕು ನಿದ್ರಾಹಾರಂಗಳನುಳಿದು ಶ್ರೀರಾಮಚಂದ್ರಮನಂ ತ್ರಿಕರಣಶುದ್ಧಿಯಿಂ ಸೇವಿಸಿ ಪಡೆದ ಸೈಪಿನೇಳ್ಗೆಗಿನಿತೊಂದು ಫಲಮಾಯ್ತೇ? ಹರಹರಾ! ಎನುತೆ ಚಿಂತಿಸು ತಿರ್ದಂ. ಅನ್ನೆಗಂ—

ತಾನೆ ಐರದಾಳಿಯು, ಬಿಚ್ಚೋಲೆಯು, ಚಂದನದ, ಕುಂಕುಮದ, ಕರ್ಮ ಣಿಯು, ಕನ್ನೆಸ್ಣಿಯು, ಕಾವಿಗಪ್ಪಡದ ಕರಂಡಮಂ ಕೈಯೊಳ್ಕೊಂಡು ಪೊರವಾ ಗಿಲ್ಗೆ ಬಂದು 'ತಳ್ವದಿರ್ ಪೋಪಂ' ಎಂದು ಮೈದುನಂಗೆಂದಳ್. ಆಗಳ್ ಚಿತ್ರಾತ್ರಿ ಕಾಯುಂ ದೃಢಚಿತ್ತನಾಗಿ ಪೂಡಿದ ರಥಮಂ ನೂಂಕಿ ಕೈಯ ಕರಂಡಮಂ ತಾಂ

ಕೊಂಡಿಟ್ಟು ದೇವಿಯರಂ ರಥಮನಲಂಕರಿಪುದೆಂಬುದುಂ ಜಾನಕಿ ರಥದೊಳ್ ಕುಳ್ಳಿರಲೊಡಂ ತಾಂ ಬಗೆಯೊಳ್ ಕುಲದೈವಮಂ ಭಾವಿಸಿ ಧರೆಯುಸೆನೆ ರಥಮಂ ಬಲವಂದು ಹಯಂಗಳಂ ಬೋಳೈಸಿ ರಥಮನಡರ್ದು ಎಡಗೈಯೊಳ್ ವಾಗೆಯಂ ಸಡಿಲ್ವಿಡಿದು ಬಲಗೈಯ ಕಸೆಗೋಲನಲುಗಿ ಚಪ್ಪರಿಸಿ ಜಡಿದಂ.

ಸಾಧ್ವೀ, ನಳ ನಳಕೂಬರ ಮಾತಲಿಗಳಂ ಸಾಟಿಗೆಯ್ಯುದೀಸಾರಥಿ, ಸೂಟಿಯಿಂ ನೂಂಕೆ ಪಾರಿ ನಾಡಿಂ ನಾಡಿಂಗೆ ಧೀಂಕಿಟ್ಟುವೋ ಎನೆ ಪವನಜವಮಂ ಮುಂಚಿ ವಾಜಿಗಳೋಟಂಗೊಂಡುವು. ತಿರ್ರನೆ ಸುತ್ತುವ ಪಾರುಂಬಳೆಯ ಗರಗರಮುಂ, ಜಿರ್ರನೆ ಬೀಸುವ ಪ್ರತಿಕೂಲಪವನನ ಭುಗುಭುಗಿಲುಂ, ಭೋಂಕನೆ ಧಾವಿಸುವ ಕುದುರೆಗಳ ಖುರಪುಟದ ಪಟಪಟಮುಂ ದೇವಿಯರಂ ಜಿಡುವುದಾಗದು, ಅನ್ನೆಯಮಕ್ಕುಂ ಎಂದು ಮೊರೆಯಿಂ ಬೇಳ್ಪವೆನೆ ರಾಘವಾನುಜನ ಕಿವಿಗೆ ಕಠೋರಮಾಯ್ತು. ಪತಾಕೆ ರಾಘವನೂಣೆಯುಮಂ ಕಾಣೆನೆಂದು ವಿಮುಖಮಾದುದು. ಕೆಲಬಲನ ಸ್ಥಾವರಜಂಗಮುಂಗಳ್ ಕಂಡುಂ ಕಾಣದಂತಿರೆ ಕಣ್ಮರೆಯಾದುವು.

ಇಂತು ರಥಂ ಪೋಗೆವೋಗೆ ಎನಸುಂ ದೂರದೊಳ್ ಲೋಕಪಾವನೆಯಪ್ಪ ತ್ರಿಪಥಗೆ ಕಾಣಿಸಿಕೊಂಡಳ್. ಅನಿತರೊಳೆ ಕಣ್ಣಳತೆಯು ಪೊಚ್ಚಂ ಕೈಯಳತೆಯೊಳಾಗೆ ರಥದಿನಿಳಿದಿರ್ವರುಂ ದರ್ಶನಸ್ತುತಿಗೆಯ್ದು ದಾಂಟಲ್ಕೆಂದು ಬೈತ್ರಮನೇರಿದರ್. ಆಗಳ್ ತನ್ನಂ ಮನ್ನಿಪ ನೆವದಿಂ ಬಂದಳೆಂಬ ಸಂತಸದಿಂ ಲೋಕಪಾವನೆ ಒರ್ಮೆ ಸೀತೆಯ ಬಳಿಯೊಳ್ ಸುಳಿಸುಳಿದುಂ, ಒರ್ಮೆ ಕಂಕಣದಿನೊಪ್ಪುವ ತೆರೆಗೈಗಳಿನಪ್ಪಲ್ಕೆಂದು ಮೇಲ್ವಾಯ್ದುಂ, ಒರ್ಮೆ ಬೆಳ್ನಗೆಯೊಳ್ ನಕ್ಕುಂ ಒರ್ಮೆ ಮೆಯ್ವೆರ್ಚಿ ನಲಿನಲಿದುಂ, ಒರ್ಮೆ ಸ್ವಾಗತಮಂ ಕೇಳ್ದುಂ ದೇವಿಯುಸುಪಚರಿಸುವಳೆಂಬಂತಿರೆ ಗಂಗೆ ಕಂಗೊಳಿಸಲೊಡಂ ಇರ್ವರುಂ ತಮ್ಮ ಮುತ್ತ ಪಿರಿಯರನುದ್ಧರಿಸಿದ ಭಾಗೀರಥಿಯುಂ ಬಲ್ಲಮಾಳ್ಕೆಯಿಂ ಪೊಗಳ್ದರ್.

ಅನ್ನೆಗಂ ಪಾರೋಡಂ ಕರೆಮುಟ್ಟೆ ಬರೆ ಅಂಬಿಗರ್ಗೆ ಆತರಮನಿತ್ತು ಮನ್ನಿಸಿ ಕೂಲದೆಡೆಯ ಪುಳಿಲೊಳಿಳಿದರ್. ಆ ಸಮಯದೊಳ್ ನಿಡುವಯಣದ ಬಳಲ್ಕೆ ಕಡಿದಾಗೆ ಬಾಯಾರೆ ತನ್ನ ಕರಂಗಳಿಂ ಗಂಗಾಜಲಮಂ ಮೊಗೆದೀಂಟಲ್ಕೆಂದು ತೀರಿನಿಳಿದು ಬಾನ ನಡುವೆ ನಿಂದನೆನೆ ನಡುವಗಲ ಭಾಸ್ಕರಂ ನಿಶ್ಚಲಂ ಪೊಳೆಯು

ತಿರ್ದಂ. ತೊಳಗಿ ಬೆಳಗುವ ನೇಸರ ಕಿರಣಂಗಳೆತ್ತಂ ಪೊಳೆಯು ಜಲದೊಳ್ ಮಾರ್ಪೊಳೆಯುಲೊಡಂ ಪಾಲ್ದೊರೆಯೆನೆ ಗಂಗೆ ವಹಿಸುತಿರ್ಕುಂ. ನೇಸರ ಕಾಯ್ಪಿನ ಸೂಡಿಂ ಬೆಂದು ಕುಂದಿ ಕಾಲ್ಗೆಟ್ಟು ಪವನನಾಗಳ್ ಬೆಚ್ಚನೆ ಬೀಸುತಿರ್ದಂ. ಗಂಗೆಯ ತಡಿಯೊಳಿರ್ಕೆಲನೊಳಂ ಬಿಸಿಲ ಜಳಕ್ಕೆ ನೀರಡಿಸಿ ಹರಿಣಗಣಂ ಬಂದು ನಿಂದು ಮುಂಗಾಲಂ ನೀರೊಳೂರಿ ಪಿಂಗಾಲಂ ಪಿಂತೆ ನೆಲದೊಳಿಟ್ಟು ಮುಸುಂಡಂ ನೀಡಿ ಕಣ್ಮುಚ್ಚಿ ನೀರಂ ಕುಡಿದು ತಣಿದು ಮರಲ್ದುವು. ಮರಿಗೊಣಸುಗಳೋ ರೊಂದೆಡೆಯ ತಣ್ಣೆಳಲೊಳ್ ಗಾಳಿಗೆ ಮೆಯ್ಯೊಡ್ಡಿಯೊರಗಿ ಕೊಡಂಕೆಯಾಡೆ ಫೇನಮುಗುತರೆ ಅರೆಯೆಳ್ಚರೊಳೆ ಮೆಲ್ಕಾಡುತಿರ್ದುವು. ಖಗಂಗಳ್ ನಿಡುಮ ರಂಗಳ ತೂರಲ್ಗೊಂಬನಡರ್ದು ಮೋನಮಿರ್ದುವು. ನೀರ್ವಕ್ಕಿಗಳ್ ಜಳಕೇಳಿಗೆ ಮೊಗಸಿದುವು. ಇಂತು ಮಧ್ಯಾಹ್ನಮಪ್ಪುದುಂ ಅವರ್ ಚೆನ್ನಸುಗೆಯ ನೆಳಲಡಿಯ ನುಣ್ಮಳಲೊಟ್ಟಿಲೊಳ್ ಕ್ಷಣಂ ಕುಳ್ಳಿರ್ದು ತೀರ್ಥದೊಳ್ಮಿಂದರ್. ಅಂತು ಮಿಂದು ಸೀತೆ ತನ್ನ ಕಿರುವೆರಲ ಶ್ರೀರಾಮಮುದ್ರಿಕೆಯುಂ ಕೈಯೊಳ್ಕೊಂಡು ಗಂಗಾಜಲ ದಿನಭಿಷೇಕಂಗೆಯ್ದು ಲಕ್ಷ್ಮಣಂ ತಿರಿತಂದ ಪುಷ್ಪಂಗಳಿಂ ಅಲಂಕರಿಸಿ ತನಿವಣ್ಗಳಂ ಸಮರ್ಪಿಸಿ ತೀರ್ಥಪ್ರಸಾದಂಗಳಂ ಮೈದುನಂಗಮಿತ್ತು ತಾನುಂ ಕೈಕೊಂಡಳ್. ಅನ್ನೆಗಂ ಬಿಸಿಲಿಳಿಯೆ ತಂಗಾಳಿ ಮೆಯ್ದೋರೆ ವಿಹಗಂಗಳ್ ನೇರದಿಂ ಪಾಡೆ ಮಾರ್ತಾಂಡಂ ಪಶ್ಚಿಮಾಭಿಮುಖನಾಗೆ ಸೀತಾಲಕ್ಷ್ಮಣರುತ್ತರಾಭಿಮುಖರಾಗಿ ಪೊರಮಟ್ಟರ್. ಇಂತು ನಡೆನಡೆದು ಬಲ್ದೂರಂಬೋಗಿ ನಟ್ಟಡವಿಯುಂ ಪೊಕ್ಕು ಕಟ್ಟಕಡೆಯೊಳಣ್ಣನ ಕಟ್ಟಾಣತಿಯನೊರೆದು ಲಕ್ಷ್ಮಣಂ ಭೂಮಿಜೆಯನುಳಿಸಿ ಮರಲ್ದು ಪೋದಂ.

---

೫. ವಾಲ್ಮೀಕಿದರ್ಶನಂ.

ಮನೋರಮೆ (ಕಂಬನಿಗರೆದು) — ಆಃ! ಎನ್ನೊಡೆಯ, ನೀನುಮೆಂತು ಕಲ್ಮನನಾದಯ್ ಒರ್ತಡವೆಯೆ ದೇವಿಯುಂ ಕಾರಡವಿಯೊಳುಳಿದು ಲಕ್ಷ್ಮಣಂ ಪೋದನೆಂಬೊಡೆ? ಮೈದುನಂಗಮಾದೊಡಮೆಂತು ಮನಮಾದುದೋ. ಮೇಣೆಂತು ದೇವಿಯುರ್ಗೆ ಕಾವಲಿರದೆ ಪೋದನೊ? ತೊರೆದು ಪೋಪನ್ನಂ ಸೀತೆಯೇನೆಂದು ಮರುಗಿದಳೋ! ಅಕ್ಕಟಾ ಪೆಣ್ಗಳೊಂದು ಬಾಳ್ತೆ ಬಾಳ್ತೆಯೆ?

ಮುದ್ದಣಂ— (ತಾನುಂ ಸುರಿವಶ್ರುಜಲಮಂ ಕಿರುವೆರಲಿಂ ಮಿಡಿದು) ಪ್ರಾಣೇಶ್ವರೀ, ಈ ಇರವನೇನೆಂದು ಪೇಳ್ವೆನೋ? ಆಳಲ್ ಕೊರಲನೌಂಕುಗುಂ; ಮುಂಗತೆಯನಾನುಂ ಪೇಳ್ವೆಂ.

ಮನೋ— ಪೆಣ್ಣೊಡಲಲ್ತೆ? ಎಂತುಂ ಸೈರಿಪೆಂ; ಪೇಳ.

ಮುದ್ದ— (ನೀಡುಂ ಸುಯ್ದು) ಅಯ್ತೆ ಕೇಳ್. ಅಂತು ಗಂಗೆಯುಂ ಸ್ತುತಿಸಿ ಮುಂತೆ ಸೀತೆಯುಂ ಪಿಂತೆ ಸೌಮಿತ್ರಿಯುಮಾಗೆ ಪಯಣಂಬೋದರ್. ಸೀತೆಗೆ ವೈಖಾನಸರ ಮುತ್ತೈದೆಯರನೀಕ್ಷಿಪೊಂಗೆ ಕಾಣ್ಬೆನೋ ಎಂಬೊಂದು ತವಕದಿಂ ನಡೆ ಮುಳಿಸಿದುದು. ಲಕ್ಷ್ಮಣಂಗೆ ಅಣ್ಣನಾಣತಿಯನೆಂತೊರೆವೆನೋ ಮೇಣೆಂತು ದೇವಿಯಂ ತೊರೆವೆನೋ ಎಂಬ ದುಗುಡದಿಂ ಪಿಂಚಿದುದು ಅಃ! ಚಂದ್ರಶಾಲೆಯೊಳೊರ್ಮೆಯುಂ ಶತಪಥಂಬೋಗೆ ಬಸವಳಿವ ಗರ್ಭಿಣಿ ಇಂದು ಬಿಸಿಲ ಬೇಗೆಗೆ ಕಾಪಥದೊಳವಾಯಸಂದೋರದೆ ಉಲ್ಲಸದಿಂ ನಡೆದು ಪೋಪಳೆಂದೊಡೆ ತವಕಮೆಂತಪ್ಪರುಮಂ ಮಾರುಗೊಂಡಲ್ಲದೇಂ ಪೋಕುಂ? ಇಂತು ಮುಂಬರಿದು ಪೋಗೆವೋಗೆ ಲಕ್ಷ್ಮಣನುಂ ಬೆನ್ನೊಳೆ ನಡೆತರೆ ಕಡುದೂರಂ ನಡೆದು ಘೋರಾರಣ್ಯಮನೊಂದಂ ಪೊಕ್ಕರ್. ಮುನ್ನಮೆ ನಡೆನಡೆದು ಬಳಲ್ದು ಬಿಸಿಲ ಜಳಕ್ಕೆ ಬಾಡಿ ಬಸವಳಿದ ಬಾಲೆ ಈಗಳ್ ಕಂಗೆಟ್ಟಳ್, ಎರ್ದೆಗುಂದಿದಳ್, ಬಾಯ್ವಿಟ್ಟಳ್, ಧರೆಗೆ ಹವ್ವನೆ ಮಸಿದಳ್. ಆಗಳ್ ಸೌಮಿತ್ರಿಯುಪಚರ್ಯೆಯಿಂ ಕಿರಿದಾನುಂ ಬೇಗದಿಂ ಮುಚ್ಚೈದಿಳಿದು ದುಃಖಾರ್ತೆಯಾಗಿ ಮೈದುನಂಗೆ—ಓ ಲಕ್ಷ್ಮಣಾ! ನಡೆಯಲಾರೆನಯ್, ಬಸಿರ ಬೇನೆಯಿಂ ನೊಂದೆನಯ್: ಎತ್ತಲುಂ ಮೊರೆವ ಸಿಂಹಶಾರ್ದೂಲಾದಿ ಶ್ವಾಪದಂಗಳ ನಿಷ್ಠುರಧ್ವನಿಗಳ್ಕವೆನಯ್; ಹಾ! ಕಂದಾ, ಈ ದುರ್ಘಟವಮಾದ ಕಾರಡವಿಯೊಳ್ ಋಷಿಗಳ ಪುಣ್ಯಾಶ್ರಮಮುಂಟೆ? ನಿಕ್ಕುವಂ ನೀಂ ಬಟ್ಟೆದಪ್ಪಿದಯ್ ಹಾ! ರಾಘವಾ, ಹಾ! ಪ್ರಾಣನಾಯಕಾ, ಕೆಟ್ಟೆನಲ್ಲೆ, ಹಾ! ಕರುಣಾಕರಾ, ನೀನೆ ಪುಣ್ಯಮೂರ್ತಿಯಿರೆ ಪುಣ್ಯಾಶ್ರಮಂ ಪೆರತುಂಟೆ? ಕಮಲಮನುಳಿದು ಮಧುಭ್ರಾಂತಿಯಿಂ ಕಿಂಶುಕಕ್ಕೆರಗುವ ಭ್ರಮರಿಯಂತಿರೆ ನಿರ್ಜರಂ ಕಾಡೊಳಾದೆಂ. ನಿನ್ನಡಿದಾವರೆಯನುಳಿದು ಬಂದೊಡೆ ನಗೀ ವಿಧಿಯಾಯ್ತೇ! ಹಾ! ಶ್ರೀರಾಮಚಂದ್ರಮಾ, ಮುಂತೇನಯ್ ತನಗೆ ಬಟ್ಟೆ! ಎಂದು ಬಾಯಾರಿ ಮರುಗಿದಳ್.

ಮಡದೀ, ಇಂತು ಪ್ರಲಪಿಸುವ ರಾಘವನರ್ಧಾಂಗಿಯಿರವಂ ಕಂಡು ಲಕ್ಷ್ಮಣದೇವನ ಬಗೆಯೊಳೇನಕ್ಕುಂ ಬಗೆಯ. ಒಂದೆಡೆಯೊಳಗ್ರಭವನ ಕಟ್ಟಾಣತಿ; ಒಂದೆಡೆಗೆ ಸೀತೆಯುತ್ತಣ ಮರುಕಂ. ಏವಂ? ದೇವಿಗೆ ನೀನಂಜದಿರೆಂಬೊಡುಂಟೆ? ಪುರಕೆ ಮರಲ್ದುವೆನೆಂಬೊಡುಂಟೆ? ತಾನೆ ಕಾವಲಿರ್ಪೆನೆಂಬೊಡುಂಟೆ? ಅಂತಾಗೆ ರಾಘವಾನುಜಂ ಶಶ್ವದ್ಗಳದಶ್ರುಧಾರಾಸಿಕ್ತಕಪೋಲಂ ಕಂಪಿತಕಾಯಂ ಸೀತೆಯ ಪದದೆಡೆಯೊಳ್ ಮೆಯ್ಯಿಕ್ಕಿ—ದೇವಿಯರೆನ್ನಂ ಕಂದನೆಂದು ಸಂಬೋಧಿಸದಿರಿಂ; ಪಗೆವನೆಂದೇ ಬಗೆಯಿಂ; ಇನ್ನೆವರಮಣ್ಣನಾಣತಿಯುಂ ನಿಮ್ಮೊಳೆಂದೆನಿಲ್ಲ; ನಾಡೊಳಾವನೊ ಮಡಿವಳನಭದ್ರಮಾಗೆ ದೇವಿಯರೊಳ್ ಕುಂದಿಟ್ಟು ದೇವರಂ ಚುನ್ನವಾಡಿದಂ ಗಡ! ಅಂತೀದೂಸರ್ಕೆನಗ್ರಭವಂ ನಿಮ್ಮಂ ವಿಪಿನದೊಳಿಳಿಪಿ ಬರ್ಪುದೆಂದೆನ್ನಂ ಪೇಳ್ದಂ; ಇದೆಕೊಳ್ಳಿಂ ಸ್ವಾಮಿಕಾರ್ಯಧುರಂಧರಂ ಅಗ್ರಜನ್ಮಾಜ್ಞಾನುವರ್ತಿ ವೀರಾಗ್ರಗಣ್ಯಂ ಕೃತಕೃತ್ಯಂ ನಚ್ಚಿನ ಮೈದುನನೆಂ ಲಕ್ಷ್ಮಣನೆಂ; ಈ ಒಸಗೆಯುಂ ಪೇಳಲ್ಕೆಂದು ಬೆನ್ನಿಕ್ಕಿ ಪೊಳಲ್ಗೆ ಪೋದಪೆಂ ಎಂದಂ.

ಅತಿಕಾಯವೈರಿಯುಸಿರ್ದೀಸೊಲ್ಲನಾಲಿಸೆ ಬೀರದ ಹರವಸಂ ತೋರುಗುಂ; ಅತ್ತಿಗೆಯೀ ಅವಸ್ಥೆಗೆ ಪಳಯಿಸನೆ? ನೋಯನೆ? ಜಗದೊಳ್ ದುಃಖದೊಳೆ ಪಳಂಗಿದರ್ಗೆ ಮೇಣುಂ ಮೇಣ್ ದುಃಖವೊದವೆ ಬೀರದ ರೋಸಕ್ಕೆಡೆವರ್ಕುಂ. ಇಂತು ಲಕ್ಷ್ಮಣಂ ಪಾಷಾಣಕಠಿಣಹೃದಯನಾದನ್ನೆಸೆ? ಆದೊಡಂ ಮನದೊಳ್ ಮಮ್ಮಲಮರುಗಿದಂ, ನೊಂದಂ ಬೆಂದಂ.

ಲಕ್ಷ್ಮಣನಂತಿರ್ಕೆ. ಸೀತೆಯಿರವನೇನೆಂಬೆನೊ! ಹಾ! ಹಾ! ಬರ್ಮೊದಲೊಳೆ ದೇವರನಾಡಿದ ಪರುಷತರವಾಕ್ಯಮಾರ್ಗಣಂ ಕರ್ಣಕೋಟರಮಂ ಸಾಂಟೆ ದುಃಖಾವೇಶದಿಂ ನಿಶ್ಚೇಷ್ಟಿತೆಯಾಗಿ ಹಮ್ಮದಂಬೋದಳ್. ಅನಿತರೊಳ್ ಲಕ್ಷ್ಮಣಂ ನೆರೆಯಳೊಳ್ಕುವರ್ಜಿಯ ನೀರಂ ಸೆಟ್ಟೆಲೆಯೊಳ್ ತಂದು ದೇವಿಯೊಳ್ ತನ್ನ ಕಡೆವೊತ್ತಿನ ಸೇವೆಯೆಂದು ಪಾದಕಮಲಮಂ ತೊಳೆದು ಕಣ್ಗೆ ಸುರಿದು ಕೈಗೆ ತೊಡೆದು ದೊನ್ನೆಯಂ ಪತ್ರಮೆನೆ ಬೈತಲೆಯೊಳ್ ಶೇಖರಿಸಿದಂ.

ಈ ಶೈತ್ಯೋಪಚಾರಸಪರ್ಯೆಗೆ ಪ್ರಸನ್ನೆಯಾದಳೆನೆ ಮೆಯ್ಯರಿತು ಅಳವುಗಳಿದ ಮನದಳಲಿಂ ಹಾ! ಹಾ! ಕಂದ, ಲಕ್ಷ್ಮಣಾ, ಇಂತೆನ್ನ ಬಾಳ್ಕೆಯುಸಕಳಿದುದೇ?

ಮಾವು ಬೇವಾಯ್ತೇ? ಇಂದಿಂಗೆ ಕೂರ್ಮೆಗಡಲ್ ಬರತುದೇ? ಹುಣ್ಣಿಮೆಯು ತಿಂಗಳಂ ರಾಹು ಕಣ್ಣೆವೆಮುಚ್ಚಿ ನುಂಗಿದುದೇ? ಧರ್ಮಂ ಕರ್ಮಡುವೊಕ್ಕುದೇ? ನೀತಿ ಬಾರ್ತೆಗೆಟ್ಟುದೆ? ಹಾ! ಕಂದ, ಅನಾಥೆಯಾದೆನಯ್! ಹಾ! ಮಜ್ಜೀವಿತೇಶನಿಂದೆನ್ನಂ ಕಾರಡವಿಯೊಳ್ ಬಿಟ್ಟು ಬಾರೆಂದನೇ? ಎನ್ನೊಡೆಯಂ ತೊರೆದನೇ? ಕೂಳಂ ಪಿಸುಣಾಡೆ ನಿರಪರಾಧಿನಿಯನೆನ್ನಂ ಬಲಿದೆತ್ತನೆ? ಶ್ರೀರಾಮಚಂದ್ರನಿಂದೆನ್ನಂ ಕೈವಿಟ್ಟನೇ? ಹಾಹಾ! ಪ್ರಾಣನಾಥನಿಂದೆನ್ನಂ ಮುಟ್ಟನೇ? ಅಕ್ಕಟಾ! ಬಾಳ್ಗೊಲೆಯಾದೆನಲಾ! ಹಾ ಕರುಣಾಕರಾ, ಇನ್ನೆನಗೆ ಗತಿಯಾರಯ್? ಹಾ! ನಲ್ಲ, ಮುಂತೆನ್ನೆಗೆ ಬಟ್ಟೆಯಾವುದಯ್? ಹಾ! ಕಾಂತ, ಆವಗಂ ನೀನೆ ಗತಿಯೆಂದು ನಂಬಿ ಸೇರ್ದೆಳಂ ಇಂತೊರ್ವೊಡಲೊಳೆ ತ್ಯಜಿಸಲ್ಕೆಂತು ಮನಂದಂದಯ್? ಎನ್ನೊಳಾವುದೂಣೆಯುಮಂ ಕಂಡಯ್? ಊರೊಳ್ ಮಾರಿಯೆಂದು ಮನೆವೋರಿಯಂ ಮಾರುಗುಡುವರೆ? ಪಾಲ್ಪುಳಿತುದೆಂದಾವಂ ಪೊಯ್ವರೇ? ಅಸಗನೊರ್ವಂ ತೆಗಳ್ದನೆಂದಬಲೆಯನಿಂತು ಕಾರಡವಿಯೊಳ್ ಬಿಡುವರೇ? ಹಾ! ಮನೋವಲ್ಲಭಾ, ಆಂ ನಿನ್ನರ್ಧಾಂಗಿಯಲ್ತೇ? ಪಟ್ಟದರಸಿಯಲ್ತೇ? ಎನ್ನನುಳಿದೆಂತರೆಮೆಯ್ಯೊಳಿರ್ಪಯ್? ಎಂತು ಪಟ್ಟವಣೆಯನೇರುವಯ್? ಹಾ! ರಾಘವಾ, ನಿನ್ನಡಿಗಳಾಣೆ, ಅಬಲೆಯಂ ಕಾವುದಯ್, ಕೈಮುಗಿದು ಬೇಡುವೆಂ ಬೇಡುವೆಂ ಎಂದು ಪಲುಂಬಿದಳ್.

ಮತ್ತಮೆರೆಯನಂ ನೆನೆನೆನೆದು—ಹಾ! ರಮಣಾ, ಆಂದೆಳವೆಯೊಳೆನ್ನ ಮದುವೆಗೆಂದು ಬಂದು ನೆರೆದ ರಾಯರ ಸೊರ್ಕಂ ಮುರಿವಂತಿರೆ ಹರನ ಬಿಲ್ಲಂ ಮುರಿದ ನಿನ್ನ ಬೀರಮುಮಂ, ನಿನ್ನ ಘನಶ್ಯಾಮಲಕೋಮಲಗಾತ್ರಮುಮಂ, ನಿನ್ನ ಸೊಬಗುಗುವ ಮುಖಕಮಲಮುಮಂ ಕಂಡು ಸೋಲ್ತು ಮೆಚ್ಚಿದೆನಲ್ತೇ; ಎಂದಿಂಗಮೆರವಿಲ್ಲದ ಕಡುಗೆಡೆಗಿಂದು ನೆರವಿಲ್ಲದ ಬಿಡುಗಡೆಯಾಯ್ತೇ? ಆಃ ಚೆನ್ನ! ಅಂದು ವನವಾಸಕ್ಕೆ ಪೋಪಂದು ಅರೆಗಳಿಗೆಯಾನುಂ ನಿನ್ನಂ ಬಿಟ್ಟಿರಲಾರೆನೆಂದು ಬೆಂಬತ್ತಿದೆನಲ್ತೆ! ಈಗಳೆಂತಯ್ ಪಂಚಾಸ್ಯಪುಂಡರೀಕಭಲ್ಲೂಕವೃಕಸೂಕರಭೀಕರಮಾದೀ ಕಟ್ಟಡವಿಯೊಳ್ ಒರ್ವಳೆ ನಿನ್ನನಗಲ್ದು ಯಾವಜ್ಜೀವಮುಮಿರ್ಪೆಂ? ಹಾ! ರಾಮಚಂದ್ರಮ, ದುಷ್ಟರಾಕ್ಷಸನಂದೆನ್ನಂ ಕಳ್ದುಯ್ಯಲೊಡಂ ಬಿಡಲಾರದ ಮೋಹದಿಂ ಮರುಗಿ ಕೊರಗಿ ಪುಡುಂಕಿವಂದು ಕಡಲ್ಗಣೆಗಟ್ಟಂ ಕಟ್ಟಿ ರಕ್ಕಸನೊಳ್ ಕಾದಿ ಮೊನೆಯೊಳಾತನಂ ಗೆಲ್ದು ಎನ್ನಂ ವನಕಟ್ಟುವೊಡೆಂದೇಂ

ಮರಲ್ಚಿದಯ್? ಹಾ! ಕಾಂತ, ನಿನ್ನಂ ಮಗುಳ್ದಿನ್ನೆಂದಿಂಗೆ ಕಾಂಬೆನೊ? ಇನ್ನೆಂದಿಂ ಗೊಡಗೂಡುವೆನೋ? ಹಾ ರಾಮಾ ಹಾ ರಾಮಾ! ಎಂದು ಸೀತೆ ಬಾಯುಳಿದಳ್ತಳ್.

ಇಂತು ಬಣ್ಣಿಸಿ ಬಣ್ಣಿಸಿ ಮರುಮರುಗಿ ಬಿನ್ನನಿರ್ದು ಮತ್ತಂ ಲಕ್ಷ್ಮಣ ನೊಳ್—“ಕುರುಂಬನ ಕುತ್ತಕ್ಕೆ ಕುರಿಯು ಪಿತ್ತಮೆ ಮರ್ದಾಯ್ತು” ನೀಮ ನಿಬರ್ ಮೈದುನರಿರ್ದುಮೆನಗೀಪಾಡುಗೆಯ್ದಿರೆ? ಅಣ್ಣಂಗೆ ನಯುಂಬೇಳಿರೆ? ಅತ್ತೆ ವಿರಿದಕರ್ೊಪ್ಪಿದರೆ? ಹನುಮಂತಂ ಕೆಮ್ಮನಿರ್ದನೆ? ಹಾ! ಪೆಣ್ಣ ಬಾಳ್ಕೆಯೊಂದು ಬಾಳ್ಕೆಯೇ? ಎಂದು, ಬಳಿಯುಂ ತನಗೆ ತಾಂ ತಿಳಿದು ಆಃ! ನಿಮ್ಮಣ್ಣರನೇಕೆ ನಿಷ್ಕಾ ರಣಂ ದೂರುವೆನೊ? ಏತರ್ಕೆ ಬಾಯಾರೆ ಮರುಗುವೆನೊ? ಇಂತಿದೇಂ ಕಾನನ ರೋದನಮಾಗದೆ? ಪೂರ್ವಜನ್ಮದೊಳಾವ ದಂಪತಿಗಳೊಳ್ ಭೇದಮಿಕ್ಕಿದೆನೊ? ಆವ ಹುದಿಬದೆಯುಂ ಪಳಿದೆನೊ? ಬೊಮ್ಮನೆನ್ನ ಪಣೆಯೊಳ್ ಬರೆದುದಿಂತುಟ್ಟೈಸೆ? ಇಂತು ರಾಘವನೆನ್ನನುಳಿದೊಡಮಾನೆಂತುಮಾತನಡಿಯುಂ ಬಿಡೆಂ; ಆತನೆ ಎನಗೆ ಗುರುವಾತನೆ ನಾಥಂ ಆತನೆ ಜೀವಂ. ರಾಘವನ ಶಾಸನಂ ನಾಡಂ ಸಮಂತು ಕಾಡಂ ಕೊರತಿಲ್ಲದಾಳ್ಗುಮಲ್ತೇ? ಎನ್ನ ಪೂರ್ವಸಂಚಿತದಿನೀಬಟ್ಟೆ ಯಾದುದಲ್ಲ ಆತನೇಗೆಯ್ಗುಂ? ಕರುಣಾಸಾಗರನಲ್ತೆ? ನಂಬಿದರಂ ಕಾವನೆಂಬ ಬಿರುದುಳ್ಳನಲ್ತೆ? ಆತನಡಿಯೊಲ್ಮೆಯೊಂದಿರಲಯ್ ಎಂದು ಕಣ್ಬನಿದುಂಬಿದಳ್.

ಇಂತಾಡಿದ ಜಾನಕಿಯು ಮಾತಂ ಕೇಳ್ದು ಲಕ್ಷ್ಮಣಂ ಮರುಗುತೆ ಕಿಳ್ಮೊಗನಾಗಿ ನಿಂದಿರ್ಪುದುಂ ಸೀತೆ ಸೌಮಿತ್ರಿಗೆ—ಕಂದಾ, ಏತರ್ಕೆ ನಿಂದಿರ್ಪಯ್? ಅಣ್ಣನಾಜ್ಞೆ ಸಂದುದಲಾ? ಪೋಗೈ ಎನುತೆ ಪೇಳ್ದಳ್. ಆಗಳಾತಂ ತನ್ನಂ ತಾಂ ಪಳಿದು ದೇವಿಗೆ ಆವನಗಲ್ದೆಳಗರುವಿನಂತಿರೆ ಎನ್ನಿರವಾಯ್ತೆ? ಅಣ್ಣನಾಣತಿಯೆಂಬೊಂದು ನೇಣ್ ಗೋಣಂ ಬಿಗಿದೀಳ್ಗುಂ. ಆಗಳ್ ಬಲ್ಬಗೆಯೊಳ್ ಬೇಡಿದೆಂ; ದೇವರ ಚಿತ್ತಕ್ಕೆ ಬಾರದಾಯ್ತು; ಎನ್ನ ಬಿನ್ನಪಂ ಪಾಪೆಯುಂ ತುಳಿಲ್ಗೆಯ್ದಂತಿರೆ ಪೊಚ್ಚರದಾಯ್ತು. ದೇವೀ ಎನ್ನ ಮುನ್ನೊಡಲ ಅಳಿಗೆಯ್ಮೆಯು ಬೆಸುಗೆಯಿನೀಗಳೀಪಾತಕಕ್ಕೆ ಕೈನೀ ಡುವಂತಾಯ್ತು. ಮಾತೇ, ಇಂತಿರ್ಪನಂ ನಿರ್ಘೃಣನಂ ಕುಲಘಾತುಕನನುದ್ಧ ರಿಸೌ, ಎಂದು ಸೀತೆಯ ಕಾಲ್ಗೆರಗಿದಂ.

ಇಂತಡಿಗೆರಗಿದ ಮೈದುನನಂ ಸಂತವಿಟ್ಟು ಏಳೇಳ್ ಕಂದ, ಕೈವಿಡಿದ ನಲ್ಲಸೇ ಮುನಿವೆಡೆಯೊಳಾರೇವರ್? ನಿನ್ನೊಳೇನಪರಾಧಂ? ಪೊತ್ತಿಳಿದುದಲ್ತೇ?

ಪೋಗಯ್. ನಿನ್ನಂ ನಿನ್ನಣ್ಣಂ ಕೇಳ್ದೊಡೆ-ನಿನ್ನಾಣತಿಗಬಲೆ ಮರುಗಿದಳಿಲ್ಲ; ಮಾರ್ನುಡಿದಳಿಲ್ಲ; ಮುನಿಸಾಂತಳಿಲ್ಲ; ನೀನೇ ಗತಿಯೆಂದು ನಿನ್ನಡಿಯಂ ನೆನೆಯುತೆ ಕಡೆಪ್ರೊಳ್ತಂ ಪಾರುತಿರ್ಪಳೆಂದು ಬಿನ್ನಯಿಸಯ್; ಮೇಣಾಯ್ಯಂ ಬಳುವಳಿಯಿತ್ತ ಎನ್ನ ನಲ್ದೊಡವುಗಳೊಳ್ ಎಕ್ಕಸರಂ ಶ್ರುತಕೀರ್ತಿಗೆ, ಪಿಂಡುಗಂಕಣಂ ಮಾಳವಿಗೆ, ಜಕ್ಕಸರಂ ನಿನ್ನರಸಿಗೆ, ಮಿಕ್ಕುವಂ ದಾಸಿಯರ್ಗೆ ಪರ್ಚುಗುಡ್ಪೆ; ಅಂತುಮಲ್ಲದೆ ಎನ್ನ ನಲ್ಗೆಳದಿ ಚಂದ್ರಮತಿಗಾ ಎನ್ನ ಚಂದಿರಗಾವಿಸೀರೆಯಂ ಬಣ್ಣಗುಪ್ಪಸಮುಂ ಮೆಚ್ಚನಿತ್ತು ಆಂ ಮುನ್ನಂ ಬಾಸೆಯಿತ್ತ ಪೂರ್ಣಪಾತ್ರಮೆಂದು ಪೇಳ್ಪೆ; ಮೇಣ್ ನಿನಗೆನ್ನೊಳ್ ದಯೆಯಿರ್ಕುಮಪ್ಪೊಡೆ ಲೋಗರನುವಿಂಗೊಂದು ದಮ್ಮಣಿಯನೇರ್ಪಡಿಸಯ್; ಮೇಣ್ ಮುನಿಸತಿಯರ್ಗೆಂದು ತಂದು ರಥದೊಳಿಟ್ಟ ಬಾಯಿನಮನೊರ್ವಮುತ್ತೈದೆ ಪಾರ್ವತಿಗೆ ಕುಡಿಸ್ಪೆ. ಆ ಎನ್ನ ಪೂಜೆಯ ಕವಿಲೆದುರುವಂ ಮುದ್ದಿನೆಳಗರುವಂ ಬಡವಾಗದಂತು ಪೇಳ್ದು ನಿನ್ನಬ್ಬೆಗೆ ಕೈವರ್ತಿಸ್ಪೆ. ಎನ್ನೀಕಡೆಗಾಲದ ಬಯಕೆಯಂ ಸಲಿಸ. ನಿನಗೆ ಮೇಲಕ್ಕೆ, ಮೇಣ್ ಪಯಣಂ ಸೊಗಮಕ್ಕೆ. ಎಮ್ಮೆಲ್ಲರ್ಗೆ ಶ್ರೀರಾಮನಡಿದಾವರೆಯೊಲ್ಮೆಯೊಂದು ವಜ್ರಪಂಜರಮಕ್ಕೆ ಪೋಗ್ಪೆ ಎಂದು ಪರಸಿ ಪಯಣಕ್ಕಾಣತಿಗೊಟ್ಟಳ್.

ಆಗಳ್ ಸೌಮಿತ್ರಿ ಡೋಲಾಯಮಾನಮಾನಸನಾಗಿ ದೇವಿಯರಂ ಬಲವಂದು ಕೈಮುಗಿದು ದೆಸೆವಳರ್ಗೆ—ಈಕೆ ನಿಮಿಕುಲದೊಳ್ ಪುಟ್ಟಿದ ರಾಜಯೋಗಿಯಪ್ಪ ಜನಕನಣುಗುಗುವರಿ; ರಕ್ಕಸರ ಬಳಗಮಂ ಸದೆದು ದೆಸೆವಲಿಗೊಟ್ಟು ನಿಮ್ಮಂ ಪೊರೆದ ಶ್ರೀರಘುರಾಮನ ಪಟ್ಟದ ರಾಣಿ; ಎಮ್ಮಣ್ಣನಾಣತಿಗಿವಳಂ ವನದೊಳಿರಿಸಿ ಪೋಪೆಂ, ಪೂರ್ಣಗರ್ಭಿಣಿ, ನೀಮೆಲ್ಲರ್ ಕಾವಲಿರ್ದು ಕಾಯಿಮೆಂದು; ಭಾಸ್ಕರಂಗೆ—ಎಲೆ ಆದಿತ್ಯ, ನಿನ್ನ ಕುಲವಧುವಿವಳ್; ನಿನ್ನ ಬಳಿವಳ್ಳಿ ಮಡಲ್ವೊಡಿವಳ್ ತಾಯ್ವೇರ್, ಅಂತದರಿಂ ಇವಳೊಳ್ ದೃಷ್ಟಿಯಿರ್ಕೆ ಎಂದು; ವನದೇವಿಗೆ—ಎಲೆ ಶಾಕಂಭರಿ ಇದೆಕೊಳ್ ಭಾಗ್ಯಲಕ್ಷ್ಮಿ ನಿನ್ನ ಕೆಳೆತನಕ್ಕೆಳಸಿ ಬಂದಿರ್ಪಳದುಕಾರಣಂ ನೀನುಮಿವಳುಮೊಡಗೆಳದಿಯರಾಗಿ ಸಂತಮಿರಿಂ ಎಂದು ಕೇಳಿಸಿ ಅಗಲ್ದು ಪೋಪನೆಂದು ಖಿನ್ನೆಯಾಗಿ ತನ್ನನೆ ನೋಳ್ಪ ದೇವಿಯಿರವಂ ನೆನೆನೆನೆದು ಗಾಳಿಗೆ ಮಾರೊಡ್ಡಿಪೋಪ ಪತಾಕೆಯಂಬರದಂತಿರೆ ಮನಂ ಪಿಂದುಳಿಯೆ ನಡೆವಟ್ಟೆಯೆನೆ ಪೊರಮಟ್ಟಂ.

ಮುದ್ದಣಂ— ಅತ್ತಲಯೋಧ್ಯೆಯೊಳ್ ಜನ್ನಗುದುರೆಯುಂ...........

ಮನೋರಮೆ— ಸುಡು ಸುಡು ನಿನ್ನ ಜನ್ನಗುದುರೆಯುಂ; ಆಕತೆಗೀಗಳೆ ಪೊಳ್ತೇ? ಆಃ! ಸೀತೆಯೇನಾದಳೆಂತಿರ್ದಳೆಂದು ಪೇಳ್ಳೈ.

ಮುದ್ದಣಂ—ಆಯ್ತು; ಕೇಳ್. ಅಂತು ಲಕ್ಷ್ಮಣಂ ಬೆನ್ನಿತ್ತು ಪೋಪುದುಂ ಸೀತೆ ತನ್ನೊಳೆ ತಾಂ —ಆಃ! ನಿಮಿಕುಲಕಂ ಚಲಕಂ ಗಂಡನೆನಿಸಿ ಪಳನುಡಿವೆಂಡಿರ ಬೈತಲೆವಣಿಗೆ ಬೆಲೆಗಟ್ಟೆ ಬ್ರಹ್ಮರ್ಷಿಗಳ್ಗಂ ತತ್ವಮಂ ಬೋಧಿಪ ಜಾಣ್ಮೆಯಿನೇಳ್ಗೆವೆತ್ತ ಜನಕರಾಜಂಗೆ ಮುದ್ದುಮಗಳೆನಿಸಿಯುಂ, ಅಖಂಡಮಂಡಲೇಶ್ವರರ್ ಮರೆಗೊಂಡು ಪುದುವಾಳ್ವಿನಂ ತನ್ನ ಜಸದೆಸಕದಿಂ ನೆಗಳ್ತೆವಡೆದ ಸಾರ್ವಭೌಮರಾಘವನಂ ಕೈವಿಡಿದು ಪಟ್ಟದರಸಿಯಾಗಿಯುಂ ಬಾಳ್ದೆನಗೀಗಳೀವಿಧಿಯಾಯ್ತೇ? ಉಃ ಪೋಕೆ. ಸುಖದುಃಖಂಗಳ್ ಪಗಲಿರುಳಂತೆವೋಲ್ ಲೋಕದೊಳ್ ಪರಿವರ್ತಿಸುಗುಂ. ಇವರೊಳೆನಗಳ್ಕರು ಪೋಯ್ತು. ಶ್ರೀರಾಮನೊಲ್ಮೆಯೊಂದೆ ಶಾಶ್ವತಂ; ಎಲೆ ಕಲ್ಯಾಣರೂಪ, ನೀನೆನ್ನಂ ಕೈವಿಡದಿರಯ್; ಎಲೆ ಜಗದೊಡೆಯ, ಪೆಣ್ಣೆನ್ನೊಳ್ ಕರುಣೆಯಿರಲಯ್; ರಾಮಾ ರಾಮಾ ರಾಮಾ! ಎಂದು ಧ್ಯಾನದೊಳಿರ್ದಳ್.

ಆ ಪೊಳ್ತಿಂಗೆ ವೇದಪುರುಷನೇ ಮುದುಪಿನ ಪರಿಜಿಂ ಮೆಯ್ಗೊಂಡು ನಡೆತಂದನೋ ಎನೆ ಮೂಡಿವರ್ಪ ನೇಸರ ಪಸುಳೆವಿಸಿಲ ಬೆಳ್ಗಿಂಪಿನ ಪೊಸವೊಗರಿಂ ಕಣ್ಗೊಳ್ವ ಪೂರ್ವಾದ್ರಿಕೂಟಮೆಂಬಂತಿರೆ ಮುಂದಲೆಯೊಳರೆಗೆಂಪಿನ ಬೆಳ್ವೆಳಗಿಡಿದ ಜಡೆಮುಡಿ ವಿರಾಜಿಸೆ, ಮಾಗಿಯ ಬೆಳ್ಮುಗಿಲಾಗಸದಂತಿರೆ ಭಸಿತೋದ್ಧೂಲಿತಲಸಿತಲಲಾಟಂ ಕಣ್ಗೊಳಿಸೆ, ಇನ್ನೀತನನಿದಿರ್ಚಿ ಕೈಮಾಡೆನೆಂದು ಆಣೆಯಿಟ್ಟು ಕಾವಸರೆಮುರಿದ ಕರ್ವುವಿಲ್ಲೆಂಬಂತಿರೆ ಶಿಥಿಲಮಾಗಿ ಜೋಲ್ವ ಪುರ್ವೆಸೆಯೆ, ಜ್ಞಾನದೃಷ್ಟಿಯು ನೆರವಿರೆ ಪೊರನೋಟಮೇವುದೆಂದು ಮುರಿದು ನೋಳ್ಪನೆನೆ ತುರುಗೆಮೆಯೊಳರೆದೆರೆದ ಕಣ್ಣೊಚ್ಚತಮಾಗೆ, ತನ್ನಚ್ಚಿಯ ಮುರಿನೋಟದ ವಿಶ್ರಾಂತಿಯೆಡೆಯಿದೆನೆ ನೀಳ್ದ ನಾಸಾಪುಟಂ ರಂಜಿಸೆ, ಭಾರತಿಯ ಪದ್ಮಪೀಠಂಬೋಲ್ ಮುಖಕಮಲಮೊಪ್ಪಿರೆ, ಗೊರವನ ಬೆಳ್ಗೊರಲೊಳಮರ್ದ ಹಾಲಾಹಲದ ಕರ್ವೆಳಗುದುರುಗಲ ಮಾಳ್ಕೆಯಿಂ ಶಂಖಧವಳಕಂಠದೊಳ್ ಏಕಮುಖೀರುದ್ರಾಕ್ಷಮೊಂದು ತೆರಂಬೊಳೆಯೆ, ಜೋಗಗೆಳೆಯುರೆಣ್ಬರೇರಿವರ್ಪನ್ನಂ ಅರುವಗೆಗಳಿಳಿವೋದ ನಿಚ್ಚಣಿಗೆಯೆಂಬಂತಿರೆ ಇರ್ಬದಿಯೊಳಮೆಲ್ಗಳ ಸಾಲ್ಗಳ್ ತೋರೆ ಸಡಿಲ್ದ ಮಾಯೆದಾವಿನ

ಪಲವುಂ ಪುರಿಗಳೆಂಬಂತೆವೋಲ್ ಸೆರೆಗಳೆತ್ತಂ ಮಡಲ್ತಿರೆ, ನಡುವಿನೊಳುಟ್ಟ ವಲ್ಕಲಂ ತೊವಲುಡೆಯುನ ಕೃತ್ತಿವಾಸಂಬೊಲ್ ಮನೋಜ್ಞಮಾಗಿರೆ ವಾಲ್ಮೀಕಿ ತಾನಾಬಟ್ಟೆಯೊಳೆ ಬರುತುಮಿರ್ದಂ.

ಇಂತು ಬರುವರುತೆ ಕಟ್ಟೆದಿರೊಳ್ ಚಿಂತಿಸುತೆ ಎತ್ತಂ ನೋಳ್ಪ ಪೆಣ್ಣೊರ್ವಳಿರೆ ಕಂಡಚ್ಚರಿವಟ್ಟು ಆರವಳೆಂದರಿವೊಡೆಂದು ಮುಟ್ಟಯಿಸಿ ಬಂದು ಆರಾ, ವನದೇವಿಯಂತಿರೀವನದೊಳೊರ್ವಳೆ ಇರ್ಪುದೇಂ? ಎಂದು ಬೆಸಗೊಂಡಂ. ಈ ನುಡಿಗೆ ಸೀತೆ ಭಯದಿಂ ಗಳ್ಕನೆಳ್ದು ಪಿಂಜರಿದು ಮುನ್ನಿನ ಬನ್ನಮಂ ನೆನೆದು ರಕ್ಕಸರ ಮಾಯೆಯ್ಕೆಂದೇ ಬಗೆದು—ಎನ್ನಾಣೆ ರಾಯನಾಣೆ; ಪತ್ತೆಸಾರದಿರ್ ಎಂದು ಕಿಸುಗಣ್ಣಿ ಘೆರನಂ ಮರೆವೋದಳ್.

ಇಂತಪ್ಪುದುಮಾಪುತ್ತಿನ ಪುತ್ರಂ ಆವಳೊ ಬಾಲೆ ತಳ್ಳಂಕಂಗೊಂಡಳೆಂದು ಮರುವಾತಿನೊಳ್—ಬಾಲೆ, ಆಂ ಅನ್ಯರಲ್ತು, ತವಸಿಗಳ್; ಈಯೆಡೆಯ ಆಶ್ರಮದೊಳೆ ಇರ್ಪೆವು. ಅಂಜದಿರಾ, ನೀನಾರ್ಗೆ? ಪೆಸರೇಂ ಪೇಳಾ ಎಂದು ಕೇಳ್ದಂ. ಇದರ್ಕೆ ಸೀತೆ—ರಾವಣಂಬೋಲ್ ಪುಸಿದವಸಿಗಳ್ ಪಲಂಬರೊಳರ್ ಸವಿನುಡಿಯಿಂ ಬೋಸರಿಸಿ ಮಾಯೆಗೆಯ್ವರ್; ನಿಮ್ಮಂದಿಗರೊಳೇಂ ಮಾತೊ? ಶ್ರೀರಾಮನಾಣೆ; ಸನಿಯಂ ಬಾರದಿರ್ ಎಂದು ಮಾರ್ನುಡಿವುದುಂ ಮುನಿಪಂ ರಾಮನಾಮಮಂ ಕೇಳ್ದು—ದೇವೀ, ರಾಮನಾಣೆ, ಆಂ ಕವಡುದವಸಿಯಲ್ತು, ವಾಲ್ಮೀಕಿ ಕಾಣಾ, ನಿರ್ಜನಪ್ರದೇಶದೊಳಿರ್ಪೀ ನಿನ್ನನರಿವೊಪೆಂದೆ ನುಡಿಯಿಸಿದೆಂ, ಪೆರತೆಣಿಸದಿರೆಂದು ಪ್ರಾರ್ಥಿಸಿದಂ.

ಆಗಳ್ ಭೂಸುತೆಗೆ ಮನದ ಭಯದ ಕವಲ್ ಪತ್ತುವಿಡೆ ಸಂದೆಯ ಮೆನಸುಂ ಪೆಡಂಮೆಟ್ಟೆ, ನಂಬುಗೆಯಿಂಬುಗೊಳೆ—ಅಂತಪ್ಪೊಡೆ ನೀಂ ಮಾನ್ಯಂ, ನಿನಗೆರಗುವೆಂ; ಎನ್ನಿರವನೇನೆಂಬೆನೊ? ಜನಕರಾಜಂಗೆ ಮಗಳಾಗಿ ದಶರಥಂಗೆ ಸೊಸೆಯಾಗಿ ಶ್ರೀರಾಮಂಗೆ ಪಟ್ಟದರಸಿಯಾಗಿ ಬಾಳ್ದೆನ್ನ ಬರ್ದು*ಂಕು ಈಗಳ್ ಬನದೊಳಾಯ್ತೈ! ರಕ್ಕಸನೊಳ್ ಬಂದಿವಾಳ್ದೆನ್ನನೊಪ್ಪುಗೊಂಡನೆಂಬ ಲೋಕಾಪವಾದದ ದೂಸರಿಂ ಶ್ರೀರಾಮನೆನ್ನನಡವಿಯೊಳ್ ಬಿಸುಳ್ಪುದೆಂದು ಲಕ್ಷ್ಮಣಂಗೆ ಬೆಸನಿತ್ತು ಕಳಿಪಿದನೈ. ಅಂತು ಲಕ್ಷ್ಮಣನೀಗಳೇ ಉಳಿದು ಪೋಪಿನಂ ದೆಸೆಗೆಟ್ಟು ವನಪಿಶಾಚದಂತಿರೆ ಮರುಗುತಿರ್ದಪೆಂ; ಎನ್ನೀ ಅಳಿಮೆಯ್ಯಂ ಬಾವಿದಾವುಗಳ್ಗೊಪ್ಪಿ

ಸುವೆನೆಂದೊಡೇವೆನ್ನೈ, ಅರುದಿಂಗಳ ಗರ್ಭಿಣಿ, ಆತ್ಮಹತ್ಯಾಭ್ರೂಣಹತ್ಯಾದೋಷಂಗಳೊರ್ಮೊದಲೊಳೆ ಒದವುಗುಮೆಂದೆ ಮಾಣ್ದೆಂ; ಹಾ! ಎಂದು ಆತನ ಪಾದಕಾನತೆಯಾದಳ್.

ಇಂತೆರಗಿದಳಂ ಕಂಡು ಮುನಿಪಂ-ಅಂತಾಗದೌ, ನಿಕ್ಕುವಂ ನೀಂ ಮಕ್ಕಳಂ ಪಡೆವುದುಂಟು. ಮರುಗದಿರ್, ಎಡೆಯೊಳೆ ಎಮ್ಮಾಶ್ರಮಂ; ರಾಘವನಾಣೆ, ಮಗಳೆಂದೆ ನಿನ್ನಂ ಸಲಪುವೆಂ; ಏಳೌ ಎಂದು ಸಂತಯಿಸಿ ಭಾಗ್ಯಲಕ್ಷ್ಮಿಯಂ ಕೊಂಡುಯ್ವ ದೀನನಂತಿರೆ ಸಂತಸದಿಂ ತನ್ನಾಶ್ರಮದತ್ತಣ್ಗೆ ಕರೆದುಯ್ದಂ.

ಇಂತು ಸೀತೆ ಕಿರಿದಾನುಂ ದೂರಂ ಪೋಗೆ—ತನ್ನ ಕೂಡುವಳಗದ ನಿಚ್ಚ ದಂದುಗದ ಮಿಡುಗಿಂ ನಂಜುಂಡ ಬಾನ್ನವಿರಂ ಗಜಮುಖನ ಬಿರಿವೊಡೆಯ ಬಾವಂ, ಅರುಮೊಗನ ತೇರ ಸೋಗೆಯಂ, ಪಾರ್ವತಿಯ ಸಿಂಗಮಂ, ತನ್ನ ಬಸವನಂ ಇನ್ನಾನುಂ ಪಗೆಯಂ ಮರೆತು ಪುದುವಾಳ್ವುದೆಂದು ಬುದ್ಧಿವೇಳಲೊಡ ಮದುವೆ ವೈರಾಗ್ಯಮಂ ಪುಟ್ಟಿಸೆ ತಾಮೊಂದುಗೂಡಿ ತಪಶ್ಚರ್ಯೆಗೆಂದು ವನಂಬೊಕ್ಕು ನಿರ್ವೈರದಿನಿರ್ಪುವೆನೆ; ಒಂದೆಡೆಯೊಳ್ ಬೈಗಿನ ಕಿರುಮುಗಿಲೊಡ್ಡಂ ಕಂಡುಲ್ಲಸದಿಂ ಇಡಿಕಿರಿದ ಪೀಲಿಗಳಂ ಬಿದಿರ್ಚಿ ಮಯೂರಂ ತಾಂಡವಕ್ಕಾರಂಭಿಸಲೊಡಂ ತಾನುಂ ವಾಲ್ಮೀಕಿಯೆನೆ ಪುತ್ತಿನಿಂ ವ್ಯಾಳಂ ಪೊರಮಟ್ಟು ನೆರೆಯೊಳೆ ಮಂಡಲಾಸನಂ ಬಲಿದು ಕುಳ್ಳಿರ್ದು ನಾಟ್ಯಂ ಮನಂಗೊಂಡುದೆನೆ ತಲೆಯೊಲೆದು ಸಭ್ಯಂಬೋಲ್ ನಿಟ್ಟಿಸುತಿರೆಯುಂ, ಮತ್ತಮೊಂದೆಡೆಯೊಳ್ ಗೋಣ್ಣಿವಿರ್ ಮುಮ್ಮಡಂಬರಂ ಮುಸುಂಕಿರೆ ಪಟ್ಟೊಂದು ಮುತ್ತಸಿಂಗಕ್ಕೆ ತನ್ನ ಕೇಸರಮೆ ಜಾಲಮಾಗೆ ಕಾಲ್ ಸಿರ್ಕಿಸೊಳಾಗೆ ಮಗುಳ್ದುಂಮಗುಳ್ದುಮೇಳಲಾಟಿಸಿಯುಮಾರದೆ ಪೊರಳ್ದೊರಲ್ವುದಂ ಕಡವೆ ಕೇಳ್ದು ನೆಟ್ಟನಾ ಎಡೆಗೆ ಬಂದು ತನ್ನ ಸಿಂಗಂಗಳಿಂ ಸಿರ್ಕುಂಗೂದಲಂ ಬಿಡಿಸುತಿರೆಯುಂ ಇಂತಿದು ಪುಣ್ಯಾಶ್ರಮದ ಮೈಮೆಯೆಂದು ಸಂತಸಂದಾಳ್ದಳ್. ಅಂತು ಮುಂತೆ ಮುಂತೆ ಬರ್ಪುದುಂ—

ಎಮ್ಮಂದಿಗರೆಂತಂತು ಪಸುಗೆಗೊಂಡುಂ ಮತ್ತಂ ಚರುಚಾರುಗಂಧಮಂ ಕವರ್ಪನೆಂಬ ಪುರುಡಿಂ ಜನ್ನಗೊಂಡದುರಿ ಚಟಚಟಿಸಿ ಕಿಡಿಕಿಡಿವೋಪುದುಂ ಕಿನಿಸಿಂ ಕಿಚ್ಚಂ ತಳ್ಪೊಯ್ದುಂ ಧೂಮಧ್ವಜಮಂ ಮುರಿದುಂ ಈ ಬಗೆಯಂ ಮುನಿಗೆ ದೂರಲ್ಕೆಂದಿದಿರ್ವಂದಸೆನೆ ಚರುಪುರೋಡಾಶಂಗಳ ನರುಗಂಪುವೊರೆದ ಪಾವನಪವ

ನಂ ತೀಡೆ, ಆಗಳೆ ಹವಿರ್ಭಾಗಮಂ ಕೈಕೊಳಲ್ಕೆಂದು ತಪೋವನಕಿಳಿದು ಬಂದ ಇಂದಿರನ ಮುಗಿಲ್ದೇರೆನೆ ಹೋಮಧೂಮಂ ನಾಲಾಳೇರಿನೊಳ್ ಚದರಿ ತಳ್ತಿರೆ ಆಶ್ರಮೋಪಕಂಠಂ ಕಣ್ಗೆಂಬಾದುದು.

ಅಂತುಮಲ್ಲದೆಯುಂ ಮಳ್ತಿಯ ಮುಳ್ತುಗದ ಅರಳಿಯ ಸವುದೆಗಳನಳತೆಯೊಳ್ ಕೊಯ್ದು ಇರ್ಪನಾರಿಂ ತಲೆವೊರೆಗಟ್ಟಿ ತರ್ಪವಟುಗಳಿಂದೆಯುಂ, ಬೆಲ್ಲವತ್ತದ ದಳಂಗಳಂ, ಗರಿಕೆಯ ಅಂಕುರಂಗಳಂ, ತೊಳಚಿಯ ಕುಡಿಗಳಂ ಚಿವುಂಟೆ ಬಾಳೆವಟ್ಟೆಯೊಳ್ ಕಟ್ಟಿತರ್ಪ ಶಿಷ್ಯರಿಂದೆಯುಂ, ಕುಂದದ ಪಾರಿಜಾತದ ಪಾಟಳಿಯ ಮೊಲ್ಲೆಯ ಬಕುಳದ ಸಂಪಗೆಯ ಬಿರಿಮುಗುಳ್ಗಳಂ ತಿರಿತರ್ಪ ಮುನಿಕನ್ಯೆಯರಿಂದೆಯುಂ, ಶೌಚದ, ಸ್ನಾನದ ವೇದಪಾರಾಯಣದ, ಸಂಧ್ಯೋಪಾಸ್ತಿಯ ಜಪದ ತಪದ ಉಪದೇಶದ ಯೋಗಾಭ್ಯಾಸದ ಋಷಿಗಳಿಂದೆಯುಂ ಮನೋಹರಮಾಯ್ತು.

ಇಂತೊಪ್ಪುವಾಶ್ರಮಮಂ ಕಂಡು ಸಂತಸವಾಗೆ ವಾಲ್ಮೀಕಿವೆರಸು ಸೀತೆ ಸಂಜೆಯೊಳ್ ಸಂಧ್ಯಾದೇವಿಯಂತಿರೆ ಮುನಿ ತೋರಿದೆಲೆವನೆಯಂ ಆಶ್ರಮವಾಸಿಗಳ್ ಪೊಗಳೆ ದೇವರ್ಕಳ್‌ಕೊಂಡಾಡೆ ಬಂದು ಪ್ರವೇಶಿಸಿ ಮುನಿಯ ಪಾಲನೆಯೊಳ್ ಸೊಗದಿನಿರ್ದಳ್.

---

೬. ವಿಜಯಪ್ರಯಾಣಂ.

ಇಂತು ಭೂಜಾತೆ ಪ್ರಾಚೇತಸನೊಲ್ಮೆಗಾಪಿಂ ಪುಣ್ಯಾಶ್ರಮದೊಳಿರ್ಪಿನಮಿತ್ತಲ್ ಸಾಕೇತನಗರದೊಳ್ ಸೀತಾರಾಮಂ ಸೀತೆಯನಗಲ್ದ ಪಶ್ಚಾತ್ತಾಪದಿಂ ಒಳಗೊಳಗೆ ಬೆಂದು ಬೇಗುದಿಗೊಂಡು ತನ್ನೊಳೆ ತಾಂ—ಆಃ! ಬಿದಿಯೇ ಎನ್ನೊಳಮಿಂತು ಮಾಡುವರೇ? ಆಃ! ಲೋಕಾಪವಾದದೆಳ್ತರದ ಬಲ್ಮೆಯೇ ಎಂತಪ್ಪರುಮಂ ಬಿಟ್ಟಿರಯೇ? ನಿನ್ನಿಂದೀಸರಿಂ ಮದುವೆನಿಂದ ಮಡದಿಯುಂ ಬಿಟ್ಟಿರ್ಪುದಾಯ್ತು. ನಿಷ್ಕಲಂಕೆಯೆಂದರಿಯೆನೆ? ಪಾವನೆಯೆಂದರಿಯೆನೆ? ಹಾ! ಸೀತೇ, ಎನ್ನಂ ಕೈವಿಡಿವಿನಂ ನಿನಗೊದವಿದ ಭಾಗ್ಯಮೇಂ ಪಿರಿದೊ? ಎನ್ನನೆ ವರಿಪೆನೆಂದು ಆವದೈವಮುಂ ಮುಂ ನೋಂತೆಯೊ? ಅಕ್ಕಟಾ! ಕೈವಿಡಿದಿನ್ನೆವರಂ ಒಂದುದಿನ ಮಾದೊಡಂ ಸೊಗಮಂ ಕಂಡುದುಂಟೆ? ಎಳವೆ ವನಸಂಚಾರದೊಳಾಯ್ತು;

ಬಳವಿ ರಕ್ಕಸರ ಬಂದಿಯೊಳಾಯ್ತು; ಕೆಳವೆ ಪುಲಿಕರಡಿಗಳಿನಗುರ್ವಿಸಿದ ಅಡವಿಯೊಳಾಯ್ತುಲೇ? ಅಯ್ಯೋ! ಅಬ್ಬೆಯಿಲ್ಲದ ಪೆಣ್ಮಗಳನೊರ್ವಳಂ ಕಾಡಿಂಗೊತ್ತಿಗೀವೊಡೆಂದೇ ಮದುವೆನಿಂದೆನೆ? ಆಃ! ಚೆನ್ನೇ, ನಿನ್ನಾಪಾತಿವ್ರತ್ಯಮನಾಸೌಜನ್ಯಮನಾವಿನಯಮನೆಂತು ಮರೆವೆನೊ? ಮುನ್ನಮಯ್ಯನ ನನ್ನಿಗೆ ವಿಪಿನಕ್ಕೆ ತೆರಳ್ವನ್ನಂ ಆಂ ಪೊರಮಟ್ಟೆನೆಂದು ಕೇಳ್ದು ಅಗಲ್ದಿರಲಾರದೆ ಮೋಹದಿಂ ಬೆಂಬತ್ತಿದ ನಿನ್ನನೊರ್ವಳನೀಗಳ್ ತಕ್ಕೂರ್ಮೆಗೆಟ್ಟುಂ ಪೇಳದೆಯುಂ ಆನೆ ಪಳುವಿಂಗಟ್ಟಿದೆನೇ? ಬಲ್ಗಾಲದಿಂ ತನಗೆ ಮಕ್ಕಳಾದುವಿಲ್ಲೆಂದು ಮೆಯ್ಯಂ ತವಿಸಿ ನೋಂಪಿಯುಂ ನೋಂತಳ್ಗಡಾ! ಎಂತೆಂತೊ ದೈವಮನುಗ್ರಹಿಸಿದೊಡಂ ಈ ಪೊಳ್ತಿಂಗೀಗತಿಯಾಯ್ತು. ಅಕ್ಕಟಾ! ಆ ಅಬಲೆ ಕಟ್ಟಡವಿಯೊಳ್ ಇನಿಯುಂ ಕೈವಿಟ್ಟನೆಂಬ ದುಗುಡದಿಂ, ಬಸಿರ ಬೇನೆಯಿಂ, ಕಾಳ್ಮೃಗಂಗಳತ್ತಣ ಭಯದಿಂ ಎಂತಸುವಿಡಿದಿರ್ಪಳೊ? ಹಾ! ಲಕ್ಷ್ಮಣಂ ಕಾಡೊಳಿಳಿಪಿ ಮರಲ್ವನ್ನಮೇನೆಂದಳೊ? ಎನಿತ್ತಳಲ್ದಳೊ? ಎಂತು ಸುಮ್ಮನಾದಳೊ? ಮೇಣ್ ತಾಂ ಬೆನ್ನನೆ ಬರ್ಪೆನೆಂದಳೊ? ಎನ್ನಂ ಬಯ್ದಳೊ? ಈಗಳೇನಾದಳೊ? ಶಿವಶಿವ! ಆತನೊಳವಿೂತೆರನನೇನೆಂದು ಕೇಳ್ವೆನೊ? ಎನಗಾವ ಮೊಗಮೊ ಎಂದು ಪಲವಗೆಯೊಳ್ ಪಲುಂಬಿ ಮರುಗಿದಂ. ಆನಿಗಾಲಮಿೂವಿಯೋಗದುಃಖಮನೆ ನೆನೆನೆನೆದು ಪಳಯಿಸುತಿರ್ದಂ. ಇಂತಿದು ಕಾಣಾ ಸೋದರರಂ ಸೊಮ್ಮುಗಿಡಿಸಿದುದು. ಅಗಸ್ತ್ಯನಂ ನೆಲೆದಪ್ಪಿಸಿದುದು. ಮನೋರಮೇ, ಮುಂಗತೆಯುಂ ಪೇಳ್ವೆನಾಲಿಸು.

ಅಂತು ಕುಂಭಸಂಭವನ ಬೆಸನಂ ಪಿಡಿದು ಅಶ್ವಮೇಧಮಂ ಕೈಕೊಂಡ ರಾಘವಂ ಸ್ವರ್ಣಸೀತಾಸಮೇತಂ ದೀಕ್ಷೆನಿಂದನೆಂದು ಮುನ್ನಮೆ ಪೇಳ್ದಿರ್ಪೆನಲ್ತೆ; ಆಗಸ್ತ್ಯಂ ಬ್ರಹ್ಮಂ, ವಸಿಷ್ಠನಾಚಾರ್ಯಂ, ಮೇಣುಳಿದ ಋಷಿಗಳ್ ಅಧ್ವರ್ಯೂದ್ಗಾತೃಹೋತಾರರುಂ ಋತ್ವಿಜರುಂ ಆಗಿ ಎಸೆದರ್. ಅನ್ನೆಗಮಾಚಾರ್ಯಂ ಶುಭಮುಹೂರ್ತದೊಳ್ ಜನ್ನಗುದುರೆಯುಂ ಪೂಜಿಸಿ ಬಳಿಯಗ್ಗಳಿಕೆಯ ಬಿರುದಂ ಬರೆದೋಲೆಯುಂ ಪಣೆಗೆ ಬಿಗಿದು—“ನಿರಾಕುಳಂ ಚಪ್ಪನ್ನದೇಶಂಗಳಂ ಸಂಚರಿಸುತೆ ಕಪ್ಪಕಾಣ್ಕೆಗಳಂ ಕೂಡಿ ಐತರ್ಪುದು” ಎಂದು ಶಿರದೊಳ್ ಮಂತ್ರಾಕ್ಷತೆಯನಿಟ್ಟು ಬಿಟ್ಟಂ. ಆಗಳ್ ಯಜಮಾನಂ—ಈ ಪೊಳ್ತು ಪೋದೊರೆದ ಯಜ್ಞಯಾಶ್ವದ ಬೆಂಬಳಿವೋಗಿ ನೆರಂಗೂಡುವ ನಾಡೆರೆಯರ ಕೊಟ್ಟಜಮಂ ಒಟ್ಟಯಿಸಿಯುಂ, ಬಲ್ಪಿಂ ತಡೆನರಂ ಪೋಣರ್ಕೆಯೊಳ್ ಮರ

ಲ್ಟಿಯುಂ, ಗೆಲ್ಲವೆಣ್ಗೆ ಜಸದ ಪೊಸಚೊಲ್ಲೆಯುಮಂ ಸೂಡಿ ಕೂಡಿವರ್ಪ ಬಲ್ಲಾ ಳ್ತನದ ಗಂಡುಗಲಿಗಳಿರಾ, ಎನ್ನೀ ಕೈವೀಳೆಯುಮಂ ಕೈಕೊಳ್ಳಿಂ ಎಂಬುದುಂ ಅಂತಾನೆಂಬಾಕೆವಾಳರ ಜಂಗುಳಿಯೊಳ್ ನುರ್ಗಿ ಬೀದಿಗೊಂಡು ರಾಯನಿದಿ ರ್ವಂದು ಶತ್ರುಘ್ನಂ—"ಅಂ ಕೈಕೊಳ್ವೆಂ" ಎಂದಂ. ರಾಯುಂ ತನ್ನ ಕಿರುದಮ್ಮನ ಬೀರದ ನುಡಿಗೆ ಸಂತಸಂಗೊಂಡು—ಲೇಸುಲೇಸ್ಸೆ, ಭರತಂ ನಗರಪಾಲಕಂ ನೇರ್ಪಡೆ ಲಕ್ಷ್ಮಣನೆನ್ನ ಊಳಿಗದೊಳಿರೆ ನೀನಲ್ಲದಾವನೀ ಕಜ್ಜದೊಳ್ ಸಾಲ್ವಂ? ಕ್ಷಾತ್ರಧರ್ಮದೊಳಂ ಉಪಾಯಂಗಳೊಳಂ ನೀಂ ಜಾಣನಿರ್ಪನಂ ಪೆರತಾವುದಂ ನಡೆನುಡಿಯುಂ ಪೇಳ್ವೆಂ? ಆದೊಡಂ ಕೇಳ್: ವೊಸೆಗಲ್ಲದೆ ಬರ್ಪ ಪಿರಿಯರುಂ ವಿಪ್ರರುಂ ಸೇವ್ಯರಪ್ಪಿನಂ ಅವರಂ ಕಡೆಗಣ್ಚದಿರ್. ಹರಿಹರರೊಳ್ ಭೇದಮನೆ ಣಿಸದರೊಳ್ ನೀನುಂ ಭೇದಮನೆಣಿಸದಿರ್. ಜೀವನಂ ಪಶುಜೀವನಮೆಂದುಂ, ವ್ಯಾಘ್ರಜೀವನಮೆಂದುಂ, ವ್ಯಾಳಜೀವನಮೆಂದುಂ ಉತ್ತಮಮಧ್ಯಮಾಧಮ ಭೇದದಿಂ ಮೂದೆರನಿರ್ಕುಂ. ಲೋಗರ ಶಿಕ್ಷೆರಕ್ಷೆಗಳೊಳಿವುಗಳ ಜಾಣ್ಮೆಯಿರ್ಕೆ. ರಣದೊಳ್ ನಿರಾಯುಧರಂ ಮೂರ್ಛಿತರಂ ಸಮಂತು ಪಲಾಯಿತರಂ ನೋಯಿಸ ದಿರ್. ಮತ್ತಂ ಪುತ್ತನೇರಿದರಂ ಪುಲ್ಲಂ ಕರ್ಚಿದರಂ ಬಾಯೊಳ್ ಬೆರಲನಿಟ್ಟರಂ ಮುಟ್ಟದಿರ್. ಕವಡುಬಿಜ್ಜೆಯುಂ ಕಾಳೆಗದೊಳ್ಮಾಣ್, ಪೆಣ್ಗೊಲೆಗೆಳಸದಿರ್. ಇಂತು ನಯಂಬಿಡಿದು ಮಾರ್ಮಲೆವರಿರಾಯರಂ ಗೆಲ್ದು ಬಾರ್ಪೆ ಎಂಬುದುಂ ನೆರೆ ಯೊಳೆ ನಿಂದಾಲ್ಪೆಪ ಸೀತಾವರಜಂ ಲಕ್ಷ್ಮೀನಿಧಿ ತಾಂ ಮುಗುಳ್ನಗೆಯಿಂ ರಘುಪ್ರ ವರಂಗೆ—ಭಾವ, ಇಂತುಟು ಗಡ ಕ್ಷಾತ್ರಧರ್ಮರಹಸ್ಯಂ! ನೀಮೆ ಪಂಡಿತರ್ಪೆಸೆ? ಮುನ್ನಮಾತಾಟಕೆಯುಂ ಕೊಲ್ವಂದೀ ಅರಿವೆತ್ತವೋದುದೊ? ಭಾರ್ಗವನೊಳ್ ಪೋಣರಿರೆ? ವಾಲಿಯೊಳಂದೇತರ ಕಾಳೆಗಮಾಯ್ತೊ? ನಿಮ್ಮಯ್ಯಂ ತಾಂಡವನ ನೇನೆಂದು ಕೊಂದನೊ? ಈ ಲಕ್ಷ್ಮಣಂ ಶೂರ್ಪಣಖೆಯು ಕಿವಿಮೂಗುಗಳ ಜಿಸು ಗೆಯುಂ ಕೀಳನೆ? ಇಂತಿದು ಬಳಿವಿರುದಲ್ತೆ? ಈಗಳ್ ಶತ್ರುಘ್ನನುಮಂತಿರೆ ಧರ್ಮಮಂ ಬಳಿಸಲ್ವಂ ಎಂದು ವಿನೋದಮಾಗೆ ಹಾಸ್ಯಮನಾಡಿದಂ. ಅದರ್ಕೆ ರಾಘವಂ—ಅಃ! ಮೈದನ, ನೀನರಿಯುಯ್. ಈ ರಹಸ್ಯಮಂ ನಿನ್ನ ಬಿಲ್ಲೋಜ ನಪ್ಪ ಶತಧೃತಿಯಂ ಕೇಳೆಂದುಮಾರ್ನುಡಿದಂ. ಬಳಿಕ್ಕೆ ಲವಣಾಂತಕಂ ರಾಘ ವಾಧ್ಯಗ್ರಜರಂ ಪೊಡೆಮಟ್ಟುಂ, ಮಾತೆವಿರ್ಗೆರಗಿಯುಂ ಗುರುಗಳಂ ಕುಂಬಿಟ್ಟುಂ, ಪಿರಿಯರಂ ತುಳಿಲ್ಗೆಯ್ದುಂ, ಪರಕೆಗೊಂಡು ಯಜ್ಞಿಯಾಶ್ವದ ಬೆಂಬಳಿವಿಡಿದು

ಸುಮತಿವೆರಸು ಪೊರಮಟ್ಟಂ. ಆ ಪೊೞ್ತಿಂಗೆ ಹನುಮತ್ಸುಗ್ರೀವನೀಲನಳಜಾಂಬವದಾದಿಗಳಪ್ಪ ಕಪಿವೀರರುಂ ಕೋತಿವಡೆಯನೊಡಗೊಂಡು ನಾಯಕನ ಮೊಗ್ಗಾವಲ್ಗೆಂದು ತಳರ್ದರ್. ಮತ್ತಂ ಪ್ರತಾಪಾಗ್ರ್ಯ ನೀಲರತ್ನ ರಿಪುತಾಪೋಗ್ರಾಶ್ವ ಲಕ್ಷ್ಮೀ ನಿಧಿಗಳೆಂಬ ಪಂಚಮಹಾರಥಿಕರ್ ಪ್ರತ್ಯಕ್ಷೌಹಿಣೀ ಸೇನಾಸಮೇತರ್ ನಡೆದರ್. ಮತ್ತಮಾವೇಳೆಯೊಳ್ ಭರತಕುಮಾರಂ ಕಿರುವರೆಯದ ಪುಷ್ಕಲಂ ತಾನುಂ ಕಿರಿಯಯ್ಯನ ಬೆಂಬಲಕ್ಕೆಂದು ಬೆಂಬತ್ತಿದಂ.

ಆಗಳ್ ಶತ್ರುಘ್ನನಾಜ್ಞೆಯಿಂ ಪುಷ್ಕಲನ ನಿಯಮದಿಂ ಪಡೆವಳರ ಪದ್ಧತಿಯಿಂ ನಡೆವ ಸೇನೆಯು ಕಾಪಿಂ ಪೋಪ ಮಖತುರಗದ ಬೆನ್ನೊಳೆ ಪೆರ್ಗಾಳೆಯ ಪಳಹದ ಕೊಳಲ ತಂಬಟೆಯ ಡೌಡೆಯ ಮವುರಿಯ ಭೇರಿಯ ಭೂರಿನಿನಾದಂ ದೆಸೆಮುಟ್ಟೆ, ಸೇನಾಪದಘಾತಸಂಜಾತರೇಣುಜಾತಮಂಬರಮಂ ಮುಸುಂಕೆ, ಎತ್ತಿದ ಸತ್ತಿಗೆಯ ಡಾಳಿಸುವ ಚಾಮರದ ಮಿಳಿರ್ವ ಕೇತನದ ಪಂತಿಯೆತ್ತಂ ನಿಮಿರ್ದಿರೆ, ಕಿಳಿರ್ವ ಹಯಂಗಳ ಗೀಳಿಡುವಾನೆಗಳ ಕಿರಿಗಿರಿವ ಪೊಂದೇರ್ಗಳ ಓರಣಮಿಂಬಿಡಿದಿರೆ, ಕಡಿತಲೆಯ ಸುರಗಿಯ ಕೊಂತದ ಸೂಳದ ಬಿಲ್ಲ ಕಣೆಯ ಮೂಡಿಗೆಯ ಭಟರ ದೆಕ್ಕಾಳಂ ನೇರಮಾಗೆ, ಬಿಂಕದ ಬೀರರುಗ್ಗಡಣೆ ಪಿರಿದಾಗೆ, ಜೋದರ ಮಾವತಿಗರ ಗೋಳಾಯಿಲರ ತೇರಾಳ್ಗಳ ಕಾಲಾಳ್ಗಳ ಪಡೆವಳರ ಆಕೆವಾಳರ ಗಡಣಂ ನೆರೆದಿರೆ ಲವಣಾಂತಕನ ಕಟ್ಟಾಣತಿಯಿಂ ಪಡೆ ಮೂಡದೆಸೆವಿಡಿದು ವಾಜಿಯ ಕಾಪಿಂ ನಿಚ್ಚವಯಣದೊಳ್ ದೇಶದೇಶಂಗಳಂ ಕಳಿಕಳಿದು ಪೋಗುತುಮಿರ್ದುದು.

---

೭. ಕಾಮಾಕ್ಷೀದರ್ಶನಂ.

ಈ ಮಾಳ್ಕೆಯಿಂ ಯಜ್ಞೆಯಾಶ್ವಂ ನಾನಾವಿಷಯಂಗಳೊಳ್ ತೊಳತೊಳಲ್ದು ಬರೆವರೆ ನಾಡೊಡೆಯರ್ ಪಲಂಬರ್ ಶ್ರೀರಾಮನ ಕಟ್ಟಾಳ್ತನದ ಬಲ್ಪಿನ ಬಳಿಸಿರುದನೋದಿಯುಂ, ಹಯದ ಬೆಂಬಲದ ಬಗ್ಗೈಬಂಟರಂ ಕಂಡುಂ ಕೈಮುಗಿದು ಶತ್ರುಘ್ನನಂ ಮರೆವೊಕ್ಕು ಕಪ್ಪಮನೊಪ್ಪಿಸಿ ತಾಮುಂ ಪಡೆವೆರಸಿ ಕುದುರೆಯ ಕಾವಲ್ಗೊದವಿ ಪೋದರ್. ಆ ಕಾಲದೊಳ್—

ಅರಂ ತೋಡುಂಗಿರದೆ ತನ್ನ ಗರಗರಿಕೆಯೆ ಸೊಮ್ಮಿನೇಳ್ಗೆಯಿಂ ಪದುಳಮಿರಸಾಳ್ವ ಬಸಂತರಾಯನ ಸೊರ್ಕು ಸೋರ್ದು ಬಯಲಪ್ಪಿನೆಗಂ ದಾಳಿಗೆಯ್ವಾ

ತನ ನಾಡಂ ಬೀಡಂ ಪಡಲಿಡಿಸಿ ತಾನುಂ ಲವಣಾಂತಕಂಗೆ ನೆರವಾದನೆನೆ ಗ್ರೀಷ್ಮರಾಜಂ ತಲೆದೋರಿದಂ. ಕಳಿವೂವಳಿಯೆ ನೀರುಂ ಬತ್ತೆ ಕೆಸರುಂ ಪಾವ ಸೆಯುಂ ಉಳಿಯೆ ಕೊಳಂಗಳ್ ನಿಸ್ಸಾರಂಗಳಾದುವು. ಈ ಆಪದೆಸೆಯುಂ ಕಂಡು ಬಕಂಗಳ್ ಮುಂಗಾಣದೆ ಬೆಳರ್ತು ತಮ್ಮ ನಂಟುವೊರೆಯ ಮೀಂಗಳ್ಗೆ ಮುಂತೆ ಬಟ್ಟೆಯಾವುದೆಂದಾವಗಮುಗಲದೆ ಚಿಂತಾಪರಂಗಳಾಗಿರ್ಕುಂ. ಪೆರ್ದೊರೆ ಕಾಲ್ದೊರೆಯುಂ, ಕಿರುದೊರೆ ಪುಳಿಲ್ದೊರೆಯುಮಾಯ್ತು. ನಾಡುಂ ಕಾಡುಂ ಸೂಡಿಂ ಸೀಕರಿವೋಯ್ತು. ಕಲ್ ಬೆಂದ ಸುಣ್ಣಮಾಯ್ತು. ಮಳಲ್ ಮರಿಗಡ ಲೆಯ ಮುಮ್ಮರಿಯಾಯ್ತು. ವನಮೃಗಂಗಳ್ ಬಯಲ್ದೊರೆಗೆ ಮರುಳ್ಗೊಂಡುವು. ಪಕ್ಕಿಗಳ ಗಳದೆ ಭಿನ್ನಸ್ವರಂ ಪುಟ್ಟಿತ್ತು. ಬಟ್ಟೆಗರ್ ತೃಷ್ಣೆಗೊಂಡು ಅರವಟ್ಟಿಗೆಯ ನಾರಯ್ಯುತಿರ್ದರ್. ಬನಗಾಳಿ ಬೆಟ್ಟನೆ ತೀಡುತಿರ್ದುದು.

ಇಂತು ಬಂದ ಕಡುವೇಸಗೆಯೊಳಂ ತುರಂಗಂ ಮುಂತೆ ಮುಂತೆ ಪೋಗೆ ಅದೊಂದೆಡೆಯೊಳ್ ಚಾಳ ಪೇರೋಡಲನುಗಿದು ಪೊರದೆಗೆದ ಬೆಳ್ವಕ್ಕದ ತುಂಬು ವೆರೆಗಳ ನೊಟ್ಟಿಸಿ ಮೂಸೆಯೊಳಿಟ್ಟು ತಿದಿಯೊತ್ತಿ ಕರಗಿಸಿಯುಂ, ಎರೆದುಂ ಸಮೆ ದುದೆಂಬಂತಿರೆ ತಳತಳನೆ ಪೊಳೆವ ಬಿದುಗಲ್ಲ ಸುತ್ತಣ ಪಾದವಟ್ಟಿಗೆಯೊಳಗೆ ಏರಿಯ ನಿಡುಮರಂಗಳಿರುಂಬಿನ ಕಳ್ತಲೆಯನೊಳಗೊಂಡು ಬೆಳರ್ವಣ್ಣ ಪೊಸ ಕಡಾಯದೊಳ್ ತುಂಬಿದ ನೀಲಿಯ ತನಿರಸಮೆಂಬಂತಿರೆ ಕಳಿಂದಜೆಯ ಕರ್ಮ ಡುವಿನ ಗುಣ್ಪಂ ತೋರ್ಪ ತಿಳಿನೀರಿಂ, ತುಂಬಿ ತುಳುಂಕುವ ತಿಳಿನೀರ್ಗೆಡೆಯೆಡೆ ಯೊಳ್ ಕಾರಿರುಳಾಗಸದೊಳಿಡಿಕಿರಿದ ತಾರೆಗಳ ಪಾಂಗಿಂ ರಯ್ಯಮೊಪ್ಪುವ ಬೆಳ್ದಾ ವರೆಗಳಿಂ, ಬಂಡೊಸರ್ವ ಪುಂಡರೀಕಮುಂ ಬಳಿಗೊಂಡೈತಂದು ಕಮಳೆಯ ಮೊಗದ ಕತ್ತುರಿಬೊಟ್ಟನನುಕರಿಸಿ ಮುಸುರಿದ ಮರಿದುಂಬಿಗಳಿಂ, ಅಲರ್ವ ಡಿಯಿಂ ಪೊರೆದ ಪರಮೆವರಿಯುಂ ಕೋಶದೆಳಬಿಳ್ತುಗೆತ್ತು ಕರ್ದುಂಕಲಿದವ್ವಳಿ ಸುವ ಬಾಲಹಂಸಂಗಳಿಂ, ಬೆಳ್ವಕ್ಕಿಗಳ ಜಿಗುರ್ಪಿಂ ನೀರೊಳೊಳಗೊಳಗೆ ಪೈಗ ರೆವ ಮೀಂಗಳಿಂ, ಮೀಂಗಳ ನೀರ್ವಕ್ಕಿಗಳ ಕಿರುಗಾಳಿಯುಲಿಪದಿಂ ಕಾಲ್ವರಿವ ತೆರೆಯಿಂ ಕಣ್ಗೊಳಿಪುದೊಂದು ಕೊಳಂ ಪಗಲ್ವೆಣ್ಣ ಕೈಪಿಡಿಯೆಂಬಂತಿರೆ ಸೊಗಯಿ ಸಿದತ್ತು.

ಇಂತು ಸುಗ್ಗಿಯೆನ್ನದೆ ಬೇಸಗೆಯೆನ್ನದೆ ತುಂಬಿ ಪೊನಲ್ವರಿವ ಪೊಕ್ಕರ ಣೆಯುಂ ಬಳಿಗೊಂಡೊಂದು ಬನಂ ವನಲಕ್ಷ್ಮಿಯ ಚೆಂಬೊಗರ ಕರತಳಮನನುಕ

ರಿಪೆಳದಳಿರಿಂ ತೀವಿ ತೋರ್ಪ ಚೆನ್ನಸುಗೆಯಿಂ, ಬಸಂತಂ ಪೊಲ್ದು ಸಮಕಟ್ಟಿದ ಮಲಂಗೆಂಬಂತಿರೆ ಅಡಿವಿಡಿದು ಮುಡಿವರೆಗಂ ಬಲ್ವಣ್ಗಳಿಂ ತುರುಗಿ ತೋರ್ಪ ಬಕ್ಕೆವಲಸಿಂ, ದಿನಲಕ್ಷ್ಮಿ ನಡೆಯಿಂ ಬಳಲ್ದು ಪಯಣಂಬರ್ಪ ತನ್ನಿನಿಯನಪ್ಪಿನನ ನೀರಳ್ಕೆಗೆಂದೆತ್ತಿ ನೀಡಿದ ತಣ್ಣೀರ ಪೊಂಗಳಸಂಗಳೆನೆ ಇಂಬಿಡಿದ ತೆಂಗಾಯ್ಗಳಿಂ, ಬಾನುದ್ದಂ ಬೆಳೆದೋರಣಮಾಗಿ ತೋರ್ಪ ತೆಂಗಿಂ, ಬನಸಿರಿಯ ಸಿರಿಮೊಗದೊಳೊಗೆದ ಬೆಳ್ನಗೆಯೊಳ್ ಪೊರತೋರ್ಪ ಬಾಯ ಸುಲಿಪಲ್ಲನನುಕರಿಸಿ ಬಿಳ್ತಿನೊತ್ತರಂಬಿಡಿದರೆವಿರಿದ ದಾಡಿಮದಿಂ, ಮಧುಲಕ್ಷ್ಮಿಯ ಕೇಶಪಾಶಮೆನೆ ಮಡಲ್ತು ಕರಂಗಿ ಕಳ್ತಲಿಸಿದ ತಮಾಲದಿಂ, ಗ್ರೀಷ್ಮರಾಜನ ಪೇರುಕ್ಕೆವದೊಳ್ ಪೊತ್ತಿಸಿದ ದೀವಿಗೆಗಂಬಮೆಂಬಂತಿರೆ ಪೂವಿಂ ಕರಂ ಚೆಲ್ವಾದ ಸಂಪಗೆಯಿಂ, ಮತ್ತಂ ಪೂತ ಮಂದಾರದಿಂ, ಉಳ್ಳಲರ್ದ ಸುರಹೊನ್ನೆಯಿಂ, ನನೆಯೇರಿದ ಸುರಯಿಯಿಂ, ಬಕುಳದಿಂ, ಸಿರಿಸದಿಂ, ಪುನ್ನಾಗದಿಂ ಸೊಗಯಿಸಿ ತೋರ್ಕುಂ. ಕೊನೆಮಿಡಿಕಸುಗಾಯ್ದೋರೆವಣ್‍ತನಿವಣ್ಗಳಿಲ್ಲದ ಮರಂಗಳಿಲ್ಲಾ ಬನದೊಳ್. ಮುಗ್ಗದ ಮುಗಿಯದ ಬಾಡದ ನರುಗದ ಸುರುಂಟದ ಪೂವೆ ಬನದೊಳಳುಂಬಂ. ಬಿರಿದ ಮುಗುಳ ಕಂಪಿಂ ಬೆರೆದು ತನಿವಣ್ಗಳನರುವಿಂ ಪೊರೆದುಗುವ ಸೊನೆಯ ಸೌಸವದಿಂ ನೆರೆದದಿರ್ಗಂತಿಯುಂ ತಟ್ಟಿ ಮಾಲತಿಯುಂ ಮುಟ್ಟಿ, ಮಾಧವಿಯುಂ ಕಿಟ್ಟಿ ಬನಗಾಳಿ ತಣ್ಣನೆ ತೀಡುಗುಂ. ನಿರಿಗಂಗಳ ಪೊದೆಯಿಂ ಪುದಿದ ಬನಗಳ್ತಲೆಯೆ ಕಾರ ಕರ್ಮುಗಿಲೊಡ್ಡಾಗೆ, ಇದಿರ್ಗಾಳಿಗೊಲೆವ ಮಾಮರನ ಚೆಂದಳಿರ ನುಣ್ಬೊಗರೆ ಬಳ್ಳಿಮಿಂಚಾಗೆ, ಅಡಿಗಡಿಗೆ ಬಗ್ಗಿಪ ಮೇಳಂಬದ ಮೊರೆಯೆ ಗುಡುಗಿನ ಬಲ್ದನಿಯಾಗೆ ಪೂದೊಂಗಲತ್ತಣಿಂ ಎಡೆವಿಡದೆ ಪನಿವತನಿಜೇನೆ ಸೋನೆಯಾನೆ ಕಾರ್ಗೆತ್ತು ಸೋಗೆನವಿಲ್ಗಳಲ್ಲಿ ನಾಟ್ಯಮನಾಡುತಿರ್ಕುಂ.

ಈ ತೆರದಿಂ ಮಾಧವನೋಲಗಸಾಲೆಯೆಂಬಂತಿರೆ ಕರಂ ಸಿಂಗರಂಬೆತ್ತ ತೋಂಟದೊತ್ತಿನೊಳ್ ಕಂಕಣವಲಯುಂಗಳಿಂ ಮನೋಜ್ಞಮಪ್ಪ ಸುಮೇರುವೆಂತಂತು ಕಿಸುವೊನ್ನ ಪಿಂಜರಿಯ ಚೆಂದವಗಲ್ಲ ಕೋಂಟೆಯ ಮೂವಳಸಿನಗಳಿಂದೊಳಗೆ ಕರ್ಮಣಿಯ ನೆಲೆಗಟ್ಟಿಂ, ಪಳಿಕಿನ ಭಿತ್ತಿಯಿಂ, ಬಜ್ಜರದ ಜಂತೆಯಿಂ, ರನ್ನದೊಳ್ಗಂಬದಿಂ, ಮುತ್ತಿನ ಜಲ್ಲರಿಯಿಂ, ಪುಷ್ಯರಾಗದ ಪೊಸಂತಿಲಿಂ, ಗೋಮೇಧಿಕದ ದಾರವಂದದಿಂ, ಪವಳದ ಪಡಿಯಿಂ, ಮರಕತದ ಕಳಸದಿಂ ತಾರಗೆವಟ್ಟೆ ಮುಟ್ಟೆ ನಿಗುರ್ದು ಸೈಪಿನಾಗರಂಬೋಲ್ ಮಣಿಸತ್ತಿಗೆಯ ಮೊಗಮಂಟಪದ ಬಣ್ಣ

ವಟ್ಟಿಗೆಯು ಅವಳಿಗುಳಿಯು ನಂದ್ಯಾವರ್ತದ ತೋರಣದ ಲೋವೆಯು ಮದನ ಗೈಯು ಬಾಗಿಲ್ವಾಡದ ಸಿಂಗರದೊಂದು ದೇಗುಲಂ ಕಣ್ಗೆಡ್ಡವಾಗಿ ರಂಜಿಕುಂ.

ಇಂತು ಸೊಂಪಿನ ಪೆಂಪಿನ ಅಲಂಪಿನ ಚೊಕ್ಕಳದ ನೀರ್ದಾಣಮಂ ಬನಮಂ, ದೇಗುಲಮಂ ಕಂಡು ಶತ್ರುಹಂ ಅಚ್ಚರಿವಟ್ಟು ತನ್ನ ಮುತ್ತಮಂತುಗೆ— ಅಯ್ಯ ಸುಮತಿ, ಕಂಡೆಯು ಈಕಟ್ಟುರ್ಬಿನ ಬೇಸಗೆಯು ಬೇಗೆಂಪೊಳಂ ಬತ್ತದೆ ತುಂಬಿ ಬೆಳ್ಳಂಬರಿವ ಬೆಂಚೆಯುಂ? ಓ! ನೋಳ್ಪೊಡೀಬನಂ ಸುರನಂದನಮನೇ ಳಿಕುಂ; ಚೋಜಿಗಮಲ್ತೇ? ಇದೆಕೊಳಾತೋರ್ಪುದಾತೋರ್ಪುದೊಂದು ದೇಗುಲಂ ಬೆಳ್ಳಿವೆಟ್ಟನ ಪಾಂಗಿನಿಂ. ಆವದೇವತೆಯಿರ್ಕೆಯೊ? ಎಂದು ಬೆಸಗೊಳಲೊಡಂ ಮಂತ್ರಿಪಂ— ಇವೆಲ್ಲಂ ಆತೋರ್ಪಪೊಳಲ್ಗೊಡೆಯಂ ಸುಮದಂಗೊಲ್ದು ಬಂದೀ ದೇಗುಲದೊಳ್ ನೆಲೆಗೊಂಡ ಕಾಮಾಕ್ಷೀದೇವಿಯ ಪ್ಯೆಮೆಯ್ಸೆ! ಅದರಿನೀಪು ಣ್ಯಾರೂಪಿಣಿಯ ದರ್ಶನಂಗೈದು ಬಲಗೊಂಡೊಡೆಮಗೆಲ್ಲಂ ಗೆಲ್ಲಮೆಂದಂ. ಅನುಡಿಗೆ ಶತ್ರುಘ್ನಂ—ಅಂತೇಂ ಸುಮದನಾವನಾಡೊಡೆಯಂ, ಏಕೆ ದೇವಿಯಂ ಮೆಚ್ಚಿಸಿದಂ ಏವಂದಳಾರವಳ್ ಆಂ ತಿಳಿವಂತು ಜಿತ್ತರಿಸಯ್ ಎಂದಂ. ಅದರ್ಕೆಸಚಿವಂ.—

ಆಲಿಸೈ, ಈ ಭೂಕಾಂತೆಗೆ ಲಲಾಮಮೆಂಬಂತಿರೆ ಈ ನಂದನಕೆ ಕೆಲಸೊ ಳೊಪ್ಪುವುದು ಅಹಿಚ್ಛತ್ರಪುರಂ. ಈನಾಡಂ ಸುಮದನೆಂಬೊರ್ವಸರಿಕೆಯ ರಾಯ ನಾಳ್ವಂ. ಮುನ್ನವೊರ್ಮೆ ತನ್ನ ಪೊಳಲನರಿರಾಜರ್ ಸೆರೆಗೊಳಲೊಡಮುದುವೆ ವೈರಾಗ್ಯಮಂ ಪುಟ್ಟಿಸೆ ಹತಭಾಗ್ಯಂ ವನಂಬೊಕ್ಕು ಕಾಮಾಕ್ಷಿಯನೊಲಿಸಲ್ಕೆಂದು ತಪದೊಳ್ನಿಂದಂ. ತರಗೆಲೆಯುಂಡು ಮೂರುಂಬರಿಸಂ, ಗಾಳಿಯುನುಂಡು ಮೂರುಂ ಬರಿಸಂ, ನಿರಾಹಾರಂ ಮೂರುಂ ಬರಿಸಂ ಕಟ್ಟುಗ್ರತಪಂಗೆಯ್ದಂ. ಇಂತು ಪನ್ನೆ ರಡುಕಾಲಂಬರಂ ತಪದೊಳಿರ್ಪುದುಂ ಕಡಲ್ ಕುದಿವನ್ನಂ ವನಂ ಬೇವನ್ನಂ ಆಶಾಧಿಪರ್ ಗಂಟುಗೆಂಟೆನೊಳೋಸರಿಪನ್ನಂ ತಪಃಪ್ರಭಾವಂ ದೆಸೆದೆಸೆಯೊಳ್ ಪಸಗೆ ಪುರುಡಿಂ ಮೆಯ್ಯುಣ್ಣಂ ಕೀಳ್ಪಗೆಯಿಂ ತಪೋವಿಘ್ನಮಂ ನೆಗಳ್ಚಲೆಂದು ತರಿಸಂದು ಕಾವನಂ ಬರವೇಳ್ದು ಅರಾಯನ ತಪಕೆಂತುಂ ಬನ್ನಮಂ ಮಾಳ್ಪು ದೆಂದಾಣತಿಯಿತ್ತಂ. ನಾಕಲೋಕದ ದೇವರ್ಕಳ್ಗಮೀನರಲೋಕದ ತವಸಿಗಳ್ಗ ಮಾವವೊರೆಯೊಳ್ ಪಗೆಯೋ? ನಾಡಿಗರ್ ದಿನದಿನಂ ಬೇಳ್ಪ ಹವ್ಯಮ ನುಂಡುಂಡು ಸವಿಗೊಂಡ ಬೋಳೆಯರ್ ಜೋಗವಟ್ಟಿಯೊಳ್ ನಡೆವರ್ಗೆ ನಿರ್ಸೆರಂ

ತಪೆವರ್ಪರ್. ಆಗಳ್ ಮದನಂ ಬಸಂತಂ ಮುಂತಪ್ಪ ತನ್ನ ಪಡೆವಳರಂ ಉರ್ವಶಿ ಮುಂತಪ್ಪ ಅಚ್ಚರಸಿಯರ ಪೆಣ್ಬಡೆಯುಂ ನೆರಪಿ ಎನಸುಂ ಪೊಳ್ತು ಕಾದಿಯುಂ ಗೆಲಲಾರದೆ ರಾಯನ ಕದಲದ ಕಟ್ಬಾಯಸದ ತಪದ ಬಲ್ಮೆಯುಂ ಕಂಡು ದೂರದೆ ಕೈಮುಗಿದು ಬೆಂಗೊಟ್ಟೋಡಿದಂ.

ಇತ್ತಲಿಂತಾಗೆ ರಾಯನ ನಿಚ್ಚಟದ ಭಕ್ತಿಗೊಲ್ದು ಕೆಲವಾನುಂ ದಿನಕೆ ದೇವಿ ಮೈದೋರಿದಳ್. ಇಂತು ತನ್ನ ಕಣ್ಣೆದಿರೊಳ್ ಮೂರ್ತಿಗೊಂಡ ಆದಿಮಾಯೆಯುಂ ಕಣ್ಣಾರೆ ಕಂಡಾನಂದಾಬ್ಧಿಯೊಳೋಲಾಡಿಯುಂ, ಪೊಗಳ್ದುಂ ಎರಗಿಯುಂ ದೈನ್ಯದಿಂ—ಎಲೆ ಮಾತೆ, ನೀಂ ಭಕ್ತವತ್ಸಲೆ ಸಾಜಂ, ಧ್ಯಾನಗವ್ಯೆ ಸಾಜಂ, ಸಕಲೇಷ್ಟಪ್ರದಾಯಿನಿ ಸಾಜಂ; ಆದಿಶಕ್ತಿಯೆನಿಸಿರ್ದುಂ ಮೃಗಗವಲಿಂ ಹರಿಹರ ಬ್ರಹ್ಮರ್ಕಳಂ ಮೋಹಿಸಿದ ನಿನ್ನೀ ಮಾಯಾಪಿಸೋದಮನಾರರಿಗುಂ? ಎನ್ನನುದ್ಧರಿಸೌ ಎಂದು ಬಗೆವಗೆಯೊಳ್ ತುತಿಯಿಸುತುಮಡಿಗೆರಗಿದಂ.

ಆಗಳಾತನಂ ನಾಲ್ಕು ಕೈಗಳಿನೆತ್ತಿ ಮಗನೆ, ಪಿರಿದಾಯುಸಂಗೊಂಡೈ, ನಿನ್ನಿಷ್ಟಾರ್ಥಂ ಸಿದ್ಧಿಪುದು ದಿಟಂ ಎಂದು ನುಡಿವ ಶುಭರೂಪಿಣಿಯುಂ ಕಾಮಾಕ್ಷಿಯುಂ—ನಿನ್ನಂ ಕಂಡೆನಗೆ ಪೆರತಾವುದೊ ಇಷ್ಟಂ ಎಂದು ಬಿನ್ನಯಿಸಿದಂ; ಈ ನುಡಿಗೆ ದೇವಿ-ವತ್ಸಾ, ಸೊಗಂ ಬಾಳ್ಕೆ, ಶತ್ರುಹೃತಮಾದ ನಾಡುಂ ಸಕಲ ಸಂಪದಮುಂ ನಿನ್ನೊಡಮೆಯೊಳಕ್ಕೆ ಪೋಗೆಂಬುದುಂ ಸುಮದರಾಜಂ—ಅಬ್ಬೆ, ನಿನ್ನಡಿಗಳನಾನುಳಿದು ಪೋಗಲ್ಕುಂಟೆ? ರಾಜ್ಯದಿನೇಂ ಭಾಗ್ಯದಿನೇಂ? ಅನೊಲ್ಲೆನೀಕ್ಷಣಭಂಗುರದ ಭೋಗಂಗಳಂ, ನೀನೊಲ್ವುದು ನಿಕ್ಕುವಮಪ್ಪೊಡೆ ಎನಗಾಸ್ಥಿರ ಪದವಿಯುಂ ತೋರಿಸೌ ಎಂದು ಬೇಡಿದಂ. ಆಗಳಾರಾಯನ ಬಿನ್ನಪಕ್ಕೆ ಕಾಮಾಕ್ಷಿ – ಅಂತಾಗದಯ್; ನಿನಗಿಹದ ಭೋಗಮಿನ್ನುಂ ತೀರಿತಿಲ್ಲದರಿನದು ಸಮೆವನ್ನಂ ರಾಜ್ಯಪದವಿಯೊಳೆ ಇರ್ದು ಬಾಳ್; ಮೇಣೆಂದಿಂಗೆ ಶ್ರೀರಾಮನ ಜನ್ನದ ತುರಗಂ ನಾಡಂ ಪುಗುತರ್ಪುದಂದೆ ಧರಣಿಯನಾತನ ಚರಣಕ್ಕರ್ಪಿಸಿ ನೀನಾತನ ಸೇವೆಯೊಳಿರ್ದೊಡೆ ಮುಂತೆ ಲೇಸಕ್ಕುಂ; ಅನ್ನೆಬರಂ ನಿನಗಂ ಪೊಳಲ್ಗಂ ರಕ್ಷೆಯಿರ್ಪಂತಾಂ ನಿನ್ನ ನಾಡೊಳ್ ನಿಲ್ವೆನೆಂದನುಗ್ರಹಿಸಿ ಮೈಗರೆದಳ್.

ಅಂತು ತನಗಾಣತಿಯಿತ್ತು ಮಾಯವಾದ ಆದಿಮಾಯೆಯುಡಿಗಳಂ ನೆನೆಯುತೆ ತಪೋವನದತ್ತಣಿಂ ತಳರ್ದು ಪುರಕ್ಕೈತಂದು ಪಗೆರಾಯರನೆಲ್ಲ

ಟ್ಟಿಯುಂ, ತಾನರಸುಗೆಯ್ಯುತುಮಿೀಗಳುಂ ನಿಮ್ಮಾಗಮನಮಂ ಪಾರುತು ಮಿರ್ದಪಂ.

ಅಂತು ರಾಯಂ ತನಗೊಲ್ದ ಕಾಮಾಕ್ಷೀದೇವಿಗೆಂದೇರ್ಪಡಿಸಿದ ದೇಗುಲ ಮೈಸೆ? ಆಗಳುಂ ತನ್ನಂ ಮರೆವುಗುವರಂ ಕಾವಮ್ಮೆಮೆವೆತ್ತು ಈ ದೇವಾಗಾರದೊಳ್ನೆಲಸಿರ್ಪಳೆಂದು ಸುಮದರಾಜಚರಿತಮಂ ಸಮಂತು ಕಾಮಾಕ್ಷೀಮಾಹಾತ್ಮ್ಯೆಯಂ ಶತ್ರುಘ್ನಂಗೆ ಮಂತ್ರಿಪಂ ಪೇಳ್ದಂ.

ಶತ್ರುಘ್ನನಿಂತೊಂದು ಮೈಮೆಯಂ ಕೇಳ್ದು ಸಂತುಷ್ಟನಾಗಿ ಮಂತ್ರಿವೆರಸು ತಾಂ ದೇವೀದರ್ಶನಾರ್ಥಂ ದೇಗುಲಮನೊಳವೊಕ್ಕು ಕಾಮಾಕ್ಷಿಯಂ ಕಂಡು ಪೊಡೆಮಟ್ಟು ಪ್ರಾರ್ಥಿಸುತಿರ್ದಂ.

ಅನ್ನೆಗಮತ್ತಲ್ ಯಥೇಷ್ಟಂ ಪೋಪ ಜನ್ನಗುದುರೆ ಮುಂತೆಸೆವ ಅಹಿಚ್ಛತ್ರ ಪುರಮಂ ಪುಗುತರ್ಪುದುಂ ನಗರಪಾಲಕರ್ಪಿಡಿದು ರಾಯಂಗೊಪ್ಪಿಸಿದರ್. ರಾಯಂ ಹಯದ ಪಣೆಯಲಿಖಿತಮನೋದಿಸಿ ಇಂದಿಂಗೆ ಪಾವನನಾದೆನೆಂದು ತರಿಸಂದು ಶತ್ರುಘ್ನನಂ ಬರಿಸಿ ತನ್ನ ಪೊಳಲಂ ರಾಘವನ ಪೆಸರೊಳರ್ಪಿಸಿ ಆತನ ಸೇವೆಯ ಬಗೆಯಿಂ ಸೇನಾಸಮೇತಂ ಲವಣಾಂತಕನೊಡನೆ ಪೊರಮಟ್ಟಂ. ರಾಘವಾನುಜನುಂ ಆತನ ಕುಮಾರಂಗೆ ಪಟ್ಟಮಂ ಕಟ್ಟಿ ರಾಜ್ಯಪದದೊಳಿರಿಸಿ ಕಾಣ್ಕೆಗೊಂಡು ಕುದುರೆಯಂ ಬೆಂಬತ್ತಿ ಮುಂ ತೆರಳ್ದಂ.

---

೮. ಚ್ಯವನೋಪಾಖ್ಯಾನಂ.

ಇಂತು ಶತ್ರುಹಂ ಅಹಿಚ್ಛತ್ರಪುರವರದ ರಾಯನ ಮನ್ನಣೆಯ ಬಿರ್ದಂ ಕೈಕೊಂಡು ಮೂವಗಲಿರ್ದು ಬಳಿಕ್ಕಮಾತನನೊಡಂಗೊಂಡು ತನ್ನಂಕೆಯ ದಳಂಬೆರಸು ವಾಜಿಯ ಬೆನ್ನೊಳೆ ನಡೆದು ಪಲವುಂ ನಾಳ್ಕಳಂ ಕಳಿಕಳಿದು ಪೋಗೆ ಮುಂತೆ—

ಭೂರಮೆಯ ನೇವಾಳಮೆಂಬಿನಂ ಪೊನಲ್ವರಿವ ಪಯೋಷ್ಣೀನದಿಯ ಕುಲದೊಳಗ್ಗಿಮೊಗರ್ಗೆ ಬಾಣಸುಗೆಯ್ದು ನಿಚ್ಚಮುಯ್ವ ಜನ್ನದಗ್ಗಿಯ ಬೀದಿಯೆನೆ ಮುಗಿಲುದ್ದಮೊಂದಿದ ಕರ್ವೊಗೆಯಿಂ, ಅಗ್ಗಿಗೊಂಡದೊಳ್ ಪೊತ್ತುವ ನರುನೆಯ್ಯ ಬಲಿಗೂಳ ಸವುದೆಯ ಕಮರಿಂ ಪೊರೆದೆತ್ತಂ ತೀಡುವೆಲರಿಂ, ತೋರ ಮರಗಳ

ಪಾರುಗೊಂಬನೇರಿ ರುಚ್ಯಮಾಗೆ ಗಳಪುವ ಬಾಸೆವಕ್ಕಿಗಳ ಕುಕಿಲ್ವಕೋಗಿಲೆಗಳ ಗಜಬಜದಿಂ, ನಿರ್ವೈರಂ ಕೂಡಿ ಬಾಳ್ವ ಮೃಗಂಗಳ ನೆರವಿಯಿಂ, ಸ್ವೇಚ್ಛೆಯಿಂ ಮೇದು ಮುನಿಗಳ್ಗೀವೊಳ್ತುಂ ಪಾಲನೀವ ಸಗ್ಗದಾವನಿಳಿಕೆಯ್ವಾಶ್ರಮದಾಕಳಿಂ ತೋರ್ಪ ತಪೋವನಮೊಂದು ಕಣ್ಗೊಳಿಸಲೊಡಂ ರಾಜಂ ಸುಮತಿಯೊಳಿದೇಂ ತಪೋವನಂ? ಆವ ಮುನಿಪುಂಗವನಾಶ್ರಮಂ ಪೇಳೆಂದು ಬೆಸಗೊಳ್ವುದುಂ ಸುಮತಿ ಶತ್ರುಹಂಗೆ-ಇಂತೀ ತಪೋವನಮಶ್ವಿನೀದೇವತೆಗಳ್ಗೆ ಸುರಪಂಕ್ತಿಯೊಳೆಡೆಗೆಯ್ದು ಹವಿರ್ಭಾಗಮಂ ಸಲಿಸಿದ ಚ್ಯವನಋಷಿಗಳಾಶ್ರಮಮೆಂದಂ. ಮತ್ತೆ—ಏಗ ಳೆಂತೇಂ, ಆರಾಮುನಿಪಂ, ಜಂಟಿದೇವರ್ಗೆ ಎಂದು ಸುರಪನೊಳ್ ಪಂತಿ ಗೊಟ್ಟಂ; ಆನರಿವಂತು ಬಣ್ಣಿಸಿ ಪೇಳೆಂಬುದುಂ ಆತನಕ್ಕ್ತಿಯಿಂ ಬಿತ್ತರಿಸಿದನ ದೆಂತೆನೆ:—

ಈ ಪೊಡವಿಯೊಳ್ ಪಳನುಡಿವೆಂಡಿರ್ಗೆ ಗಂಡನೆನಿಸಿ ಹೂನ್ಯಕ್ಕೆ ಮೊದಲಿ ಗನಾಗಿ ಸಂದ ಜೋಗಿಗಳ ಪಿರಿಯನೊರ್ವಂ ಭೃಗುವೆಸರ ರಿಸಿಯುಂಟು. ಆತ ನೊರ್ಮೆ ತಾಂ ಮೊಗಸಿದ ಗರವಟ್ಟಕ್ಕೆ ಸವುದೆಗಳಂ ತಿರಿತರ್ಪುಜ್ಜುಗದಿಂ ಬೈಗು ವೊಳ್ತಿಂಗೆ ತನ್ನಾಶ್ರಮದತ್ತಣಿಂ ಪೊರವೋದಂ. ಅಗಳಾಪೊಳ್ತನೆ ಪಾರುತಿರ್ದ ದಮನನೆಂಬೊರ್ವನಳಿರಕ್ಕಸಂ ಉಟಜಮಂ ನೋಳ್ದು ಸೊರ್ಕಿಂ ಪೊಡೆವ ಸಿಡಿಲ ಬಿರುದನಿಯೊಳ್ ಮುನಿಪತ್ನಿಯಾವಳೆತ್ತವೋದಳಾವಳೇನೆಂದು ಗದರಿ ಅತ್ತಮಿತ್ತಂ ಕಾಣದೆ ಕುಂಡದಗ್ನಿಯುಂ ಜರ್ವಿದಂ. ಅಂತಪ್ಪುದುಂ ವೈಶ್ವಾನರಂ ಆ ಮರ್ಬಿನ ಜಂಕಣೆಗೆ ಬೆದರಿ ನಡುಗಿ ಮುನಿಪತ್ನಿಯನಂತರ್ವತ್ನಿಯುಂ ಪತಿಪರಾಯಣೆಯುಂ ತೋರಿಸಲೊಡಂ ಕೂಳಂ ಪತ್ತೆಸಾರ್ದು ನರೆಯ ನಿಡುಜಡೆಯುಂ ಪಿಡಿದೀಳ್ದುಯ್ಯು ತುಮಿರ್ದಂ. ಆಃ! ಮರುಗದರಾರೊ? ಕಟುಕನ ಬಂದಿಯೊಳಾದ ಆವಿನಂತಿರೆ ಮುನಿಕಾಂತೆ ಬೆಳ್ಕರಿಂ ಬಾಯ್ವಿಟ್ಟು ಪಿಂದೆಸೆಯನೆ ನೋಡಿ ನೋಡಿ ಹಾ! ಮುನಿ, ಹಾ! ಗುರು, ಹಾ! ನಾಥ ದಾನವನ ಸೆರೆಯಿಂ ರಕ್ಷಿಸಯ್ ಎಂದು ಕೀರಿದಳ್. ಆ ವೇಳೆಯೊಳಿಂತು ಭಯೋದ್ವಿಗ್ನೆಯುಪ್ಪ ಹದಿಬದೆಯ ಬಸಿರಿಂ ಗಳ್ಕನೆ ಗರ್ಭಂ ಸೋರ್ದು ನೆಲಕಿಳಿಯೆ ಪಿಂಡದಿನೊಂದು ಮೂರ್ತಿಯೊಗೆತಂದು ಮೈವೆತ್ತು ಕೊಲೆ ಗನಂ ತಡೆದು ಪೊಲ್ಲದ ಕಜ್ಜಮನೊಡರ್ಚಿದ ನೀಂ ಪೊತ್ತಿ ಬೂದಿವೊಲಾಗೆಂದು ಶಪಿಸಲೊಡಂ ದಮನಂ ಸುಟ್ಟುರಿದು ಕರಿಮುರಿವೋದಂ. ಅನಂತರಮಾ ಅಬಲೆ ತಾಂ ಪೆತ್ತ ಕಿರುಗೂಸಂ ತೋಳಿನೆತ್ತಿ ಮೆಲ್ಲಮೆಲ್ಲನಾಶ್ರಮಕೆ ನಡೆತಂದಾಗಳೆ ಬಂದ

ಕಾಂತಂಗೆ ತನಗೊದವಿದ ಸಂಕಟಮಂ ಕೇಳಿಸಿದಳ್. ಆಗಳ್ ಮುನಿಪನಗ್ನಿಯು ಗೆಮ್ಮೆಗೆ ಕರುತ್ತುರಿದು ನೀಂ ಪಿರಿತಿನಿಯು ಪಾಂಗಿನಿಂ ಎಲ್ಲಮಂ ತಿಂದು ಸಾವು ದೆಂದು ಬಯ್ದಂ. ಅಂತಾಗೆ ಬಯ್ಗುಳಿಂ ನೊಂದು ಬೆದರ್ಕೆಯಿಂ ನಡುನಡುಗಿಯುಂ ಹುತವಹಂ ರಿಸಿಗೆರಗಿ—ರಕ್ಕೆಯಿರ್ಕೆ, ಮರುಳ ಮಾತಿನ ಭೀತಿಯಿಂ ಮಾತೆಯಂ ತೋರಿದೆನಲ್ಲ ಅಣ್ಮನೊಳ್ ದ್ರೋಹದೆಣಿಕೆಯಿನಲ್ತು; ಎನ್ನಂ ಕಾವಪೊರೆ ತಮ್ಮ ಡಿಯೊಳೆಂದು ಕಣ್ಣೀರಿಡುವುದುಂ ಮುನಿಪಂ—ಅಂತು ಪಿಡಿದುದಂ ಗಿಡಿದುಂ ಮಡಿಯೆನಿಸೆಂದು ಸೈತಿಟ್ಟು ಬೀಳ್ಕೊಟ್ಟಂ. ಇತ್ತಲ್ ಬಸಿರಿಂ ಜಾರಿದಂಗೆ ಚ್ಯವನ ನೆಂದು ಪೆಸರಿಟ್ಟು ಪೊರೆಯುತಿರೆ ಮುದ್ದುಗುವರಂ ಬೆಳ್ವಕ್ಕದೇರುಂಬೆರೆಯಂತೆ ದಿನ ದಿನಕ್ಕೆ ಕಳೆಯೇರಿ ಬೆಳೆಯುತಿರ್ದಂ. ಇಂತಾಬಳವಿಯ ಕಂದಂ ಸಾಂಗವೇದಂಗಳಂ ಕಲ್ತು ಗುರುವಂತಿರೆ ತಾನುಂ ಪರಿಯೊಲ್ಮೆಯಂ ಪಡೆಯಲ್ಕೆಂದು ತಪಂಬೊಕ್ಕು ನೆಲೆಗೊಂಡ ನಿಚ್ಚಟದ ಜಾನದಿಂ ಮೈಮರೆದೊಳನೋಟದೆ ಪಲವುಂ ಬರಿಸಂ ಸಮಾಧಿಯೊಳಿರ್ಪುದುಂ ಮೆಯ್ಯೊಳ್ ಪುತ್ತು ಮೂಡೆ ಮುಯ್ಪಿನೇರಿನೊಳ್ ದಟ್ಟ ಗೊಂಬಿನ ಬಲ್ಮರಂಗಳ್ ಪುಟ್ಟೆ ಕೆಂಜಡೆಮುಡಿಯ ಮಡಿಯೊಳ್ ಮಡಲಿರಿದ ಬಳ ಲ್ವಂದರ್ ಪೊದೆಯೆ ಕಾಂಚನಲತೆಯಿಂ ತುರುಗಿ ಜಂಬೂವೃಕ್ಷದಿನೆಸೆವ ಪೊಂಬೆ ಟ್ಟದ ತಳ್ಪಲಂ ಗೆಲೆವಂದಂ.

ಅನ್ನೆಗಮಿತ್ತಲ್ ಶರ್ಯಾತಿವೆಸರ ಮನುಕುಲದ ರಾಯನೊರ್ವಂ ಸಕು ಟುಂಬಂ ಬೆಂಬಳಿಯ ಮೆಯ್ಗಾಗಲ ಚತುರಂಗಸೇನೆವೆರಸು ತೀರ್ಥಯಾತ್ರೆಗೆಂದು ಬಂದು ರೇವಾತೀರದೊಳಿಳಿದು ಪುಣ್ಯತೀರ್ಥದೊಳ್ಮಿಂದು ಕ್ಷೇತ್ರವಿಧಿಯೊಳಿರ್ದಂ. ಆ ಪೊಳ್ತಿಂಗಾತನಣುಗುಗುವರಿ ತನ್ನೆಣೆವರೆಯದ ಗೆಡೆಯ ಜೋಡುಕಾರ್ತಿ ಯರೊಡನಾಡುತೆ ಕೆಲದ ಬನಮಂ ಪೊಕ್ಕು ಓರೊಂದೆಡೆಯ ತಳಿರ್ಜೊಂಪಮಂ ಪಿಡಿದುಂ, ಪೂಗೊಂಚಲಂ ಮುಡಿದುಂ, ಪಣ್ಗೊಂಗಲಂ ಸವಿದುಂ ವಿಹರಿಸುತು ಮಿರ್ದಳ್. ಇಂತಾಡುವ ಬಾಲೆ ತನ್ನಿದಿರ ಪುತ್ತನೊಂದಂ ನಿರುಕಿಸಿ ಕೆಳದಿಯರ್ಗೆ– ಅಂ ಕಂಡೆಂ, ಏಂ ಕಂಡೆಂ ಪೇಳಿಂ, ಎಂದು ಮತ್ತಂ ಬಾಲೆಯರ್ ಪಡಿನುಡಿಗು ಡದಿರೆ ನಕ್ಕು ಎನ್ನಿಸೈಪಿಂಗೇನೆಂಬೆಂ, ಇದೆ ಪುತ್ತಿನೊಳ್ ತೆತ್ತಿಸಿದ ಕರ್ಮಣಿಗಲ್ಲೆ ರಡಂ ಕಂಡೆಂ, ಈಗಳೆ ಕಿಳ್ತುಕೊಳ್ವೆಂ ಎಂದು ಮಣಿಯೆಂದೆ ಬಗೆದು ನಿಶ್ಚಲಂ ಮಿನು ಗುವ ಮುನಿಯ ಕಣ್ಗಳಂ ಕೆಯ್ಯ ಸೆಳೆಯಿಂ ಕುರ್ಕಿದಳ್. ಅಕ್ಕಟಾ, ಆಗಳೆ ಪೊನ ಲಿಡುವ ಕೆನ್ನೀರ ಕಾಲಂ ಕಂಡು ಬಾಲೆ ಭಯದಿಂ ಮನದೊಳ್ ತಳಮಳಂಗೊಂಡು

ಆರೊಳಮೇನುಮನೆನ್ನದೆ ತನ್ನೆಡೆಗೆ ಸರಿದಳ್. ಆಕಾಲದೊಳೇನೆಂಬೆನೊ! ಪಗಲೊಳೆ ಉಲ್ಕಾಪಾತಂಗಳಾಗೆ ಧೂಮಕೇತುಗಳ್ ದೆಸೆದೆಸೆಗೆ ಮುಸುಂಕೆ ನೆತ್ತರ ಸರಿ ಸುರಿಯೆ ಪೊಡವಿ ನಡುಗೆ ರಾಯನ ಸೇನೆಯೊಳ್ ಕುತ್ತಂ ಕಾಲಿಡೆ ಕುದುರೆ ಕಣ್ಣೀರಿಡೆ ಗಜಂ ಮಣ್ಣಂ ಗೋರೆ ತೇರ್‌ಮುರಿಯೆ ಉತ್ಪಾತಮಾಯ್ತು. ಇಂತೆಡೆವಿಡದೆ ತಲೆದೋರುವ ದುರ್ನಿಮಿತ್ತಂಗಳ್ಗೆ ರಾಜಂ ಪಿರಿದುಂ ಅಳ್ಕಿ ಇದರ್ಕೇನಾನುಮೊಂದಡಿಯಿರ್ಕುಮೆಂದು ಬಗೆದು ಸುತ್ತಲ್ ಬನದೊಳ್ ಚರಿಸುತಿರೆ ತನ್ನಿದಿರೊಳ್ ಒಂದು ಪುತ್ತಿನತ್ತಣಿಂ ಕವಲ್ವರಿವ ನೆತ್ತರ ಮುರಿಯಂ ದಿಟ್ಟಿಸಿ ಕಟ್ಟಚ್ಚರಿಯೊಳ್ ಮುಟ್ಟಯಿಸಿ ನೋಳ್ಪುದುಂ ತಪದೊಳಿರ್ಪ ಮುನಿಪಂ ಗೋಚರನಾದಂ. ಆಗಳಾತನ ಡಿಗಳ್ಗೆರಗಿ ರಾಜಂ—ಸ್ವಾಮಿ, ನಿಗ್ರಹಾನುಗ್ರಹಸಮರ್ಥರ್ ನೀಮೆ ವಲಂ. ಪರಿವ ನೆತ್ತರೇನೊ! ಎಂತರಿವೆನೀತೆರನಂ ಕುರಿವಾನಿಸನೆಂ. ತೀರ್ಥಯಾತ್ರಾರ್ಥಂ ಬಂದೀ ತೊರೆಯೊತ್ತಿನ ಬನದೊಳ್ ಬೀಡಂ ಬಿಟ್ಟೆಂ; ತಪೋವನವೆಂದರಿತೆನಿಲ್ಲಂ; ಎಮ್ಮೀ ಸೇನೆ ಅಧಿವ್ಯಾಧಿಕ್ಷಾಮಡಾಮರಂಗಳ್ಗೆ ಕೋಳುವೋಯ್ತು; ಎನ್ನೊರ್ವನ ಕತದಿಂ ವನಮುಂ ಪಾಳಾಯ್ತುಕ್ಕಟಾ! ಮುನಿರಾಯ, ಈಗಳ್ ನಿನ್ನನೆ ಮರೆಗೊಂಬೆಂ; ನೀಂ ಕರುಣಿಸಿ ಕಾವುದೆಂದು ಪ್ರಾರ್ಥಿಸೆ ಚ್ಯವನಂ ರಾಯಂಗೆ—ಎಮತಿನ್ನಾವ ಮೈಮೆಯೊ? ಆವ ತಪಮೊ? ಕುರುಡರಾದೆವ್ವೆಸೆ? ಕೇಳ್—ನಿನ್ನ ಕುವರಿ ಆಟದ ಸೆಳೆಯಿನೆನ್ನ ಕಣ್ಗಳಂ ಕುರ್ಕಿ ನೋಯಿಸಿದಳ್; ಏವೇಳ್ವೆನೊ? ಎನ್ನ ನೋವಿಂಗೀ ಉತ್ಪಾತಂಗಳ್ ಎಂದಂ. ಆನುಡಿಗೆ ರಾಜಂ ನೊಂದು ಮೇಣ್ ಶಾಂತಿಯೇನೆಂಬುದುಂ ಮುನಿಪಂ—ನಿನ್ನ ಕುವರಿಯುನೆನ್ನ ಸೇವೆಗೀವುದರಿಂ ನಿನಗಂ ಸೇನೆಗಂ ಕ್ಷೇಮಮಕ್ಕುಮೆಂದು ಮಾರ್ನುಡಿಯುಲೊಡಂ ಶರ್ಯಾತಿ ತಾಂ ತಲೆವಾಗಿ ರಾಣಿಯೊಳ್ ನಿಧಾನಿಸಲ್ಕೆಂದು ತನ್ನಾವಾಸಕ್ಕೆ ನಡೆತಂದು ಅರಸಿಗೀ ಕತೆಯಂ ಪೇಳ್ದಂ.

ಆಗಳಾತನ ರಾಣಿ ಪೆತ್ತ ಬಸಿರ ಉರಿಯಿಂ ನೊಂದು ಪಳಯಿಸಿ ಹಾ! ಮನುಕುಲದೆ ಪುಟ್ಟಾಗಿರೆ ಚೆಲ್ವಿನ ಬಲ್ಪಿನ ರಾಯುಗುವರನ ಕೊರಲ್ಗೆ ಮಾಲೆಯಿಕ್ಕಿ ತುಂಬುವಳಗದೊಳ್ ಬಾಳ್ವೆನ್ನೀ ಮುದ್ದುಗುವರಿಯಂ ತಪದ ಮುದುಗೂಗೆ ಕುರುಡಂಗಿತ್ತು ಕೊರಲಂ ಕೊರೆವಾ! ದೈವಮಿ ಬಾಲೆಯೊಳೆ ಕಣ್ಣಿಟ್ಟುದೇ ಎಂದು ಅಳಲ್ದು ಬಳಿಕ್ಕೆ ಮಗಳಂ ಕೊರಲೊಳ್ ತಳ್ಕೈಸಿ ಕಣ್ಣೀರ್ಸುರಿದು ಹಾ! ಗುಣಮಣಿ, ಹಾ! ಮುದ್ದಿನ ಕಣಿ, ಅನಿಗಾಲಂ ತನು ತವಿಯೆ ನೋಂತು ಪೆತ್ತಿನ್ನೆಬರಂ

ಪಾಲಿಸಿ ಮುದ್ದುಗೆಯ್ದೀಗಳೆಂತಾಂ ಪಳುವಾನಿಸಂಗೆ ಕುಡುವೆಂ? ಮಗಳೆ! ಅಸಿಂಬೊಡಲ ಬಾಲೆ, ನೀಂ ಪಸಿದು ಸಸಿನಂಬಡದಂತಾರಯ್ವರಾರ್? ಸೋರ್ಮುಡಿಯುಂ ಪಿಕ್ಕಿ ಪೂದೊಡಂಬೆಯುಂ ಮುಡಿಯಿಸುವರಾರ್? ನಲ್ದೊಡವಂ ಕುಡುವರಾರ್? ಓವರಾರ್? ಬೇನೆಗೆ ನೋವರಾರೆಲೆ ಕುವರೀ, ಆಃ! ಅಕ್ಕಟಾ! ಕಂಗಳನಾದೊರ್ವನಂ ಮುದುವಾರ್ವನಂ ಕೈವಿಡಿವ ಯೋಗಮುಂ ಬಿದಿ ಮಾಡಿದನೇ? ಲೋಕದೊಳ್ ಕಾಡ ಬೀಳಂ ತಂದು ಊರಮರನೊತ್ತೆಗಿಡುವರುಂಟು; ನಾಡೆಳವಳ್ಳಿಯುಂ ಕಾಡ ಕರ್ಮರನೊಳ್ ಪತ್ತುಗುಡುವರೊಳರೇ? ನೂರೇಂ ಪಲವೇಂ? ನೂಳದ ದಂದುಗಕ್ಕೆ ಕೆಯ್ಗುಮರ್ದ ಚಿಂತಾಮಣಿಯನೊತ್ತೆಯಿಟ್ಟು ಬಾಳ್ವ ಕೈನೆಯ ಕೈಮೆಗೊಳ್ಳಗಾದೆನಕ್ಕಟಾ! ಎಂದು ಮರುಮರುಗಿ ಹಮ್ಮದಂಬೋದಳ್. ಆಗಳಾಕಿರುವರೆಯದ ರಾಯಗುವರಿ—ಅಬ್ಬೇ ಏನೆಂದಳಲ್ವಾ! ಪೆತ್ತರೊಳ್ ಪೆಣ್ಣೊಡಮೆಯಿದು ನ್ಯಾಸಮಲ್ತೇ? ಎಂತುಂ ಕುಲಕ್ಕೆ ಪೆರಳಪ್ಪ ಮಗಳೊಳೇಂ ಮರುಕಂ? ಮನುವಾದೊಡಂ ಮುನಿಯಾದೊಡಮೇಂ? ಕೊಡಗೂಸಿನ ಭಾಗ್ಯಮೆ ಭಾಗ್ಯಂ; ಪೆರತಾವಭೋಗಂ ಸಲ್ಗುಂ? ಮುನ್ನೊಡಲ ಗೆಯ್ಮೆಯೆಸಕವೊಡರ್ಚೆ ತಿರಿಕುಳಿಯೊಳಮರವೆಂಡಿರ ಭೋಗಮನುಣ್ಗುಂ; ಮೇಣ್ ಕೈನೆಯಾಗೆ ರಾಯನ ಕೈವಿಡಿದುಂ ತಿರಿದುಣ್ಗುಂ. ಅದುಕಾರಣಂ ನೀಂ ಸಂತಮಿರೆಂದು ತಾಯ್ಗೆ ನಯಂಬೇಳ್ದು ಅಯ್ಯಂಗೆ—ಅಯ್ಯ, ಮುನಿಯೆಡೆಗೆ ಪೋಪಂ ಎಂದು ಕರೆದುಯ್ದಳ್. ಅಂತು ಬಂದು ಆಕನ್ನೆವೆಣ್ ತವಸಿಯುಂ—ಒಡೆಯ, ಅಪ್ಪದಪ್ಪದಾನಾಟದೊಳ್ ತಮ್ಮಡಿಗಳ್ಗೆ ತಪ್ಪನೆಸಗಿದೆಂ; ಇದೆ ಅಯ್ಯನೆನ್ನಂ ನಿಮಗರ್ಪಿಸಲ್ಕೆಂದು ಬಂದಿರ್ಪನದರಿನೊಲ್ದು ಕೈಕೊಂಡು ಕೂರ್ಮೆಯಿನೆಮ್ಮ ಜಾತ್ರೆವಯಣಿಗರ್ಗೆ ನೇರಿಟ್ಟಾಧಿವ್ಯಾಧಿಗಳಂ ಪರಿಹರಿಸಿ ಪೊರೆಯ್ಯೆ ಎಂದು ಕಾಲ್ಗೆರಗಿದಳ್. ಇಂತಪ್ಪುದುಂ ಚ್ಯವನಂ ಕನ್ಯೆ ಸುಕನ್ಯೆಯ ಜಾಣ್ಮೆಯ ಮೆಲ್ನುಡಿಗೊಲ್ದು ಸಮಾಧಿಯುನುಳಿದು ರಾಯಂ ಶಾಂತಿಗೆಂದಿತ್ತ ದಾನದ ಬಾಲೆಯನೊಪ್ಪಿ ಪಯಣಿಗರ್ಗಂ ನಾಡಿಗರ್ಗಂ ಸೊಗಮಪ್ಪಂತು ಕರುಣಿಸಿ ಶರ್ಯಾತಿಯುಂ ಪರಸಿ ಬೀಳ್ಕೊಟ್ಟಂ.

ಇತ್ತಲ್ ಶರ್ಯಾತಿರಾಜತನೂಜೆ ನಿಜಪತಿಯುಂ ತನಗೊಲ್ದ ದೈವಮೆಂದೆ ಬಗೆದು ಮುನಿ ಮನಂ ಮೆಚ್ಚುವನ್ನಂ ಸಂದಸೇವೆಯೊಳೆ ಬಳ್ದಳ್. ಚ್ಯವನರ್ಷಿಯುಂ ಮಾನಿನಿಯೊಂದಾರ್ಕೈಕೆಯಿಂ ತನ್ನ ಕುರುಡಿನ ಬೇನೆಯುಂ ಮರೆದು ಎಡೆಯೊಳೆ ಆಶ್ರಮನೊಂದಂ ನೇರ್ಪಡಿಸಿ ದೈವಭಕ್ತಿಯೊಳೆ ಸಂದು ತಾನುಂ ಸಂತಮಿರ್ದಂ.

ಇಂತು ಕೆಲವಾನುಂ ದಿನಮತಿಕ್ರಮಿಸಲೊಡಮೊರ್ಮೆ *ಬರ್ದಿಲವೆಜ್ಜರಾಬಟ್ಟೆವಿಡಿದು ಬಂದು ಮುನಿಯೆಲೆವನೆಯುಂ ಪುಗುತರ್ಪುದುಂ ಸುಕನ್ಯೆ ಅತಿಥಿಗಳಂ ಯಥಾವಿಧಿ ಉಪಚರಿಸಿ ಮನ್ನಿಸೆ ದೇವರ್ ಹದಿಬದೆಯ ನಡೆವಳಿಗಂ ಭಕ್ತಿಗಂ ಮೆಚ್ಚಿ ಸಂತಸದಿಂ ವರಮಂ ಬೇಡೆಂದರ್. ಅದರ್ಕಾಕಾಂತೆ ಆಂ ಪೆರತಾವ ವರಮಂ ಬೇಳ್ಪೆನೊ? ಎನ್ನೀಪತಿಯ ಕುರುಡಂ ಪೋಗೊಳಿಸಿ ಕಾವುದೊಂದೆ; ಎಂದು ಮಾರ್ನುಡಿದಳ್. ಆಗಳಾದೇವತೆಗಳ್ ನಿನ್ನ ಮುನಿ ಎಮಗೆ ಸುರಪನ ಪಂತಿಯುಂ ಕುಡುವೆನೆಂದು ಪೂಣ್ದೊಡೆ ಕಣ್ಗಳನೀವೆವೆನೆ ಮುನಿಪಂ—ಇದೆ ಬಾಸೆಯೀವೆಂ, ತಡೆಯೇಂ! ಆಂ ಪುರೋಹಿತನಿರ್ದು ಬೇಳಲಿರ್ದ ಜನ್ನದೊಳ್, ನಿಮಗೆಯೆ ಮುನ್ನ ಮೆಡೆ, ಬಳಿಯುಮಿಂದ್ರಂಗೆಂದು ಕೈವೊಯ್ದಂ. ಆ ನುಡಿಗೆ ಸುರವೈದ್ಯರೊಪ್ಪುಗೊಟ್ಟು ಮುನಿಯೊಡನೆ ತಡೆಯದೊಂದು ಬೆಂಚೆಯೆಡೆಗೈತಂದು ತಾಂ ಮೂವರುಂ ಮೈಯಳ್ದಲೊಡಂ ಬೇರೆವೇರೆ ಬಗೆಯಲ್ಬಾರದ ಪಡಿವರಿಜುಗಳೆನೆ ಒಂದಚ್ಚಿನೊಳೆರಕಂಬೊಯ್ದ ಮೂರುಂ ಪೊಂಬಾಪೆಯೆನೆ ಮೂವರುಮೊಂದೆರೂಪಿನೊಳೊಗೆದು ಮರಲ್ದುಟಜದೆಡೆಗೆಯ್ತಂದರ್. ಇಂತು ಬಂದ ಸುಕುಮಾರಗಾತ್ರರಪ್ಪ ಮೂದೇವರೊಳ್ ಮುನಿಯಾರೆಂದಾರಯ್ವೊಡಾರದ ಹದಿಬದೆ ಸ್ವರ್ವೈದ್ಯರಂ ಮೇಣುಂ ಮರೆವುಗೆ ತಾವೊಲ್ದು ತೋರಿ ಪತಿಯುಂ ಮೆಚ್ಚುಗೊಟ್ಟು ತಮ್ಮೆಡೆಗೆ ಬಿಜಯುಂಗೆಯ್ದರ್.

ಮೂಲೋಕಮುಮಂ ತನ್ನ ಜೋಗದ ಬಲ್ಮೆಯಿನೊರ್ಮೊದಲೊಳೆ ತೆಮಳ್ದಿ ಬಿಚ್ಚಳಿಸಿ ನೋಡಲಾರ್ಪ ಒಳನೋಟಮಿರೆ ಇರ್ಮುಡಿಯೆಳ್ತರದಿಂ ಪೊರನೋಟಮುಮೊದವೆ ಕರುವಿಟ್ಟ ಕಡವರದ ರೂವೆನೆ ಮೆಯ್ಸಿರಿ ಪೊಗರೇರೆ ಮರಿಸಿಂಗನ ಗೋಣ್ಣವಿರನಿಳಿಕೆಯ್ವ ತೇಜಮನೊಳಕೊಂಡು ರಾಜಿಪ ಜಡೆಮುಡಿ ಸೊಗಯಿಸೆ ಪೊಂಬೆಟ್ಟಿನ ಕೋಡುಗಲ್ಲಂ ತಳ್ತು ಪೊದೆದ ಬೈಗಿನ ಕೆಂಬಿಸಿಲ ಬೆಳಗಿಂಗೆ ದೊರೆವರ್ಪ ಪೀತಾಂಬರದುಡೆ ನಡುವಿನೊಳ್ವಿರಾಜಿಸೆ ಸಿಂಗನ ಪೇರಗಲದೆ*ರ್ದೆಗೆ ಪಾಸಟಿಯೆನಿಪ್ಪ ಎ*ರ್ದೆ ಮನಂಗೊಳೆ ಯೂಥನಾಥನ ಸೊಂಡಿಲಂಗೆಲೆವರ್ಪ ತೋರತೋಳ್ಗಳೆಸೆಯೆ ಸಿರಿಯ ನೆಲೆವನೆಯೆನಿಪ ಮುಖಪದ್ಮಂ ತಳತಳಿಸೆ ಚ್ಯವನಂ ಜವ್ವನದೇಳ್ಗೆಯಿಂ ಸಂತಂ ಮಡದಿವೆರಸಿರ್ಪನ್ನೆಗಮೊರ್ಮೆ ಶರ್ಯಾತಿರಾಜಂ ತಾಂ ಮೊಗಸಿ ನೆಗಳ್ಚಲಿರ್ಪ ಜನ್ನಕ್ಕೆ ತನ್ನಳಿಯನನೆ ಪುರೋಧಸನಾಗೆ

ಬರವೇಳ್ಪಟ್ಟಲೊಡವೋಲೆಕಾರರ್ಬಂದು ಮುನಿಗೆರಗಿ ಪಾವುಡೆಯುಮಂ ಓಲೆಯುಮನೊಪ್ಪಿಸಿದರ್. ಚ್ಯವನನೋಲೆಯೊಕ್ಕಣೆಯನೋದಿ ಸಂತಸಂಗೊಂಡು ಊಳಿಗದಾಳ್ಗಳಂ ಮನ್ನಿಸಿ ಬರ್ಪೆವೆಂದು ಮರುನುಡಿಯಂ ಬರೆದು ಕಳುಪಿದಂ. ಬಳಿಕ್ಕಂ ಮುನಿದಂಪತಿಗಳ್ ತಮ್ಮಾಶ್ರಮದಿಂ ಪೊರಮಟ್ಟು ಪಯಣಂ ಬಂದು ಮಾವನ ನಾಡಂ ಪುಗುತಂದು ಪೊಳಲ್ಗೆವಂದು ರಾಯನರಮನೆಯನೆಯ್ದಿವಂದು ಕುಳ್ಳಿರ್ಪುದುಂ ರಾಯಂ ಮಗಳಂ ಮೇಣ್ ಬಳಿಯೊಳ್ ಜವ್ವನದ ಚೆನ್ನಿಗನಂ ಕಂಡು ಕರುತ್ತುರಿದು ಸೂಳನನಾಯ್ದು ಬಾಳ್ದಪೆಯೆಂದು ಮಗಳಂ ಗದರೆ ಸುಕನ್ಯೆ ಅಯ್ಯನಡಿಗೆರಗಿ ಕಿರುನಗೆಯಿಂ—ಜೀಯ ಅನರಂಗೆಟ್ಟು ಬಳಿಗೆ ಪಳಿ ಪೊರ್ದುವಂತು ನಡೆದೆನಿಲ್ಲ; ಈತನೆ ತನ್ನಾಣ್ಮನೆಂದು ಸಕಲಾಂಶಮಂ ತಿಳಿವಂತಾಡಿ ತೋರಿದಳ್. ಇಂತಾಗೆ ನಲ್ಗುವರಿಯ ನೆಗಳ್ಕೆಯಂ ಕರವೊಲ್ದು ಬಂದಾ ಮುನಿಯುಂ ಪೊಗಳ್ದಂ.

ಇಂತಿರ್ಪುದುಂ ಬಳಿಕ್ಕಮೊಂದು ಶುಭದಿವಸದೊಳ್ ಚ್ಯವನಂ ಪುರೋಹಿತನಾಗೆ ರಾಜಂ ಯಾಗಮಂ ಮೊಗಸಿ ನೆರೆರಾಯರ್ ಪೊಗಳ್ವನ್ನಂ ಭೂಸುರರ್ ತಣಿವನ್ನಂ ದೇವತೆಗಳ್ ಸಂತುಷ್ಟರಪ್ಪನ್ನಂ ಬೇಳ್ದಂ. ಆಗಳ್ ತನ್ನ ಮುನ್ನ ಪೂಣ್ಕೆಯಂ ನೆನೆದು ಪುರೋಧಸಂ ಹವಿಷ್ಪ್ರದಾನಸಮಯದೊಳ್ ಮುನ್ನಂ ಮುನ್ನಮಿದು ಬೋಳೆಯರ ಬೆಜ್ಜರ್ಗೆ, ಇಂತಿದಮಳ್ದೇವರ್ಗೆ, ಮೇಣಿದಶ್ವಿನೀಸುತರ್ಗೆಂದು ಕರೆಕರೆದೆಡೆಗೊಟ್ಟು, ಬಳಿಯಮಿದು ದೇವೇಂದ್ರಂಗಿದು ಸುರಪಂಗಿದು ಮೆಯ್ಗಣ್ಣಂಗೆಂದು ಹೋಮಮಂ ಗೆಯ್ದಂ. ಇಂತು ತನ್ನನೇಳಿಸಿ ಪಂತಿಗೆ ತಗದ ಅಶ್ವಿನೀಕುಮಾರರಂ ಮನ್ನಿಸಿ ಮುನ್ನೆಡೆಗೆಯ್ದನೆಂಬ ಕತದಿಂ ಕರುಂಬಿ ಸುರಪಂ—ಈ ಅಳಿವಾರ್ವನ ತಲೆಯಂ ಕಡಿವೆನೆಂದು ತನ್ನ ಬಜ್ಜರಗೈದಂ ಜಳಪಿಸುತೆ ಮಾರ್ಮಲೆತಿಸಲೊಡರ್ಚಿದಂ. ಅನಿತರೊಳ್ ಚ್ಯವನಂ ತನ್ನ ತಪದ ಬಲ್ಮೆಯಿಂ ಸುರಪನುಮಂ ಕೈದುಮಂ ತಡೆಗೆಯ್ದಂ. ಇಂತು ಮರವಟ್ಟಿರ್ಪುದುಂ ಸುರರುಂ ಮುನಿಗಳುಂ ಮೈಮೆಯಂ ಪೊಗಳ್ದು ಸುರಪನನುದ್ಧರಿಸವೇಳ್ಕುಮೆಂದು ಮುನಿಯಂ ತುತಿಯಿಸಲೊಡಂ ಸುರಪನಂ ಸೆರೆಯಿಂ ಬಿಟ್ಟಂ. ಇಂತು ದೇವವೈದ್ಯರ್ಗೆ ಪಂತಿಗೊಟ್ಟು ನೆಗಳ್ದನೀಮುನಿಯಿಳೆಯೊಳ್.

ನಾಡಿಂ ನಾಡಿಂಗೆ ಪಯಣಂಬಂದ ಬಳಲ್ಕೆ ಮುಡಿವನ್ನಂ, ಕೊಡಂಕೆ ನಲ್ಗತೆಯ ಪುರುಳಿಂ ತುಂಬುವನ್ನಂ, ಮನದ ಬಯಕೆಯುಳಿವನ್ನಂ ಶತ್ರುಹಂ ಸುಮತಿ

ಯೊರೆದ ಕತೆಯುಂ ಕೇಳ್ದು ಸಂತಸಂದಾಳ್ದಿ, ಅಂತಿರ್ಪನಂ ಮುನಿಯುಂ ಕಾಣಲ್ವೇಳ್ಕುಮೆಂದು ಪುಣ್ಯಾಶ್ರಮಕ್ಕೈತಂದು ಚ್ಯವನನಂ ಕಂಡೆಡೆಗೆಡೆದು ಆಂ ಶ್ರೀರಾಮನನುಜನೆಂ, ಶತ್ರುಘ್ನವೆಸರ ಬಾಲಕಂ, ಜನ್ನಗುದುರೆಯುಂ ಬಳಿಸಂದು ಪೋಪ ಬಟ್ಟೆಯೊಳ್ ತಮ್ಮಡಿಯುಂ ಕಂಡು ಪರಕೆಗೊಳ್ವೊಡೆಂದು ಬಂದೆವೆಂದರಿಪಿದಂ. ಮುನಿಯೆಂಗುಂ:—ನಿಡುಗಾಲಂ ಜಗದರಿಕೆಯೊಳೆ ಬಾಳ್ವಸೈಪಂ ನಿನ್ನೊಳೀಶನೊಡರ್ಚುಗೆ. ಶ್ರೀರಾಮಂ ಬೀಳಲಿರ್ಪನೆಂದು ಜಾನದೊಳೆ ಅರಿತು ನೀಂಗಳಿತ್ತಂ ಬರ್ಪವೊಳ್ತನೆ ಪಾರುತುಮಿರ್ದೆಂ. ರಾಘವನಂ ಕಣ್ಣಾರೆ ನೋಳ್ಪೆನೆಂಬ ಪಂಬಲೀಗಳ್ ಪಿರಿದಾಗಿರ್ಕುಂ; ಇಂದೆ ಶ್ರೀರಾಮನಡಿದಾವರೆಯುಂ ಕಂಡು ಸಕುಟುಂಬಂ ಧನ್ಯನಪ್ಪೆಂ ಎಂಬುದುಂ ಶತ್ರುಹಂ—ಲೇಸು ಲೇಸು; ಅಂತಿರ್ಪೊಡೆ ಈಗಳೆ ನಿಮ್ಮಂ ಕೊಂಡಯೋಧ್ಯೆಗುಯ್ವಂತೀರಾಮದೂತನಂ ನೇರ್ಪಡಿಸುವೆಂ ಎಂದು ಹನೂಮಂತನಂ ನಿಟ್ಟಿಸಲೊಡಮಣುವಂ––ಈಗಳೆ ನಿಮ್ಮನುಯ್ದು ದೇವರ ಮುಖಶಾಲೆಯೊಳಿಳಿಪಿ ಮರಲ್ದು ಬರ್ಪೆನೆಂದು ಮುನಿಗೆ ಪೇಳ್ವುದುಂ ಒಡನೆಯೆ ಚ್ಯವನಂ ತನ್ನಾಶ್ರಮಮುಂ ಮಿಕ್ಕುಳಿದ ಋಷಿಗಳ್ಗೊಪ್ಪಿಸಿ ತಾನುಂ ಸುಕನ್ಯೆಯುಂ ಮಾರುತಿಯ ಪೆಗಲನೇರೆ ವಾಯುಸುತಂ ವಾಯುವೇಗದಿನಯೋಧ್ಯೆಗುಯ್ದಿಳಿಪಿ ಇನ್ನೆಬರಂ ತಮ್ಮ ವಿಜಯಯಾತ್ರೆಯುಂ ರಾಘವಂಗರಿಪಿ ಮತ್ತಮಾತನಾಣತಿಯಿಂ ಬೆನ್ನನೆ ಶತ್ರುಹಂಗೆ ಬೆಂಬಲಮಾಗಿ ಬಂದಂ.

---

೯. ನೀಲಾಚಲದರ್ಶನಂ.

ಇಂತು ವಾಜಿ ಪಯೋಷ್ಣೀನದಿಯುಂ ದಾಂಟೆ ಬಲ್ದೂರಂ ನಡೆನಡೆದು ವಾಜಿಪುರಮಂ ಪುಗೆ ಆ ಪೊಳಲ ರಾಯುಂ ಶತ್ರುಹಂಗೆ ತನ್ನಂ ತನ್ನ ನಾಡಂ ಬೀಡಂ ರಾಘವನ ಪೆಸರೊಳೊಪ್ಪಿಸಿ ಮರೆವೊಕ್ಕು ಕುದುರೆಯ ಮೆಯ್ಗಾವಲ್ಗೆಂದು ಬಂದಾ ರಾಯನನೊಡಂಗೊಂಡು ಮುಂತೆ ಬರ್ಪ ಪದದೊಳ್—ಅಡಿಗಡಿಗೆ ಬದ್ದಬದಸಿಂ ಪಗೆದು ಪತ್ತುವಿಡಿಸಿ ದಿಸೆಗಿಡಿಸೆ ದೆಸೆದೆಸೆಯ ಕಳ್ತಲೆಯ ಬಿಂದವೊಂದುಗೂಡಿ ತಮ್ಮ ಪಗೆಯುಂ ಬೆಂಗದಿರನಂ ಬಂದಿವಿಡಿವೊಡೆಂದು ಬಾಂದಳಮನೇರಿ ಪೋಪುದೆನೆ ಮೈವೆರ್ಚಿ ನಿಗುರ್ದ ನೀಲಾಚಲಂ ಮುಂಗಡೆಯೊಳ್ ವಿರಾಜಿಸಿದತ್ತು. ಅಂತದು ದಟ್ಟಯಿಸಿ ಮುಗಿಲ್ಮುಟ್ಟೆ ಬೆಳೆದ ಕರ್ಮರಂಗಳಿರುಂಬಿನ ಕಳ್ತ

ಲೆಯನೊಳಕೊಂಡೇವೊಳ್ತುಂ ಚರಿಪ ಖಗಮೃಗಂಗಳ್ಗೆ ತಸ್ಗೊಳನ ಭ್ರಾಂತಿಯುಂ ಪುಟ್ಟಿಸಿ ಒರ್ತರದಿನಿಂಬುಗೊಂಡ ಕರ್ಮುಣಿಯ ಪಾಸರೆಯಿಂ, ಅಂದು ಚಂಡಿಕೆಯ ಕೂರ್ವಾಳಿಂ ಪೋಳ್ಗಡಿವೋದ ಮಹಿಷಾಸುರನ ಬಿರಿವೊಡೆಯಿಂ ಸುರಿದ ದಂಡೆಗ ರುಳ್ಗೆ ಪಾಸಟಿಯಪ್ಪ ಅರೆಜರಿದ ಜಾದಿನ ಕೋಡುವೆಟ್ಟನೊತ್ತುಗೊಂಡು ಸಿಂದೂ ರವಿಲಿಪ್ತಮದಸಿಂಧುರಗಂಡಮಂಡಲದ ಪಾಂಗಿನಿಂ ತೋರ್ಪ ತಳ್ಪಲಿಂ, ಪಗಲ್ಗೆ ಪಡಿನೇಸರೆನೆ ಇರುಳ್ಗೆ ಪಡಿದಿಂಗಳೆನೆ ತೊಳಗಿ ಬೆಳಗಿ ಬೆಟ್ಟುವಗೆಯಂ ಪಗೆಯಿನಿಟ್ಟ ಕುಳಿಸದ ಕಡಿಕಂಡದಂತೊಪ್ಪುವ ಅಚ್ಚವಳಿಕಿನ ಗಂಡಶೈಲದಿಂ, ನಿಚ್ಚವಯಣಂ ಬರ್ಪ ಜಾತ್ರೆಯ ಜನರ ಬರ್ದಿನೂಟದ ಬಾಣಸಿನಾವಿಗೆಯ ತನಿಗೆಂಡದೋವರಿ ಯೆಂಬಂತು ತಳತಳನೆ ಪೊಳೆವ ರಂಗುಮಾಣಿಕದಗಳ್ತೆಯಿಂ, ಸಿದ್ಧರಸದ ಮಡುವಿಂ ಪರುಸಗಲ್ಗಳಿಂ ಮನೋಜ್ಞಮಾಗಿರ್ಪುದು.

ಇಂತು ಕರಮೊಪ್ಪುವ ಕರ್ವೆಟ್ಟಮಂ ದಿಟ್ಟಿಸಿ ಸುಮಿತ್ರಾತ್ಮಜಂ ಸುಮ ತಿಯಂ—ಅಜ್ಜಮಂತು! ಮುಂತಿದೆ ಕಾಳರಕ್ಕಸಿಯ ಪಾಳೆಯದ ಕರ್ವೆಟ್ಟೆಯ ಗೂಡಾರಮೆನೆ, ಕಳ್ತಲೆಯ ಬೀಡಾರಮೆನೆ ತೋರ್ಪ ಕಾರೊಡಲ ಬಲ್ವೆಟ್ಟಮಾವುದು ಪೇಳಯ್ ಎಂಬುದುಂ ತಾನಿಂತು ಪೇಳ್ದನದೆಂತೆನೆ:—ಬಲ್ಲಾಳ್ಗಳ ಬಿರುದರ ಮನ್ನೆ ಯರರಸ, ಸರಸಿಜಾಕ್ಷನ ಬಿತ್ತರಂ ಬೆತ್ತ ಪುತ್ತೆನೆ ಆತೋರ್ಪುದೆ ನೀಲಾಚಲಂ; ಪರ ರೊಡಮೆಯನಳಿಪುವ ಬವಸಿನ ಕೂಳರ್ಗೆ, ಪೆರವೆಂಡಿರ್ಗೆಳಸುವ ಬೆಸನದ ಸೂಳರ್ಗೆ, ತನ್ನರಮಂ ವೂರುಗೊಟ್ಟು ಪಸುವಿನಂದದೆ ಬಾಳ್ವ ಗೊಂದೆಗಳ್ಗೆ, ಸಂದು ಗೊಂದಿನೊಳಡಂಗಿರ್ದು ಬಳಿವೋಕರಂ ಕೊಲ್ವ ದುರುದುಂಬಿಕೊಲೆಗರ್ಗೆ, ಪೆತ್ತ ಕೂಸಂ ಪಣಕೆ ಮಾರಾಢಿ ಒಡಲಂ ಪೊರೆವ ಅಳಿಯೊಡಲರ್ಗೆ, ಬೆಸಲಾದ ಮಡ ದಿಯಂ ಬಡಿವ ಮಾನಸರಕ್ಕಸರ್ಗೆ ಕಣ್ಗೆ ಕಾಣಲ್ಬಾರದ ಮೈಮೆವೆತ್ತು ನಿಂದಿರ್ಕುಂ. ಮತ್ತಮೀ ಪೆರ್ವೆಟ್ಟಿನ ತುತ್ತತುದಿಯೊಳ್ ತನ್ನಂ ಮರೆವೊಕ್ಕು ಸೇವಿಸುವ ದಾಸರ್ಗೆ ಮರುವುಟ್ಟಂ ಪೋಗೊಳಿಸಿ ಸಾರೂಪ್ಯಮನಿತ್ತು ತನ್ನಂತು ಮಾಳ್ಪ ನಾಲ್ದೋಳಿನೆಸೆವ ಪುರುಷೋತ್ತಮನ ವಾಸದ ಗುಡಿಯೊಂದಿರ್ಕುಂ. ಆವನಾನುಂ ಭಕ್ತಿಯಿನಾಕ್ಷೇತ್ರ ದೊಳ್ ಸೇವಿಸುತುಮಿರೆ ತಾನುಂ ಚತುರ್ಭುಜನಾಗಿ ಸಂಕಿನ ಬಟ್ಟಗೈದಿನ ಗಜೆಯ ತಾವರೆಯ ಪೊರ್ದುಗೆಯಿನೆಸೆಗುಂ. ಇದರ್ಕೊಂದಿತಿಹಾಸಮಂ ಪೇಳ್ವೆಂ:—

ಈ ಜಂಬುದೀವಿಯೊಳ್ ತೆಂಕಗ್ಗೆ ಸೌಭಾಗ್ಯಲಕ್ಷ್ಮಿಯ ಕಾಂಚೀದಾಮ ಮೆನೆ ತೋರ್ಪ ಕಾಂಚೀಪುರಮುಂಟು. ಮುನ್ನಮಾಪೊಳಲಂ ರತ್ನಗ್ರೀ

ವನೆಂಬೊಂ ಕೈದುವೊತ್ತರದೇವಂ ಮಾರ್ಮಲೆವ ಪಗೆರಾಯರ ಅಟ್ಟೆಯ ಕೆನ್ನೀರಿಂ ಜೀರಸಿರಿಯಂ ಮೀಯಿಸುತುಮಾವಗಂ ಮರೆವಾಳ್ವ ಸಾವಂತಪೆರ್ಗಡೆಯರ ನಾಡನ್ನೈಸಿರಿಗಣಿಯರಂ ನೆಲೆವೀಡನಾಗಿಸುತುಂ ತನ್ನೊಂದೇರುಂಜಸದೆಸಕದಿಂ ದೆಸೆವಳರ ಪೊಸಮಾಡಂಗಳ್ಗೆ ಬೆಳ್ಪೇರಿಸುತುಂ ಪಲಕಾಲಮರಸಾಳುತಿರ್ದಂ. ಇಂತಿರುತುಮೊರ್ಮೆ ಮಾರಾಯಂ ಸಿರಿವೊಳ್ತಿನೊಳೊರ್ಮೆ ಜಾನಂಬೊಕ್ಕು ಬಳಿಯಂ ಬಳಿಯರಸಿಯ ಮೊಗಮಂ ನೋಡಿ ಬೇಸರ ಮಾತಿನೊಳೆಂಗುಂ—ಎನ್ನರಸಿ! ಸಂಸೃತಿಯೇನಪಾರಮೊ! ಎನಿವಿರಿದೊ! ಏತೆರದಿಂದ್ರಜಾಲಮೊ! ಪಂಜರದೊಳಿರ್ದ ಪಕ್ಕಿ ತಾಂ ಸಂತಂ ಸೊಗಂ ಬಾಳಲಿರ್ಪಾವನರಾಜ್ಯದರಿವಂ ಮರೆದು ತನ್ನ ಬಂದಿವಾಳ್ಕೆಯೊಳೆ ದಿನದಿನದ ಪಾಲ್ವಣ್ಗಳನಿನಿದಿನಿದಾಗೆ ಸವಿಯ್ಗುತುಂ ನಿಶ್ಚಿಂತಮಿರ್ಪಂತಿರೆ ಮಾನಿಸಂ ಪ್ರಪಂಚದೊಳ್ ಮಾಯೆದಾವಿಂ ಕಟ್ಟುವಡೆದು ಬಗೆವಗೆಯ ನಶ್ವರಭೋಗಂಗಳ್ಗಾಸೆವಡುತುಮುಣುತುಂ ಶಶ್ವತ್ಸುಖದ ಪದಮಂ ಮರೆದಿರ್ಕುಂ. ಆಃ! ಲೋಗರ ತೃಷ್ಣೆಗೆ ತಡಿಯುಂಟೆ? ಆನೆನಗೆಂಬ ಬೆಮೆಯಿಂ ನರನಳಿಗುಂ. ಹಾ! ನರೆತುಂ ಬರತುಂ ಸುರ್ಕಿಯುಮಿಳಿದುಮಳಿದುಂ ಪೋಪೀಮೆಯ್ಯಂ ನಿಚ್ಚಮೆಂದೆಸೆನ್ನಿ ಸೊಮ್ಮಿಂ ಪೆರ್ಚಳಿಸುವಂ ಗಾಂಪನಲ್ಲೇ? ಏಂ ಬಯಲಾಸೆಯೊ! ಆವಗಂ ಸೊಗಮುಂಟೆ? ಪೋಕೆ? ಒಲ್ಲೆನೊಲ್ಲೆನೀರಾಜ್ಯಭಾರದ ದಂದುಗಮಂ. ಅದರಿನೀಪೊರೆಯಂ ಎನ್ನ ಮಗನೊಳಿರಿಸಿ ಮನಂ ನೆಮ್ಮುಗೆಗೊಂಡು ನೆಲೆ ನಿಲ್ವಿನಂ ತೀರ್ಥಾಟನಂ ಮಾಡಲೆಣಿಪೆಂ. ನೀನುಮೆನ್ನೊಡನೆ ಬರ್ಪುದು; ಪುರುಳೇಂ ಬರುವಾಳ್ಕೆಯ ಬರ್ದುಂಕಿನೊಳ್?*

ಸೌಮಿತ್ರಿ, ಇಂತರಸನರಸಿವೆರಸು ಸಂಸೃತಿಯ ಬಾಳ್ಗೇಡಂ ಕುರಿತು ಮಾತುಗುಟ್ಟುತಿರ್ದುಂ ಬರ್ದುಣಿಸಂ ಮರ್ದುಣಿಸೆಂಬಂತಿರುಂಡು ಸಜ್ಜೆವನೆಗೆ ಪೋದಂ. ಅಂತು ಬಗೆವಗೆಯ ಕಳವಳದಿಂ ನಿದ್ದೆವೋದ ರಾಯಂ ಕಡೆಯಿರುಳೊಳೊರ್ವಂ ಪಾರ್ವಂ ಬಂದು ತೀರ್ಥಯಾತ್ರಾಫಲಮಂ ನೆರೆ ತಿಳಿಪಿ ಮಾಯಮಾದ ಕನಸಂ ಕಂಡು ಪೊಳ್ತರೆಯೊಳೆಳ್ದು ನಿತ್ಯಕರ್ಮಂಗಳಂ ಗೆಯ್ದೋಲಗಮಂ ಪುಗುತಂದಂ. ಆ ಪೊಳ್ತಿಂಗೆ ನಾಲ್ಗೈಯ ಭೂಸುರತಾಪಸನೊರ್ವಂ ಚಾವಡಿಗೆ ಪಡಿಮೊಗನಾಗಿ ಬರುತುಮಿರ್ಪುದಂ ಕಂಡು ರಾಯನಿದಿರೆಳ್ದುವಂದು ತಲೆವಾಗಿ ಪೊನ್ನ ಗದ್ದುಗೆಯೊಳ್ ಕುಳ್ಳಿರಿಸಿ ಕುಶಲಪ್ರಶ್ನೆಯಂ ಬೆಸಗೊಂಡು ಮತ್ತಂ—ದೇಸಿಗರಣ್ಣ, ಬೆಳರ್ಮೆಯ್ಯನಾಂತ ಪಕ್ಕಿದೇರನಂತುಂ ನಾಲ್ಗೈವೊತ್ತ ಬಾಂಬೊಚ್ಚದಲೆಯ

ನಂತುಂ ಒರ್ತಲೆಯು ಪೊಂಬಸಿರನಂತುಂ ನಿನ್ನಂ ಕಾಣ್ಬೆಂ. ಇಂದಿಂಗೆನ್ನೀಪುಟ್ಟು
ಕಟ್ಟುಗೆಟ್ಟುದು ಅಃ! ನಿನ್ನನೆ ಕುರುಪಿಟ್ಟುದಕ್ಕುಂ ನಿನ್ನಿನ ಕನಸು ದಿಟಂ. ಪುಟ್ಟುಳಿವ
ೞವೆಂಬ ಕಟ್ಟುಬ್ಬಸದ ಕಡಲೊಳೊಡಲೋಡಮಂ ಪೋಪಿಟ್ಟೆನಗೆ ನೀನೆ ಪುಟ್ಟು.
ಮರುಮೆಯ್ಯೊಳೀ ಬನ್ನಮಂ ಕಾಣಲ್ಬಾರದಂತು ಕರುಣಿಸುಯ್. ಮರ್ತ್ಯರ್ ತೀರ್ಥ
ಯಾತ್ರಾದಿಗಳಿಂ ಪಾವನರಪ್ಪರಲ್ತೆ! ಅಂತಿರ್ಪಿನಂ ತೀರ್ಥಯಾತ್ರೆಗಾವಕ್ಷೇತ್ರಂ
ನೊದಲ್, ಆವುದು ಪೆರ್ಮೆಮೆಗೆಡೆ ಇದಂ ಕೂರ್ಮೆಯಿಂ ನಿರವಿಸೆಂದು ಕೈಮುಗಿ
ವುದುಂ ಭೂಸುರಂ ಒಂದು ಪುಣ್ಯಕ್ಷೇತ್ರದ ಮೈಮೆಯುನಿಂತು ಪೇಳಲಾರಂಭಿಸಿದಂ:-.

ಮುನ್ನಮಾಂ ಸೈಪಿನೆಡೆಯನಾಯ್ವೆನೆಂದು ಪೆಸರ್ವೆತ್ತ ತೀರ್ಥಕ್ಷೇತ್ರಂಗ
ಳೊಳ್ ಸಂಚರಿಸುತ್ತಿರ್ಪನ್ನಮೊರ್ಮೆ ನಡುವಟ್ಟೆಯೊಳ್ ಪಲಂಬರಂ ಕರ್ವೇ
ಡರಂ ಕಂಡೆಂ. ಕೊರಲ ತೊಳಚಿದಂಡೆಯ ಪಣೆಯ ಮೂರುಂಗವಲ ಸಿಡುನಾ
ಮದ ಅಳವಟ್ಟ ನಾಲ್ಕೈಗಳಾ ಶಬರರಂ ನಿಟ್ಟಿಸಿಯುಚ್ಚರಿವಟ್ಟವರ ವೃತ್ತಾಂತಮಂ
ಬೆಸಗೊಂಡೊಡವರೊಳೊರ್ವಂ ಇಂತು ಬಿತ್ತರಿಸಿದಂ: ಚಿತ್ತವಿಸುಯ್ ಗಹನರೊ
ಡೆಯ, ಇದೆ ಪೊಂಬೆಟ್ಟದೊಡನೆ ಸರಿವರ್ಪ ಕರ್ವೆಟ್ಟು. ಮುನ್ನಮೊರ್ಮೆ ಬೇಂಟೆಯ
ನೆವದಿನೆಮ್ಮ ಪಕ್ಕಣದಿಂ ತಳರ್ದು ಬಳಗಂಬೆರಸಿ ಅಂಜನಗಿರಿಯ ಕಿಳ್ಬರಿಯ ಪಳು
ವೊಳ್ ಪೋಪುದುಂ ಎಮ್ಮ ಬಾಲರ್ಕಳೊಳೊರ್ವಂ ತನ್ನೆಣೆವರೆಯದ ಗೆಳೆಯರ
ಕೂಡಾಡುತೆ ಕಣ್ಮರೆಯಾಟಕ್ಕೆ ಮೆಯ್ಗರೆದಡಂಗಿರಲ್ಕೆಂದು ಮೆಲ್ಲನೆ ತುತ್ತತುದಿಗೆ
ಪೋದಂಗಡ. ಅಂತು ಪೋದ ಬಾಲಕನ ಕಣ್ಗೊಂದು ದೇವಾರಂ ತೋರೆವರ್ಪುದುಂ
ತನಗದು ಮರೆಯ ತಾಣಮೆಂದೊಳವೊಕ್ಕಂ. ಆಗಳೊಳಗೊಳಗೊಂದೆಡೆಯೊಳ್
ಗಾನದ ನಚ್ಚಣೆಯ ಬಾಜಣೆಯ ಬಿಜ್ಜೋದರರ ಗಂದರರಚ್ಚರಸಿಯರ ಗಜಬಜಿಂ,
ಕುಂಚದ ಕಂಚುಗನ್ನಡಿಯ ಬಿಜ್ಜಣಿಗೆಯ ದೇವಾಂಗನೆಯರ ಗೊಂದಣದಿಂ,
ಸೇವಿಪ ಭಾವಿಪ ದೇವರ್ಕಳೊಗ್ಗರದಿಂ, ಎತ್ತುವಾರತಿಯಿಂ ಪೊಗೆವ ಧೂಪದಿಂ
ಬೆಳಗುವ ದೀಪದಿಂ ಪೊಸತೆನಿಸೆ ಬೆಮೆಗೊಂಡ ಪಸುಳೆಗುವರಂ ತನ್ನಿದಿರ ಪುರು
ಷೋತ್ತಮಮೂರ್ತಿಯನೆವೆಯಿಕ್ಕದೆ ನೋಡುತೆ ಕುಳ್ಳಿರಲೊಡಂ ಭೂಭೂಭೂ
ಎಂದು ಪೂರಯಿಪ ಶಂಖದ, ಧಳಂ ಧಳಂ ಧಳಮೆಂದು ಮೊಳಗುವ ಭೇರಿಯ,
ತುತ್ತುತ್ತುರೆಂದು ಸೂಳಯಿಪ ಪೆಗ್ಗಾಳೆಯ ಬಲ್ಲುಲಿಯೊಳ್ ಮಾಪೂಜೆ ಸಮ
ಸಂದುದು. ತರುವಾಯಿಂ ಪರಿವಿಡಿಯೊಳೆಡೆಗೊಂಡು ಪಂತಿಗೆ ತೀರ್ಥಪ್ರಸಾದಂ
ಗಳಂ ಪಚ್ಚುಗೊಟ್ಟು ಸವಿದು ತಂತಮ್ಮೆಡೆಗೆ ಪೋದಿಂಬಳಿಯಿಂ ತನ್ನ ಪಾಲ ಸಿಕ್ಕ

ಕಮನುಂಡೆಮ್ಮೆಳೆಯನುಂ ಪೊರಮಟ್ಟಂ. ಇನಿವೊಳ್ತುಂ ತಪೆದೆಂ, ಪೆತ್ತರೇಂ ಬ ಯ್ವರೊ ಎಂಬ ತಳಮಳದಿಂ ಜಿಮ್ಮನೆ ಬರ್ಪ ಕಂದನ ನಾಲ್ದೋಳ ಶೋಭೆಯುಂ ಕಂಡಚ್ಚರಿವಟ್ಟೇತೆರನನಾತನಂ ಕೇಳ್ದೆವು. ಆಗಳ್ ತಾಂ ಪೋದುದಂ ಕಂಡುದಂ ಕೊಂಡುದನುಂಡುದಂ ಮತ್ತಂ ಬರ್ಪ ಬಟ್ಟೆಯೊಳ್ ಪೊಸತೋಳ್ ಕವಲೊಡೆ ದುದಂ ತಿಳಿಯೆ ಪೇಳ್ದು, ನಡೆದುಂ ಬಳಲದ ನುಡಿದುಂ ಬೇಸರದ ತನ್ನಿರವಂ ತೋರಿಸಿದಂ. ಬಾಲನಿರವಂ ಕಂಡು ಪಾರದಂ ಸಿದ್ಧರಸವಾದ ಸಂತಸಮ ಪ್ಪುದುಂ ಆಮೆಲ್ಲರುಂ ಗಿರಿಯ ಶಿಖರಮನೇರಿ ಮೈಮೆವೆತ್ತ ಶ್ರೀಪುರುಷೋತ್ತ ಮನಂ ಕಂಡು ಇಂತು ಪಾವನರಾದೆವ್ಯೆ. ಎಮಗಾವಗಂ ಪಸಿವುನೀರಳ್ಕೆಗಳ ನೋವಾಗದು. ನೀನುಮಾಕಾರುಣಿಕಮೂರ್ತಿಯುಂ ಕಣ್ಣಾಣಿಯೆ ಕಂಡು ಪೋಗು. ಎಂದೆನಗೆ ಬಟ್ಟೆಯುಂ ತೋರಿ ಬೇಡರ್ ಅಮ್ಮಾವಾಸದತ್ತಲ್ ಪೋದರ್.

ಇಂತಾ ಬೇಡರುಪದೇಶಮನೊಪ್ಪುಗೊಂಡಾನೀಲಶೈಲಮನಡರ್ದು ಆದಿ ಮೂರ್ತಿಯ ದರ್ಶನದಿನಾನುಮಾತನ ಸಾರೂಪ್ಯಮನೈದಿ ಬಂದೆನರಸಾ! ನೀನುಮಾದೈವದೊಂದು ನೆರವಂ ಪಾರಲಪ್ಪುದು ಎಂದು ಕಥಿಸಿದಂ.

ಲವಣಾಂತಕ, ಇಂತು ತನ್ನಿರವಂ ಕೇಳಿಸಿದ ವಿಪ್ರವರ್ಯನಂ ರನ್ನಗೊ ರಲಂ ಮತ್ತಂ—ಲೇಸುಲೇಸ್ಸೆ, ನೀಂ ಧನ್ಯಂ ನಿನ್ನ ದರ್ಶನದಿಂ ಆನುಂ ಧನ್ಯನೆಂ; ಆಮೊಡಮಂತೇರ್ಪಟ್ಟ ಕ್ಷೇತ್ರಮಂ ಕಣ್ಣಾರೆ ಕಂಡು ಬಂದ ಭವದ ಬವಣೆಯೊಂದ ದಂತುಂ ಮುಂದಣ ಭವದ ಬವಣೆ ಬಾರದಂತುಂ ತಪೆವುದೇ ಮೇಲ್. ಅದುಕಾ ರಣಂ ನೀನೆ ನಾಯಕನಾಗಿ ಕೊಂಡುಯ್ದಾ ಕ್ಷೇತ್ರಮನೆನಗಂ ತೋರ ಎಂಬುದುಂ ವಿಪ್ರನುಮೊಪ್ಪೆ ಪಯಣಕ್ಕೆ ಸನ್ನಣಮಣಿಯಾದುದು. ಪೌರರುಂ ಪೊರವಯಣ ಕನುವಾದರ್.

ಈ ಬಗೆಯಿಂ ರತ್ನಗ್ರೀವಂ ತನ್ನೊಂದಿಗರೊಡನೆ ಪೊರಮಟ್ಟು ನಿಚ್ಚವಯ ಣದೊಳ್ ನಡೆದು ಬಟ್ಟೆಯೊಳ್ ಕಂಡ ಪುಣ್ಯಕ್ಷೇತ್ರಂಗಳ ದರ್ಶನಂಗೊಂಡು ಪೋಪುದುಂ ಮುಂತೆ ಗಂಡಕಿ ಕಾಣಿಸಿಕೊಂಡಳ್. ಆ ಪುಣ್ಯವಾಹಿನಿಯುಂ ದಿಟ್ಟಿ ಸುತರಸಂ ದಿನವಯಣಮಂ ಮಾಣ್ದೊತ್ತಿನೊಳೆ ಜೀಡುವಿಟ್ಟು ಇದಾವ ಪೊಳ್ತಂ ನಿರವಿಸೆಂದು ಭೂಸುರನಂ ಬೆಸಗೊಳಲೊಡನಾತನಿಂತು ಬಣ್ಣಿಸಿದಂ;—

ಕೇಳಯ್! ಇದು, ಜಗದೊಳ್ ಪಾಪದ ಕೋಲ್ಕೆಸರ ಬೆಂಕೆಯೊಳ್ ಪಂದಿಯಂತಿರೆ ಪೊರಳ್ವ ನರಲ್ವೆಗ್ಗಿನ ಲೋಗರ್ಗೆ ಮೆಯ್ಗುರ್ಚಲೆಂದು ಬೊಮ್ಮಂ ಪೊಸತ್ತೆನೆ ಸಮೆದ ಗಂಡಕಿವೆಸರ ತೀರ್ಥಮೈಸೆ. ಆರಾನುಮೊರ್ಮೆ ದಿಟ್ಟಿಸಲೊಡಂ ಪಾವನಂ, ಮುಟ್ಟಲೊಡಂ ಶುದ್ಧಂ, ಸವಿಯಲೊಡಮಮರಂ, ಮೞುಂಗಲೊಡಂ ಮುಕ್ತನಪ್ಪನೆನೆ ಈ ತೀರ್ಥದ ಮೈಮೆಯನಾವಂ ಬಣ್ಣಿಸಲಾರ್ಪನೊ! ನದಿಯೊಳಿರ್ಪ ಕಲ್ಲೆಲ್ಲಂ ಸಾಳಿಗ್ರಾವಂ; ಭವರೋಗದೊಳಸವಳಿದು ನಮೆವ ರೋಗಿಗೀಕಲ್ಲಂ ಕರ್ಚಿದ ನೀರಂ ಕುಡಿಯಿಸಲೊಡಮೊಡನೆಯೆ ಕುತ್ತಂ ಪೋಪುದು. ಇಂತೀರ್ಪಟ್ಟ ಸಾಲಿಗ್ರಾಮದ ಮಾಹಾತ್ಮ್ಯಮಂ ಕುರಿತೊಂದು ಕಥೆಯುಂಟು. ಅದೆಂತೆನೆ:—

ಮುನ್ನಮೊರ್ವನರುಗುಲಿವೆಸರ ಕರ್ವೇಡಂ ನರಮೃಗಂಗಳ ಬೇಂಟೆಯನಾಡುತೆ ತನ್ನೊಗೆತನಕ್ಕೆ ಪೇಳ್ವರನಂ ಬಳಸಂದು ರೂಪುಗೊಂಡ ಪಾಪದೊಂದು ಮೊತ್ತಮೆನೆ ಪಲಗಾಲಂಬರಂ ಜೀವಿಸಿರ್ದು ಕಡೆಯೊಳೊಂದುದಿನಂ ಕಾಲಧರ್ಮಮಂ ಕಾಣಲಿರ್ಪವಸರದೊಳ್ ಜವನ ದೂದರ್ ಅರುಗುಲಿ ಜೀವಾತ್ಮನಂ ಸೆರೆವಿಡಿದು ಪಲವುಂ ಯಾತನೆಗಳಿಂ ನೋಯಿಸುತಿರೆ ಸುರುಳ್ವುರುಳ್ದು ತಾಂ ಕೆಟ್ಟೆನೆಂದು ಗೋರಿಟ್ಟಳ್ವಾ ಬಡಜೀವಿಯಂ ದಿಟ್ಟಿಸಿ ಸಚ್ಚರಿತ್ರನಪ್ಪ ಭಾಗವತನೊರ್ವಂ ಮುಟ್ಟಯಿಸಿ ಬಂದು ತನಗಾತನೊಳ್ ಮರುಕಂ ಪುಟ್ಟಲೊಡಂ ಕೈಗರಡಿಗೆಯ ಸಾಲಗ್ರಾಮಮಂ ಕರ್ಚಿ ತೀರ್ಥಮನಾತನ ಬರತ ಬಾಯೊಳೆರೆದಂ. ಇಂತೆರೆದ ಸಾಲಗ್ರಾಮತೀರ್ಥದ ಮೈಮೆಯಿನಾ ಕೊಲೆಗನ ತುದಿನಾಲಗೆಯೊಳ್ ಶ್ರೀರಾಮನಾಮೋಚ್ಚರಣಂ ನೆಗಳ್ದುದು. ಆ ಪದನೊಳ್ ದಿವ್ಯಸುಂದರ ವಿಗ್ರಹರ್ ವಿಷ್ಣುದೂತರಿಳಿತಂದು ಶ್ರೀರಾಮನಡಿಯ ಬಾನದೊಳಿರ್ಪ ಬೀಡನಂ ಬಳಸಂದು ಬೋಳ್ಯಿಸುತಿರ್ಪುದುಂ ಬೆಕ್ಕಸಂಬಟ್ಟು ಜವನಾಳ್ಗಳ್ ವಿಷ್ಣುದೂತರಂ ನಿವಾರಿಪ ಬಗೆಯೊಳ್—ಓ! ಪಿರಿಯರಿದೇತರ ಗೆಯ್ಮೆಯೊ? ನೇರಿದರ್ಗಿನಿತೊಂದರಿಯುಮೆ! ನೀಮೀಪಾಪಾತ್ಮನಂ ಬರಿದೆ ಕೊಂಡುಯ್ದು ವೈಕುಂಠಮಂ ಪೊಲೆಗಿಡಿಸದಿರಿಂ; ತೊಲಗಿಂ: ಈತನೆಮ್ಮ ಪಾಲ್ಗೆ ಸಂದನ್ನೈಸೆ! ಅಂತದುಕಾರಣಮೆಮಗಂ ಎಮ್ಮೊಡೆಯನಾಣತಿಗಂ ತಡೆವಾರದಂತು ಪಿಂದೆಗೆದು ಪೋಪುದೆಂದು ಬಿನ್ನಯಿಸಿದರ್. ಆಗಳ್ ವಿಷ್ಣುದೂತರ್—ಪೋಪೋಗಿಂ ಈಗಳೀತಂ ವಿಷ್ಣುಭಕ್ತನಾಗನೆ! ಸಾಲಗ್ರಾಮದ ತೀರ್ಥದಿಂ ಪರಿಶುದ್ಧನಾದಿವನಂ ಕಿಟ್ಟದಿರಿಂ; ಕಡೆವೊಕ್ಕಿಂಗಾನುಂ

“ ರಾಮರಾಮ ” ಎಂಬೀ ನಾಲಗೆ ಪುಟ್ಟುವ ನಾಲಗೆಯು ಮಾನಸಂ ಪಾವನ ನಾಗದೇಂ ಪೋಕುಂ? ಶ್ರೀಹರಿಗೆ ಕರ್ಗಲ್ಲ ಕಾಲ್ಮಣೆಯೆನಿಪ್ಪ ಸಾಲಗ್ರಾಮದ ಮಾಹಾತ್ಮ್ಯೆಯೇಂ ಕಿರಿದೇ? ನೀಮರಿಯಿರೆಂದು ಪೇಳ್ದು ಯಮನ ದೂತರನೆ ಳ್ಚಟ್ಟಿದರ್.

ಆ ವೇಳೆಯೊಳ್ ಸಿಂಗರಂಬೆತ್ತ ಸಿವಿಗೆಯೊಂದು ವೈಕುಂಠದಿಂ ನೆಲಕ್ಕಿಳಿತ ರ್ಪುದುಂ ಆಬೇಡನನದರೊಳೇರಿಸಿ ತಾಮುಮಡರ್ದು ಪೋದರ್ ಗಡ! ಅಂತದುಕಾರಣಂ ದೊರೆವಾರದ ಮೈಮೆಯೀ ಗಂಡಕಿವೆಸರ ಪೊನಲ್ಗಂ ಕಲ್ಗಂ ಸಲ್ಗುಂ. ನೀನೀ ನೀರೊಳ್ ಮಿಂದುಂ ಶಿಲೆಯುಂ ಪೂಜಿಸಿಯುಂ ಕೃತಾರ್ಥನಾಗೆಂದರಿ ಪಿದಂ.

ಬಳಿಕ್ಕಂ ರತ್ನಗ್ರೀವಂ ವಿಪ್ರನ ಸೊಲ್ಲಿಂಗೊಡಂಬಟ್ಟು ಸಪರಿವಾರಂ ತೀರ್ಥದೊಳ್ ಮುಳುಂಗಿ ಸಾಲಗ್ರಾಮಪೂಜೆಯನೊಡರ್ಚಿ ಕ್ಷೇತ್ರಸಂಖ್ಯೆಯ ಕಲ್ಗಳಂ ಕೊಂಡು ಮುಂತೆರಳ್ದಂ.

ಇಂತು ಪೋಪೋಗುತಿರ್ಪಿನಮಾಪದದೊಳ್ ಅಡಿಗಡಿಗೆ ತಡಿಯುಂ ಮೀರಿ ಬರ್ಪ ತೆರೆಗಳಿಂ, ಭೋರ್ಗರೆವ ಸಬುದದಿಂ, ಕರೆಗಣ್ಮುವ ಬೆಳ್ನೊರೆಯಿಂ ಕಣ್ಗೆಡ್ಡ ಮಾದ ಗಂಗಾಸಾಗರಸಂಗಮಂ ಮುಂಗಡೆಯೊಳೆಸೆದತ್ತು. ಮತ್ತಮದು ಗುಳಿ ಗುಳಿಸುತೇಳ್ವ ಜೀಳ್ವ ಮರಿಮೀಂಗಳೆಡೆಯಾಟದಿಂ, ತಾಂತಮಗೆ ನೆಗೆನೆಗೆದುರುಳ್ವ ಮೀಂಗಳ ಸೋವಿನ ಹೊಂಚಿನೋಟದೊಳೆ ಎಡೆಗೆಡೆಗೆ ಪಾರುವ ಕಡಲ್ವಕ್ಕಿಗಳ ಸುಳಿಯಿಂ, ಮುತ್ತಿ ಮಂಡಳಿಸಿದ ನೀರ್ವಕ್ಕಿಗಳ ಭಯದಿಂ ನೀರೊಳೆ ಮೈಗರೆವ ಬಾಳೆಮೀಂಗಳಿಂ, ಒಳಗೊಳಗಡಂಗಿ ಪರಿದಾಡುವ ಬಾಳೆಗಳಂ ಬೆಂಬತ್ತಿ ಸುಳಿ ಸುಳಿದು ತಳಮಳಂಗೆಯ್ವ ತಿಮಿತಿಮಿಂಗಿಲಂಗಳ ದಳದುಳದಿಂ ಕರಮೊಪ್ಪಿರ್ದುದು.

ಇಂತು ರನ್ನಬಂಡಾರಿಯುನೆ ಆಯ್ದೊರಲ್ದು ಬೆರೆದಿರ್ಪ ನೀರವೆಣ್ಣ ಜಾಣ್ಮೆಗೆ ಸೋಜಿಗಂಗೊಂಡು ಮೇಣ್ ತಾಂ ಪೋಗಲಿರ್ಪ ಕ್ಷೇತ್ರದ ನೆನೆಪಿಂ-- ಆಚಾರ್ಯ, ಎನಿತು ದೂರದೊಳಿರ್ಪುದಾಸಂದ ನೀಲಾಚಲಂ? ಎಂದಿಂಗೆ ಕಾಣ್ಬೆಂ? ತಿಂಗಳೊಂದಾದುದಲ್ತೆ? ಎಂದು ಬೆಸಗೊಳಲೊಡಂ ಭೂಸುರಂ—ಏಂ ತೋರದೆ ಮಾಕಾಳಿಯು ಒಡಲ ಕರ್ಪಿನ ನೀಲಾಚಲಂ? ಅಂದೀಯೆಡೆಯೊಳೆ ನಾಲ್ಗೈಯ ಬೇಡರಂ ಕಂಡೆನೀಬಟ್ಟೆಯೊಳೆ ಪೋದೆನೀದೆಸೆಯೊಳೆ ಬೆಟ್ಟಮನೇರಿದೆಂ; ಇದೆ

ಬೆಟ್ಟಂ ದಿಟ್ಟಿಸೆಂದು ತೋರಿದಂ. ಆಗಳರಸಂ ಕಣ್ಣೆತ್ತಿ ನಾಲ್ಕುಂ ದೆಸೆಯುಂ ಕಂಡುಂ ಬೆಟ್ಟಂ ಕಾಣಿಸದಿರೆ ಬೆಮೆಗೊಂಡು ಪಾರ್ವಂ ತೋರಿಪ ಬೆಟ್ಟಮಂ ಕಂಡಿರೆ ಎಂದು ತನ್ನ ಪರಿಜನರಂ ಕೇಳ್ವದುಂ ಕಂಡೆವಿಲ್ಲೆಂದು ಮಾರ್ನುಡಿದರ್. ಆ ನುಡಿಗೆ ರತ್ನಗ್ರೀವಂ ಕಟ್ಟಚ್ಚರಿವಟ್ಟು—ಏನೈ ನೀನೊರ್ವನೆ ಕಂಡಯ'; ಆಮಿನಿಬರುಂ ನೋಡಲಾರದ ಪಾಪಿಗಳೆ? ಇದರಡಿಯೇಂ ಪೇಳೆಂದು ಕೇಳಲೊಡಂ ತನ್ನ ಜಾನ ದರಿವಿಂ ವಿಪ್ರಂ—ಅಪ್ಪುದಪ್ಪುದು, ಈಗಳರಿತೆಂ, ಈ ಸಂಗಮದೊಳ್ ಮೊದ ಲೊರ್ಮೆ ಮಿೀಯದಿರ್ಪ ಜಾತ್ರೆಗರ್ಗೆ ಬೆಟ್ಟಂ ದಿಟ್ಟಿಗೆ ಬಾರದೈಸೆ. ನೀಮದುಕಾ ರಣಂ ಗಂಗಾಸಾಗರಸಂಗಮತೀರ್ಥದೊಳ್ ಮಿಂದು ಬರ್ಪುದೆಂದು ತಿಳಿಪಿದಂ. ಆ ನುಡಿಯಂ ಕೇಳ್ದೆಳ್ದು ಸರ್ವರುಂ ತೀರ್ಥಸ್ನಾನಂಗೆಯ್ದು ದಾನದಕ್ಷಿಣೆಗಳಿಂ ವಿಪ್ರಕುಲಮಂ ಸಂತಸಂಗೊಳಿಸಿ ತವಕದಿಂ ಮುಂದೆಸೆಯಂ ನೋಳ್ಪದುಂ ಪುಣ್ಯದ ರಾಶಿಯೆನೆ ಮೈಮೆವೆತ್ತ ಪರ್ವತಂ ತೋರೆವಂದುದು. ಆಗಳ್ ಪೆಳವಂ ನಡೆ ಗೊಂಡಂತುಂ, ಕುರುಡಂ ಕಣ್ಬಡೆದಂತುಂ ಪೆರ್ಚಿದ ಸಂತಸದಿಂ ಜಾತ್ರೆಗರ್ ಓಡು ತುಮಾಕರ್ವೆಟ್ಟಮನೇರಿ ಪೋದರ್.

ಕೇಳೆಲೆ ಚಿಕ್ಕರಸ! ಇಂತು ನೀಲಾಚಲಶಿಖರಮನಾರೋಹಣಂಗೆಯ್ದು ಶ್ರೀಪುರುಷೋತ್ತಮಮೂರ್ತಿಯಂ ಕಂಡು ಪ್ರಸಾದಮಂ ಕೊಂಡು ಕೆಲರ್ ವಿಷ್ಣುಸಾರೂಪ್ಯಮನೆಯ್ದಿದರ್; ಕೆಲರ್ ಪೊಂದಿ ವಿಷ್ಣುಲೋಕಕ್ಕೈದಿದರ್; ಕೆಲರ್ ಪುರುಷೋತ್ತಮನ ಸೇವೆಯೊಳಲ್ಲಿಯೆ ನಿಂದರ್. ರತ್ನಗ್ರೀವಂ ನಿಜಸತಿಯೊ ಡನೆ ಸಾಯುಜ್ಯಪದವಿಗೇರಿದಂ. ಇಂತೀ ನೀಲಗಿರಿಮಾಹಾತ್ಮ್ಯೆಯಂ ಮಂತ್ರಿಪಂ ಕೇಳಿಸಿದಂ. ರಾಘವಾವರಜಂ ಇನಿತೊಂದು ಪೆರ್ಮೆಯ ಕ್ಷೇತ್ರದ ಮೈಮೆ ದಿಮ್ಮಿ ತೆಂದು ಕೌತುಕಂಗೊಂಡು ದರ್ಶನಂಗೊಂಡು ತುರಂಗದ ಕಾಪಿನೊಳ್ ಮುಂದೆ ಪೋಗುತುಮಿರ್ದಂ.

---

೧೦. ಸುಬಾಹುಯುದ್ಧಂ.

ಇಂತು ರಾಘವನ ಜನ್ನದ ಕುದುರೆ ತೆಂಕಗ್ಗೆ ಮೊಗಮಿಕ್ಕಿ ನಡೆಯುತು ಮಿರ್ಪುದುಮಿತ್ತಲಾವೇಳೆಯೊಳ್ ಚಕ್ರಾಂಕಪುರದ ರಾಯುಗುವರಂ ಪ್ರಜೆಗಳ ದೂರಿಂಗೆ ಮೇಣ್ ತನ್ನ ಬಿನದಕ್ಕೆ ಸಡಗರದಿಂ ಬೇಂಟೆಗೆಂದು ಪಳುವಂ ಪುಗು

ತಂದಂ. ಆಗಳ್ ಬೇಡವಡೆ ಕವಣೆಯು ಮಿಂಟೆಯು ಅಂಟುವಲೆಯು ತಡಿಕೆವಲೆಯು ಬೀಸುಂಬಲೆಯು ಕಣ್ಣಿವಲೆಯು ಬೆಳ್ಳಾರ ಬಲೆಯು ಗುದಿಗೆಯು ಕವಲ್ಗೋಲ ನೇಣ ಕಡಿಗತ್ತಿಯು ಬಿಲ್ಲಂಬುಗಳ ಬಲ್ಪೊರೆವೊತ್ತು ಜಾಯಿಲಂಗಳಂ ಕೂಡಿ ನಡೆತಂದುದು. ಅಂತು ಬಂದ ಬೇಡರ್ ಕಾಡಂ ಮುತ್ತಿಯುಂ ಮಿಗದಿಕ್ಕೆಯಂ ಹೊಂಚಿಯುಂ ಬಲೆಗಳನೊಡ್ಡಿಯುಂ ಕುತ್ತುರಂ ಸೋವಿಯುಂ ನೀರ್ದಾಣದೊಳ್ ಕತ್ತರಿ ಗಂಡಿಯುನೆತ್ತಿಯುಂ ಮರನನಡರ್ದುಂ ಅಬ್ಬರದೆ ಬೊಬ್ಬಿರಿದರುಚಿ ಬೇಂಟೆಯಾಡುತಿರೆ ನಿಗುರ್ದ ಕೊಡಂಕೆಯ ಮೊಲನ, ಅಳ್ಳೆಯೊತ್ತುವ ಮರೆಯ, ಪಳ್ಕೆಗೆಟ್ಟ ನರಿಯ, ಬೆದರಿದ ಕಡವೆಯ, ಕೆರಳ್ದೆಕ್ಕಲನ, ಕೊಕ್ಕರಿಸಿದ ಪಂದಿಯ ಕಣ್ಗೊಳ್ಳಿಸಿನ ಕರಡಿಯ, ಮುಕ್ಕುರಿಕ್ಕುವ ಕಾಳ್ಕೋಣನ, ಕೋಡಿವಾನೆಯ, ಮೊರೆವ ಪುಲಿಯ, ಗರ್ಜಿಸುವ ಸಿಂಗದ ಗಜಬಜದ ಸಂಚಾರಂ ಪಿರಿದಾಯ್ತು.

ಆಗಳ್ ಇದೆ ಕಿರುಬನನಿಸು, ಚಿತ್ತಗನಂ ತುಡು, ಕಾಳ್ಕುರಿಯಂ ಕುತ್ತು, ಬಗ್ಗನನಿಕ್ಕು ಎಂದು ಎಚ್ಚರಿಸುತುಂ ಮೇಣೊರ್ಮೆ ಸೊಪ್ಪಳಾಗದಂತು ಸನ್ನೆವೇಂಟೆಗೆಯ್ಯುತುಂ ಅಳವಿಗೆಟ್ಟ ಕಾಳ್ಮಿಗಂಗಳಂ ಸಂಹರಿಸಿದರ್.

ಇಂತು ಮೃಗಕುಲಂ ನಿರ್ನಾಮಮಾಗಲೊಡಂ ಸಂತಸವಾಗೆ ಬೇಡರ್ ಅಡಗಂ ಬಸೆಯಂ ನೆತ್ತರಂ ತೊವಲಂ ಕೋಡಂ ಜಂತವಂ ಚವುರಿಯಂ ಪೊತ್ತು ನಗರಿಗೆ ಮರಲ್ದು ಬರ್ಪಾಬಟ್ಟೆಯೊಳ್ ಸಿಂಗರದ ಜನ್ನಗುದುರೆಯಂ ಕಂಡು ಪಿಡಿದೊಯ್ದು ತಮ್ಮೊಡೆಯಂಗೆ ವಾಹನಮಕ್ಕುಮೆಂದು ದಮನಂಗೊಪ್ಪಿಸಿದರ್.

ಆಗಳಾತಂ ಪೊಸಕುದುರೆಯಂ ನಿಟ್ಟಿಸಿ ಅಳ್ಕರಿಂ ಸನಿಹಕ್ಕೆತಂದು ಬಾಳದ ಬಿರುದಿನೋಲೆಯಂ ನೋಡಿ ಕೈಯೊಳ್ ಕೊಂಡು ಓದಿ ಏರುಗೊಂಡೆಕ್ಕಲನ ಮಸಕದಿಂ ಕಿಡಿಕಿಡಿವೋಗಿ ಕುಡಿಮೀಸೆಯಂ ತಿರ್ದುತೆ—ಆಃ! ಶ್ರೀರಾಮಂ ಒಂದೆ ಬೆಳ್ಗೊಡೆಯೊಳಾಳ್ವ ರಾಯಂಗಡ! ಬೇಳ್ವಂಗಡ! ತಮ್ಮಂ ಶತ್ರುಘ್ನಂಗಡ! ಮಿಡುಕುಳ್ಳರ್ ಕಾದಲಕ್ಕುಂಗಡ! ರಾಮನೊರ್ವನೆ ಚಲದಂಕಂ, ಶತ್ರುಹನೊರ್ವನೆ ಬೀರಂ, ಮಿಕ್ಕರಾಯರೇಂ ಪಂದೆಗಳೆ? ಏತರ ಮಾತೊ? ತೋಂಟಿಗಂ ಬೆರ್ಚನಿಟ್ಟು ಪಕ್ಕಿಗಳಂ ಬೆದರ್ಚಲೊಡರ್ಚುವಂತೆ ರಾಮಂ ತನ್ನಾಳ್ತನದ ಪೆರ್ಚಿಕೆಯಿಂ ಲೋಗರಂ ಬೆದರ್ಚುವನಕ್ಕುಂ. ಅಕ್ಕೆ ತಪ್ಪೇಂ! ಕೊಳುಗುಳದೊಳೆನ್ನ

ಗಂಡುಗಲಿತನಮಂ ತೋರಿಸುವೆಂ ಎಂದು ಕುದುರೆಯಂ ಬಂದಿವಿಡಿದು ಪೊಳ್ಲಗಟ್ಟಿದಂ.

ಇತ್ತಲ್ ಕಾಪಿನಾಳ್ಗಳ್ ಒತ್ತರಿಸಿ ಪತ್ತೆಸಾರ್ದು ಹಯಮಂ ಬಂದಿವಟ್ಟುದಂ ಕಂಡು ಮರಲ್ದು ತಮ್ಮೊಡೆಯನಪ್ಪ ಪ್ರತಾಪಾಗ್ರ್ಯಂಗೆ ನಿರವಿಸಿದರ್. ಅತನಾನುಡಿ ತನ್ನ ಕಿವಿಯಂ ಪುಗುತರ್ಪ ಮುನ್ನಮೆ ಮಿಕ್ಕುವರ್ಪ ಎಕ್ಕತುಳದ ರೋಸದಿಂ ಕುಡಿಮೀಸೆಯಂ ಪುರಿಗೆಯ್ದು ಬೆಮರಿಡುವ ಕೆಕ್ಕೆಯಂ ಸಮರಿ ಕೆತ್ತುವ ಮುಯ್ಪನೊತ್ತಿ ಬಿಲ್ಗೆ ಕೊಪ್ಪನೇರಿಸಿ ತಿರುವಾಯ್ಗೆ ಕಣೆಯಂ ಪೂಡಿ ತೇರನೇರಿ ನಾಲ್ವಗೆಯ ಪಡೆವೆರಸು ಪಗೆಯೊಳೆತ್ತಿನಡೆದಂ.

ಇತ್ತಲ್ ಪೋರ್ಕೆಗೆಂದು ಬರ್ಪರಿಸೇನೆಯಂ ಕಂಡು ತನ್ನ ಮೆಯ್ಗಾವಲಕಿರುವಡೆಗೆ ಕೈವೀಸಿ ಚೂಣಿಯೊಳೆ ನಿಂದು ತಾಗಿದ ದಮನನನಿದಿರ್ಚಿ ಪ್ರತಾಪಾಗ್ರ್ಯಂ ಕೋಲ ಸರಿಯಂ ಕರೆಯುತೆ ಎಲೆಪಸುಳೆ, ನಿನಗಿಂತೇಂ ಹರಣಂ ತಿಣ್ಣಮಾಯ್ತೆ? ನಿರ್ನೆರಮೆನ್ನೀಕೂರಂಬುಗಳ್ಗೆ ತಲೆಯಂ ಮಾರುಗೊಟ್ಟು ಸಾಯಲ್ ಬಗೆವಾ? ಹಯಮಂ ಬಿಟ್ಟು ಪುದುವಾಳ್ ಎಂದೇಳಿಸಿದಂ. ಆ ನುಡಿಗೆ ಕಡಂಗಿ ದಮನಂ ಹರಣಂ ತಿಣ್ಣಮಾದರ್ಗೆ ದಾವ್ರಂ ನೀರೊಂದು ಟಾವ್ರಂ ಒಳವು. ಸಂಗರದ ದಂದುಗಮೇಕೆ? ನಾಲಗೆ ನಿಡಿದಾದರ್ಗೆ ಕೂರ್ವಾಳುಂ ಕೋಲುಮೀಗಳೆ ಸಾಧ್ಯಂ. ಸಲ್ಲದ ನಿನ್ನ ಬಿಂಕದ ನುಡಿ ಸಾಲ್ಗುಮೆಂದು ಮೂಡಿಗೆಯಿಂ ಕಿಡಿವಿಡುವುರಿಗಣೆಯನಾರ್ದೆಚ್ಚಂ. ಇಂತವರಿರ್ವರ ಕಾಳೆಗಂ ಬಲ್ವಿರಿದಾಗೆ ಕಡೆಯೊಳ್ ಪ್ರತಾಪಾಗ್ರ್ಯಂ ದಮನನ ಇಸುಗೆಗೆ ಮುಚ್ಚೆವೋದಂ. ಆ ಸಮಯದೊಳ್ ರಥಿಕನ ಸೋಲಂ ಕೇಳ್ದು ಪುಷ್ಕಲಂ ತಳ್ವದೆ ಮಾರಾಂತು ಮಾಮಸಕಂ ಮಸಗೆ ದಮನಂ ವೀರರ್ ಮೆಚ್ಚುವನ್ನಂ ದೇವರ್ಕಳ್ ಪೊಗಳ್ವನ್ನಂ ಸಮದಂಡಿಯೊಳ್ ಪೋಣರ್ದು ಕಟ್ಟಕಡೆಯೊಳ್ ಮೈಗುಂದಿ ಬಸವಳಿದಂ.

ಇಂತು ಸುಬಾಹುಜಂ ಮೈಮರೆಯಲೊಡಮಾಗಳ್ ತಳ್ವದೊರ್ವನೋಲೆಕಾರಂ ತಳರ್ದು ಪುರಕ್ಕೈತಂದು ಸೋದರಂಬೆರಸೊಡ್ಡೋಲಗಂಗೊಟ್ಟಿರ್ದ ತಮ್ಮಾಳ್ದಂಗೆ—ದೇವರೀಗಳೆ ಕೊಳುಗುಳಕ್ಕೆ ಪೊರಮಡಲಕ್ಕುಂ; ಅರಿರಾಯರೊಳೆಮ್ಮ ಚಿಕ್ಕರಸಂ ನಿಂದು ಕಾದಿ ಮೈಸೋಲ್ತಂ, ಎಂದು ಬಿನ್ನಪಂಗೆಯ್ವುದುಂ ಸುಭುಜಂ ತತ್‌ಕ್ಷಣದೊಳ್ ಸಂಗರಕ್ಕೆ ಪೊರಡಲಡಿಯಿಕ್ಕಿ ರಣದುಂದುಭಿಯಂ

ಮೊಳಗಿಸಿದಂ. ಆ ವೇಳೆಗೆ ಸಬಳಿಗರ ಕೊಂತಗಾರರ ಹರಿಗೆಕಾರರ ಕೈದುಗಾರರ ಪಡೆವೆರಸು ಪಡೆವಳ್ಳರ್ ರಾವುತ್ತರ್ ಸಾದಿಗಳ್ ತೇರಾಳ್ಗಳ್ ದಂಡೆತ್ತಿ ನಡೆದರ್. ಅವರಂ ಬಳಸಿ ಚಿತ್ರಚಿತ್ರಾಂಗಸುಕೇತುಗಳ್ ಮುಂತಪ್ಪ ಮಹಾರಥರ್ ಪಡಿಬಲಮಂ ಕೂಡಿ ತೆರಳ್ದರ್.

ಇತ್ತಲ್ ಮೊದಲ ರಣರಂಗದೊಳ್ ಮುಚ್ಚೆಗೆ ಸಂದದಮನನಳಿದುಳಿದ ಮೈಗಾಪಿನ ತುಳಿಲಾಳ್ಗಳ ಶೈತ್ಯೋಪಚಾರದತ್ತಣಿಂ ಮೆಯ್ದಿಳಿದು ಎತ್ತಂ ದಿಟ್ಟಿಸುವ ಭರದೊಳಿದಿರ್ಗೆ ಬಂದ ತನ್ನಯ್ಯನ ಬೆಂಬಲದ ಸೇನೆಯಂ ಕಂಡು ತಾನುಮವರೊಳೊಂದಿದಂ. ಮತ್ತಮಿಂತಳವಾಂತ ಕುವರನೊಂದಿರಕ್ಕೆ ಮೆಯ್ವೆರ್ಚಿ ಸುಭುಜಂ ಪಗೆರಾಯರಂ ಸೋಲಿಪೊಂದುಜ್ಜುಗದಿಂ ತನ್ನ ಪಡೆಯಂ ಕೊಂಚೆಗಟ್ಟಿನ ಕೋಂಟೆಯಂತೆ ಸಮೆದು ಮೊಗದೊಳನುಜಸುಕೇತುವಂ ಕೊರಲೆಡೆಯೊಳ್ ಚಿತ್ರಾಂಗನಂ ಪಕ್ಕಂಗಳೊಳ್ ಚಿತ್ರದಮನರನಿರಿಸಿ ತಾಂ ಬಾಲದೊಳ್ ನಿಂದು ಒಡಲೊಳ್ ಮಿಕ್ಕಜೋದರಂ ತುಂಬಿ ಯುದ್ಧಸನ್ನದ್ಧನಾದಂ.

ಅಪೊಳ್ತಿಂಗೆ ಶತ್ರುಹಂ ಮಂತ್ರಿಯಂ—ಅಯ್ಯ ಎಮ್ಮಾಕುದುರೆಯಂ ಸೆರೆವಿಡಿದಿನ್ನೆಬರಮೆಮ್ಮೊಡನೆ ಕಾದಿದ ಕಲಿಯಾವನೀಗಳ್ ಬಲ್ಪಡೆವೆರಸು ಬಂದಿದಿರ್ಚುವನಾವನಾವ ನಾಡಿದು? ಏನೆಮ್ಮೊಳ್ ಕಾದಲಾರ್ಪನೆ? ಪೇಳ್ ಎಂದು ಕೇಳಲೊಡಂ ಸುಮತಿ—ಇದೆ ತೋರ್ಪುದು ಚಕ್ರಾಂಕಪುರವರಂ, ಈ ರಾಯ ನೀನಾಪೊಡೆಯಂ; ಮೊನೆಯ ಮೊದಲೊಳ್ ತನಯುನಳವಳಿದನೆಂದು ಎಮ್ಮೊಳೆತ್ತಿ ಬಂದಿರ್ಪಂ, ಕಡುಗಲಿ ದಲಿವಂ; ಕಾದಿಗೆಲ್ವೊಡೆಮಗಸದಳಂ ಎಂದು ಸೇನೆ ಬೆರಗುವಡೆ ನುಡಿದಂ. ಆ ನುಡಿಯಂ ಮಾಂಕರಿಸಿ ಲಕ್ಷ್ಮೀನಿಧಿ ಕೈವೊಯ್ದು ಏತರ ಕಡುಗಲಿ? ಸಂತಂ ನೋಳ್ಪುದೆಂದು ಪನ್ನತಿಕೆಯಿಂ ಅರುಮೊಗನಂತಿರೆ ಕೊಂಚೆಗೋಂಟೆಯುತ್ತಗ್ಗೆ ನಡೆದಂ. ಅಗಳದರ ಬಾಗಿಲೊಳೆ ನಿಂದಿರ್ದ ಸುಕೇತು ತಡೆಯೆ ಇರ್ವರುಂ ಗದೆಗಳಂ ತಿರಿಪುತೆ ಜಡಿದುಂ ಬಡಿದುಂ ಪೋಣರ್ದರ್.

ಇಂತು ಮುಂದೆಸೆಯೊಳ್ ಪೋಣರುತಿರೆ ಪಕ್ಕದೊಳ್ ಪುಷ್ಕಲಂ ಬೀದಿವರಿದು ನುಗ್ಗಿವರ್ಪನ್ನೆಗಮಾತನಂ ಚಿತ್ರನಿದಿರ್ಚಿದಂ. ಈ ಮಾಳ್ಕೆಯೊಳ್ ಬರ್ಪೊರ್ವರನಿದಿರ್ಚೆ ಎಲ್ಲೆಡೆಯೊಳಮಿರಿತದಿಸುಗೆಯು ಪೊಯ್ಯು ಬಡಿತದ ಕಡಿತದ ಹಾಣಾಹಾಣಿಯು ಕೇಶಾಕೇಶಿಯು ಜುದ್ದಂ ಪೆರ್ಚಿರೆ ಎತ್ತಂ ಕಂಡದ ರುಂಡದ

ಮುಂಡದ ತಂಡಮಾಯ್ತು. ಪೆಣನ ಬಣಂಬೆಯುನಡರ್ದು ಜಿಸುನೆತ್ತರ ಕಾಲ
ನಿಳಿದು ಕಡಿಯೆಲ್ಗಳೊಗ್ಗಂ ಕುರ್ಕಿ ಪಂದೊವಲಂ ಬಾರ್ದು ನಲಿವ ಕಾಗೆ ಗೂಗೆ
ಗಳುಂ, ದಂಡೆಗರುಳನುಂಡು ಸುರಿವ ಬಸೆಯ ಪೊಸಬಸೆಯುಂ ಕುಡಿದೂಳ್ವ ಬಗುಳ್ವ
ನರಿನಾಯ್ಗಳುಂ ಪಗಲುಮಿರುಳುಂ ಚರಿಸುತಿರ್ದುವು. ಇಂತು ರಣರಂಗಂ ಭಯಾನ
ಕಮಾಗೆ ಸುಭುಜಂ ತನ್ನಾಕೆವಾಳರ ಜೀರಮಳ್ಕಾಡೆ ಅಳವೊಳಗಾರೆ ಬಲಂ ಬಯ
ಲಾಗೆ ಕೊಂಚೆಗೋಂಟೆ ದೂಳಿಗೋಂಟೆಯಪ್ಪುದುಂ ತಾನೆ ಮುಂದುವರಿದು ಕಡೆ
ಗಾಲದ ಸಿಡಿಲ ಕಡುಗಾಯ್ಪಿಂ ಮುಂಬರಿದ ಸೌಮಿತ್ರಿಯುಂ ಶಕ್ತ್ಯಾಯುಧ
ದಿನಿಟ್ಟಂ. ಆ ವೇಳೆಯೊಳ್ ಶತ್ರುಹಂಗೆ ಬೆನ್ನೊಳೆ ಹೊಂಚುವ ಸಂಚುವೆತ್ತ
ಣುವಂ ತನ್ನೊಡೆಯನಂ ಪಿಂದುಳಿಪಿ ತಾಂ ಮುಂಜರಿದು ಬರ್ಪಶಕ್ತಿಯುಂ ತುಡುಕಿ
ಪುಡಿಗುಟ್ಟಿದಿಂಬಳಿಯುಂ ಸುಬಾಹು ಹನುಮಂತನೊಳ್—ಕೆಲಸಾರೆಲೆ ಪಾಳ್ಮೊ
ಗದ ಮುದುಗೋಡಗ! ಬಯಲ್ಗೆಬಂದ ಕಿತ್ತಿಲಿಯನಟ್ಟುವ ಗೊತ್ತಿನ ಕೊತ್ತಿಗೆ
ತಡೆಯ ಹಡಲಿಗೆಯೇಂ ಬಲ್ವೆಟ್ಟೆ? ಎಂದು ಬಲ್ಗಣೆಗಳಿಂ ವಾಯುಜನಂ ನೋ
ಯಿಸಿದಂ. ಆಗಳ್ ಕೋಲ ಪೊಯ್ಲುನಣುವನಣುವಂ ಬಗೆದು ಕಾಡ ಮುದುಮಂ
ಕಡನ ಕೈಚಳಕಮಂ ಪರಿಕಿಪುದೆಂದು ತನ್ನಡಿಯಿಂ ಸುಭಜನೆರ್ದೆಯನೊದೆದಂ.*
ಏನೆಂಬೆಂ! ಆರಾಯುಂ ವೀರನ ಪದಹತಿಗೆ ಎರ್ದೆವಡಿ ಪವ್ವನೆ ಪಾರಿದಂತಾಗೆ
ಕಟ್ಟಾಯಸದಿಂ ನೊಂದು ದಿಮ್ಮನೆ ತಿರೆಯೊಳೊರಗಿ ಮುಚ್ಚೆಗೊಂಡಂ. ಪಡೆ
ಯೊಳ್ ಗಲಬೆ ಪೆರ್ಚಿದುದು.

ಇಂತಪ್ಪುದುಮಾಗಳ್ ಮೂರ್ಛೆಯಿಂ ನಿದ್ದೆವೋದ ಸುಭುಜಂ ಕನಸಿ
ನೊಳ್ ಶ್ರೀರಾಘವಂ ಮೈದೋರಿದುದಂ ಕಂಡು ಬಕುತಿಯಿಂದಾತನಂ ನೆನೆನೆ
ನೆದು ಜಗದೊಡೆಯುಂಗೆ ಗೆಲವಕ್ಕೆ! ಮಾಲಕುಮಿಯರಸಂಗೆ ಗೆಲವಕ್ಕೆ! ಅಜನ
ಯ್ಯಂಗೆ ಮೇಲಕ್ಕೆ! ನೀನೆ ಎನ್ನೊಡೆಯುಂ, ಎನ್ನಕಾವ ದೇವಂ. ಲೋಕದ
ಮಂಕುಮಾಯೆಗೊಳಗಾಗಿ ಇಂತು ಪೊಲ್ಲದ ಕಜ್ಜಮನೊಡರ್ಚಿದೆಂ. ಅಂದು
ಮುನಿಯೊಳ್ ನಿನ್ನ ಪಳಿದೆಂ; ನಿರ್ನೆರಂ ಕಾದಿದೆಂ. ತಪ್ಪೊಪ್ಪುಗಳಂ ಮನ್ನಿಸಿ
ಕಾಯಯ್ ಎನುತೆ ಕನವರಿಸುತುಂ ಮತ್ತಂ ಚೇತರಿಸಿ ಅರಿವುಗೊಂಡು ಮುಂತಿ
ರ್ಪ ಸೋದರನಂ ಕುವರನಂ ಮೊನೆಯಿಂ ಕೈದೆಗೆವುದೆಂದು ನಿಯಮಿಸಿ ಶತ್ರು
ಹಂಗಮಣುವಂಗಂ ಕೈಮುಗಿದು ನಿಮ್ಮತ್ತಣಿನಾಂ ಪಾವನನಾದೆಂ; ಶ್ರೀರಾಘ

ವನ ಜನ್ನಗುದುರೆಯ ಬರವಿನ ನೆವದಿಂ ಎನ್ನ ನಾಡುಂ ಬೀಡುಂ ಒಳಗಮುಂ ಪಾವನಮಾಯ್ತು. ರಾಮಭಕ್ತರ್ಗಂ ಮೇಲಾವುದೊ! ಇದೆ ಮಖತುರಂಗಂ, ಇದೆ ರಾಜ್ಯಮಿದೆಸರ್ವಸ್ವಂ. ಎಲ್ಲಮನೊಪ್ಪುಗೊಂಡು ಶ್ರೀರಾಮಚಂದ್ರನಡಿಗಳೊಲ್ಮೆಯಪ್ಪಂತು ಮಾಳ್ಪುದೆಂದಡಿಗೆರಗಿದಂ. ಇಂತು ಮಣಿದು ಬೇಡುವ ರಾಯನಂ ಕರುಣಿಸಿ ಶತ್ರುಹಂ ಸುಭುಜನೊಳ್—ನೀಂ ಮಾನ್ಯಂ ನಿನ್ನನನುಗ್ರಹಿಸಲ್ಕೆಂದೆ ಶ್ರೀರಾಮಚಂದ್ರಮನೆಮ್ಮೊಳ್ ನಿಮ್ಮೊಳ್ ಇಂತು ಕಾಳೆಗಮನೊಡ್ಡಿದನಕ್ಕುಂ. ಎಂದು ಸಂತವಿಟ್ಟು ಕಪ್ಪಮಂ ಕಾಣ್ಕೆಯುಂ ಹಯಮಂ ಕೊಂಡು ಪೊರಮಟ್ಟಂ. ಸುಭುಜನುಂ ತನ್ನ ಚೊಚ್ಚಲಮಗಂಗೆ ಪಟ್ಟಮಂ ಕಟ್ಟಿ ತಾನುಂ ಪಡೆವೆರಸು ಶತ್ರುಹಂಗೆ ಬೆಂಬಲಮಾದಂ.

೧೧. ತೇಜಃಪುರವರ್ಣನಂ.

ಇಂತು ಶತ್ರುಹಂ ಸುಭುಜಭೂಭುಜನನೊಡಂಗೊಂಡು ಪೋಪೋಗುತೆ ಬಟ್ಟೆಯೊಳ್ ಸುಮತಿಗೆ—ಅಯ್ಯ! ಈ ಸುಭುಜರಾಜಂ ಮುನ್ನಮೊರ್ಮೆಯೊರ್ವ ಮುನಿಯೊಳ್ ಶ್ರೀರಾಮನಂ ಬಯ್ದನೆಂದು ಪೇಳ್ದೈ; ಆದೇಕೆ ಬಯ್ದನೆಂಬುದಂ ಪೇಳ, ಎಂಬುದುಂ ಮಂತ್ರಿ ಪೇಳ್ಗುಂ:—ರಾಘವಾನುಜಾ, ಕೇಳ್. ಮುನ್ನಮೊರ್ಮೆ ಸುಭುಜರಾಜಂ ಆದಿದೈವದಿರವಂ ಅರಿವಬಯಕೆಯಿಂ ಪೊರಮಟ್ಟು ಓರೊಂದೆಡೆಯ ಮುನಿಗಳ ಪುಣ್ಯಾಶ್ರಮಂಗಳೊಳ್ ತೊಳತೊಳಲ್ದಂಗಡ. ಅಂತು ಪೋಪೋಗುತುಂ ಮುಂತಿರ್ಪ ತಪೋವನದೊಳ್ ಅಸಿತಾಂಗನೆಂಬನೊರ್ವನಂ ತವಸಿಯುಂ ದೇವರೊಳ್ ಪಿರಿಯನಾವನೆಂದು ಬೆಸಗೊಂಡಂ. ಆಗಳ್ ಮುನಿಪಂ ಶ್ರೀರಾಮನೆ ಜಗದ ದೇವರ ಗಂಡನೆಂದು ಕುರುಪಿಟ್ಟು ಪೇಳ್ವುದುಂ ರಾಯಂ—ಮಾನಿಸನೆಂತಂತು ಬಸಿರೊಳ್ ಪುಟ್ಟಿಯುಂ, ಬವಣಿಗರೆಂತಂತು ಕಾಡಂ ತೊಳಲ್ದುಂ, ಪಾಪಿಗಳೆಂತಂತು ಬಲ್ಬನ್ನದೊಳ್ ತೊಡರ್ದುಂ ಬಾಳ್ವರಾಮಂ ದೇವನೆ? ಚಿಃ! ಬಿಡುಬಿಡೀ ನಿನ್ನ ಗನ್ನಗತಕದ ನುಡಿಯುಂ. ಅಂತು ರಾಮನನೊಲ್ವೊಡೆ ನಿನ್ನಂತಿರಾಂ ಗಾಂಪನೆ? ಎಂದು ರಾಮನಂ ಮೇಣ್ ಮುನಿಯುಂ ತೆಗಳ್ದಂ. ಅನುಡಿಗೆ ಕರಂ ಕನಲ್ದು ಮುನಿಪಂ ರಾಮಭಕ್ತಿಯೊಳ್ ಬೆಂಗೊಟ್ಟೆರೆಂದು ಶಪಿಸಲೊಡಂ ಪೂರ್ವಸಂಚಿತದ ಅರಿವಿನೆಳ್ಚರಿಂ ತನ್ನ ಕುತ್ತಮಂ ಬಗೆದು ಮುನಿಯ ಕಾಲ್ಗೆರಗಿ ತಪ್ಪಂ ಕ್ಷಮಿಸಿ ಕಾವುದೆಂದು ಬೇಡಿದಂ. ಆಗಳಸಿತಾಂಗಂ ರಾಯನಂ ಪಾಲಿಪ

ಭಾವದಿಂ—ಎಂದಿಂಗೆ ರಾಮಭಕ್ತಂ ನಿನ್ನಂ ಕಾಲಿನೊದೆವನಂದಿಂಗೆ ನಿನ್ನೊಳ್ ಭಕ್ತಿಯೊಗೆತರ್ಕೆ. ಎಂದು ತಿಳಿಪಿ ಕಳಿಪಿದಂ. ಇತೆಂದು ಸುಬಾಹು ಮುನಿಯ ಬಯ್ಗುಳನಾಗಳ್ ನೆನೆದು ನಿನಗೆ ಶರಣಾಗತನಾಗಿ ಸರ್ವಸ್ವಮನೊಪ್ಪಿಸಿದಂ.

ಈ ಪರಿಯೊಳ್ ಸುಮಿತ್ರಾಪುತ್ರಂ ಮಾತುಗುಟ್ಟುತೆ ಹಯದ ಬೆನ್ನೊಳೆ ನಡೆಯುತಿರೆ ಬಟ್ಟೆಯೊಳ್ ಮುಂದೆ ಬಿಸಿಲ ಜಳಕ್ಕೆ ಬಾಡದೆ, ಬೆಳ್ದಿಂಗಳ ಹಿವಕ್ಕೆ ಕೋಡದೆ ಪಗಲೆನ್ನದೆ ಮರ್ಬೆನ್ನದೆ ಆಗಳಾಗಳುಳ್ಳಲರ್ದ ಕೊಳದ ತಾವರೆ ಮುಗುಳ್ಗಳ ತನಿಗಂಪಂ, ಪಾವಡರದೆ ಪಕ್ಕಿ ಸೋಂಕದೆ ತುಕ್ಕುಡಿದ ಸೆಕ್ಕೆಯೊ ಡೆದ ಚಂದನದ್ರುಮ್ಮಂಗಳ ನರುಗಂಪಂ, ತಣ್ಪಾರಿದ ಮೆಲ್ಪುಗುಂದದ ಮರುಗದ ದವನದ ಪೊಸಗಂಪಂ ಪೋಪಬರ್ಪ ಬಟ್ಟೆಗರ ಮೂಗಿನಂಡೆಯೊಳ್ ತುರುಕುವ ಬನಗಾಳಿಯಿಂ, ಬನಗಾಳಿಯುಲೆಪದಿನ್ನೆಳ್ತರ್ತು ಗೂಡನುಳಿದು ಕೋಡುಗೊಂಬ ನಡರ್ದು ಕೂಡಿ ಪಾಡಿ ಕಾಡ ಪಣ್ಗಳಂ ನಾಡ ನೆಲ್ಗಳನಾಯ್ದು ಪಿಳ್ಳೆಗಳ್ಗೆ ರೂಡಿ ಸಿದ ಮಮತೆಯಿನೂಡಿ ನಲಿವ ಪಕ್ಕಿಗಳ್ಗೆ ಬೀಯುದಪಣ್ಣಂ ಮಾಗದ ಮಿಡಿಯುಂ ಬೀಯುವಾಗದ ತಳಿರಂ ಆವಗಮೊದವಿಪ ಮರಂಗಳಿಂ, ಆವಗಂ ತುಂಬಿ ಕರೆ ಗಣ್ಮಿ ಪರಿವ ಬನಸಿರಿಯು ಜೀವದ ಗೊತ್ತಿನಂತೊಪ್ಪುವ ನೀರ್ಗೊಳಂಗಳಿಂ, ಒಡ ಲಿಚಂ ತನ್ನ ಮಡದಿಯು ಚೂಳಿಯು ಸಿಂಗರಕೆಂದು ಸಮೆದ ಅಣಿಮುತ್ತುಗಳ ಕುಂದಣದ ಗೊಂಡೆಗಳೆನೆ ತೋರ್ಪ ಜೋಳದ ಕದಿರ್ಗಳಿಂ, ಬೆಳ್ಸುಳಿವಿಟ್ಟ ಪಣ್ತ ಚೆಂಬಾಳೆಯ ತೋಂಟಂಗಳಿಂ, ಒಳಗೊಳಗೆ ಬಾಂಬಟ್ಟೆಗರ್ ಪೊಳಲ ಸೊಬಗಂ ನಿರುಕಿಸಲ್ಕೆಂದು ಆಗಳಾಗಳಿಳಿತರ್ಪೊಡೆಂದು ಕಟ್ಟಿದ ಸರಣಿಯೆನೆ ಮುಗಿಲೊ ಳೊಂದಿದ ನಾಡ ಪೊರಗೋಂಟೆಯುಗಳ್ ಸೊಗಯಿಸಿದತ್ತು. ಅದರಿಂದೊಳಗೆ ಬೆಳ್ಳಿವೆಟ್ಟುಗಳ ತಳ್ಪಲ್ಗಳೆಂಬಂತಿರೆ ಪಗಲ್ಗೆ ಪಾಲಿನೆರೆದಂತುಂ ಇರುಳ್ಗೆ ಜೊನ್ನದಿಂ ಸಮೆದಂತುಂ ತೋರ್ಪ ಸೌಧಂಗಳಿಂ, ಮತ್ತಂ ಧೂಪದ ದೀಪದ ಕರ್ವೊಗೆ ಮುಗಿಲೊಡ್ಡೆನೆ, ಮಣಿಕಲಶದ ಬೆರಕೆವೆಳಗು ಮೇಘಮಂಡಲದೊಳ್ ಇಂದಿರ ವಿಲ್ಲನೊಡರ್ಚೆ, ಮೊಳಗುವ ಭೇರಿಯ ಬಿರುಸರಂ ಗುಡುಗಂ ಪುಟ್ಟಿಸೆ, ಎಡೆಯಾ ಡುವ ನವಿಲ್ಗಳ್ಗೆ ಸಂತಸಮನೊದವಿಪ ದೇಗುಲಂಗಳಿಂ, ಮತ್ತಂ ವೇದಮನೋ ದುವ ಶಾಸ್ತ್ರಮಂ ಕಲ್ವ ಪುರಾಣಮಂ ಕೇಳ್ವ ವಿಪ್ರರಗ್ರಹಾರಂಗಳಿಂ, ಮತ್ತಂ ಕ್ಷತ್ರಿಯರರಮನೆಗಳಿಂ, ಪರದರಂಗಡಿಗಳಿಂ, ಕೀಳರ ಗುಡಿಗಳಿಂ, ಮಾಲೆಗಾರ್ತಿ

ಯುರ ಪಸರಂಗಳಿಂ, ಘಟ್ಟಿವಳ್ತಿಯರ ಗಂದಿಗವಸರಂಗಳಿಂ, ರನ್ನವರದರ ಅಂಗಡಿಗಳಿಂ, ಮತ್ತಂ ಲೆಕ್ಕಿಗರ ಲೆಕ್ಕದಂತು ಸೊನ್ನೆಯಿಂ ಕಣ್ಗೊಪ್ಪಿಯುಂ ಗಗನದಂತು ಬೆಳ್ಳಿಯಿಂ ಮೆರೆದುಂ ಕೆಯ್ವೊಲದಂತು ಕರ್ವೊನ್ನಿಂ ಸೊಗಯಿಸಿಯುಂ ತುಟಿಯಂತೆ ಕಿಸುರಿಂ ರಂಜಿಸಿಯುಂ ಬೊಂದಿಯಂತು ಸೀಸದಿನೊಂದಿಯುಂ ದಿಟ್ಟೆಯ ಬಟ್ಟೆಗೈತರ್ಪ ಲೋಹಕಾರರ ಮನೆಗಳಿಂ, ಮತ್ತಂ ಹಚ್ಚಡದ, ಪಟ್ಟುಡೆಯ ಚೆಂದಿರಗಾವಿಯ ದೂಸಿಗವರದರ ಮಳಿಗೆಗಳಿಂ, ಮತ್ತಂ ತಿಸುಳಿಯಂತೆ ಮುಕ್ಕಣ್ಣನುಂ ತೊವಲ್ವೊದೆಯನುಂ, ಮುಗಿಲಂತೆ ನೀರೊಡಲನುಮೆನಿಪ ತೆಂಗಾಯಿಂ, ಮತ್ತಂ ಹರನಂತೆ ಜಟಾಧಾರಿಯುಂ ಹರಿಯಂತೆ ಪೀತಾಂಬರಧಾರಿಯುಮಾಗಿರ್ಪ ನೀರುಳ್ಳಿಯಿಂ, ಮತ್ತಂ ಇರ್ಕುಳಿಯ ತಂಡಸದ ಕರ್ತರಿಯ ಸುತ್ತಿಗೆಯ ಕೈವಾರದ ಕಂಬಚ್ಚಿನ ಕೊಳವೆಯುಡಗಲ್ಲ ಅರನ ಮುಟ್ಟೊಟ್ಟಯಿಸಿರೆ ಕೊಟ್ಟಂ ಕೆಟ್ಟನೆಂಬೊಂದು ಸಬುದಮೊಗೆವಂತಿರೆ ಬಡಿವ ಸೊನ್ನೆಗಾರರ ಸಾಲೆಗಳಿಂ, ಮತ್ತಂ ಕೊಡಲಿಯಿಂ ಕಡಿವ ಉಳಿಯಿಂ ಕೀಸುವ ಕತ್ತಿಯಿಂ ಕೆತ್ತುವ ಆಣೆಯಿಂ ಬೆಟ್ಟುವ ಕರಗಸದಿಂ ಕೊರೆವ ಬಡಗಿಯರೆಡೆಗಳಿಂ, ಮತ್ತಂ ಕಾಯಿಸುವ ಕರಗಿಸುವ ಎರೆವ ತಿದಿಯೊತ್ತುವ ಉರ್ದುವ ನೀರ್ಗುಡುವ ಬಡಿವ ಬೀಸುವ ಮಸೆವ ಸಾಣೆವಿಡಿವ ಕಮ್ಮರರ ಪೊರಸಾಲೆಗಳಿಂ ಪುರವೊಂದು ಕಣ್ಗಿಂಬಾದುದು.

ಇಂತು ಕಣ್ಗೊಳಿಪ ಕೇರಿಗಳಿಂ ಬೀದಿಗಳಿಂ ಮಿರುಗುವ ಹರ್ಮ್ಯಂಗಳಿಂ ರಾಜಿಪ ನಗರಮಂ ಕಂಡು ಶತ್ರುಹಂ ನಿಜಸಚಿವನೊಳಿದಾವ ಪುರಮೆಂದು ಕೇಳ್ದೊಡೆ—ಒಡೆಯ, ಇದು ಕಾಣಾ ಗೋಪೂಜಾಫಲದತ್ತಣಿಂ ಸಂತಾನಮಂ ಪಡೆದ ಋತಂಭರರಾಜನಾಳ್ವ ತೇಜಃಪುರಮೆಂದಂ.

ಆನುಡಿಗೆ ಸೌಮಿತ್ರಿ ಬಿಸವಂದದಿಂ— ಎಂತಾರಾಯುಂ ಗೋಸೇವೆಯತ್ತಣಿಂ ಮಗನಂ ಪಡೆದಂ? ಧೇನುಮಾಹಾತ್ಮ್ಯೆಯಿನಿತೊಂದು ದೊಡ್ಡಿತೇ ? ನೀಂ ಬಲ್ಲಂತು ಪೇಳೆಂಬುದುಂ ಸಚಿವನಿಂತು ವಚಿಸಿದಂ:—

ಅಯ್ಯ, ಮುನ್ನಮಿನಾಡಿಂಗೆ ಋತಂಭರವೆಸರಿಂ ಪೆಸರ್ವೆತ್ತ ಭೂಭುಜನಾದಂ. ಬೋಳೆಯರೋಜನ ಜಾಣ್ಮೆ, ಚುಕ್ಕಿಯರಿವು, ಜವನ ಜರ್ವು, ಜಕ್ಕರರ ಸಸ್ಸೆಸಿರಿ ತನ್ನೊಳೊದವೆ ಮನುವಿನ ಮಾರ್ಗದೊಳೆ ನಡೆಯುತೆ ಮೈಗಣ್ಣನ ಪೆಂಪಿಂ ಮೆರೆದಂ. ಎನಿಗಾಲಮಾದೊಡಮಾತಂಗೆ ಸಂತಾನಮಾದುದಿಲ್ಲಂ. ಮಡಲಿ

ರಿವ ಬಳ್ಳಿಯು ಚೆಂಗುಡಿ ಸುರುಂಟಿದಂತೆ ಬಳಿಯೀಗಳ್ ತನ್ನೊಳ್ ತಡೆದುದೆಂಬ ಬಾಗುಳಿಂ ಬಗೆಗೆಟ್ಟಿರ್ಪ ರಾಯನೋಲಗಕೊರ್ಮೆ ಜಾಬಾಲಿಮುನಿಪಂ ಬಿಜಯಂಗೈದಂ. ರಾಯನಾತನಂ ಸತ್ಕರಿಸಿ ಮುನಿಪ, ಪಣ್ಣಿಲ್ಲದ ಮರನ ಬಾಳ್ತೆ, ಚಂದವನಿಲ್ಲದಿರುಳ ಚೆಂದಂ, ಕಂದಂ ಪುಟ್ಟದ ಬಳಿಯುಂದಂ ಜನದ ನಗೆಗೆಡೆಗುಡದೇ? ಅಂತುಮಲ್ಲದೆಯುಂ ಮಗನಂ ಪೆರದಂಗೆ ಸಗ್ಗದ ಬಾಗಿಲ್ ತೆರೆಯದೆಂಬರಲ್ತೆ? ಮಗನಂ ಪಡೆಯದೆ ನರಕಮಂ ಪುಗುವ ಭಾಗ್ಯಮೆನಗಾದುದೇ? ನೂರಿನೇಂ ಇಹಕಂ ಪರಕಂ ಪೆರಗಾದ ಬೂತಾದೆಂ. ಮುಂತೇಂ ಬಟ್ಟೆ ಎಂದು ಬೆಸಗೊಳ್ವುದುಂ ಮುನಿಪನೊಲ್ಮೆಯಿಂ— ರಾಯ, ನೀನಿಂತು ಮರುಗಲೇನಕ್ಕುಂ? ದೈವಮನುಗ್ರಹಿಸೆ ದೊಡ್ಡಿತೇಂ? ನೀಂ ಗೋವಂ ಸೇವಿಸಿದೊಡೆ ನಿನ್ನಭೀಷ್ಟಂ ಸಿದ್ಧಮಕ್ಕುಂ. ಮುನ್ನಂ ಮುತ್ತರಾಯರ್ಗಿಂತು ಸುರಭಿಯೊಲ್ದುದುಂಟು; ಎಂದು ಸಂತಯಿಸಿದಂ. ಆಗಳಾ ರಾಯಂ ಮುನಿಗೆ—ಗೋಮಾಹಾತ್ಮ್ಯೆಯಂತುಟೇಂ ಪಿರಿದೇ? ತನಗೊರೆ ಎಂಬುದುಂ ಜಾಬಾಲಿಯಿಂತು ಕಥಿಸಿದಂ:—

ಎಲೆ ರಾಯ, ಗೋಮಾಹಾತ್ಮ್ಯೆಯಂ ಬಣ್ಣಿಪೊಡೆನಗಳವೆ? ಮೆಯ್ಯನವಿರ್ಗಳಿಯೊಳೆಲ್ಲಾ ದೇವರ್ಕಳ ನೆಲೆ. ಬಸಿರ್ವಿಶ್ವದ ತಾಣಂ. ಇಂತಿರ್ಪಿನಂ ನೀನೆ ಬಗೆ. ಆವನೊರ್ವಂ ಬಿಸಿಲೊಳ್ ಬಾಯಿರುತ ಹಸುವಿಂಗೆ ನೀರನೆರೆವನವಂಗೈಸಿರಿ ಬರ್ಕುಂ. ಮೇವಿತ್ತು ಕಾವಂಗೆ ಪುಣ್ಯಲೋಕಮಕ್ಕುಂ; ಮೆಯ್ಯ ನೊಳನಂ ಸೋವ ಶೃಂಗಂಗಳೆಡೆಯಂ ತುರಿಪ ಮನುಜಂಗೆ ಬಂದ ಬಿಯದಿ ತಪ್ಪುಗುಂ; ಮತ್ತಮೆತ್ತಾನುಂ ಮೇವಾವಂ ನಿವಾರಿಪ ನರಂ ನರಕಮಂ ಪುಗುವಂ. ಇದಕೊರ್ಂದಿತಿಹಾಸಮುಂಟದೆಂತೆಂದೊಡೆ: ಮುನ್ನಮೊರ್ಮೆ ಜನಕರಾಜಂ ಸಗ್ಗಮಂ ಕಾಣ್ಬ ಬಗೆಯೊಳ್ ಯೋಗದ ಮೈಮೆಯೊಳ್ ಒಡಲನುಳಿದು ಬಂದ ನಡೆಮಾಡಮನಡರ್ದು ಪೋದಂಗಡ! ಬಟ್ಟೆಯೊಳ್ ನರಲ್ವ ಪೊರಳ್ವ ಬೇನೆವಡುವ ಒದೆದಾಡುವ ಉಬ್ಬಸಂಬಡುವ ಕುದಿವ ನಮೆವ ಕಾಲ್ಮುರುಂಟಿದ ತಲೆ ಬಿರಿದ ಕೀಲ್ಮುರಿದ ಕಣ್ಣೊಳಿದ ಸೂಲದ ಮೊನೆಯೊಳೇರಿದ ಕಲ್ಗಾಲೆಯ ಬಸಿರೊಳ್ ಸಿಲ್ಕಿದ ಪರ್ದುಕಾಗೆಗಳ ಬಾಯೊಳಾದ ಕೀವಿನ ಮಡುವಿನೊಳ್ ಬಿಳ್ದ ತನಿಗೆಂಡದ ಬೇಹಿನ ಉರ್ಕಿನ ಪುತ್ತಳಿಯನಪ್ಪುಗೆಯ್ದು ರೋದಿಗರ ಪಾಪಾತ್ಮರ ಬಾಳ್ವನೆಮೆನಿಪ್ಪ ಯಮಲೋಕಮಂ ಮುಟ್ಟಯಿಸಿ ಬರ್ಪುದುಂ ಪಾವನಮೂರ್ತಿಯಪ್ಪ ರಾಯನತ್ತಣಿಂ

ಬರ್ಪ ಗಾಳಿಯು ಸೋಂಕಿಂ ನರಕಿಗಳ್ ಚೇತರಿಸಿ ತಣ್ಪುಗೊಂಡು ಕಟ್ಟುಬ್ಬರದ ಬೇನೆಯುಂ ಸೈರಿಪಂತಿರಾಗೆ ಮುಂತೆ ದಿಟ್ಟಿಸಿ ಐದಿವರ್ಪ ನಡೆಮಾಡಮಂ ಕಂಡು ಕೂಗಿಕ್ಕಿ ಎಲೆಲೆ ಸೈಪಿನರಮನೆಯೆ ಪೋಗದಿರ್, ಇನಿತೊಂದು ವೇಗಮೇಂ? ನಿನ್ನತ್ತಣಿಂ ತೀಡುವ ಗಾಳಿ ಸೋಂಕಲೊಡಮೆಮ್ಮ ನೋವುಂ ಬೇಹುಂ ಸರಿದುವು. ನೀನೆಮ್ಮ ಬಳಿಗೆ ಬಾರೈ; ಎಂದು ಕೈಯೆತ್ತಿ ಕರೆದರ್. ಆಗಳ್ ರಾಯನೀತೆರನ ಮೊರೆಯುಂ ಕೇಳ್ದು ಬಿಸವಂದದಿಂ ಮಾಡಮಂ ಪಿಂತಿರುಪಿ ಸೈಮಿನೀಪುರದ ಮುಂಬಾಗಿಲೊಳಿಳಿತಂದು ನೋಳ್ಪಿನಂ ಧರ್ಮರಾಜಂ ತಳ್ವದೈತಂದಿದಿರ್ಗೊಂಡು– ಏನೈ ಎತ್ತಣಿಂ ಬರವಾಯ್ತು? ಏಂ ಬಟ್ಟೆದಪ್ಪಿ ಬಂದಯ್? ಇದು ಪಾತಕಿಗಳ ಬಾಳ್ವನೆ. ಇಂದಿದಂ ನೀಂ ಕಾಣಲಕ್ಕುಮೆ? ಎಂದಾಡಿದಂ. ಅಂತಪ್ಪುದುಂ ಜನಕಂ ಜವನೊಳ್— ಎಲೆ ಧರ್ಮರೂಪ, ನರಕಮೆಂದರಿತೆನಿಲ್ಲ. ಲೋಗರ ನರಲ್ವ ಮೊರೆಗೇಳ್ದು ಬಂದೆಂ. ಇವರೊಳ್ನೀಂ ಮರುಕಂಗೊಳ್ಳೆಯ? ಇನ್ನಾನುಂ ಬಿಡ ಎಂದು ನುಡಿವುದುಂ ಯಮಂ— ಇನ್ನುಮಿವರ ಪಾಪಂ ಮುಡಿದುದಿಲ್ಲಂ, ಏವೆಂ! ಎನೆ ಆರಾಜಯೋಗಿ— ಈನರಕಿಗಳೆಂತಾನುಂ ಮುಕ್ತರಾಗರೆ? ಏನಾನುಮೊಂದು ಪಾಯಮಂ ತೋರ ಎಂಬುದುಂ ಸೂರ್ಯಸುತಂ– ಅಂತಪ್ಪೊಡೆ ನೀನಿನ್ನೆಬರಂ ಶ್ರೀರಾಮನಂ ಭಕ್ತಿಯಿಂ ಪೂಜಿಸಿದ ಪುಣ್ಯದರೆಯನಿತ್ತೊಡೆ ಇವರ್ ಮುಕ್ತರಪ್ಪರ್ ಎಂದಂ. ಒಡನೆಯೆ ಜನಕಂ ತನ ಪುಣ್ಯದೊಳರ್ಧಮಂ ಧಾರೆಯೆರೆವುದುಂ ಪಾಪಿಗಳೆಲ್ಲರ್ ನರಕಬಾಧೆಯಿಂ ಬಿಡುವಟ್ಟು ಸಂತಸದಿಂ ಶ್ರೀರಾಮನಂ ಪಾಡುತುಂ ಜನಕರಾಜನಂ ಪೊಗಳುತುಂ ಜವನಂ ನೆನೆಯುತುಂ ಬರ್ದಿಲನಾಡಂ ಪುಗುತಂದರ್. ಆಗಳ್ ಮಿಥಿಲಾಧಿಪಂ ಯಮರಾಜಂಗೆ—ಪಾಪಿಗಳ್ ನರಕಕ್ಕೈತರ್ಪರೆಂದಾಗಳೆ ಪೇಳ್ದೆಯಲ್ತೆ? ಆಂ ಪುಣ್ಯಾತ್ಮನೆಂಬೆಯಂತಿರೆಯುಮಿಲ್ಲಿಗೇಕೈತಂದೆಂ? ಪೇಳೆಂಬರಾಯಂಗೆ—ನೀಂ ಪುಣ್ಯಾತ್ಮನಾದೊಡಂ ಮುನ್ನಮೊರ್ಮೆ ಮೇವಪಸುವಂ ನಿವಾರಿಸಿದಯ್. ಆಕತದಿಂ ನಿನಗೆಮ್ಮ ಪುರದ ದರ್ಶನಮಾಯ್ತು. ಎಂದು ಯಮಂ ನುಡಿಯೆ ತಲೆದೂಗಿ ಕೈಮುಗಿದು ಮುಂ ತೆರಳ್ದಂ ಗಡ. ಮನುಕುಲದ ಮುನ್ನಿನ ರಾಯರುಂ ಗೋಪೂಜೆಯತ್ತಣಿಂ ಪುತ್ರರಂ ಪಡೆದುದುಂಟು. ನೀನುಂ ಪೂಜಿಸೆಂದು ಪೇಳ್ದು ಜಾಬಾಲಿ ತಾಂ ಬೀಳ್ಕೊಂಡಂ.

ಶತ್ರುಘ್ನ! ಇಂತು ಜಾಬಾಲಿಯುಪದೇಶದಿಂ ಋತಂಭರಂ ಸುಲಕ್ಷಣೆ ಮಾಡ ಅವನಾಗಳುಂ ಸೇವಿಸುತುಮಿರ್ದಂ. ಕಡೆಯೊಳ್ ಸುರಭಿ ರಾಯನ ಭಕ್ತಿ

ಗೊಲ್ದು "ಪುತ್ರವಾನ್ ಭವ" ಎಂದು ಪರಸಿದುದು.

ಮತ್ತಮಾರಾಯುಂ ಕೆಲವಾನುಂ ದಿನಕ್ಕೆ ತನ್ನರಸಿಯೊಳ್ ಸತ್ಯವಂತ ನೆಂಬೊರ್ವ ಮಗನಂ ಪಡೆದು ಕೃತಕೃತ್ಯನಾಗಿ ಪೊಸಜವ್ವನದ ಮುದ್ದುಗುವರ ನೊಳ್ ರಾಜ್ಯಭರಮನೊಪ್ಪಿಸಿ ತಾಂ ತಪಸ್ಸಾಮ್ರಾಜ್ಯಮಂ ಸೂರೆಗೊಂಡಾಳುತು ಮಿರ್ದಂ.

ಇತ್ತಲಾಕುವರಂ ತನ್ನ ಪೆಸರಂ ಪೋಲ್ವಂತು ಸತ್ಯಧರ್ಮದಾಂಕೆಯೊಳೆ ನಿಂದು ತಿರೆಯುಂ ಪೆಗಲೊಳಾಂತು ಗೆಲ್ಲವೆಣ್ಣಂ ಮೊನೆಯೊಳಿರಿಸಿ ಏರುಂಜಸದ ಬೆಳ್ವೆಳಗಿಂ ಬಾಂಬಟ್ಟೆಯು ತುಂಬುವೆರೆಯುಂ ಕುಂದಿಸಿದಂ.

ಈ ಮಾಳ್ಕೆಯಿಸಾಳ್ವ ತೇಜಃಪುರಾಧಿಪಂ ಶ್ರೀರಾಮನನಾದಿದೈವಮೆಂದೇ ಬಗೆದು ಭಜಿಸಿ ಆತನಂ ಕಣ್ಣಾರೆ ನೋಳ್ಪ ಬಯಕೆಯೊಳಿರ್ದಂ.

ಇಂತು ತಂತಮ್ಮೊಳ್ ನುಡಿಯುತಿರ್ಪುದುಂ ಮುಂದೆಸೆಯೊಳ್ ನಡೆವ ಹಯುಂ ಪುರಮಂ ಪುಗುತಂದುದು. ಪೊಳಲ ಕಾಪಿನಾಳ್ಗಳ್ ಕುದುರೆಯುಂ ಪಿಡಿದು ತಮ್ಮಾಣ್ಮಂಗೊಪ್ಪಿಸಿದರ್. ಸತ್ಯವಂತಂ ತುರಂಗಮದ ಪಣೆಯು ಪತ್ರದೊಳ್ "ರಾಮ" ಎಂಬಕ್ಷರಂಗಳನೋದಿ ಸಂತಸದ ನವಿರ್ ಗುಡಿಗಟ್ಟೆ ಹಯುದ ಬೆಂಬ ಳಿಯೊಳ್ ಬಂದ ಶತ್ರುಘ್ನನನಿದಿರ್ಗೊಂಡು ತನ್ನ ನಾಡಂ ರಾಘವಂಗೊಪ್ಪಿಸಿ ತನ್ನ ಪಡೆವೆರಸು ಹಯುರಕ್ಷಣಾರ್ಥಂ ಶತ್ರುಹಂಗೆ ನೆರವಾಗಿ ತೆರಳ್ದಂ.

ಇಂತಪ್ಪುದುಂ ಲವಣಾಂತಕಂ ರಾಯುಗುವರನ ಭಕ್ತಿಗೆ ಮೆಚ್ಚಿ ನಾಡೊಡೆ ತನಮನಾತನ ಪುತ್ರಂ ರುಕ್ಮಂಗಿತ್ತು ಸಸೈನ್ಯಂ ಮುಂ ಪೊರಮಟ್ಟಂ. ಇಂತು ಶತ್ರುಹಂ ತಂತಮ್ಮ ಸೇನೆವೆರಸು ಸರಣ್ಬರ್ಪ ನಾಡನಾಡ ರಾಯುರನೊಡ ಗೂಡಿ ಪುಷ್ಕಲಾದಿ ಸುಭಟವೃಂದಮಂ ಬೆಂಬಳಿಗೊಂಡು ಮುಂದೆಸೆಯೊಳ್ ನಡೆ ಯುತುಮಿರ್ದಂ.

---

೧೨. ಆರಣ್ಯಕಮುನಿದರ್ಶನಂ.

ಅಃ! ಮಡದೀ, ಈಗಳ್ ರಾಘವಾನುಜಂಗೆ ಪೊಸತೊಂದೆಡರೊದಗಿದುದು. ಕರ್ಮುಗಿಲ್ ಸುರಿವ ಅಂಜನವೃಷ್ಟಿಯೊಬ್ಬುಳಿಯೋ, ಅಂದಂದು ದೇವರ್ಕಳೊ ಳಿದಿರ್ಚಿ ಮಣ್ಮಳಿವೋಗಿ ಪೊಸರೂಪುಗೊಂಡ ರಕ್ಕಸರ ಪಡೆಯೋ, ಪಾಪದ

ಮೊತ್ತಮೋ ಎನೆ ಒರ್ಮೊದಲೊಳೆತ್ತಂ ಕರ್ಗತ್ತಲೆ ಪರ್ವಿ ಮುಸುಂಕಿದುದು; ನಡೆಗೆಟ್ಟುವು ಕರಿ, ಬಟ್ಟೆಗೆಟ್ಟುವು ಹಯಂ, ಮುಂದುಗೆಟ್ಟುವು ಪದಾತಿಗಳ್, ದೆಸೆಗೆಟ್ಟುವು ತೇರ್ಗಳ್, ಕಣ್ಗೆಟ್ಟುದು ಚತುರಂಗದಳಂ, ಮತಿಗೆಟ್ಟರ್ ಪಡೆವಳರ್. ಅನಿತರೊಳೆ ಕವಡುಗತ್ತಲೆ ಬಯಲಾಗಲೊಡಂ ಬಿಮೆಯಡಂಗಿದ ಜೋಗಿಯ ಮನದ ನಿಮ್ಮಳಿಕೆಯಂತಿರೆ ದೆಸೆಯೆತ್ತಂ ನಿರ್ಮಲವಾದುವು. ಆಗಳ್ ಪಡೆಯೆಲ್ಲಂ ನಿದ್ರೆಯಿನೆಚ್ಚರಾದಂತು ಕಣ್ಗಟ್ಟಿಂ ಪೆರಗಪ್ಪುದುಂ ಕಣ್ಬಿಟ್ಟು ಪೊಲಂಬುಗೆಟ್ಟು ಮಾಯೆಯ ಮಾಟಕ್ಕಚ್ಚರಿವಡುತಿರ್ಪುದುಂ ಮುಂದೆ ಜನ್ನಗುದುರೆ ಕಾಣದಿರೆ ಕಾವಲರುಂ ಪಡೆವಳರುಂ ಬಗೆಗುಂದಿ ಕಂಡರಂ ಕೇಳುತುಂ, ಇರ್ಕೆಲನೊಳರಸುತುಂ, ಸಂದಿನೊಳ್ ಪುಡುಕುತುಂ, ಗೊಂದಿನೊಳ್ ನೋಡುತುಂ ಅಂಡಲೆಯುತಿರ್ದರ್. ಇಂತು ಕುದುರೆ ಗೋಚರಿಸದಿರೆ ಶತ್ರುಹಂ ಕರಂ ಕನಲ್ದು ಶ್ರೀರಾಮಚಂದ್ರಮನ ಯಜ್ಞಿಯ ತುರಂಗಮಂ ಕಳ್ದುಯ್ದವನಾವನಾ ತನನೀಗಳೆ ಅರನರಮನೆಗಟ್ಟುವೆನೆನುತೆ ಹೂಂಕರಿಸುತೆ ಬಿಲ್ಗೊಂಡು ಪೊರಮಟ್ಟಂ ಅನಿತರೊಳೀಅವಣಾಂತಕನ ಬೀರದ ಜರ್ವಿಂಗೆ ಕಣ್ಗೆಟ್ಟು ನಿಂದುದೆನೆ ಆಗಸದೊಳ್ ನಿಲ್ತ ವಿದ್ಯುನ್ಮಾಲಿವೆಸರ ರಕ್ಕಸನ ಪುಸಿವಡೆ ನಯನಗೋಚರಮಾದತ್ತು.

ಆಗಳ್ ಬಲ್ಪಿನ ತೋಳ ತೀಟೆಯ ಪಡೆವಳರೆಲ್ಲರ್ ಹೂಂಕರಿಸಿಯುಂ ಬೊಪ್ಪರಿಸಿಯುಂ ನಡೆವಾಡಮನಡರ್ದು ಹಯಮನುಯ್ವ ಮರ್ಬಿಗನಂ ತರುಬಿ ಅರಿವಡೆಯುಂ ಬಳಿಕೆಯ್ವುದಕೇ ರಾಯನಾಣತಿಯುಂ ಪಾರುತಿರ್ಪುದುಂ ಮಧುಪುತ್ರಶತ್ರು—ಎಮ್ಮವರೊಳಿಂತಪ್ಪ ಮಾಯೆಗಾರನಿಂ ಕುದುರೆಯಂ ಮಗುಳ್ಚುವ ಮೆಯ್ಗಲಿಯಾವನೆನ್ನಿದಿರ್ಗೆ ಬರ್ಕೆ ಎಂದಂ.

ಆಗಳವರೊಳ್ ಕೈದುಕಾರರ ಬೀರಂ ಪುಷ್ಕಲನುಂ, ಸಿಂಗನೆರ್ದೆಯ ಪ್ರತಾಪಾಗ್ರ್ಯನುಂ, ಧೈರ್ಯನಿಧಿ ಲಕ್ಷ್ಮೀನಿಧಿಯುಂ, ಸಾಸಿಕೆಯ ಕಡುಗಲಿಯಣುವನುಂ ಅಹಮಹಮಿಕೆಯಿಂ ಮುಂಬರಿದು—ಕವಡುಮಾಯೆಯ ರಕ್ಕಸವಡೆಯನಿದಿರ್ಚಿ ಬಾರಿಸದೆ ಬೆಂಗೊಟ್ಟೆವಾದೊಡೆ, ಸಂಧಿಸಿದ ದಾನವರೊಳ್ ಪೋಣರ್ದು ಸೊಪ್ಪುಸೊವಡಪ್ಪಿನೆಗಂ ಬಡಿದೆಳ್ಬಟ್ಟದೆ ಮಾಣ್ದೆವಾದೊಡೆ, ಕೊರ್ವಿನಾ ಕೇಡಾಳಿಯ ಸೇನೆಯುಂ ಕೇರಿ ತುಪ್ಪುಳಂ ತರಿದು ಹಯಮಂ ಮರಲ್ಚದೊಡೆ ಪಳವಾತಂ ಪಳಿವ, ಪೆರಸೊಡಮೆಯುಂ ಕವರ್ವ, ಕಳ್ಳಂ ಕುಡಿವ, ಶ್ರೀರಾಮನಂ ತೆಗಳ್ವ ಕೀಳರ ದುರ್ಗತಿಗಿಳಿವೆವೆಂದು ಸೂರುಳ್ದರ್.

ಇಂತಿರೆ ಅವರ ಚಲಕಂ ಬಲಕಂ ಬೀರಕಂ ಮನಮೊಲ್ದು ಶತ್ರುಘ್ನನವರನು ಚಿತ್ರೋಕ್ತಿಯಿಂ ಮನ್ನಿಸಿ ಅನಿಬರ್ಗಮೊಂದಾಗಿ ವೀಳೆಯುವನಿತ್ತು ರಕ್ಕಸನನಿದಿರ್ಚುವ ಬೆಸನದೊಳ್ ಕಳಿಪಿದಂ. ಆಗಳಾಸಾಸಿಗಳ್ ತಳರ್ದು ಮೀರಿ ಪೋಪ ರಕ್ಕಸನ ತೇರಂ ಮುತ್ತಿ ಕೋಲ್ಮಳೆಯಂ ಸುರಿವುದುಂ ರಕ್ಕಸವಡೆ ಕಗ್ಗೆಟ್ಟು ಕಣ್ಮಾಯ ಮಾಗಲೊಡಂ ತಡೆಗೊಂಡ ನಡೆಮಾಡದೊಳ್—ಪಲ್ಗಳೆಡೆಯೆಡೆಯ ಕಲ್ಗಳಾಗೆ, ಸೋರುವ ಜೊಲ್ಲೊಸರರ್ಬಿಯ ಮೊದಲಾಗೆ, ರೊಬ್ಬೆಯ ನೀಟದ ತಳರ್ನಾಲಗೆ ಕೀಳಿಲಾಗೆ ಕಿಸುವೆಟ್ಟಿನ ಗವಿಯನನುಕರಿಪ ಬಾಯಂ ತೆರೆದು ಕೆಮ್ಮೀಸೆಯ ಪೊದರ್ದಲೆಯ ಬಟ್ಟಚ್ಚಿಯ ಪೇರೊಡಲ ದಾನವಂ ದಿಗ್ಭಿತ್ತಿಗಳ್ ಬಿರಿವಿನಂ ಬೊಬ್ಬಿರಿದು ಬಲ್ಗಣೆಗಳಂ ಪೂಡಿಯುಂ ಮಾರ್ಗಣೆಗಳಂ ಕಡಿದುಂ ಕಟ್ಟಳವಿಯ ಹರಿಬಂನುರ್ಗುನೂಂಕಪ್ಪಿನೆಗಂ ತನಗಂ ತೇರ್ಗಂ ಕಾಪಿಟ್ಟು ಮುಟ್ಟಯಿಪ ಪ್ರತಿಭಟರಂ ತಡೆದು ಇರಿಮಿರಿಂ ಹರಣಂ ಜೋಕೆ, ಎನ್ನಂ ಗೆಲ್ವ ಗಂಡರುಮೊಳರೇ? ನಿಮ್ಮನ್ನರ್ಗೇಕೆ ಚಲಂ? ಕೆಲಸಾರಿಂ; ಅಲ್ಲದೊಡೆ ನಿಮ್ಮನೀಗಳೆ ಕೊಂದು ಸತ್ತಮುತ್ತಯ್ಯನ ಹೈತಿಗೆಯಂ ಸಡ್ಡೆಯಿನಾಗಿಸಿ ಬಂದ ಬೊಮ್ಮರಕ್ಕಸಿಯರ್ಗೆ ನಿಮ್ಮಡಗಿನೆಡೆಗೆಯ್ವೆಂ ಎಂದಂ. ಅದರ್ಕಾಮರುವಕ್ಕದ ಜೋದರ್ ಕಿನಿಸಿಂ—ಎಲೆಲೆ ಸಮ್ಮಂಗುಂದಿದ ಪುಚ್ಚಳಿಯ ಬಾಳ್ಸಬಮೆ, ನಾಯಂತೆ ಬಗುಳ್ದೊಡಕ್ಕುಮೆ? ಕಲಿಯಂತೆ ಕೈಗುಣಮಂ ತೋರವೇಡಾ; ಅಂದಿನ ರಾವಣಂ ಮಹಿರಾವಣಂ ಕುಂಭಕರ್ಣಂ ಮುಂತಪ್ಪ ದೆಸೆಮುಟ್ಟಿನ ಜಸದ ರಕ್ಕಸರ್ಂ ರೆಪ್ಪಿಸೊಪ್ಪಿ ಸೋವಿದ ಶ್ರೀರಾಮಂ ಬೇಳ್ವ ಜನ್ನದ ಹಸುವಂ ಕಳ್ದುಯ್ದುಂ ಬಾಳ್ವೆನೆಂದು ಬಗೆವ ನೀನಾವೊಂ? ಮತ್ತಮಾದಿನದ ಪೆಣ್ಗಳ್ಳನೇನಾದನಿಂದೀ ದಿನದ ಹಸುಗಳ್ಳಂ ನೀಂ ಬಗೆಯುಲ್ವೇಡಾ! ಎನುತೆ ಜರೆದರ್. ಇಂತು ಬೀರವಾತುಗಳನಾಡುತೆ ಮಾರಾಂತ ಅಮಿತ್ರಭಟರ ಕೋಲ್ಗಳಂ ವಿದ್ಯುನ್ಮಾಲಿ ತಡೆದುಂ ಕಡಿದುಂ ಪ್ರಳಯ ಭೈರವನಂತಿರಾಜಿಯೊಳ್ ಪರಸೈನ್ಯಮಂ ಕೋಳುಗೊಂಬುದುಂ ಒರ್ದೆಸೆಯೊಳ್ ಪುಷ್ಕಲನಿಸುಗೆಯ ಕೋಲ ಸೋನೆ, ಮೇಗೊಂದೆಡೆಯ ಲಕ್ಷ್ಮೀನಿಧಿಯ ಗದೆಯ ಬಿರುಗಾಳಿ, ಮತ್ತಮೊಂದೆಡೆಯೊಳ್ ಪ್ರತಾಪಾಗ್ರ್ಯನ ಸುರಗಿಯ ಮಿಂಚು, ಪೆರತೊಂದೆಡೆಯೊಳ್ ಅಣುವನ ಕಲ್ಗಳ ಕಲ್ಮಳೆ ಬಳಿಕ್ಕಮೊಂದೆಡೆಯೊಳ್ ಸುಭುಜಾದಿವೀರರ ಸಿಂಹನಾದದ ಮೊಳಗು ಮುಂಗಾರಂ ಕೀಳ್ಮಾಡಲೊಡಂ ರಕ್ಕಸಂ ಬೆಕ್ಕಸವಡೆದಂ.

ಈ ತೆರನೊಳ್ ಹರಿಸಂ ತರಿಸಮಾಗೆ ರಕ್ಕಸಂ ತನ್ನ ಕವಡಿನ ಮಾಯೆಯುಂ ಒಡ್ಡಿ ನಿಲ್ವುದುಂ ಪುಷ್ಕಲಂ ನಾರಾಯಣಾಸ್ತ್ರದಿಂ ಇಸುವುದುಂ ಆತನ ಮಾಯುಂ ಕಣ್ಮಾಯುಮಾದತ್ತು. ಆಗಳ್ ರಕ್ಕಸಂ ಬಯಲೊಳಾಗೆ ಅಣುವನ ಗುರ್ದೊಂದು, ಜನಕಜನ ಗಜೆಯು ಬಡಿಯೆರಡು, ಪ್ರತಾಪಾಗ್ರ್ಯನ ಬಾಳ ಕಡಿತಂ ಮೂರು, ಭಾರತಿಯ ಬಿರುಗಣೆಯು ಪೊಯ್ ನಾಲ್ಕು, ಮಿಕ್ಕರಾಯರ ಕೊಂತದಿರಿತಮೈದು ಇವರಿನ್ನೈದರಿಂ ರಕ್ಕಸಂ ಪಂಚತ್ವಮನ್ನೈದಿದಂ. ದುಂದುಭಿನಿನಾದದೊಡನೆ ಸುರರ ಪೂಮಳೆ ಪಿರಿದಾಯ್ತು.

ಇಂತು ತಮ್ಮನೆ ಒಲ್ದು ಬರ್ಪ ವಿಜಯಶ್ರೀಯುಂ ತಳ್ಕೈಸಿ ಹಯದ ಬೆಂಬಳಿವಿಡಿದು ಜೋದರೆಲ್ಲರ್ ಶತ್ರುಹನಾಣತಿಯೊಳ್ ಬಡಗದೆಸೆ ನಿಡಿದು ನಡೆದರ್. ಆ ಕಾಲದೊಳ್—

ಗೊಜ್ಜಿಗೆ ಮಲ್ಲಿಗೆ ಸುರಯಿ ಪಡ್ಡಳಿಗಳ್ಗೆ ಜವ್ವನಮೊದವಿದುದು. ಗೋಣಿ ಪಣ್ತುತು. ಮಾಮರಂ ಪೂತುದು. ಬಕ್ಕೆವಲಸು ಕಳಿಕೆವಿಟ್ಟುದು; ತೆಂಗುಕೌಂಗುಗಳ್ ನಿಡುಗೊನೆವಿಟ್ಟುವು. ಬಡಗಣ ಕುಳಿರ್ಗಾಳಿ ಆಗಳೊತ್ತಿಬೀಸೆ ಕೊಳನ ನೀರ್ಗೆ ಬಿಸುಪುಂ ಕಿಚ್ಚಿನ ಜ್ವಾಲೆಗೆ ತಣ್ಪುಂ ತಲೆದೋರಿದತ್ತು. ಕಡುಚಳಿ ನಾಡಿಗರನುಡುಗಿಸಿಯುಂ ತಲೆವಾಗಿಸಿಯುಂ ಮುರುಂಟಿಸಿಯುಂ ಮೂಗುವಡಿಸಿಯುಂ ಕಾಡಿದುದು. ಮುದುಪರಂದು ಇರುಳುಂ ಪಗಲುಂ ಸುಡುಗಿರ್ಚಿನ ಮರೆಯುಂ ಸಾರ್ದರ್.

ಇಂತು ಬಂದೊದವಿದ ಚಳಿಗಾಲದೊಳ್ ರಾಘವನ ಜನ್ನದ ಕುದುರೆ ಆರಣ್ಯಕನೆಂಬನೊರ್ವ ಕಿತ್ತಡಿಯ ಪುಣ್ಯಾಶ್ರಮಮಂ ಪುಗುತರ್ಪುದುಂ ಕಂಡು ಶತ್ರುಘ್ನಾದ್ಯರ್ ಮುನಿಯ ದರ್ಶನಕೆಂದೊಳವೊಕ್ಕು ಮುನಿಗೆರಗಿದರ್. ಆಗಳಾರಣ್ಯಕನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿದಂ. ಮತ್ತಂ ವಿನೋದಗೋಷ್ಠಿಯೊಳ್ ಶ್ರೀರಾಮಗುಣಾನುವಾದದೊಳ್—ಏನೆಂಬ ಮಾಟದಾಟಮೊ? ತಾನೆ ಯಜ್ಞಪುರುಷನಿರೆ ಬೇಳ್ಪ ಜನ್ನಮೇವುದೋ? ರಕ್ಕಸಗೊಲೆಯತ್ತಣಿಂ ತನಗೆ ಪಾತಕಂ ಗಡ! ನಾಡ ಮಾನಸರ ಪಾಂಗಿನ ನಡೆವಳಿಗೇನೆಂಬೆನೊ? ಏನಾನರಿಯೆನೆ ಜಗದ ದೈವಮೆಂಬುದಂ? ಮತ್ತಂ ಮುನಿವರಂ ಲೋಮಶಂ ಪೇಳನೆ ನಾರಾಯಣಂ ರಾಮವೆಸರಿಂ ತಿರೆಯೊಳ್ ಪುಟ್ಟಿರ್ಪನೆಂಬುದಂ? ಮತ್ತಮಾಮುನಿ

ಎನ್ನನುದ್ಧರಿಪ ಬಗೆಯಿಂ ಎಲೆ ಶಿಷ್ಯೋತ್ತಮ, ಆರಾಮಚಂದ್ರಮಂ ಕೆಲವಾನುಂ ದಿನಕೆ ಅಶ್ವಮೇಧಮಂ ಪೂಣ್ದು ಅಶ್ವದ ಕಾಪಿಂಗೆಂದು ಅಣುಗದಮ್ಮನಂ ಶತ್ರುಘ್ನನಂ ಮುಂತಿಟ್ಟು ಕಳಿಪಿದ ಬಲ್ವಡೆಗೆ ನೀಂ ಯಥೋಚಿತಮಾತಿಥ್ಯಮಂ ಗೆಯ್ದು ಬಳಿಯಂ ಸಾತ್ಯಾವತಿಗೆ ಪೋಗಿ ರಾಮನಂ ಕಂಡು ನಿನ್ನೀ ಸಂಸೃತಿಯ ಬಲ್ಪೊರೆಯನಾತನೊಳೊಪ್ಪಿಸೆಂದು ನುಡಿದಂ. ಅದುಕಾರಣದಿಂ ನಿಮ್ಮಂ ಕಂಡು ಪೊಂಪುಳಿವೋದೆಂ. ಇನ್ನೆಮ್ಮ ನಿಮ್ಮ ಪೆಂಪಿನ ಕೂಟಂ ಅಯೋಧ್ಯೆಯೊಳಕ್ಕೆ ಎಂದು ಶತ್ರುಹನಂ ಮನ್ನಿಸಿ ಪಯಣಮಂ ಬಳೆಯಿಸಿ ತಾನಯೋಧ್ಯೆಯತ್ತಲ್ ನಡೆದಂ.

---

೧೩. ದೇವಪುರವರ್ಣನಂ.

ಮಡದೀ, ಅರಣ್ಯಕನನಯೋಧ್ಯೆಯತ್ತಗ್ಗೆ ಬೀಳ್ಕೊಟ್ಟು ಶತ್ರುಹಾದಿವೀರರ್ ಮುಂದೈದಿವರ್ಪುದುಂ ಹಯಂ ಸೊಮ್ಮುವೆರ್ಚಿ ಕಿಚಿಕಿಲ್ದು ಬಿಮ್ಮನೆ ನಡೆದು ಬಳಿಯಿಂ ಬಳಿಯ ಪೊಳೆಯಂ ಪೊಕ್ಕು ಮುಳುಂಗಿ ಕಣ್ಮಾಯವಾಯ್ತು. ಕಾಪಿನಾಳ್ಗಳಿಂತಪ್ಪ ಕಣ್ಗಟ್ಟಂ ಕಂಡು ಕಂಗೆಟ್ಟರ್. ಆಗಳ್ ಶತ್ರುಘ್ನಂ-ಕಟ್ಟಚ್ಚರಿಯಿಂ ಮುಂಗಾಣದೆ ಟೆಬ್ಬರಿಸಿದ ಮನದಿಂ ಹಾ! ಕೆಟ್ಟುದು ಕಜ್ಜಂ! ವಾಜಿ ನೀರೊಳಾಯ್ತೇ? ರಾಘವನ ಜನ್ನಕ್ಕೆಡರ್ ಬಂದುದೇ? ಮುಂತೇಂ ಬಟ್ಟೆ ಎಂದು ಸುಮತಿಯಂ ಮಂತಣಂಗೇಳ್ವುದುಂ ಸಚಿವಂ—ಇಂತೇಂ ಕಳವಳಂ? ಪೋಗದು ಸಾಜಂ ವಾಜಿ; ಪೊಚ್ಚವೆಣ್ ತಾನೆ ಬೈತಿಟ್ಟಳೊ? ಕಿನ್ನೆಲದ ನಾಗರೇಂ ಕೊಂಡುಯ್ದರೊ? ತಳ್ವದೆ ನೀನುಂ ಭಾರತಿಯುಂ ಮಾರುತಿಯುಂ ತೊರೆಯ ಬಸಿರಂ ಪೊಕ್ಕರಸಿಂ, ನಿಮಗಿದು ಸಾಧ್ಯಂ ಎಂದರಿಪಿದಂ. ಅನಂತರಂ ಸುಮತಿಯೆಂದುದ ನೊಪ್ಪುಗೊಂಡು ಶ್ರೀರಘುವರನ ಪದಂಗಳಂ ಜಾನಿಸಿ ತಾಂ ಮೂವರುಂ ದುಮ್ಮಿಕ್ಕಿ ಮಡುವಿನ ತಳಮಂ ಸಾರ್ದರ್. ಇಂತಿಳಿತಂದೆತ್ತಂ ನೋಳ್ಪುದುಂ ಒಳಗೆ ಪೊಸತೆನಿಪ್ಪ ನಾಡ ಗೋಪುರಂ ಕಾಣಿಸಲೊಡಂ ಅಚ್ಚರಿಯಿಂ ದಿಟ್ಟಿಸುತುಂ ಪೊಳಲ ಬಾಗಿಲೆಡೆಗೆಯ್ತಂದರ್. ಪಿಡಿಯುರತಿಯರ್ ಪುಗದಿರಿಮೆಂದು ಗದರಲೊಡಂ ಆಂಜನೇಯಂ ಕಿನಿಸಿಂ-ಪೋ, ರಘುರಾಮನ ಬಂಟರಂ ತಾಂಟಲ್ ನಿಮಗೆ ಮೂರೆರ್ದೆವೇಡಾ ಎಂದು ಜರ್ವುವುದುಂ ಊಳಿಗವೆಣ್ಣೊರ್ವಳೊಳ

ವೊಕ್ಕು ತವೊಡತಿಗೀಪರಿಯಂ ವಿವರಿಪುದುಂ ಜೋಗಿಣಿ ಬರವೇಳ್ಕೆಂದಳ್. ಒಡನೆಯೆ ಒಳವೊಕ್ಕು ತಮ್ಮಿರವಂ ಕೇಳಿಸಿದ ಮೂಜಗದ ಮುಂದಾಳ್ಗಳಂ ಮನ್ನಿಸಿ ನೆರೆತನವಿರ ಬರತಮ್ಮೆಯ್ಯ ತವಸಿಣಿ ಬಂದಿವಿಡಿದ ಕುದುರೆಯಂ ಬಿಡಿಸಿ—ನೀಂ ತಿರೆಯತ್ತಲ್ ಪೋಗಿಂ; ಶ್ರೀರಘುವರಂಗೆಮ್ಮ ಬಕುತಿಯಂ ಪೇಳಿಂ ಎಂದು ಜೇಂಕರಿಸಿ ನುಡಿದು ಬಗೆವಗೆಯ ಕೋಲ್ಗಳಂ ಬೇರೆವೇರೆ ಮೆಚ್ಚನಿತ್ತು ಕಳಿಪಿದಳ್. ಮತ್ತಮಾಬೀರರ್ ಹಸಾದಮೆಂದು ಮುದುಪಿನ ಜೋಗಿಣಿಯಂ ಬಲವಂದು ದೇವಿಯ ಪೆರ್ಮೆಯಂ ಭಾವಿಸುತುಂ ಹಯದೊಡಗೂಡಿ ಮುನ್ನಿನೆಡೆಗೈತಂದು ಸರ್ವಗರ್ಮೀಕತೆಯಂ ಬಣ್ಣಿಸಿ ಪೇಳ್ದು ಸಂತಸದಿಂ ಮುಂತೆ ಮುಂತೆ ಪಯಣಂಬೋದರ್.

ಇಂತೆತ್ತಿ ನಡೆವ ಪಡೆಗೆ ಮುಂದೆಸೆಯೊಳ್ ದೇವಪುರಂಬೊಲ್ ಪೆರ್ಮೆವೆತ್ತ ದೇವಪುರಮೆಂಬ ಪೊಳಲ್ ಕಣ್ಗೆವಂದುದು. ವೀರಮಣಿವೆಸರ ವೀರಮಣಿಯೊರ್ವನದನಾಳ್ಗುಂ. ಈತಂಗೆ ರುಕ್ಮಾಂಗದನೆಂತಂತು ಹರಿಭಕ್ತಿಗಿಂಬಾಗಿ ಸೊಬಗುಸಿರಿಯ ನಳಿದೋಳ್ಗೆ ರುಕ್ಮಾಂಗದಮೆನೆ ಸಲ್ವ ರುಕ್ಮಾಂಗದನೆಂಬ ಸೀಮಂತಪುತ್ರನುಂಟು. ಇತ್ತಲೀಗಳೀತಂ ತನ್ನವರ್ವೆರಸು ವನವಿಹಾರದೊಳಿರ್ದಂ. ಆಪೊಳ್ತಿಂಗೆ ಸೀತಾರಮಣನ ಯಜ್ಞತುರಂಗಮಂ ಪಲನಾಡುಗಳಂ ತೊಳತೊಳಲ್ದಾವನಮನೆ ಪುಗ್ಗೆಳಸಿ ಪೊಕ್ಕುದು. ಆಗಳದಂ ಕಂಡೊರ್ವಂ ತಮ್ಮಾಳ್ದಂಗರಿಕೆಗೆಯ್ವುದುಂ ರುಕ್ಮಾಂಗದಂ ವಾಹಮಂ ಬರಿಸಿ ನೊಸಲೋಲೆಯಂ ವಾಚಿಸಿ ಕುದುರೆಯನೆಮ್ಮ ಹಯಶಾಲೆಯೊಳ್ ಕಿರುಕುಳದ ಬಿಡುಗುದುರೆಗಳ ಸಾಲೊಳ್ ಕಟ್ಟಿಮೆಂದು ಸೇವಕರ್ಗೆ ಬೆಸಸಿ ತಾನುಂ ಪುರಕೆ ನಡೆತಂದಯ್ಯನೊಳೀಹದನಸುಸಿರ್ದಂ.

ಆಗಳ್ವೀರಮಣಿ ನೃಪವರಂ ಕುವರನಾಡಿದ ಕಾಳೆಗದ ಕಟ್ಟೆಸಕದ ಮಾತಂ ಕೇಳ್ದು ತನ್ನೊಳಾಲೋಚಿಸಿ ತನಗೆ ಮನೆಯುಳಿಯನಪ್ಪ ಮಾದೇವನೊಳೀಪವಣಂ ಮಂತಣಂಗೊಂಡಂ. ಆಗಳ್ ಶತ್ರುಹಂ ಶಂಕೆಯಿಂ ಮಾದೇವಂ ವೀರಮಣಿಗೆ ಮನೆಯುಳಿಯನಾದ ಪರಿಯಂ ಸುಮತಿಯಂ ಬೆಸಗೊಳ್ವುದುಂ ಆತನಿಂತು ನಿರವಿಸಿದಂ:— ಆರಾಯಂಗೆ ಇಕ್ಷುಮತಿವೆಸರ ಮಗಳೊರ್ವಳುಂಟು. ಈ ಪೆಣ್ಮಣಿ ಎಳವೆಯೊಳೆ ಪರಮೇಶ್ವರನ ಮೈಮೆಯಂ ಕೇಳ್ದು ತನಗಾತನೆ ರಮಣನಾಗಲ್ವೇಳ್ಕುಮೆಂದು ಬಗೆದು ನಿಚ್ಚಂ ಶಿವನಂ ಜಪಿಸುತಿರ್ದಳ್. ಇಂತಿರ್ಪುದುಮೊಂದುದಿನಂ ಬಾಲೆಯ

ಬಾಲಭಕ್ತಿಗೊಲ್ದು ಕಪರ್ದಿ ಕನಸಿನೊಳ್ ಬಂದು ನಾಳಿನ ಪಗಲೊಳ್ ತಾನೆ ವಿಪ್ರವೇಷದಿಂ ಬಂದು ನಿನ್ನಂ ವರಿಪೆನೆಂದೊರೆದಂತರ್ಹಿತನಾದಂ. ಇಂತೀ ವಿವರ ಮನಯ್ಯಂಗರಿಪುವುದುಂ ಮರುದಿನಂ ಕನಸಿನೊಳೆಂದಂತಿರೊರ್ವನುರಿಗಣ್ಣ ಪಾರ್ವಂ ರಾಯನೋಲಗಕ್ಕೈತಂದು ಕನ್ಯಾರ್ಥಿ ತಾನೆಂದಂ. ಅಗಳರಸನೀತನೆ ಸಾಕ್ಷಾದೀಶ್ವರನೆಂದು ಬಗೆದು ಮಗಳಂ ಮದುವೆಯೊಳ್ ಕೊಟ್ಟಂ. ಇಂತು ಮದುವೆನಿಂದ ಶಿವಂ ರಾಯನ ದೃಢಕ್ಕೆ ಮೆಚ್ಚಿ ತಾಂ ಮೆಯ್ದೋರಿ ವರಮಂ ಬೇಡೆಂದನ ದರ್ಕೆ ರಾಯಂ ನೀನೊಲ್ವೆಯಪ್ಪೊಡೆ ಮನೆಯುಳಿಯನಾಗಿರ್ದು ಎಮ್ಮ ನಾಡಂ ಬೀಡಂ ಕಾವುದೆಂದು ಬಿನ್ನಯಿಸಲೊಡಂ ಶಿವಂ ತಥಾಸ್ತು ಎಂದು ತನಗಿದೆರಡನೆಯು ಕೈಲಾಸಮೆನೆ ದೇವಪುರದೊಳ್ ನೆಲೆಗೊಂಡಂ.

ಈಗಳ್ ವೀರಮಣಿ ಮುಕ್ಕಣ್ಣನಂ ಕಟ್ಟುಬ್ಬರದ ಕಾಳೆಗದ ಹರಿಬಮಂ ಬೆಸಗೊಳ್ವುದುಂ ಈಶನಿನಿಸುಂಬೊಳ್ತು ಜಾನಿಸಿ ರಾಯಂಗೆ—ಅಃ! ಶ್ರೀರಾಮಂಗಂ ನಿಮಗಂ ಚಲಮೆ! ಪುಸಿ ಪೊರ್ದದ ತನ್ನ ಬಾಣದಿಸುಗೆಯಿಂ ರಾವಣಾದಿರಾಕ್ಷಸರಂ ತತ್ತರದರಿದ ರಾಮನೇಂ ಗಾವಿಲನೆ! ಈಗಳಾತನ ಸೇನೆಯನಿದಿರ್ಚುವನಾವನೊ? ಎಂತಾನುಮವರೊಳ್ ಸಂಧಿಗೊಡಂಬಟ್ಟು ಹಯಮಂ ಬಿಡುವುದೊಳ್ಳಿತಯ್ ಎಂದಂ. ಆ ನುಡಿಗೆ ರಾಯಂ ಎಲೆ ದೇವ, ಇಂತೆಂಬರೆ? ಕಟ್ಟಿದ ಕುದುರೆಯಂ ಕೊಟ್ಟು ಮರೆವಾಳ್ವ ಬಾಹುಜರೊಳರೆ? ನಾಳೆಯು ಸಾವು ಇಂದಕ್ಕೆ, ರಾಮನಕ್ಕೆ ಸೋಮನಕ್ಕೆ ಸಾಮವನೊಲ್ಲೆಂ. ಅದರಿಂ ನಿನ್ನೊಲ್ಮೆಯೊಂದಿರೆ ಮೊನೆಯೊಳೆಮ್ಮ ಚಲಮಂ ತೋರುವೆನೆಂದಂ. ಆ ನುಡಿಗೆ ಗಂಗೋತ್ತಮಾಂಗಂ ಮನವೊಲ್ದು ಅಂಜದಿರೆಲೆ ನೃಪತೀ, ನಿನ್ನ ಬಗೆಯಂ ಕಂಡೆನಲ್ಲದೆ ಕೊಳುಗುಳಕಳ್ಕಿ ನುಡಿದೆನಲ್ತು. ರಾಘವಂ ತಾನೆ ಮೈದೋರುವನ್ನೆಬರಂ ಅಣುವಗಿಣುವರಂ ಗೆಲ್ದು ಮೋಹರಮಂ ದೆಸೆಗಿಡಿಪೆನೆಂದು ಬೋಳಯಿಸಿದಂ.

ಇತ್ತಲ್ ಶತ್ರುಹಂ ವೀರಮಣಿವೆಸರ ನೃಪಂ ಹಯಮಂ ಕಟ್ಟಿದುದಂ ಮೇಣಾತಂಗೆ ಮುಕ್ಕಣ್ಣಂ ಮನೆಯುಳಿಯನಾಗಿರ್ದು ಪಾಲಿಸುವಂದಮಂ ಸುಮತಿಯುನರಿತು ಸಂಗರಂ ಕಡಿದಕ್ಕುಮೆಂದು ಪಡೆಯನೆಚ್ಚರಿಸಿ ಸನ್ನೆವರೆಗಳಿಂ ಕಾಳೆಗಕರಿರಾಜರಂ ಕರೆದಂ.

ಇಂತು ಮೊಗಸಿದನುವರದೊಳ್ ಪುಷ್ಕಲಂ ಶರಧಿಯೊಳ್ ಪೆರ್ಚಿ ಮೇಲ್ವರಿವಂಬಿನ ಸೀವರಮೆನೆ ಕೋಲ್ಗಳಂ ಮೊಗೆಮೊಗೆದಿಸುತ್ತೆ ನುರ್ಗಿವಂದಂ.

ಆಗಳ್ ವೀರಮಣಿಕುಮಾರಂ ರುಕ್ಮಾಂಗದಂ ಸೂಟಿಯಿಂ ತನ್ನ ಪೊಂದೇರಂ ನೂಂಕಿ ಪಗೆಯನಿದಿರ್ಚಿದಂ. ಕಡೆಯೊಳ್ ಪುಷ್ಕಲಂ ಕಡೆಗಾಲದ ಮುಕ್ಕಣ್ಣನೊಂದು ಪೊಡರ್ಪಿಂ ತನ್ನ ಪೊಸಮಸೆಯ ಕೂರಂಬುಗಳಿಂ ರುಕ್ಮಾಂಗದನ ಬಿಲ್ಲಂ ಮುಕ್ಕಡಿಗೆಯ್ದು ವರೂಥಮಂ ಮುರಿದು ಸಾರಥಿಯುಂ ತರಿದಾ ರಾಯುಗುವರನಂ ನೋಯಿಸಿದಂ. ಅರಮಗನಿಂತು ಮೈಮರೆವುದುಂ ಬೆಂಬಳಿಯ ಸೇನೆ ಬೆಂಗೊಟ್ಟುದು. ಆನೆಕುದುರೆಗಳ್ ದೆಸೆಗೆಟ್ಟು ಪರಿದುವು. ಈ ವಿವರಮಂ ಚರರ್ ವೀರಮಣಿಗರಿಕೆಗೆಯ್ವುದುಂ ಆರಾಯಂ ಪಾವಡರ್ದಂತೆ ಮುಂದುಗೆಟ್ಟು ಪೊರಮಟ್ಟು ರಣಕೈದಿವಂದು ಮುದ್ದುಗುವರನಿರವಂ ಕಂಡು ಮರುಮರುಗಿ ಹಮ್ಮದಂಬೋದಂ. ಅತ್ತಲ್ ಪುಷ್ಕಲಂ ಒಡ್ಡಿ ನಿಂದು ವೀರಾಲಾಪದಿಂ ವೀರಮಣಿಯುಂ ಕೆರಳ್ಚಿಸಿ ಇರುಳುಂ ಪಗಲುಂ ಏಳುದಿವಸಂ ಕಡುಕೆಯ್ದು ಕಡೆಯೊಳಾತನ ಶರಹತಿಗೆ ಪೊಡವಿಯೊಳೆಡೆಗೆಡೆದಂ. ಆಗಳ್ ಶತ್ರುಹನ ಸೇನೆಯೊಳ್ ಹಾಹಾಕಾರಂ ಪೆರ್ಚಿದುದು. ಶತ್ರುಘ್ನಾದ್ಯರ್ ಕೈದುಗೊಂಡು ಮುಂಬರಿದು ವೀರಮಣಿಯುಂ ತಾಗಿದರ್.

ಆ ವೇಳೆಯೊಳಿತ್ತಲೀಶ್ವರಂ ಮಾವನಂ ಭಾವನಂ ಕಾವೊಂದು ಬಗೆಯಿಂ ತನ್ನ ಪ್ರಮಥಗಣಂಬೆರಸು ರಣಕೆ ಪೊರಮಟ್ಟು ಬಂದು ಪಗೆಯೊಳ್ ಕಾದುವ ರಾಯಂಗೆ ಬೆಂಬಲವಾದಂ. ತರುವಾಯಿಂ ಶತ್ರುಹನೊಳ್ ಮೊನೆಗೆ ನಿಂದ ರಾಯನಂ ಪಿಂದೊತ್ತಿ ಪಣೆಗಣ್ಣಂ ತಾಂ ನಿಲ್ವುದುಂ ಇತ್ತಲಣುವನಾದಪ್ಪಗವಗೆಯನಂ ತಾಗಿದಂ. ಬೊಮ್ಮಾಂಡದೋಡು ಬಿರಿವನ್ನಂ ದೆಸೆಮೂಲೆಗಳ್ ಪಳಂಚಿ ಮಾರ್ದನಿಗುಡುವಂತು ಬೊಬ್ಬಿರಿದರಾಬೀರರ್. ಜವನಂ ಜವಗಿಡಿಸಿದ, ಗಜಾಸುರನಂ ಗೆಲ್ದ, ಜಲಂಧರನಂ ಗೋಣ್ಮುರಿಗೊಂಡ, ಬಾಂಬೊಳಲ ರಕ್ಕಸರಂ ಗಾರುಗಿಡಿಸಿದ ತನ್ನ ಧಟೆಂದಣುವನನಿದಿರ್ಚಿದನಾನಂಜುಗೊರಲಂ. ಮುಂಬರಿದ ಸಿಂಜಿಣಿಯ ಸಣೆದು, ಲಂಕಿಣಿಯುಂ ಕೊಂದು, ಅಕ್ಷಯಕುಮಾರನಂ ತೂಳ್ದು, ಮಹಿರಾವಣನಂ ಕಡಿದು ಸಂದ ತನ್ನ ಪನ್ನತಿಕೆಯಿಂ ಪೊಣರ್ದನಾರಾಮಭೃತ್ಯಂ.

ಇಂತು ಕಾಮಾರಾತಿಯುಂ ಮಾರುತಿಯುಂ ತಂತಮ್ಮೊಳ್ ಕಚ್ಚಿರಿದ ಕಿಸಿಸಿಂ ಸರಿಸಾಟಿಯಿಂ ಸೂಟಿಯಿಂ ಸೆಣಸುತಿರಲೊಡಂ ಅತ್ತಲ್ ಜನ್ನವಗೆಯುಂಗೆ ಸುಗ್ರೀವಂ, ಬಿಗುರ್ವರಿಜಂಗೆ ಅಂಗದಂ, ನಂದಿಗೆ ನೀಲಂ ಮಸಗಿ ಮಾರಾಂತು

ಪೋಣರುತಿರೆ ಆ ರಣಾಂಗಣದೊಳ್ ಬೊಬ್ಬಿರಿವ ಶಿವಗಣಂಗಳ, ಪರ್ಚುವ ಮಂಕೆ ಡರ, ಊಳ್ವ ಬಳ್ಳುಗಳ, ಗೀಳಿಡುವಾನೆಗಳ, ಕಿಚಿಕಿಲ್ವ ಹಯಂಗಳ, ಕುಣಿವ ಮರುಳ್ಗಳ ಕೋಲಾಹಲಂ ಜಿರುಸಾಗೆ ಮುರಿದಟ್ಟೆಯ ಸುರಿದ ಕರುಳ ಸೆರೆದ ಕೆನ್ನೀರ ಎಡೆಯೊಳೆತ್ತಂ ಕಾಕಂ ಘೂಕಂ ಗೃಧ್ರಂ!

ಇಂತೆಡೆವಿಡದೆ ಸಮತಳಿಸಿದ ತುಮುಲಸಂಗ್ರಾಮದೊಳ್ ತುತ್ತತುದಿಯೊಳ್ ರಾಘವಾವರಜಂ ತಾಂ ಕೈಸೋಲ್ತಂ. ಪಡೆ ಬಡವಾದುದು. ಬೆಂಬಲಂ ಪಜ್ಜೆಗೆಟ್ಟುದು. ಇಂದಿಂಗೆಮಗರಿಯೊಳ್ ಸೋಲವಾಯ್ತೆಂದು ಶತ್ರುಘ್ನಾದ್ಯರ್ ಶ್ರೀರಾಮಚಂದ್ರಮನ ಪಾದಕಮಲಮಂ ನೆನೆನೆನೆದು ಪಲುಂಜಿದರ್. ಆಗಳಿಗೆಗಯೋಧ್ಯೆಯೊಳ್ ದೀಕ್ಷೆಯೊಳಿರ್ದ ದೇವರ ದೇವಂ ಸೋದರನೆಡರಂ ನಿವಾರಿಸಲ್ಕೆಂದು ರಣದೊಳ್ ಮೆಯ್ದೋರಲೊಡಂ ತ್ರ್ಯಂಬಕನುಂ ಮಾರುತಿಯುಂ ಕದನಮನುಳಿದು ರಾಘವನಂ ಕಂಡರ್. ಮತ್ತಮನಿತರೊಳ್ ಸುಗ್ರೀವಾದಿಗಳುಂ ವೀರಮಣಿಯುಂ ಬಳಿಯೊಳೆ ಬಂದರ್. ಆ ವೇಳೆಯೊಳ್ ಪರಮೇಶ್ವರನುಂ ಜಗದೀಶ್ವರನುಂ ಭಕ್ತರಂ ಪೊರೆವ ಬಗೆಯೊಳಿರೆ ವೀರಮಣಿಯುಂ ಅರಿವುಗೊಂಡು ದೇವರ ಜನ್ನದ ಹಯಮುಮಂ ಕಟ್ಟಿದಪರಾಧಮುಂ ಕ್ಷಮಿಪುದೆಂದು ಪ್ರಾರ್ಥಿಸಿದಂ. ರುಕ್ಮಾಂಗದನುಂ ಶ್ರೀರಾಘವನಂ ಮರೆವೊಕ್ಕಂ. ಬಳಿಕ್ಕಮಾಮಾದೇವಂ ತನ್ನವರಿಂ ಹಯಮುಮಂ ಕಪ್ಪಮುಮಂ ತರಿಸಿ ರಾಘವನ ಮುಂದಿರಿಸಿದಂ. ಇಂತಿರೆ ತನಗಂ ಶಿವಂಗಮಿನಿಸುಂ ಭೇದವಿಲ್ಲೆಂಬುದಂ ತೋರ್ಪ ನೆವದಿಂ ರಘುಪ್ರವರನೀಶ್ವರನಂ ನೇಹದಿಂ ಮನ್ನಿಸಿ ರಾಜವರ್ಗದೊಳನಿಬರುಮಂ ಸಂತವಿಟ್ಟುಂ ತನ್ನವರಂ ಕೂರ್ಮೆಯಿಂ ಸೈತಿಟ್ಟುಂ ಮೈಗರೆಯುಲೊಡಂ ಶತ್ರುಘ್ನಾದ್ಯರ್ ವೀರಮಣಿಯ ಕೆಳೆತನದಿಂ ಹರನ ನಲ್ಮೆಯಿಂ ಮೋದವಡುತೆ ಮುಂತೆ ಬಿಜಯಂಗೆಯ್ದರ್.

---

೧೪. ಹನುಮತ್ಪರಾಜಯಂ.

ತರುವಾಯಿಂ ದೇವಪುರದಿಂ ತಳರ್ದು ಭಾರತಾಂತದತ್ತಗೈದಿ ಪೋಪ ಜನ್ನಗುದುರೆ ಹೇಮಕೂಟಮುಂ ಪುಗುತರ್ಪುದುಂ ಆಲದ ಬೇಲದ ಎಕ್ಕೆಯ ಕಕ್ಕೆಯ ಹೊನ್ನೆಯ ಬನ್ನಿಯ ಬೇವಿನ ಮಾವಿನ ಮತ್ತಿಯ ಮುಳ್ತುಗದ ನೆಲ್ಲಿಯ ನೇರಿಲ ನೆಳಲಿಂ ಕಳ್ತಲಿಸಿದ ಪಳುವೊಳೊಂದು ತಳ್ಪಲಂ ನುರ್ಗಿಕೊಳಗಂ ಪಳಗದ

ಮರೆಯುರೆಯೊಳ್ ತಾಂಟಿ ತಡೆವಟ್ಟು ಕಾಲ್ಕೀಲಂ ಬಿಟ್ಟಿದಂತೆ ನಾಂಟಿರ್ಪುದುಂ
ಕಲ್ಲ ಪಾಪೆಯೆನೆ ಸಡೆಗೆಟ್ಟು ನಿಂದುದು. ಆ ಪೊೞ್ತಿಂಗೆ ಪೊಲಂಬುಗೆಟ್ಟು ಮರ
ವಟ್ಟ ಕುದುರೆಯಿರವಂ ಕಂಡ ಕಾಪಿನವರ್ ಆರ್ದುಂ ಎೞ್ಬಿಸಿಯುಂ ಬಾಲದೊ
ಳ್ ಕೀಳ್ದುಂ ಗೋಣೊಳಲುಗಿಯುಂ ಕೊಡಂಕೆಯೊಳೆತ್ತಿಯುಂ ಗತಿಯುಂ ಕಾಣದೆ
ಮತಿವಿಕಳರಾಗಿ ತಮ್ಮಡಂಗಾಯ್ತುರ್ಗೀಪರಿಯಂ ಕೇಳಿಪುದುಂ ಪಡೆವಳರೆಲ್ಲರೈ
ತಂದು ತಾಮುಂ ಕೈಗೊಟ್ಟು ಕುದುರೆಯುಂ ಕೀಳಲಾಟಿಸಿದೊಡಂ ಎಳ್ಳನಿತುಂ ಚಲಿ
ಸದಿರೆ ಪೋಗಿ ತಮ್ಮಾಣ್ಮಂಗಿದನೊರೆದರ್.

ಆಗಳ್ ಶತ್ರುಹಂ ತನ್ನಂಕದ ವೀರರ್ವೆರಸು ಕಟ್ಟುರದಿನಾಬಳಿಗೈದಿ ಕುದು
ರೆಯುಂ ಮುಟ್ಟಿ ತಟ್ಟಿ ದಾವಿಂ ಬಿಗಿದುಗಿದಿನಿಸುಂ ಕೀಳಲಾರದೆ ಬೇಸರ್ವುದುಂ
ಈ ಕಟ್ಟಚ್ಚರಿಯಿಂ ಅಣುವಂಗೆ ಮುಸುಡು ನಿಡಿದಾಯ್ತು. ಜಾಂಬವಂಗೆ ಮೈ ಬಡ
ವಾಯ್ತು. ಸುಗ್ರೀವಂಗೆ ಕೊನೆವಾಲಂ ಮುರುಂಟಿದತ್ತು. ಇಂತೆಲ್ಲರುಂ ಕುರ್ಗಿ
ಕಂಗೆಟ್ಟು ಬೆಗಡುಗೊಂಡಿರೆ ಬಳಿಯಂ ಮಂತ್ರಿ—ರಾಯ ಏತರ ಬೆಗಡೊ? ಅಡಿಮು
ಡಿಯುಂ ಪರಿಕಿಸದೆ ನೀಂ ಚಿಂತಿಪಯ್; ನೆರೆಯೊಳೆತ್ತಾನುಂ ಪುಣ್ಯಾಶ್ರಮಮಿರ
ವೇಳ್ಕುಂ. ರಿಸಿಗಳ ಮೈಮೆಯಿನಿಂತಾಯ್ತಕ್ಕುಂ. ಅದರಿನೀಯೆಡೆಯನರಸಿ ಸೋವ
ನರಿವುದೊಳ್ಳಿತೆಂದು ಆಳ್ಗಳನೆತ್ತಂ ಕಳಿಪಲೊಡಮವರ್ ಸುತ್ತಲು ಪುಡುಕಿ ಕಾಣದೆ
ಬಳಿಕ್ಕಮೆನಸುಂ ದೂರದೊಳೊಂದು ತಾಣದೊಳ್—ತಾಂ ತಮಗೋಲಾಡುವ
ಪಾರುವ ನೀರ್ವಕ್ಕಿಗಳ ಎರಂಕೆಯ ತುಂತುರ್ವನಿಗಳೊಡವೆರೆದ, ಪರಮೆವರಿಗಳ
ಮೆಲ್ಲುಲಿಗೆ ಬಾಯ್ವಿಟ್ಟ ತಾವರೆಯ ತನಿಗಂಪಿಂ ಪೊರೆದ ಕಿರುಗಾಳಿಯಲೆಪದಿಂ ಕದ
ಡುಗೊಂಡ ತಣ್ಗೊಳದೊತ್ತಿನೊಳ್ ಬನರಾಣಿಯ ಮೊಗದ ಮೊಡವಿಗಳ ಪಾಂಗಿ
ನಿಂದೊಪ್ಪುವ ಮುಗುಳಿಂ ರಾರಾಜಿಪ ಕಾಡುಮಲ್ಲಿಗೆಯ ಪೊದರ ಬಳಸಿನೊಳ್
ಅಪವರ್ಗಲಕ್ಷ್ಮಿಗೆ ನೆಲೆವನೆಯೆನೆ ಕರಂ ಸೊಗಯಿಸುವ ಪುಣ್ಯಾಶ್ರಮವೊಂದು
ಕಾಣಿಸಲೊಡಂ ಚಚ್ಚರದಿಂ ಮರಲ್ದು ತಮ್ಮಾಣ್ಮಂಗಿದನೊರೆದರ್. ಆಗಳರಸಂ
ಹರಿಸದಿಂ ಹನುಮತ್ಪುಷ್ಕಲ ಜಾಂಬವದಾದಿ ವೀರರ್ವೆರಸು ಐದೆವಂದುಟಜಮಂ
ಪೊಕ್ಕು ಪಳನುಡಿಯುಂ ಬಿಚ್ಚಳಿಸಿ ಶಿಷ್ಯರ್ಗೆ ನಿರವಿಪ ಕುಲಪತಿಯುಂ ಶೌನಕನಂ
ಸಾಗ್ನಿಯುಂ ಬಲವಂದು ಕೆಲದೊಳ್ ಮುಗಿದ ಕೈಗಳಿಂ ನಿಂದಿರ್ಪುದುಂ ಆತಂ
ಕೂರ್ಮೆಯಿಂ ಮಾಲಿಸಿ ಬಳಿಯ ಪುಲ್ಲ ಸಲ್ವಾಸಿನೊಳ್ ಕುಳ್ಳಿರವೇಳ್ದು ಪದುಳಮಂ

ಕೇಳ್ದ ಬರವಿನ ಕಾರಣಮುಂ ಬೆಸಗೊಳೆ ರಾಯುಂ ಜನ್ನಗುದುರೆಯ ನಡೆಗೇಡಂ ತಮ್ಮ ಬಗೆಗೇಡಂ ನಿರವಿಸಿದಂ. ಆಗಳ್ ಶೌನಕಂ ಇನಿಸುಂಬೊಳ್ತು ಜಾಸಂಬೊಕ್ಕು ಬಳಿಕೆ ಶತ್ರುಹಂಗೆ—ಎಲೆ ರಾಯು, ಇದರ್ಕೆ ಮುನ್ನಿನೊಂದಿತಿಹಾಸಮುಂಟು; ಅದೇನೆನೆ— ಈ ನಾಡ ತೆಂಕಣ್ಗೆ ಕಾವೇರಿಯೆಂಬುದೊಂದು ನದಿಯಿರ್ಕುಂ. ಅದರೊತ್ತಿನೊಳೊಂದು ಕೊಪ್ಪಲೊಳ್ ಸಾತ್ವನವೆಸರ ದ್ವಿಜನೊರ್ವಂ ದ್ವಿಜರಾಜಧರನನೋರೊಂದು ದಿವಸಂ ನೀರುಂಡುಂ ಒರೊಂದುದಿವಸಂ ಗಾಳಿಯುಂಡುಂ ಆರಾಧಿಸುತಿರೆ ಕೆಲವಾನುಂ ದಿನಕ್ಕೆ ತಿಸುಳಿಗೆಯ್ಯಂ ಮೆಯ್ದೋರಿ ಕರುಣಿಸಿದಂ. ಇಂತೀ ಸುಕೃತವಿಶೇಷದಿನಾಪಾರ್ವನವಸಾನಸಮಯದೊಳಂಬರದತ್ತಣಿನಿಳಿತರ್ಪ ವಿಮಾನಮಂ ಅಡರ್ದು ಬಾನ್ಗೇರಿದಂ. ಇಂತು ದೇವಲೋಕಮುಂ ಸಾರ್ದು ಸೊಗದ ಸುಗ್ಗಿಯೊಳ್ ಬೆರೆದು ಒರ್ಮೆ ಜಲಕ್ರೀಡೆಗೆಳಸಿ ಸಗ್ಗದ ಜೋಸೆಯರ್ವೆರಸು ಜಾಂಬವತೀನದಿಯುಂ ಪುಗುತಂದು ನೆರೆಯೊಳಘಮರ್ಷಣದೊಳಿರ್ಪ ಮುನಿಗಳಂ ಲೆಕ್ಕಿಸದೆ ಮುಕ್ಕುಳಿಸಿ ಜಕ್ಕುಳಿಸಿದಂ. ಇಂತೊಂದು ಪೊಲ್ಲದ ಗೆಯ್ಮೆಯುಂ ಕಂಡು ಮುನಿಗಳ್ಮುನಿದು ತಿರೆಯೊಳ್ ರಕ್ಕಸನಾಗಿ ಪುಟ್ಟೆಂದು ಬಯ್ದರ್. ಇಂತೀ ಬಯ್ಗುಳಿಂ ನೆತ್ತಿಯು ಮತ್ತಿಳಿದ ಕಳ್ಳುಣಿಯೆರತಂತರಿವುಗೊಂಡು ಮುನಿಗಳೆಡೆಗೆ ಪರಿತಂದು ಅಡಿಯೊಳ್ವೊರಳ್ದು—ನಿಮ್ಮಡಿ, ಕಾವುದು; ಮುನಿಗಳ ಮೈಮೆಯೇನಿಳಿದೆ? ಇಂತಿದನರಿತುಂ ಇರುಳ್ ಕಂಡ ಬಾವಿಯೊಳ್ ಪಗಲ್ ಬಿಳ್ದಂತೆ ಪೊಲ್ಲಮೆಯುಂ ತಗುಳ್ಚಿ ದುರ್ಗತಿಗಿಳಿದೆಂ; ಪತ್ತೇಂ ಪಲವೇಂ ಒಲ್ವುದುಂ ಕೊಲ್ವುದುಂ ನಿಮ್ಮಧೀನಂ ಎಂದು ಕಾಲ್ವಿಡಿವುದುಂ ಮುನಿಗಳ್ ಶಾಂತರಾಗಿ—ಆಯ್ತಾಯ್ತು. ಈಗಳರೆಯಾಗಿ ಬಿಳ್ದಿರ್ದು ಮೇಣೆಂದಿಂಗೆ ಬಟ್ಟೆವಿಡಿದು ಪೋಪ ರಾಮನಧ್ವರತುರಂಗಮುಂ ತಡೆದು ನಡೆಗಿಡಿಪಯ್ ಮತ್ತಮೆಂದಿಂಗೆ ರಾಮಚಾರಿತ್ರಮುಂ ಮನಂ ತಣಿಯೆ ಕೇಳ್ವಯ್ ಅಂದಿಂಗೆ ನಿನಗೆ ವಿಮೋಚನಮಕ್ಕೆ; ಅನ್ನೆವರಂ ನೀನಾತೋರ್ಪ ಕಾಪೊಳಿರ್ಪುದೆಂದು ತೋರಿದರ್. ಸೌಮಿತ್ರೀ, ಆ ಪಾರ್ವಂ ಈಗಳ್ನಿಮ್ಮ ಕುದುರೆಯುಂ ನಡೆಗಿಡಿಸಿದಂ. ನೀಮೀಗಳೆ ಪೋಗಿ ಹಯದ ಬಳಿಯೊಳ್ ನಿಲ್ತು ಶ್ರೀರಾಮಚರಿತಮುಂ ಕೇಳಿಸಲೊಡಂ ಬಾಡಬಂಗಂ ಬಾಡಬಕ್ಕಂ ಬಿಡುಗಡೆಯುಕ್ಕುಂ. ಎಂದು ಪೇಳ್ವಿನಂ ರಾಯನಣುವಂಗೀ ಬಗೆಯುಂ ಬೆಸಸಿ ಕಳುಪಿದಂ. ಆಗಳ್ ರಾಮಭೃತ್ಯಂ ಪೋಗಿ ರಾಮಕಥೆಯುಂ ಬಿತ್ತರಿಸಲೊಡಂ ತಾಂ ತನಗೆ ಹಯಂ ತಡೆವಿಡೆ ನಡೆಗೊಂಡು ತನ್ನಿಚ್ಚೆಯಿಂ ಮುಂದೆ ಪೋಗೆ ಸಾಲಿಗಂ ಮೂಲಿಗನಾ

ದೊಂದು ಸಂತಸದಿಂ ಬಂದೀಪರಿಯಂ ಪೇಳ್ವುದುಂ ಮುನಿ ರಾಮಕಥಾಶ್ರವಣದಿಂ ಪಾವನನಾಗಿ ಪುಣ್ಯಲೋಕಕ್ಕೆ ಪೋಪಾವಿಪ್ರನಂ ತೋರಿದಂ. ಶತ್ರುಹನುಂ ವೀರರುಂ ಹರ್ಷದಿಂ ಮುನಿಗೆರಗಿ ಬೀಳ್ಕೊಂಡು ಹಯದ ಬಟ್ಟೆಯೊಳೆ ತೆರಳ್ದರ್.

ಇಂತು ಪೋಪೋಪ ಕುದುರೆಗೆ ತಿಂಗಳೆಂಟಾಗಲೊಡಂ ಅಂಗವಂಗಾದಿ ದೇಶಾಧಿಪರ್ ಕಂಗೆಟ್ಟು ಕಪ್ಪಂಗೊಟ್ಟು ಓಲಯಿಸುತ್ತೆ ಬರುತುಮಿರ್ಪುದುಂ ಮುಂದೆಸೆಯೊಳ್ ಕುಂಡಲಪುರಂ ಮಲೆದು ನಿಂದುದು. ಶ್ರೀರಾಮಚಂದ್ರನಂ ಕಣ್ಣಾರೆ ಕಾಣ್ಬೆನೆಂಬ ಬಯಕೆ ಬೆಟ್ಟಿತಾಗಿರ್ಪಿನಂ ಅಗಳುವಿೂಪಂಬಲಿಂ ಬೆಂಡಾಗಿ ಪೊಂಗುಗುಂದಿರ್ಪ ಪುರದಧಿರಾಜಂ ಸುರಥಂ ತಾನೋಲಗದೊಳಿರ್ಪನ್ನೆಗ ಮೊರ್ಮೆ ರಾಯನ ಭಕ್ತಿಯಂ ಪರಿಕಿಸಲೆಂದು ಜವಂ ಕಿರುವರೆಯದ ತವಸಿಯಾಗಿ ಅರಮನೆಗೆಯ್ತಂದಂ. ಅರೆಗೆಂಪಿಡಿದ ಜಡೆಮುಡಿ ಬಾಂಗೂಂದಲನ ಕಪರ್ದಮಂ ಕೀಳ್ಮಾಡೆ, ಪಲಗೆವಣೆಯು ಕೊಂಕಿನ ಭಸಿತಲೇಖೆ ಬೆಳ್ವಕ್ಕದ ಬಿದಿಗೆಯ ಚಂದವ ನಂದಮನಿಳಿಕೆಯ್ಯೆ, ತುಂಬಿ ತುಳ್ಕುವ ಮೊಗದ ಸೊಬಗು ಪದ್ಮಸದ್ಮನ ಮೊಗ ಸಿರಿಯನೆಡವುತೆಡಂಮಾಡೆ, ನಿರಿವಿಡಿದುಟ್ಟ ಪಟ್ಟುಡೆಯಂದಿನ ತ್ರಿವಿಕ್ರಮಮೂರ್ತಿಯೊಳ್ಪುಡೆಯಂ ತಳ್ಗಿಸೆ, ಕೊರಲೊಳೊಪ್ಪುವಚ್ಚಸರಂ ಮುಕುತಿವೆಣ್ಣ ಕೊರಲ ಕರ್ಮಣಿಸರಮನಡಿಗೊತ್ತೆ, ಮೈವೆಳಗೋಲಗಸಾಲೆಯೊಳೆತ್ತಂ ಪಳಂಚಲೆಯೆ ಬಂದ ಕಪಟವಟುವಂ ಕಂಡಿದಿರೆಯ್ದಿ ಕಾಲ್ಗೆರಗಿ ಕೆಯ್ವಿಡಿದು ಕರೆದುಯ್ದು ಪೊನ್ನ ಗದ್ದುಗೆಯೊಳ್ಕುಳ್ಳಿರಿಸಿ—ಏರಿದರ ಮೈಮೆಯೇಂ ಪಿರಿದೊ? ಏನೆಂಬ ಕೂರ್ಮೆಯೊ! ಅರಮೆ ಮೆಯ್ವೆತ್ತು ಬಂದುದಾಗದೆ? ಇಂದಿಂಗೆ ವಲಂ ಧನ್ಯರೆವು. ಆದೊಡಂ ಇಂತಟಮಟಿಸಿ ನೋಯಿಸ ಪುಟ್ಟುಳಿವಳಿವೆಂಬೀ ಕೋಟಲೆಯಿಂ ಮುಕ್ತನಪ್ಪಂತಿರೆನಗೆ ಬಟ್ಟೆಯಂ ತೋರ ಎಂದು ಬೆಸಗೊಳ್ವುದುಂ ಮಾಯದ ಜವನಿಕೆಯ ಜವಂ ಪುಟ್ಟದೆ ಪೊಂದದೆ ಸುಖಮೆಂತಿಹಪರಂಗಳೊಳ್ ದೊರೆಕೊಳ್ಗುಂ? ಮುಕ್ತಿಯೊಳೇನುಂಟು? ಲೋಕಮಿಂತೀಬೆಮೆಯಿಂ ಸಗ್ಗದ ಸೊಗಮಂ ಪಾಳ್ಗಿಡಿಸಿಕೊಳ್ಗುಂ. ನಿಮಗೆ ಧರ್ಮಂ ಕರ್ಮಮೆ. ಕರ್ಮದಿನೆ ಇಂದಿರಂ ದೇವರ್ಕಳೊಡೆಯನಾದಂ; ಪೂರ್ವೊರ್ಕುಳನ ಗಂಗಾವರ್ತಸನಾಭಿಯೊಳ್ ನಾಭಿಯೊಳ್ ಪುಟ್ಟಿದ ಬೊಮ್ಮಂ ಸತ್ಯಲೋಕಕ್ಕೆರೆಯನಾದಂ; ತಗರ್ದೇರಂ ಸೇಣ್ಗಯ್ಯಂ ಮುಂತಪ್ಪರ್ ದೆಸೆವಳರಾದರ್. ನೀನುಂ ಜನ್ನಂಗಳನೆಸಗಿ ಇಲ್ಲಿ

ಪೆರ್ಮೆವಡೆದು ಅಲ್ಲಿ ದುರ್ಲಭಸುಖಮಂ ಪಡೆವುದೊಳ್ಳಿತು. ಎಂಬುದುಂ ರಾಜಂ— ಜೀಯ, ಇಂತಿದೆನ್ನ ಮನಕೆವಾರದು. ಭಂಗುರಮಪ್ಪಕರ್ಮದತ್ತಣಿಂ ದೊರೆಕೊಳ್ವ ಸುಖಂ ಭಂಗುರಮಲ್ತೆ? ಇಂದ್ರಂಗಂ ಕರ್ಮಫಲಾನುಭವಂ ಮುಡಿಯುಲೊಡ ಮೊಡನೆಂಬೆ ಪತನಮಿರ್ಕುಂ; ಅದರಿನಿದಾಗದು, ಮುಕ್ತಿಯನೆ ಬಯಸುವೆಂ ಎಂದುಸಿರ್ದಂ. ಅದಕರ್ಾತಾಪಸಂ ಬರಿದೆ ಬೆಮೆಗೊಳ್ಳದಿರ್, ಮುನ್ನಿನ ರಾಯರ್ ಕರ್ಮದಿಂ ನಾಕಮನೇರಿ ಸುರಪನ ಬಲದೆ ಗದ್ದುಗೆಗೊಂಡು ಸುರವೆಂಡಿರಿಂ ಸೇವಿ ಸಿಕೊಂಡರ್. ಅದರಿಂ ಕಣ್ಬೆಗಡಿನ ಮುಕುತಿಯಂ ಪಾರದೆ ಧರ್ಮದಿಂ ಸಗ್ಗದ ಮುಂಬಾಗಿಲ ಪೇರಗುಳಿಯಂ ಮುರಿವಂತುಟಾಗಿಸೆನಲ್ ಜನಪಂ—ಒಡಂಬ ಡೆನೀಕವಡುನುಡಿಯ್ಕು, ನೀನೇವೂರ ತಿರುಕದವಸಿಯೊ? ಕರ್ಮಫಲದಿಂ ಸಗ್ಗಮಂ ಪೊಕ್ಕರುಂಟು. ನಿರಯುಕಮಿಳಿದರುಂಟು. ಪಾಳ್ಪೋದ ಕರ್ಮದಿನೇಂ? ಶ್ರೀರಾಮನ ಧ್ಯಾನವೊಂದೆ ಮುಂದುಂ ಪಿಂದುಮೆಂದುಮೆಂದಂ. ಆಗಳ್ ಮುನಿ ಕಟ್ಟಚ್ಚರಿಗೊಂಡನಂತಭಿನಯಿಸಿ—ಆವನೊರ್ವಂ ರಾಮಂ, ಆತನ ಧ್ಯಾನದಿನೇಂ ಮುಕ್ತಿ? ಮರ್ತ್ಯರ ಧ್ಯಾನದಿಂ ಮರ್ತ್ಯರ್ ಮುಕ್ತರಪ್ಪರೆ? ಎಲೆ ಎಗ್ಗ, ಹರಿ ಯೆಂದುಂ ಹರನೆಂದುಂ ರಾಮನೆಂದುಂ ಕಾಮನೆಂದುಂ ಪುರ್ಚುಗೊಳ್ಳದಿರೆಂಬುದುಂ ಅರಸಂ ಕಿಸುಗಣ್ಣಿ—ಶ್ರೀರಾಮನಂ ಪಳಿವ ನಿನ್ನೀ ನಾಲಗೆಯುಂ ಪೋೞಲ್ವೇಡಾ, ಕಡುಕೂಳನನಿವನಂ ನೂಂಕಿ ಕಳೆಯಿಮೆಂದು ತನ್ನಾಳ್ಗಳಂ ನೋಳ್ಪುದುಂ ಆರಂ ಮೆಯ್ದೋರಿ ಎಲೆ ಜನಪ, ಮೆಚ್ಚಿದೆನೀ ನಿನ್ನ ದೃಢಭಕ್ತಿಗೆ. ಅಂ ಜವಂ, ನಿನಗೇತ ರೊಳುಂಟು ಬಯಕೆ ಪೇಳ್ ಎಂಬುದುಮರಸಂ ಧರ್ಮನಂ ಮೂರುಂ ಸೂಳ್ ಒಲ ಗೊಂಡು ಎರಗಿ—ಜಿಯ, ಗಾವಿಲಂಗೆತ್ತು ನಿರ್ನೆರಂ ನಿಮ್ಮಂ ಬಯ್ದೆಂ; ಎನ್ನ ಪೊಲ್ಲದ ಗೆಯ್ಮೆಯಂ ಮರೆತು ಕಾವುದು; ಮೇಣೆನ್ನೊಳ್ ಕೂರ್ತಿರಪ್ಪೊಡೆ ಬರ್ದಿನ ಪೊರ್ದಿನ ಮುನ್ನಮೆ ಶ್ರೀರಘುನಾಯಕನಂ ಕಣ್ಣಾರೆ ಕಂಡು ಧನ್ಯನಪ್ಪಂತು ವರಮಂ ಕರುಣಿಪುದು, ಎನೆ—ರಾಯ, ಕಿರಿದಾನುಂ ದಿನಕ್ಕೆ ರಾಘವಂ ಮೆಯ್ದೋರಿ ನಿನ್ನಿಷ್ಟಾರ್ಥಮಂ ಸಲಿಸಿ ಪೋಪನಿದರೊಳ್ ಸಂದೆಯಮಿಲ್ಲಮೆಂದು ಸಂತಪಿಟ್ಟು ಜವನಂತರ್ಹಿತನಾದಂ. ಇಂತೀಕತೆಯಂ ಸುಮತಿ ತನ್ನಾಣ್ಮಂಗೆ ಚಿತ್ರಿಸ ಲೊಡಂ ಶತ್ರುಹಂ ಮುಂದಣ ಕಜ್ಜದ ಮಂತಣದೊಳಿರ್ದಂ. ಅತ್ತಲ್ ಹಸುವಂ ಬಂದಿಗೊಂಡು ಪೊಳಲ ತಳವಾರರ್ ರಾಯನೆಡೆಗೆಯ್ತಂದು ಕುದುರೆಯಿರವನೊ ಕ್ಕಣಿಸಿದರ್. ಸುರಥಂ ತಳಾರರಿತ್ತ ಓಲೆಯನೋದಿ ತನ್ನೊಳೆ ತಾಂ—ಕಡುಲೇ

ಸಾಯ್ತು; ಧರ್ಮನೆಂದು ನುಡಿದ ನುಡಿ ಪುಸಿಯಾಗದು; ಶ್ರೀರಘುವರಂ ತಾನೆ ಮೆಯ್ದೋರುವನ್ನೆಬರಂ ಕ್ಷತ್ರಿಯರ ಪಂತಮಂ ಪಿಡಿದು ಕಾದುವೆನೆಂದು ಬಗೆದು ತನ್ನ ಪಡೆವಳರಂ ಬರಿಸಿ ದಂಡಂ ಬಂಡಣಕನುವಪ್ಪಂತು ನಿರಿಸಿ ಚಂಪಕಮೋಹಕರ್ ಮುಂತಪ್ಪ ಪದಿಂಬರ್ ಕುವರರ್ವೆರಸಿ ಯುದ್ಧಸನ್ನದ್ಧನಾದಂ. ಇತ್ತಲ್ ಶತ್ರುಹಂ ಈ ರಾಯನೊಳೆಮಗೆ ಕಾಳೆಗಂ ಸಲ್ಲದು. ತನ್ನವನಂ ನೋಯಿಸಿದನೆಂದೆಮ್ಮೊಳಣ್ಣಂ ಮುನಿಗುಂ. ಅದರಿಂ ದೂದಟ್ಟಿ ರಾಯಂಗರಿಪಿ ಹಯಮಂ ತರಿಪುದೊಳ್ಳಿತಕ್ಕುಮೆಂದು ಬಗೆದಂದು ಅಂಗದನನಿದರೊಳ್ನಿಯೋಗಿಸಿದಂ.

ಆಗಳುರ್ಕಿನಾಳ್ತನದಿಂ ನೀಳ್ದಂಗದಂಗದನಂದು ರಾವಣನೆಡೆಗೆಂತಂತು ಕಡುಸಡಗರದಿಂ ದೂದೈದಿವಂದು ರಾಯಂಗೆ ಪಸಾಯನಮನೊಪ್ಪಿಸಿ ಸಮುಚಿತಾಸನದೊಳ್ಕುಳ್ಳಿರ್ಪುದುಂ ಚಿತ್ತರಿಗೆಯೊಳೊಪ್ಪಿರ್ದ ರಾಯಂ—ಎಲೆ ಬೀರ, ಎತ್ತಣದೀ ಪಾವುಡಂ? ನೀನಾರವನೆಮ್ಮೊಳೇಂ ಕಜ್ಜಂ ಪೇಳೆಂಬುದುಂ ಅಂಗದಂ—ಎಲೆ ಮಾರಾಯ, ಮುನ್ನಂ ದಶಕಂಠನ ಕಂಠನಾಳಂಗಳಂ ಕೊಳ್ಳಿಪುಳ್ಳಿಯಪ್ಪಿನೆಗಂ ಸದೆದು ಕೊಂದ ಶ್ರೀರಾಮನಡಿಯಚ್ಚುಳಾಯ್ತನಂಗದನೆಂ. ದೇವರ ಯಜ್ಞಿಯಾಶ್ವಮಂ ನಿಮ್ಮವರ್ಕಟ್ಟಿದರ್ಗಡ! ಅದು ಕಾರಣಂ ಕುದುರೆಯ ಬೆಂಗಾಪಿನ ದಕ್ಕಡದ ಗಂಡುಗಲಿಗಳ ಗಂಡಂ ರಾಘವಾವರಜಂ-ನೀಮೆಮ್ಮವರಿರ್ಪುದುಂ ರಣಕಾಸೆವಡದೆ ಹಯಮಂ ಬಿಟ್ಟು ನೆರೆವಾಳ್ವುದು ಕರಮೊಳ್ಳಿತು, ಬರಿದೆ ದೇವರೊಳ್ಪಗೆದು ಇಹಕಂ ಪರಕಂ ಚೆನ್ನಾಗದಿರಿಂ; ಇಂತಿದಂ ಬಗೆದು ಮೇಲಣಕಜ್ಜಮಂ ನೀವೆ ಬಲ್ಲಿರ್; ಇಂತು ಪೇಳ್ದಟ್ಟಿದಂ; ಎಂದು ಪಡಿನುಡಿದಂ.

ಈ ಪರಿಯಿಂ ಕಂಚುಮಿಂಚಾಗೆ ನುಡಿದಂಗದಂಗೆ ಸುರಥಂ—ಬಲ್ಲೆನಾಂ ಶ್ರೀರಾಮನಂ ಜಗದ ದೈವತಮೆಂಬುದಂ; ತನ್ನ ಹಯಮಂ ತಾನೆ ಬಂದು ಕೇಳ್ದೊಡೆ ಹಯಮಂ ಕಪ್ಪಮಂ ನಾಡಂ ಬೀಡಂ ಒಡಲನೊಡಮೆಯನೆಲ್ಲಮಂ ಒಪ್ಪಿಸೆನೆ? ಎನ್ನೆವರಂ ಶ್ರೀರಾಮಂ ತಾನೆ ಮೈದೋರನನ್ನೆವರಂ ವಾಜಿಯನೀಯೆನೆನೆ—ಅಂಗದಂ— ಎನ್ನೈ, ದೇವರ್ ನಿನ್ನೆಡೆಗೆ ಬರ್ಪರೆ? ಪೊಂದುವ ನುಡಿಗಳನಾಡಿ ಶತ್ರುಹಂ ಮುನಿಯದ ಮುನ್ನಮೆಮ್ಮವರಂ ಕಂಡು ಪುದುವಾಳ್ವುದು ಮೇಲೆಂದು ಸಭೆ ಬಿಲ್ಲುಂಬೆರಗಪ್ಪಂತು ನುಡಿವುದುಂ ರಾಯಂ ಪಿರಿದುಂ ಕನಲ್ದು—ಶಿಗೆ ತೆಗೆ ಮುಕ್ಕಣ್ಣನೆ ರಣದೊಳಿದಿರಾದೊಡಂ ಬಗೆವೆನೆ? ನಿಮಗಂ ದೇವರ್ಗಂ

ನೆಯುಕಂಜುವೆನಲ್ಲದೆ ಭಯಕಲ್ತು. ಮೊನೆಯೊಳೆ ಹಯಮಂ ಕೊಳ್ವುದು; ಶ್ರೀರಾಮಂ ಮೆಯ್ದೋರದ ಮುನ್ನಂ ಸಂಧಿಗೊಂಡೆನಿದು ಸಿದ್ಧಮೆಂದು ಪೂಣ್ದು ನುಡಿದು ಬಂದ ನಿಯೋಗಿಯಂ ಪಿಂತಟ್ಟುವುದುಂ ವಾಲಿಪುತ್ರಂ ಚಚ್ಚರದಿಂ ಬಂದು ತಮ್ಮಾಣ್ಮಂಗಿಂತಿದಂ ಕೇಳಿಸಿದಂ.

ಬೀರದೇಳ್ಗೆಗೆ ತಮಗಾನುಡಿಯೆ ಗುಡಿಯಾಗೆ ಆಕೆವಾಳರೆಲ್ಲರೆತ್ತಿನಡೆದೆತ್ತಂ ಮುತ್ತಿ ಗರ್ಜಿಸಿದರ್. ಆ ಗರ್ಜನೆಗೆ ಮುಂಗಾರ ಸಿಡಿಲ ಗರ್ಜನೆಗೆ ಪೊರೆದೇಳ್ವ ಸಿಂಗನಂತೆ ಬೊಬ್ಬಿರಿದುರಿದೆಳ್ದು ಸರಥಂ ಸುರಥಂ ದಂಡಂಗೊಂಡು ದಾಳಿಡುವ ದೆಕ್ಕಾಳದ ದಕ್ಕಡಿಗರಂ ತರುಬಿ ನಿಂದಂ. ಅನಿತರೊಳ್ ಸಹದೇವ ಭೂರಿದೇವ ರಿಪುಂಜಯ ಪ್ರಮುಖಪುತ್ರವರ್ಗಮುಂ, ಮಂತ್ರಿವರ್ಗಮುಂ ಮೂಲಬಲಂಬೆರಸು ಬೆಂಬಲಮಾಗೆ ಬಂದೊದವಿದುದು. ಈಗಳಿರ್ವಕ್ಕದೊಳತಿರಥರ್ಗರ್ಧರಥರ್ಗೆ ಮಹಾರಥರ್ಗೆ ತಂತಮ್ಮೊಳ್ ಪೋಣರ್ಕೆಗಡ! ರಿಪುಂಜಯುಂಗೆ ವಿಮಲಂ ಸಾಟಿ; ದುರ್ವಾರಂಗೆ ಸುಬಾಹು ಪಾಟಿ; ಬಲಮೋದನಂಗದಂಗೆಣೆ; ಸಹದೇವಂಗೆ ಸತ್ಯವಂತಂ ತೊಣೆ; ಇಂತೋರಗೆಯಿಂ ತಾಮುರ್ಟ್ವಾಗೆ ಕಾದುತಿರಲೊಡಮೊಂದೆಡೆಯೊಳ್ ಪನ್ನತಿಕೆಯಿಂ ಪಡಿದಳಮನಿರಿಯುತೆ ಬರುತುಮಿರ್ಪ ಚಂಪಕನನಿದಿರ್ಚಿ ಕೋಲ್ಗರೆದು ಪುಷ್ಕಲಂ—ಎಲೆಲೆ ನೀನೇವೂರ ರಾಯಗುವರನೋ? ಬರಿದೆ ಕಿತವರೆಂತಂತು ಪೆರರ ಪಸುವಂ ಕೊಂಡುಯ್ದು ಬಂಡಣಕೆ ನಿಂತ ನೀಂ ಗಂಡನೆ? ಬಂಡನೆ? ನುಡಿನುಡಿಯೆಂದಂ. ಆ ಸೊಲ್ಲಂ ಪುಲ್ಲಂ ಬಗೆದು ಪಲ್ಲಮರಿಯೊಂದಾಯತಿಯಿಂ ದಟ್ಟೆಯಂ ಮುಟ್ಟೆಮುರಿದು ಮುಂಡಮಂ ದಿಂಡುರುಳ್ಚಿ ರುಂಡಮಂ ಸೆಂಡಾಡಿ ಕೊರ್ವನಾಲೆ ಕರ್ವನೆಂತಂತು ಪಿಳಿದು ಮುಂದೊತ್ತಿ ಪೋಪರಂ ತರುಬಿ ಮತ್ತಂ ಎಲೆ, ಬಲ್ಗಡುಸುಗಾರ, ನುಡಿವಂಗೆ ಪಡಿನುಡಿಗುಡವೇಡಾ! ಉಸಿಕನೆ ಪೋಪುದೊಂದು ಪೆರ್ಮೆಯೆ? ನಿರ್ನೆರಮೆಮ್ಮಂ ಕೆಣಕಿ ನೋಯದಿರ್ ಸಾಯದಿರ್ ಎಂದಂ. ಆಗಳ್ ಚಂಪಕಂ ಕಿನಿಸಿಂ ಎಲೆಲೆ ಬಡಿವಾರದ ತೋರದೋಟಿಗ, ರಣಕ್ಕೆ ಮೆಯ್ಯಾಂತು ನಿಂದೆನ್ನನಾರೆಂದು ಕಿರುಕುಳನೆಂತಂತು ಬೆಸಗೊಳ್ವ ನಿನ್ನ ಗರುವಿಕೆಗೆ ನಾಡೆ ತೋಡೆ? ನಿನ್ನನುಳಿದೆನಗಾವುದನ್ಯಂ ಜನ್ಯಂ? ಪೆಸರೇನೆಂಬೆಯುಪ್ಪೊಡೆ ನಿನ್ನನ್ನರಪ್ಪ ಸೊರ್ಕಿನ ಬಂಡುಣಿಗಳ್ಗೆ ತಲೆವೇನೆಯನೊದವಿಪ ಚಂಪಕನಪ್ಪ ಚಂಪಕಂ; ತೋಳ್ವಲಮುಳ್ಳೊಡೆ ಕಾದಿ ಕುದುರೆಯಂ ಕೊಳ್ಳೆಂಬುದುಂ

ಪುಷ್ಕಲಂ—ಏನೆಂಬ ಪೆಂಪೊ! ಚಂಪಕಂಗಡ! ಬಂಡುಣಿಗಳ್ಗಡ! ಏಂ ನಿನ್ನ
ಪ್ರಾಣಂಗಳ್ಗೆ ದರ್ವೀಕರನಾಗೆನೆ? ನೋಡೆಂದಂ. ಅದರ್ಕಾಚಂಪಕಂ ನೀಂ
ದರ್ವೀಕರನಪ್ಪೊಡೀಕಳನೊಳೇನಡುಕಳದೊಳಡುವಳನಕ್ಕುಂ; ಎನೆ ಭಾರತಿ
ಯೆಂಗುಂ—ಅಂತಪ್ಪೊಡೆ ತಳ್ವದೆ ತರಿದು ಸುಂಟಿಗೆ ಪಂಟಿಗೆ ಸಲ್ವಿನಂ ನಿಮ್ಮನೆ
ಬಾಣಸುಗೆಯ್ದು ಪರ್ದಿಂಗೆ ಬಿರ್ದಿಕ್ಕುವೆಂ, ನೋಡೆಂದು ಪೊಂಗರಿಯ ಕವಲಂಬಂ
ಚವಲಂಬಮಾಡದ ಮುನ್ನಮೆಚ್ಚಂ. ಇಂತು ಪಗೆಯ ಸವಗದೊಳೆಚ್ಚ ಕಣೆ ಬೆಚ್ಚಂ
ತಾಗಲೊಡಮೆನಸುಂ ಬಗೆಯದಕ್ಷಯಬಾಣಂಗಳಿಂ ಪುಷ್ಕಳನಂ ನೋಯಿಸಿದಂ.
ಇಂತಪ್ಪುದುಂ ಶರಹತಿಗೆ ಗಾರುಗೆಟ್ಟು ಮೈಮರೆದನಾಗೆ ಬಲದೊಳೆತ್ತಂ ನಿಬ್ಬೆರಗಿನ
ಕಲಕಲಂ ಪಿರಿದಾಯ್ತು. ಅನಿತರೊಳ್ ಶತ್ರುಹಂಗೆ ಭಾರತಿಯ ನೋವು ಬೇವಾಗೆ
ಮುಂಬರಿದು ಗಜರೆ ಗೆಲ್ಲದ ಚೆಲ್ಲದ ಪರಿಮುರಿಯ ಗಂಡರನೆತ್ತಂ ಪಿಂಡುಗೆಡೆವುತ
ಗ್ಗದ ಪುಗ್ಗಿನ ಚಂಪಕನನರಸಿ ಮಾರಾಂತು ಓವೊ! ಹೂಟಿಗರಿತ್ತಲಿರ್ಪರೆ?
ಪೇಡಿಯಂತು ತಲೆಗರೆದಿರ್ಪುದಾವ ರೂಢಿಯೊ? ಕಿರುಕುಳರಂ ತರುವಲಿಗಳಂ
ತರುಂಬಿ ಗೆಲ್ವುದೇಂ ಗೆಲ್ಲಮೆ? ಇತ್ತಲಿತ್ತಲ್ ಚಿತ್ತವಿಪುದೆನ್ನ ಸರಿಸಕ್ಕೆನುತೆ ಬಲ್ಗೋ
ಲ್ಗಳಂ ತಿರುವಾಯ್ಗೆ ಸಂಧಿಸುತೆಚ್ಚಂ. ಆಗಳ್ ಚಂಪಕಂ ಪಿಳ್ಕು ಪೆರಗಾಗಿ ಬರ್ಪ
ಶರಮುಂ ಮುರಿದು ಪುಂಖಾನುಪುಂಖಮಾಗೆ ಪಲವಂಬುಗಳಂ ಗೊಲೆ ನೆಲೆದಪ್ಪ
ವಿನಂ ಸೆಳೆದೇಸಾಡಿದಂ. ಅಂತೇಸಾಡಿ ಬರ್ಪ ಪುಣಂಬುಗಳಂ ಪುಷ್ಕಲಂ ನಡುವ
ಟ್ಟೆಯೊಳೆ ಕೊಚ್ಚಿ ಪಡಿಸರಲಿಂ ತೇರ ಕೀಲಂ ವಾರುವದ ಕಾಲಂ ಮುರಿದಂ. ಇಂತಾ
ಗಲೊಡಂ ಮೂರಡಿಯ ಪೇರಡಿಯ ಪಾಂಗಿನಿಂ ಹಯಂ ಕೊಂಟೆ ನಡೆವುದುಂ
ಅರಥಮನುಳಿದು ಮೇಣೊಂದು ತೇರನಡರ್ದು ಚಂಪಕಂ ನೊಂದ ಪಂದಿಯ
ಮಸಕದಿಂ ಕೆರಳ್ದು ಮಂತ್ರಾಸ್ತ್ರಂಗಳಂ ಭರತಾವರಜಂಗೆ ಪೂಡಿದಂ. ಆಗಳ್
ಶತ್ರುಹಂ ಮಂತ್ರಮಂ ತಂತ್ರದಿಂ ತರಿದು ಪೊಸಮಸೆಯಂಬಿನಿಂ ಪಗೆಯ ಬಿಲ್ಲಂ ಪುಲ್ಲಂ
ಕಡಿವಂತು ಮುಕ್ಕಡಿಗೆಯ್ಯೆ ಚಂಪಕಂ—ನಿನ್ನ ವದೆಗೀಗದೆ ಸಾಲದೆ? ನೋಡೆಂದು
ದಂಡಂ ಖಂಡಮಪ್ಪಂತು ಪೊಯ್ಯೆ ಶತ್ರುಹಂ ತಾನುಂ ಗದೆಯುಂ ಕೊಂಡರಿಯ
ಗದೆಯುಂ ಸದೆದು ನಿಶ್ಚೇಷ್ಟಿತನಪ್ಪಂತು ನೋಯಿಸಿ ಕಣದೊಳ್ ಕೆಡಪಿದಂ.
ಇಂತು ಚಂಪಕಂ ಜೋಂಪಿಸಿ ತಿರೆಯೊಳ್ ಕೆಡೆವುದುಂ ಬೆಂಬಲರ್ ಬೆಂಗೊ
ಟ್ಟೋಡಿ ತಮ್ಮಾಣ್ಮಂಗಿದಂ ಕೇಳಿಸಿದರ್. ಒಡನೆಯೆ ಸುರಥಂ ರಥಮನಾಯೆಡೆಗೆ
ನೂಂಕಿ ಪಗೆಯನಸ್ತ್ರಜಾಲದಿಂ ಸೆರೆವಿಡಿದುಯ್ವೆನೆಂಬಾವೇಳೆಯೊಳ್ ಅಣುವನ

ರಿಯುಂ ಕರಿಯುನೆರಗುವ ಬಲ್ಸಿಂಗನಂದದೆ ತಾಗಿ ತೂಗಿ ಪಿಡಿಯಿಂ ಗುರ್ದಿದನಾಗೆ ತೇರ್ ಜಜ್ಜರಿವೋಯ್ತು; ಈಗಳಣುವಂಗಂ ಸುರಥಂಗಂ ಯುದ್ಧಂ. ಹಯುಮಂ ತಾರೆಂಬ ರಾಘವನಂ ತೋರೆಂಬ, ಕೆಲಸಾರೆಂಬ ನೀನಾರೆಂಬ, ಪೋರೆಂಬ ಬಾರೆಂಬ ನುಡಿಯೆ ನುಡಿ ಕೊಳುಗುಳದೊಳ್. ಸುರಥನಿಟ್ಟ ಗದೆಯುನಣುವಂ ಮುರಿದಂ. ಅಗ್ನ್ಯಸ್ತ್ರಮಂ ಮುರಿದಂ; ಗರುಡಾಸ್ತ್ರಮಂ ಮುರಿದಂ; ಬ್ರಹ್ಮಾಸ್ತ್ರಮಂ ಮುರಿದಂ; ವಾಯುವ್ಯಾಸ್ತ್ರಮುಮಂ ಮುರಿದಂ; ರಾಮಬಾಣಂ ಬಂದೊಡೆ ಸರಿದಂ. ಏನೆಂಬ ಭಕ್ತಿಯೊ ದೇವರೊಳ್ ! ರಾಮಬಾಣಮಂ ದೂರದೆ ಕಂಡಡಿಮುಡಿಯೊಂದಾಗೆ ಮಣಿದು ಕೈಯೊಳ್ಕೊಂಡು ಎರ್ದೆಗೊತ್ತಿ ತಲೆಯೊಳಿಟ್ಟು ಭಕ್ತಿಯ ಹರವಸದಿಂ ಮೆಯ್ಮರೆದೆಳ್ಚರ್ಗೊಂಡು ಕಟ್ಟಿದಿರೊಳಿರ್ಪ ಸುರಥನಂ ಕಂಡೆಲೆ ರಾಯು, ಇಂದಿಂಗೆ ನೀನೆ ಗೆಲ್ದಯ್; ನಿನ್ನನೆ ದೇವರೊಲ್ದರಕ್ಕುಂ; ಎಲೆ ದೇವರ ದೇವ ಎನ್ನೊಳೇನಪರಾಧಮೊ? ಏನುಪೇಕ್ಷೆಯೊ? ಈ ಬಣಗುರಾಯುನೊಳ್ ಜುದ್ದಂ ಕೈಗಟ್ಟುವೊಡಕ್ಕುಮೆ? ನೀನೆ ಬಂದು ಬಡಿವೊಡಕ್ಕುಮೆ? ಸೆರೆವಿಡಿವೊಡಕ್ಕುಮೆ? ನಿನಗೀರಾಯುನೊಳೇಂ ಪಕ್ಷಪಾತಮೊ? ನಿನ್ನತ್ತಣಿನರಿಗಂಜಿದೆಂ; ಬೆನಕನಂ ಕಂಡು ಕಿತ್ತಿಲಿಗೆ ಕುಂಬಿಟ್ಟೆಂ; ನೀನಿಲ್ಲದಂದೆನಗೇತರ ಕೂಪು? ಮೇಣೇತರ ಪೊಡರ್ಪು? ಎನಗೇಕೆ ಬಂಟತನಮೇತರ್ಕೆ ಹಯುದ ಬೆಂಬಳಿಯೆಂದು ಬೇಡಿಕೊಳುತಿರ್ಪುದುಂ ಬಾನ ಮೀನನಿಳಿಕೆಯ್ವ ಕುಂಡಳಂ, ಕರ್ಮಣಿಗಲ್ಲ ಕೈಗನ್ನಡಿಯುಂ ಸೋಲಿಪ ಗಂಡಮಂಡಲಂ, ಮುಗಿಲ್ಪಗಿಲ್ತಾಗಸದ ಪಸುರ್ವಣ್ಣದ ಮೆಯ್ಸಿರಿ, ತುಂಬುವೆರೆಯ ಕಳೆಗೆ ಕೆಳೆಯುಪ್ಪ ಮೊಗಸಿರಿ, ಪಲಗೆನೊಸಲಂದಂ, ನಿರಿಗುರುಳಚಂದಂ, ಕಿರುನಗೆಯ ಗಾಡಿ, ಕಡೆನೋಟದ ಮೋಡಿ ಬಗೆಯೊಳಿಂಬುಗೊಡಲೊಡಂ, ಮಿಗಗೋಡುಂ ನಾರ ಸೀರೆಯುಂ ತನ್ನ ಲಚ್ಚಣಮಾಗೆ ದೀಕ್ಷೆವೆತ್ತ ಕೋದಂಡ ದೀಕ್ಷಾಗುರುವಂ ಇದಿರೊಳ್ಕಂಡಂ. ಇಂತು ಮೆಯ್ದೋರಿದ ತನ್ನೊಡೆಯನಂ ಸುಖಾಶ್ರು ಕಾಳ್ಪುರಮಾಗೆ ಸೋರ್ವಿನಮೆಮೆಯಿಕ್ಕದೆ ನೋಡಿ ಮೇಣುಂ ಮೇಣ್ ದೇವರಡಿಯೊಳ್ಪೊರಳ್ದು ತನ್ನ ಬನ್ನಮಂ ನಿರವಿಪುದುಮತ್ತಲ್ ಮರುವಕ್ಕದ ಸುರಥಂ ತಳ್ವದೆ ಹಯುಮಂ ಕಪ್ಪಮಂ ಕಾಣ್ಕೆಯಿ೦ ತರಿಸಿ ರಾಘವನಡಿಗೊಪ್ಪಿಸಿ ದಂಡಪ್ರಣಾಮಂಗೆಯ್ದು ಜೀಯ, ಎನ್ನೊಡೆಯ, ಎನಿತಪರಾಧಮೆನತ್ತಪರಾಧಂ! ಬಂದ ಹಯುಂ ನಿನ್ನದೆಂದರಿದುಂ ಕಟ್ಟಿದೆಂ, ನಿನ್ನವರಂ ಪೊಯ್ದೆಂ ಬಯ್ದೆಂ; ಆದೊಡಂ ನಿನ್ನಂ ಕಾಣ್ಬೊಂದು ಬಯಕೆಯೊಳಲ್ಲ ಗೆಲ್ಲದೊಳೆಳ್ನಿತಾದೊಡಮಲ್ತು. ಈಗಳ್

ಕಣ್ಣಾರೆ ಕಂಡು ತಣಿದೆಂ, ಇನ್ನೆನಗಾವುದರೊಳಾಸೆ? ಇದೆಕೊಳ್ ಹಯಮಂ, ಕಾಣ್ಕೆ, ಕಪ್ಪಂ, ನಾಡು, ಬೀಡು; ನಿನ್ನ ಚರಣಕ್ಕರ್ಪಿಸುವೆಂ, ಎನ್ನೊಡಲುಮನೊಡಮೆಯುಮಂ ಮಡದಿಮಕ್ಕಳಂ ನಿನಗೊಪ್ಪಿಸಿದೆಂ, ನೀನೋವುದು ಕಾವುದು ಎಂದು ಸೆರಂಗನೊಡ್ಡಿ ಬೇಡಿಕೊಂಡಂ. ಆಗಳ್ ಶ್ರೀರಾಮಚಂದ್ರಮಂ ಇರ್ವರುಮನೆತ್ತಿ ತಳ್ಕೈಸಿ ತನಗಭಿಮಾನಮನಿರ್ವರೊಳಂ ಸಮಮಪ್ಪಂತು ಪ್ರಕಟಿಸಿ ಮುಚ್ಚೆವೋದ ತಮ್ಮವರನೆಳ್ಚರಿಸಿ ಸರ್ವರುಮಂ ಸಂತಯಿಸಿ ಮೆಯ್ಗರೆದಂ.

ಬಳಿಕ್ಕಂ ಶತ್ರುಘ್ನನರೆವಗಲುಪ್ಪಯಣಂ ಗೆಯ್ದು ಸುರಥನಿಂ ಸತ್ಕೃತನಾಗಿ ಆತನೊಡನೆ ಸಡಗರದಿಂ ಮುಂತೆ ಮುಂತೆ ನಿಚ್ಚವಯಣದಿಂ ನಡೆದಂ.

---

೧೫. ಲವಕುಶರ ಕಾಳೆಗಂ.

ಅಂತು ಕುಂಡಲಪುರದಿಂ ತಳರ್ದು ಪಲವುಂ ನಾಳ್ಕಳಂ ಕಳಿಕಳಿದು ಬರುತುಮಿರ್ಪುದುಮದೊಂದು ತಪೋವನದೊಳ್ ಕಿರುವರೆಯದ ಕುವರರಿರ್ವರದಟಿಂ ಪಿಡಿದು ಹಯಮಂ ಕಟ್ಟಿದರ್ಗಡ!

ಮನೋರಮೆ—ಎನ್ನೊಡೆಯ, ಮುನಿಗಳಾಶ್ರಮದ ತರಳರ್ ನಾಡರಾಯರ ಜನ್ನಗುದುರೆಯನೆಂತು ಕಟ್ಟಲಾರ್ದರ್? ಆರಪ್ಪರೀ ಕುವರರ್? ಎಂತು ಕಾದಿದರೇನಾದರ್ ಪೇಳ?

ಮುದ್ದಣಂ—ಉ: ಪೋಕೆ; ಬಾಳ್ಗೆಟ್ಟ ಮಕ್ಕಳಾರಾದೊಡಮೇಂ? ಸಾಲ್ಗುಮಿ ಪಾಳ್ಗತೆ.

ಮನೋ—ಆಗದಾಗದು. ಬಾಲಕರ್ ರಣದೊಳ್ ಸೋಲ್ತರೆ? ಗೆಲ್ದರೆ? ಪೇಳಯ್.

ಮುದ್ದ—ನೀನುಡುಗೊರೆಯನೀವುದನೇನುಮಂ ಕಾಣೆಂ; ಉಂತೆ ಪೇಳೆಂದೊಡೆ ಪೇಳ್ವರೆ?

ಮನೋ—(ನಗೆಯಿಂ) ನೀನುಮೆರೆವರೆಂತಂತು ಬೇಡುವಯ್; ಕಾಡಿ ಬೇಡಿಕೊಂಡೊಡೆ ಅದೊಂದುಡುಗೊರೆಯೆ? ಮನವೊಲ್ದಿತ್ತೊಡೆ ಮೆಚ್ಚು. ಪುರಾಣಂ ಮುಗಿದಿಂ ಬಳಿಯುಮಲ್ತೆ ಕತೆ ಸೊಗಸೆನಿಸೆ ಉಡುಗೊರೆಯನೀವುದು?

ಮುದ್ದ—ಕತೆಯೆಲ್ಲಮನಾಲಿಸಿ ಸೊಗಸೆನಿಸಿರ್ದೊಡಂ ಬಳಿಕ್ಕಮಿಂಯೆನೆಂ

ದೊಡೆ ಜಿಡೆಂ; ಆಯ್ತು; ನೋಳ್ಪೆಂ; ಎಳಗುವರರಕತೆ ಮುಂತಿರ್ಕೆ; ನೀಂ ಮುನಿ ವೆರಸು ಪೋದ ಸೀತೆಯೊಂದಿರವನರಿತುಂಟೆ?

ಮನೋ—(ಅರಿವುಗೊಂಡು) ಎನಗಮೇನೊಂದು ಮರವೆಯೊ? ಎನ್ನಬ್ಬೆ ಸೀತೆಯನಾಗಳೆ ಮರೆತೆಂ. ಅಪ್ಪುದಪ್ಪುದು; ಮುನಿಗಳಾಶ್ರಮದೊಳೆಂತಿರ್ದಳೆಂಗೆ ಯ್ದಳ್? ತಮರವರ್ ಕೊಂಡುಯ್ದರೇಂ?

ಮುದ್ದ—ಅಂತರಮುಂ ನನ್ನಿಯುಂ ಒಡವೆರಸು ಪೋಪಂತೆ ಪೋಗಿ ಮುನಿಪನಾಶ್ರಮದ ನಟ್ಟನಡುವೆ ಕಣ್ಗಿಂಬಾದ ಪರ್ಣಕುಟಿಯನೊಂದಂ ನೇರ್ಪ ಡಿಸಿ ಬಗ್ಗಿನ ಸಿರಿಯಂ ಹದಿಟಿಗೆಯ್ವಂತು ದೇವಿಯನಿರಿಸಿ ಮುನಿಸತಿಯರಂ ನೇಹದ ನಲ್ಗೆಳದಿಯರಂ ಮಾಡಿ ಪಾಡಳಿದು ಬೆಂಡಾಗದಂತಾರಯ್ಯುತುಮಿರ್ದಂ.

ಸೀತೆ ನಿಚ್ಚಲುಂ ತನ್ನ ಪ್ರಾಣೇಶ್ವರನಂ ನೆನೆನೆನೆದು ಹರವಸದಿಂ ಮೈಮರೆ ವಳ್ ಕನವರಿಸುವಳ್; ನುಡಿಯೊಳ್ ನಡೆಯೊಳ್ ಶ್ರೀರಾಮನೊಂದೆ ನೆನವುಗಡ! ಏಂ ಸಾಧ್ವಿಯೋ! ತನ್ನೆರೆಯನಯೆ ಪಾಡು; ತನ್ನಾಣ್ಮನಯೆ ಭಕ್ತಿ; ತನ್ನಿನಿಯ ನಯೆ ನೆನೆವು; ತನ್ನರಸನಯೆ ಸರಸಮಾ ಸರಸಿಜಾಕ್ಷಿಗಜಸ್ರಂ; ಕೊಂಕಳ್ ಸಂಕಿ ಸಳೋಪನ ಶಾಸನಕ್ಕೆ ಜನಕತನೂಜೆ. ತನ್ನಿರವಿನ ನೋವಂ ತನ್ನಮನದನ್ನನ ನೆನಪಿನೇರಗುಡಳ್. ಮುನಿಯಾರಯ್ಕೆ, ಮುನಿಸತಿಯರ ನೇಹಂ, ತನ್ನ ಪಾತಿವ್ರತ್ಯಂ ದೇವಿಗೆ ಮೂವಳಸಿನ ಕಾಪಾಯ್ತು.

ಈ ಮಾಳ್ಕೆಯಿನಿರ್ದ ಭೂಜಾತೆಗೆ ತಿಂಗಳ್ ತುಂಬಿವರೆ ಮುನಿ ಸೀಮಂ ತೋನ್ನಯನಮಂ ಯಥಾವಿಧಿ ಮಾಡಿಸಿದಿಂಬಳಿಯುಂ ನಲ್ಗೆಳದಿಯರ್ ಮಲ್ಲಿಗೆಯ ಚೊಲ್ಲೆಯಮಂ, ಕುಂದದ ಬಾಸಿಗಮಂ, ಮಂದಾರದ ಬೈತಲೆಬೊಟ್ಟಂ, ಸಂಪಗೆ ಯೊಡ್ಯಾಣಮಂ ಸಮೆದು ಸಿಂಗರಿಸಲೊಡಂ ಪೂವಿನ ಪಸದನಂಗೊಂಡು ಅಂದಂಬಡೆದು ಬಂದು ನಿಂದ ವನದೇವಿಯ ಪಾಂಗಿನಿಂ ಸೀತೆ ಕಣ್ಗೆಡ್ಡಮಾದಳ್.

ಇಂತೊಪ್ಪುವ ಸೀತೆ ಕಿರಿದಾನುಂ ದಿನಕೆ ಸುಮುಹೂರ್ತದೊಳ್ ಅವಳಿರ ನವಳಿರಂ ಪೆರೆನೇಸರ್ಕಳಂ ಪೂರ್ವದಿಕ್ಸುಂದರಿಯೆಂತಂತು ಪೆತ್ತಳ್. ಮುನಿಪಂ ಕುವರರ್ಗೆ ಕುಶನೆಂದುಂ ಲವನೆಂದುಂ ಕೊಂಡಾಟದ ಪೆಸರ್ಗಳನಿಟ್ಟಂ. ಒರ್ಮ ಡಿಯ ಚೆಲ್ವಿರ್ಮೆಯ್ವೆತ್ತಂತುಮಿರ್ಮೆಯ್ಯ ಸೋಮಕಾಮರ್ ಒರ್ಮೊದಲೊಳೊ ಗೆದಂತುಂ ಒಗೆದು ಗಾಡಿಗಾಡುಂಬೊಲಂ, ಸತ್ತಿನ ಗೊತ್ತು, ಹರಿಸದ ಸರಿಸವೆನೆ

ತೋರೆ ದಿನದಿನಕ್ಕೇರುಂಬೆರೆಯುಂತೆ ಕಳೆವೆರ್ಚುತೆ ಬಳೆಯುತಿರ್ಪ ಕುವರರ್ ಪೆತ್ತಬ್ಬೆಗಂ ಪುತ್ತಿನ ಪುತ್ರಂಗಂ, ಮುತ್ತ ಮುನಿಗಳ್ಗಂ, ಎತ್ತಿನಲಿವ ಬಾಲೆಯರ್ಗಂ ಮತ್ತಮೆಲ್ಲರ್ಗಂ ಮುದ್ದು ಮುದ್ದಾದರ್. ದಟ್ಟಡಿ ಬಟ್ಟಮೊಗಂ, ಪುಟ್ಟಗೈ ಕಟ್ಟಾ ಯದ ಮೆಯ್ಸಿರಿ ನೋಳ್ಪರಂ ಬೆಮೆಗೊಳಿಸೆ, ಮೊಳೆವಲ್ಲ ಚೆಲ್ವು ಕಿರುನಗೆಯಿಂದಂ ತೊದಲ್ನುಡಿಯು ಸೊಗಸು ತಳರ್ನಡೆಯು ಗಾಡಿ ಮನಂಬುಗೆ ಕಣ್ಗಿಂಬಾದರಾಲಂ ಬಾಲಕರ್ ಬಾಲಕರ್.

ಮತ್ತಮೋರೊರ್ಮೆ ಮಾತೆಯು ಸೆರಂಗಂ ಸೆಳೆವ, ಸೆಳೆದೋಡುವ, ಓಡಿ ಕಗೋರ್ಕಡಗನಂ ಗಡ್ಡದೊಳೀಳ್ದು ಮರಿಸಿಂಗನ ಬಾಲಕ್ಕೆ ಗಂಟಿಕ್ಕುವ, ಗಂಟಿಕ್ಕಿ ನಗುವ, ನಕ್ಕು ನಲಿದು ಬಂದು ಮುನಿಯ ತೊಡೆಯುನೇರುವ, ತೊಡೆಯುನುಳಿದು ಪೆಗಲನಡರ್ವ, ಪೆಗಲನಡರ್ದು ಕಿವಿಯುನೂದುವ, ಕಿವಿಯುನೂದಿ ತಲೆಯುನಲು ಗುವ, ತಲೆಯುನಲುಗಿ ಜಡೆಮುಡಿಯಂ ಬಿಡುವ, ಬಿಟ್ಟ ಜಡೆಯ ತುದಿಗೆ ಬೆಲ್ಲವ ತ್ತಮುಂ ಪೊಲ್ವ, ಪೊಲ್ದಬ್ಬೆಗೆ ತೋರುವ, ಅಬ್ಬೆಗೆ ತೋರಿ ಕೈಪರೆಗುಟ್ಟುವ, ಕೈಪರೆಗುಟ್ಟಿ ಗುಂಡಿಗೆಯಂ ಕಳ್ವ, ಕಳ್ದು ಬೈತಿಡುವ, ಬೈತಿಟ್ಟು ಒರ್ವಂ ಕಳ್ದ ನೆಂದೊರ್ವನಂ ಪೇಳ್ವ, ಪೇಳ್ದೊಡನೆ ತಂದೀವ, ತಂದಿತ್ತಡಿಗೆರಗುವ ಎರಗಿ ಬಂದು ತಮ್ಮ ಲೀಲೆಯಂ ಕೇಳಿಪ ಚಿಣ್ಣರಾಟಂ ಮಾತೆ ಸೀತೆಯು ಸಂತಸಗಡಲ ನಿರ್ಮಡಿಯುಬ್ಬಿಸಿದತ್ತು.

ಬಳಿಕ್ಕೆ ಮುನಿಪಂ ಬಾಲಕರಂ ಚೌಲೋಪನಯುನಸಂಸ್ಕೃತರಂ ಮಾಡಿ ಪಲವೋದುಗಳನೋದಿಸಿ ಪಳವಾತುಗಳನೆಲ್ಲಮಂ ಸಾಂಗಮರಿಪಿ ಶಾಸ್ತ್ರಂಗಳ ನೊರೆದು ಗಾಣದೊಳ್ ಜಾಣರಂಗೆಯ್ದು ಬಿಲ್ಗಾರಿಕೆಯೊಳ್ ಬಲ್ಗೈಗಲಿಗಳ ನೆಸಗಿ ಬಳೆಯಿಸುತಿರೆ ಮೋಡಮಳಿಯೆ ತಿಳಿದ ಕಳೆಗಳಿಂ ಬೆಳಗುವ ಚಂದ್ರಮ ನಂತೆ ಮೋಡಮಳಿಯೆ ತಿಳಿದ ಕಳೆಗಳಿಂ ಬೆಳಗಿದರ್ಯುಮಳರ್. ಪುಸಿಯುದ, ಬೇಸರದ, ಬಾಸೆದಪ್ಪದ, ಬೋಸರಿಸದ ನಡೆಗೇನೆಂಬೆನೊ! ಮುನಿಯೊಳ್ ಗುರು ಭಕ್ತಿ, ಮಾತೆಯೊಳ್ ದೈವಭಕ್ತಿ ನಲವೆರ್ಚೆ ತಾಪಸರೊಳೊಲ್ಮೆಯಿಂ, ವಟುಗ ಳೊಳ್ ನಲ್ಮೆಯಿಂ ಬಳೆಯುತಿರ್ದರಾಜಿತಮಾರರ್ಕುಮಾರರ್.

ಇಂತು ಬಳೆಯುತಿರ್ಪ ಬಾಲರ ಬಳವಿಯಂ ಕಂಡು ತನ್ನ ಮುನ್ನಿನ ಬನ್ನಮಂ ಮರೆದು ನಲಿವ ಜಾನಕಿಯಂ ಕಂಡು ಕೃತಕೃತ್ಯನಾದೆನೆಂದು ಸಂತ

ಮಿರ್ಪ ವಾಲ್ಮೀಕಿ ಕಿರಿದಾನುಂ ದಿನಕ್ಕೆ ಕುಶಲವರನಾಶ್ರಮಕೆ ಕಾಪಿಟ್ಟು ವರು ಣಲೋಕಕ್ಕೆ ಪೋಪುದುಮಾಗಳೆತ್ತಾನುಂ ಸ್ವೇಚ್ಛೆಯಿಂ ನಡೆವ ರಾಘವನ ಜನ್ನ ಗುದುರೆ ಈ ಆಶ್ರಮಮಂ ಪುಗುತರಲೊಡಂ. ಆಶ್ರಮಕೆನಸುಂ ದೂರದೊಳ್ ಕೆಳೆ ಯರ್ವೆರಸು ಜಿನದಿಪ ಲವಂ ಅಲ್ಲಿಗಲ್ಲಿಗೆ ಸುಳಿದುಂ ತುಳಿದುಂ ವನಮಂ ಪುಡಿ ಗುಟ್ಟೆ ಕಿಚಿಕಿಲ್ವ ಹಯಮಂ ದಿಟ್ಟಿಸಿ ಆರ್ತೀದುರುದುಂಬಿಗುದುರೆ! ಮುತ್ತಯ್ಯನಿ ಲ್ಲದಂದು ಪೊರದೋಂಟಮಂ ತೊತ್ತಳದುಳಿದು ಪಾಳ್ಗೆಡಿಕುಂ. ಈಗಳಿದಂ ಕಟ್ಟಿ ಮುನಿ ಬರ್ಪುದುಮಾತಂಗೊಪ್ಪಿಸುವೆಂ ಎಂದು ತಾಂ ಮುಂತೆ ತಳರ್ದು ಮಿಕ್ಕಿನ ಬಟುಗಳ್ ಪಿಡಿ ಪಿಡಿ ಎಂದಾರ್ದು ಸೋವುತಿರೆ, ಮುಂಬರಿದು ಉತ್ತರಿಗೆಯಿಂ ಕೊರಲಂ ಬಿಗಿದು ಕೆಲನ ಮರಗೊಂಬಿನೊಳ್ ಕಟ್ಟಿ ನೊಸಲೊಳೋಲೆಯಂ ಕಂಡು ವಾಚಿಸಿಕೊಂಡು ಚಲಮಂ ಪಿಡಿದು ಕಾದುವೆನೆಂದು ಜಟ್ಟಿಗನಾಗಿರ್ದಂ. ಮಿಕ್ಕಬಾಲಕರ್ ನಾಡ ರಾಯರೊಡನೆ ಸೆಣಸಾಟಮೆ? ಬಾಲಂ ನೀನೆತ್ತಂ ಆಳ ವಿಗಳಿದ ಕೂರ್ಪಿನ ಕಾಲಾಳ್ಗಳೆತ್ತಂ? ಮಾಣ್ಮಾಗೆಂದು ಬಾರಿಸಿದೊಡಂ ಕೇಳದಿರ್ಪು ದುಮನಿತರೊಳೆ ಬೆಂಬಳಿಯ ಕಾಪಿನಾಳ್ಗಳರಸುತುಂ ಬಂದು ಕಟ್ಟಿದಿರೊಳ್ ಬಾಲಕರುಮಂ ಮರನ ಮೊದಲೊಳ್ ಹಯಮುಮಂ ಕಂಡು ಕಟ್ಟಿದರಾರೆಂದು ಜರ್ಬಿದರ್. ಆಗಳಾರುಷಿಕುಮಾರರ್ ಆಮಲ್ತಾಮಲ್ತು, ಈ ಮಾಣಿ ಕಟ್ಟಿದ ನೆಂದು ಲವನಂ ತೋರಿ ತಾಂ ಮೆಲ್ಲಮೆಲ್ಲನೆ ಮರನ ಮರೆಯೊಳಾದರ್. ಅಂತ ಪ್ಪುದುಮಾಳ್ಗಳಾಲವನಂ—ನಾಡ ರಾಯರ ಕುದುರೆಯೆಂದು ಸಂಕಿಸದೆ ತುರುವಳ ನಂತಿರೆ ಕಟ್ಟಿನಿಂದ ನಿನಗೆ ಕಣ್ಮಾರಿರವೇಡಾ! ಕೋಡಗವಸುಳೇ ಪೊನ್ನ ಪಿಳುಕಿನ ಬಲ್ಗಸೆಯ ಸವಿಯಂ ನೀನರಿಯೈ ಎಂದು ಗದರಿದರ್. ಅನಿತರೊಳ್ ಲವಂ ಕುರಿವಿಂಡಂ ಪುಗುವ ಮರಿಸಿಂಗನಾಟೋಪದಿಂ ಕಾವಲರ ಪಡೆಯಂ ನುಗ್ಗಿ ಸರಲ ಸರಿಯಂ ಕರೆದು-ಕಂಡಿರೆ ಕಾಡ ಕೋಡಗವಸುಳೆಯ ಕೈಚಳಕಮಂ? ಎನುತೆ ಮತ್ತಂ ಕೋಲ್ಗಳನೆಚ್ಚು ಅವರಂ ಎನಸುಂ ದೂರಕರೆಯುಟ್ಟಿದಂ. ಬಳಿಯಂ ಲವಂ ಕುದುರೆಯುನಣ್ಣನೆಡೆಗುಯ್ವೆನೆಂದಿರೆ ರಾಘವಾವರಜಂ ಈ ಕುಮಾರನ ಬಿಂಕಮುಮಂ ಸೆರಗಂ ಪಾರದ ಬೀರಮುಮಂ ಕೇಳ್ದು ತಾನೆ ಬಾಲಂಗಿದಿರಾಗಿ—ಎಲೆ ತರಳ! ಮೊಟ್ಟೆಯೊಳೆ ಕೆಲೆವೊಂದದಟು ನಿನಗೆತ್ತ ಣಿನಾಯ್ತು? ಆಟದ ಕೂಟದ ನಿನ್ನನ್ನರೊಳ್ ಪೊಣರ್ವಂದಂ ಕದನಮಲ್ಲೆಂಬು

ದಂ ನೀನರಿಯೆಯಾ? ಎನುತೆ ಹಯಕೆ ಸನಿಯಂಬೋಪುದುಂ ಲವಂ ಕಿಸುಗಣ್ಣಿ ಕಣೆಯನೆಚ್ಚು ಪಗೆಯುಂ ನೋಯಿಸಿ—ಪ್ರಾಯಂ ಕೂಸಾದೊಡೀಸಾಯಕಂ ಕೂಸಕ್ಕುಮೆ? ಜಗಕ್ಕೆ ನೀವೆ ಬಲ್ಪುಳ್ಳರ್, ಪೆರರ್ ಪಂದೆಗೊಂದೆಗಳ್; ಹಯಂ ಬರ್ಪುದುಮೊಡನೆ ಕಪ್ಪಮನೊಪ್ಪಿಸುವುದು ಗಡ! ನಿರ್ಧನರಪ್ಪಿನಂ ಮೊಗಸಿದ ಜನ್ನಕ್ಕೆ ಪಣಮಂ ಕುಡಿಮೆರಿದು ಬೇಡಿದೊಡಾಗದೆ? ಲೇಸು ಲೇಸೆನುತೆ ಹಂಗಿಸಿ ನುಡಿದಂ. ಆ ನುಡಿಗೆ ಶತ್ರುಘ್ನನಿನಿಸುಂ ಖತಿಗೊಂಡು ಪೊಸಮಸೆಯ ವಿಶಿಖದಿನಿಸ ಲೊಡಂ ಮಾರ್ಕೊಂಡು ಮುರಿದು ಲವಂ ತಾನ್ಯೆದು ಕೂರ್ಗಣೆಗಳಿಂ ತೇರಂ ಬಿಲ್ಲ ನಾರಿಯುಂ ತುಂಡಿಸಿ ಹೂಂಕರಿಸಿದಂ. ಮತ್ತಂ ಶತ್ರುಹಂ ನವ್ಯಭವ್ಯರಥಮಂ ಪೊಸ ಬಿಲ್ಲಂ ಕೊಂಡು ಬಾಲಕನಂ ಶರಂಗಳಿಂ ಮುಸುಂಕಿದಿಂಬಳಿಯುಂ ಕೊಲ್ಗಳುರು ಬೆಗೆ ಗಾರುಗೆಟ್ಟು ಬಾಯಾರಿ ಮುಚ್ಚೆವೋದ ಲವನ ಗಂಡಗರ್ವಕ್ಕೆ ಮೆಚ್ಚಿ ಕೊಂಡಾಡಿ ನೇಹಂ ಮಿಗೆ ತಾನೆ ತೋಳೊಳೆತ್ತಿ ತೇರೊಳಿಟ್ಟು ಶಿಬಿರಕ್ಕೆ ಮರ ಲ್ವುದುಂ ಮಿಕ್ಕಮಕ್ಕಳಿದಂ ಕಂಡು ಬೆದರಿ ಕಟ್ಟುರದಿಂ ತಮ್ಮಾಶ್ರಮಕ್ಕೆ ಬಂದು ಸೀತೆಯುಂ ಕಂಡು—ಅಬ್ಬೆ, ಪೋ ಪೋ ಈಗಡೆ ಲವನಂ ಬಿಂಕದ ರಾಯರ ಕುದುರೆಯಂ ಕಟ್ಟಿದನೆಂಬ ಕತದಿಂ ಬೇಡ ಬೇಡವೆಂದೊಡಂ ಕೇಳದೆ ಪಗೆಗಳ್ ಪಿಡಿದುಯ್ದರಯ್ಯೊ? ಕುಶನಾವೆಡೆ! ಮುತ್ತಯ್ಯನೇಂ ಬಾರನಿನ್ನುಂ? ಕೆಟ್ಟುದು ಕಜ್ಜಂ ಎಂದು ತಳಮಳಗೊಳ್ಳುತಿರ್ದರ್.

ಇಂತಾಡಿದ ಮಕ್ಕಳಮಾತಂ ಕೇಳ್ದು ಸೀತೆ ಮನಮರುಗಿ ಹಾ ಹಾ! ಎನ್ನ ಕಣ್ಮಣಿಯನಾರುಯ್ದರ್! ಎನ್ನ ಸಂಜೀವನಮನಾರ್ ಕೊಂಡರ್! ಹಾ! ಎನ್ನ ಸುಕುಮಾರ, ನೀನೇನಾದಯ್ ಎತ್ತವೋದಯ್ ಎಂದು ಪಲುಂಬಿ ಪಳಯಿಸುತಿರ್ಪ ಪೇಳೆಗೆ ಅರಿಗಜಾಂಕುಶಂ ಕುಶಂ ಕುಶಸಮಿತ್ಪುಷ್ಪಂಗಳಂ ಪೊತ್ತುಕೊಂಡು ಬಂದು ಮರುಗುವ ಮಾತೆಯುಂ ಕಂಡುಂ, ಪಗೆರಾಯರ ಜನ್ನಗುದುರೆಯಂ ಬಂದಿವಿಡಿದು ಲವಂ ಕಾದಿ ಸೆರೆವೋದುದಂ ಕೇಳ್ದುಂ ಕಡೆಗಾಲದುರಿಗಣ್ಣನ ಮಾಮಸಕಮಂ ಕೈಕೊಂಡು ಬೆಂಬತ್ತಿ ನಡೆದು ಅರಿಸೇನೆಯನಿದಿರ್ಚಿ ಎಲೆಲೆ ಬಣಗುಗಳಿರಾ! ಮೈಸೋಲ್ತ ಬಾಲನೊರ್ವನಂ ಕೊಂಡುಯ್ವುದಿದಾವ ಪೆರ್ಮೆ? ನಿಮ್ಮಂ ಗೆಲ್ಲವೆ ಗ್ಗೆಂತೊಲ್ಪಳ್? ಬಲ್ಪುಳ್ಳೊಡೆನ್ನೊಳ್ ತೋರಿಮೆಂದು ಪೊಸಮಸೆಯಲಗಂ ತೆಗೆದೆಚ್ಚು ಚೋಣಿಯುಂ ಘಾತಿಸಿದಿಂಬಳಿಯುಂ ದೆಸೆಗೆಟ್ಟು ತಮ್ಮ ದಳಮಂ ಕೈವೀಸಿ ಪುಷ್ಕಲಂ

ಬಂದ ಬವರಿಗಂಗೆ ಮಾರಾಂತು ಕಟ್ಟಿದಿರ ಚೆನ್ನಪೊಂಗನಂ ಕಂಡು ಅಬ್ಬಾ! ಕಂಡಿರೆ, ಮರೆಗೊಣಸು ಪಲ್ಲಮರಿಯುಂ ಕೆಣಕುವಚ್ಚರಿಯುಂ, ನೀರೊಳ್ಳೆ ಪುತ್ತಿನ ಪಾವಂ ನುಂಗಲಾಟಿಪಂದಮಂ ಎಂದು ಕೂರಂಬುಗಳಿನೆಚ್ಚಂ. ಆಗಳ್ಗೆ ಕುಶಂ ಪಗೆಯು ಕಣೆಯುಂ ಸದೆದು ಮೇಣೆರಡರಿಂ ಕರದ ಕೋಯಂಡಮಂ ಮುರಿದಂ. ಇಂತು ಬಿಲ್ ಬೆಸೆಯಾಗೆ ಶತ್ರುಹಂ ಪೆರತೊಂದು ಬಿಲ್ಲಂ ಕೊಂಡು ಕಟ್ಟೆಸುಗೆಯು ಕೋಲಂ ಕಿವಿಮುಟ್ಟೆ ಸೆಳೆದಿಟ್ಟಂ. ಅನಿತರೊಳೆ ಕುಶಂ ತನಿಗಿಡಿಯುಂ ಕಾರಿವರ್ಪ ತೋರಗಣೆಯುಂ ನಡುವಟ್ಟೆಯೊಳೆ ಪಡಿಗೋಲಿಂ ಬಡಿಗೋಲಿಂ ಕರಡಮಂ ಸದೆವಂತೆ ಸದೆದು ಮತ್ತಂ ಕೆಯ್ಯಬಿಲ್ಲಂ ಮೆಯ್ಯಸವಗಮಂ ತುಂಡಿಸಿ ತೇರಂ ವಾರುವಮಂ ಕಡಿದು ರಥಿಯುಂ ಸಮಂತು ಸಾರಥಿಯುಂ ಗಾರುಗಿಡಿಸಿದಂ. ಅಂತಪ್ಪ ದುಮಿಳಿಗಿಳಿತಂದು ಗದೆಗೊಂಡು ಪೊಯ್ಯಲೊಡಂ ಕುಶಂ ಪುಟನೆಗೆದು ತಾನುಂ ಗದೆಯಿಂ ಶತ್ರುಹನಂ ಸದೆದಂ. ಆಗಳೇನೆಂಬೆನೊ! ಬಿರುಗಾಳಿಯ ಪೊಯ್ಲಿಂಗೆ ಬೇರುಡಿದು ಬೀಳ್ವ ಮರನಂತೆ ಶತ್ರುಹಂ ದಿಮ್ಮನೆ ಗದೆವೆರಸು ತಿರೆಗೆ ಕೆಡೆದಂ. ಮೊರೆಯಿಟ್ಟುದು ಸೇನೆ; ಗಜಬಜಿಸಿದರ್ ಮಹಾರಥರ್. ಇಂತಾಗಲೊಡಮೆತ್ತಂ ಸುಭುಜಂ ಲಕ್ಷ್ಮೀನಿಧಿಮುಂತಪ್ಪ ವೀರರುಂ ಸುಗ್ರೀವಾದಿ ವಾನರನಾಯಕರುಂ ಮಂಡಳಿಸಿ ಕಾದುವುದುಮೊರ್ವನೆ ಚಾಲನನಿಬರಂ ಮರಿಸಿಂಗನಾನೆವಿಂಡನೆಂತಂತು ಮಾಮಸಕದಿಂ ದೆಸೆಗಿಡಿಸಿದಂ.

ಇಂತು ಸಂಗ್ರಾಮದೊಳ್ ವಿರೋಧಿವರೂಥಿನಿಯುಂ ಸದೆಬಡಿದು ತ್ರಿಣೇತ್ರನಂತೆ ಮುಸಗುತಿರೆ ಮುಚ್ಚೆವೋದ ಲವನೆಳ್ಚತ್ತು ಪಗೆಯೊಡ್ಡು ಬಕ್ಕಂಬಯಲಾದುದಂ ಕಂಡು ಮುಂದೆಸೆಯೊಳಳಿದುಳಿದ ಜೋದರೊಳ್ ಪೊಣರ್ವಗ್ರಜಾತನಂ ಕಿಚ್ಚಂ ಗಾಳಿಯೆಂತಂತು ಕೂಡಿದಂ. ಹತಶೇಷರ್ಕೆಲರ್ ರಣಕೆ ಬೆಂಗೊಟ್ಟೋಡಿ ಕಟ್ಟುರದಿಂ ಪೊಳಲ್ಗೆ ಬಂದು ರಾಘವಂಗೀವಿವರಮನರಿಕೆಗೆಯ್ವುದುಂ ದೀಕ್ಷೆಯೊಳಿರ್ದ ರಾಘವನನುಜಂ ಬೆರಸು ತಾನೆ ಪೊರಮಟ್ಟಂ. ಇಂತು ಕಡುವೇಗದಿಂ ಪಡೆಗೂಡಿ ನಡೆತಂದು ಕಾಡನೆತ್ತಂ ಕವಿದೊತ್ತಿ ರಾಮಲಕ್ಷ್ಮಣರೋರೊಂದು ದೆಸೆಯೊಳಿರ್ದು ದಳವನೊಡ್ಡಿನಿಲ್ವುದುಮಿದಿರೊಳಿರ್ಪ ಗಂಡುಗಲಿಗಳಂ ಕಂಡು ಲವನಗ್ರಜಂಗೆ—ಅಣ್ಣಾ, ಮೊಸೆಯೊಳಾಗಳೆ ಮಿಳ್ತುಗೆ ತುತ್ತಾದ ತಮ್ಮವರ ಬೆಂಬಲಕೆಂದು ಬಂದ ಬಲ್ಲಿದರಿರ್ವರುಂ ಎಮಗೆ ಮುಮ್ಮೊಗವಾಗಿ ಓವಿಯಿಂ ಬರ್ಕುಂ.

ಈಗಳೆಮಗೆ ಸಮರಂ ಸಾಟಿಯಾಯ್ತು. ಕಿರಿಯುನೆನಗೆ; ಪಿರಿಯುಂ ನಿಮಗೆ; ಮಿಕ್ಕಿನ ಪಡಿಬಲಮೆನ್ನ ನಿಮ್ಮ ಕೋಲ್ಗೆಂದು ಪಸುಗೆಗೆಯ್ದು ಮುಂದೊತ್ತಿ ಬರ್ಪ ರಾಮ ಲಕ್ಷ್ಮಣರ್ಗೆ ಕಟ್ಟಿದಿರಾಗಿ ನಡೆದರ್.

ಇಂತು ಜಿಂಕದಿಂ ಮುಟ್ಟಿವರ್ಪ ಮಕ್ಕಳ ಬಲಕಂ ಚಲಕಂ ನಿಬ್ಬೆರಗಾಗಿ ರಾಘವಂ ಲಕ್ಷ್ಮಣಂಗೆ— ಎಲೆ ತಮ್ಮ, ಈ ಕಾಡ ತರುವಲಿಗಳ್ಗಿಂತುಟೊಂದು ಬೀರಮೆತ್ತಣ್ತು? ಇವರೊಳೆನಗೇನೊ ಮಮತೆ ಪುಟ್ಟುಗುಂ; ಮುನಿಸು ಬಾರದು. ಆರೆಂಬುದನಾರಯ್ಯೆಂದು ಪೇಳ್ವನಿತರೊಳ್ ಮುಟ್ಟಿವಂದ ಕುಶಂಗೆ ರಾಮಂ—ಎಲೆ ಪಸುಳೆ, ನೀನಾವಂ? ಹಯುಮನೇನೆಂದು ಕಟ್ಟಿದಯ್? ನೀಂ ಗೆಯ್ದ ದುರುದುಂಬಿತನಮಂ ಮರೆತೆಂ; ನಿನ್ನಂ ಕಾವೆಂ. ನಿಮಗೆ ಬಿಲ್ಲೋಜನಾವಂ? ಪುಟ್ಟಿದಿರೆಲ್ಲಿ? ಕಿರುಗೂಸುಗಳ್ ನಿಮಗೆ ಜುದ್ದಂ ತಕ್ಕುದೆ? ಪೇಳೆಂಬುದುಂ ಕುಶಂ— ಎಲೆ ಬಣಗುರಾಯ, ನೀನೆನ್ನ ದುರುದುಂಬಿತನಮನೇನಂ ಕಂಡಯ್? ಎಮಗಜ್ಜಂ ಬಿಲ್ಲೋಜಂ; ಕಾಡೊಳೆ ಪುಟ್ಟಿದೆವು; ಕಟ್ಟಿದ ಹಯುಮಂ ಕೊಟ್ಟು ಜುದ್ದಮಂ ಬಿಟ್ಟೊಡೆ ಅಬ್ಬೆ ರೋಡಿಸಳೆ? ಅಜ್ಜಂ ಪಳಿಯನೆ? ಕೆಳೆಯರೇಡಿಸರೆ? ರಣರಂಗದೊಳ್ಜಿಂದು ಸಲ್ಲದ ನುಡಿಯುನಾಡದಿರೆಂದು ತನ್ನ ಪೊನ್ನ ಪಿಳುಕಿನ ಶರಂಗಳನಾರ್ದೆಚ್ಚಂ.

ಆ:! ಏತರೊಂದು ಬಿದಿಯ ಬದಗಾಟವೊ? ತನಗಯ್ಯನೆಂದರಿದನಪ್ಪೊಡೆ ಕುಶಂ ವಿಶಿಖಮನಿಸುವನೆ? ಪೊಣರ್ವನೆ? ಪುರುಡಿಪನೆ? ತಂದೆಮಕ್ಕಳ ಪುರುಡಿಗಿದುವೆ ಮೊದಲಾಯ್ತೆ? ಅನಿತರೊಳೆ ರಾಘವಂ ಕೂರ್ಗಣೆಯುಂ ಮಾರ್ಕಣೆಯಿಂ ತುಂಡಿಸಲೊಡಂ ತರಳಂ ಮೇಣೊಂದು ಮಾರ್ಗಣಮಂ ಸೆಳೆದಿಟ್ಟಂ, ಮತ್ತಮೊಂದಂ ಮಗುಳ್ದುಮೊಂದಂ ಪೆರತೊಂದಂ, ಬೇರೊಂದಂ. ಇಂತು ರಾಘವನೊಡಲನಿಸುಗೆಯಿಂ ತಳಿರ್ತಸುಗೆಯುಂ ಗೆಯ್ವುದುಂ ಎನಸುಂ ಕೋಪದಿಂ ಲಕ್ಷ್ಮಣಂ ಚಾಪಮಂ ತುಡುಕಿ ಸಂದ ಬಾಣಮುಂ ಸಂಧಿಸುವುದುಮಾಬಾಣಂ ಗುರಿಗೆಟ್ಟು ಬಂದತ್ತು. ಏನೊಂದಚ್ಚರಿಯೊ! ದಿವಿಜಮನುಜರೊಳಂ ಮೊನೆಯೊಳಕ್ಕಡ ಬಳ್ಕದತಿಕಾಯುನಂ ಹತಕಾಯುನಂ ಗೆಯ್ದಂಗೆ ಲಕ್ಷ್ಮಣಂಗೆ, ಈರೇಳುಂ ಲೋಕಂಗಳಂ ಗೆಲ್ಲಂಗೊಂಡು ಭುಲ್ಲವಿಸಿ ಬಲ್ಲಿದನೆಂಬ ಗಂಡಗರ್ವದಿಂ ಪೊಣರ್ವದಶಾನನನೊಡಲಂ ಕಡಲ ನಿಣಂಗಳ್ಗೆಡೆಯುನಾಗಿಸಿ ಮೆರೆದಾಹವಮಲ್ಲ ರಾಮಂಗಿಂದು ಚಿಣ್ಣರಾ

ಟದ ಪಸುಳೆಗಳತ್ತಣಿಂ ಸೋಲಂ ಗಡ! ಲಕ್ಷ್ಮಣನಸಿ ದಸಿಯಾಯ್ತುಗಡ! ರಾಮ ಬಾಣಕ್ಕೆ ಮಣಿಯರ್ ಗಡ!

ಇಂತು ಕುಶಲವರ್ ಬಾಂಬಟ್ಟೆಗರೊಟ್ಟಯಿಸಿ ನೆರೆದು ಬೆರಗುವಡುವಿನಂ ರಾಮಲಕ್ಷ್ಮಣರೊಳ್ ಕಡುಕೆಯ್ಯುತಿರಲೊಡಮಾವೇಳೆಗತ್ತಲ್ ವರುಣಲೋಕಕ್ಕೆ ಪೋದ ವಾಲ್ಮೀಕಿ ಬಾಲಕರಿರವಂ ನಾರದನತ್ತಣಿನರಿದು ಮಾಣದೆ ತನ್ನಾಶ್ರಮಕ್ಕೆ ಬರೆ ಅಲ್ಲಿ ಮಕ್ಕಳ ಬಟ್ಟೆಯನೆ ನಿಟ್ಟಿಸುತೆ ಹಂಬಲಿಸಿ ಬೆಬ್ಬಳೆವೋಪ ಸೀತೆ ಮುನಿಯಂ ಕಂಡೆರಗಿ ಲವಸನರಿಗಳ್ ಹಯದ ನೆವದಿಂ ಬಂದಿಗೊಂಡುದಂ ಮೇಣಾತನಂ ಮಗುಳ್ಚುವೊಡೆಂದು ಕುಶಂ ಬೆಂಗೊಂಡುದನಿನ್ನುಂ ಬಾರದೆ ತಡೆದುದಂ ಬಿನ್ನವಿಸಿದಳ್. ಅದರ್ಕಾ ಮುನಿಪಂ ಸೀತೆಯಂ ಸೈತಿಟ್ಟು ಮಕ್ಕಳಂ ಕೂಡಿವರ್ಪೆನೆಂದು ಪೊರಮಟ್ಟು ಬರುತುಮಿರ್ದಂ.

ಇಂತು ಬರುತುಮೆನಸುಂ ದೂರದೊಳ್ ಮುರಿದಟ್ಟೆಯು, ಸುರಿದ ಕರುಳ, ಒರೆದ ಬಸೆಯು, ಕೊರೆದ ಸುಂಟಗೆಯು, ಪರಿದ ಕೆನ್ನೀರ, ಪೆಣನ ಬಣಂಬೆ ಜವನುಂಡು ಕಾರಿದ ಮಾಳ್ಕೆಯಿಂ ಕಾಣಿಸಿದತ್ತು. ಕೆನ್ನೀರ ಮುನ್ನೀರ ಸೇತುವಿಂಗಿಂತು ಕಿರುವೆಟ್ಟುಗಳಂ ಪೊಸತೆನೆ ಪರಪಿದರೆನೆ ಏರುಗೊಂಡು ಮಡಿದಾನೆ ವಿಂಡೆಸೆದತ್ತು. ಇಂತು ಭಯಾನಕಮಾದ ರಣರಂಗಮಂ ನೋಡಿ ಸಂಕಿಸಿ ಬರ್ಪ ಮುನಿಪಂ ರಾಮಲಕ್ಷ್ಮಣರೊಳ್ ಪೋಣರ್ವ ಕುಶಲವರಂ ಕಂಡು ತಲೆದೂಗಿ ಸನಿಯಕೆ ಸಾರ್ದು—ಓಓ ಮಾಣ್ಮಾಣಿಮೆಂದು ನುಡಿದುಂ ತಡೆದುಂ ಮಕ್ಕಳಂ ತಳ್ಕೈಸಿ ರಾಮಲಕ್ಷ್ಮಣರ್ಗೆ ಕಾಣಿಸಿಕೊಂಡಂ. ಆಗಳಿರ್ವರುಂ ಮುನಿಗೆ ಮಣಿವುದುಂ ವಾಲ್ಮೀಕಿ ಮುಗುಳ್ನಗೆಯಿಂ ರಾಘವಂಗೆ—ಜಗಕೆ ಪೊಸತೆನೆ ತಂದೆ ಮಕ್ಕಳ್ ನಿಮಗೆ ಸಂಗರಮೇ? ತಂತಮ್ಮೊಳಿನ್ನೆಬರಂ ಕಂಡೆನಿಲ್ಲಂ ಕೇಳ್ದೆನಿಲ್ಲೀತೆರನ ದೊರೆವೆತ್ತ ಸೆಣಸಂ; ನಿಮಗಮೇಂ ಜಗದ ಮಾಯದ ಜವನಿಕೆಯೊ? ನಿನ್ನ ರೂಪಂ ನಿನ್ನ ಬಲ್ಪುಂ ಎಚ್ಚರಿಸದೆ ಪೋದುವೆ? ಕೈವಿಡಿದ ಮಡದಿಯಂ ಬಗೆಯುದ ನಿನಗೀ ಬಾಲರ ಕುರುಪೆಂತುಟಕ್ಕುಂ? ಎನಲೊಡಂ ರಾಮಂ ಲಕ್ಷ್ಮಣನ ಮೊಗಮಂ ದಿಟ್ಟಿಸೆ—ಜೀಯ, ಮುನಿಪಂ ಪೇಳ್ದಂತಾಗದಂದು ಕಾಡಾಡಿ ಮಕ್ಕಳ್ಗೀವಗೆಯು ತೋಳ್ಪಲಮಪ್ಪುದೆ? ನೋಳ್ಪೊಡೆ ನಿನ್ನಂ ಪೋಲ್ವರ್. ಮಾತೆ ಸೀತೆಯನಂದೀ ಕಾಡೊಳೆ ಇಳಿಪಿ ಪೋದೆಂ, ಎಂಬುದುಂ ಮುನಿಪಂ ಸಮನಂತರದೊಳ್ ತನ್ನಾ

ಶ್ರಮಕ್ಕುಯ್ದಾರಯ್ದುದಂ ಮೊದಲ್ಗೆಯ್ದು ಅಮಳರೊಗೆವಂ ಅವರ ಬಿಲ್ಲಾರಿಕೆಯ ಬಿಜ್ಜೆಯರಿವಂ ನಿರವಿಸಿ ಮುಗಿಸಿದಂ. ಆಗಳ್ಗಾಗಸದತ್ತಣಿಂ ಇವರೀಬಾಲಕರ ಪ್ರತಿಮವೀರರ್; ನಿನಗೆ ಸೀತೆಯೊಳ್ ಪುಟ್ಟಿದರಿವರನೊಪ್ಪುಗೊಳ್ಳೆಂದು ಮರೆ ನುಡಿ ಪುಟ್ಟಲೊಡಂ ಸುರರ್ ಪೂಮಳೆಗರೆದರ್.

ಮತ್ತಂ ರಾಘವಂ ಸಿಗ್ಗಿಂ ಕೆಮ್ಮನಿರ್ಪುದುಂ ವಾಲ್ಮೀಕಿ ಮಕ್ಕಳನಯ್ಯ ನಡಿಗೆರಗಿಸಿ—ಇವರೊಳೇನನ್ನೆಯಂ? ನಿನ್ನಂ ಮೀರಿದ ಬಲ್ಪಿನ ಬಾಲರೆಂಬ ಜಸಂ ಜಗಮರಿಯೆ ಪರ್ಬಿದತ್ತು. ಇವರನಪ್ಪುಗೊಳ್ ಎಂದಂ. ಆಗಳ್ ಸಂತಸ ದಾಲಿನೀರ್ ಕಾಳ್ಪುರಮಾಗೆ ನವಿರ್ ನಿಗರಮಾಗಿ ಗುಡಿಗಟ್ಟಿ ಮಣಿದಮಕ್ಕಳ ನಿರ್ವರುಮನೆತ್ತಿ ಮುದ್ದಿಸಿ ಮೆಯ್ದಡವಿ ಬಗೆಯುರ್ಬಿದ ರಾಘವಂ—ಎಲೆ ಬಾಲ ಕರಿರ, ನಿಮತೀಜಾಣ್ಮೆಗಾವುದು ಮೊದಲ್ ಪೇಳಿಮೆಂಬುದುಂ ಎಮಗೀ ಅಜ್ಜನು ಪದೇಶಿಸಿದ ರಾಮಾಯಣಮೆ ಮೊದಲಾಯ್ತೆಂದರ್. ಆಗಳ್ ವಾಲ್ಮೀಕಿ ಬೀಣೆ ಯಿಂಚರಕೆ ನೆರವರ್ಪ ಸರದ ಭಂಗಿಯಿಂ ಬಾಲಕರಿಂ ರಾಮಾಯಣಮನೊಪ್ಪಿ ಸಿದಂ. ದೇವರ್ಕಳ್ ಹಿಗ್ಗಿದರ್. ದೇವಗಾಯಕರ್ ಸಿಗ್ಗಿನೊಳಾದರ್. ಅನಿತ ರೊಳ್ ಮುನಿಪಂ ಗುಂಡಿಗೆಯ ನೀರಂ ತಳಿದು ಮುಚ್ಚೆವೋದರನೆಚ್ಚರಿಸಿದಂ. ಈಗಳ್ ಸರ್ವರುಂ ಪುರಕೆ ಬಿಜಯಂಗೆಯ್ದರ್.

ಮನೋ--ಏಂ ಸೀತೆಯುನಿನ್ನುಂ ಕೂಡಿ ಪೋಗನೆ? ಉಳಿದು ಪೋದನೆ ರಾಮಂ?

ಮುದ್ದ—ಓ ಇನ್ನುಮುಳಿವನೆ ಸತಿಯಂ? ಈವೊಳ್ತಂ ತನ್ನರಸಿಯ ಉರು ಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು ಆಗಳೆ ತನತನ್ನೆಯುಮಂ ಮನ್ನಿಸೆಂದು ಸಂತವಿಟ್ಟು ಸೀತೆಯುಂ ಪೊನ್ನಸಿಬಿಗೆಯೊಳೇರಿಸಿ ದೇವರ್ಕಳ್ ಪೊಗಳೆ ತನ್ನವರುಂ ಆಶ್ರಮದ ಮುನಿಗಳುಂ ಒಂದುಗೂಡಿಪೋದ......

ಮನೋ—ಓ! ರಾಮನೊಳ್ಪಿದನಕ್ಕೆ; ಸೊಗಂಬಾಳ್ಗೆ; ರಾಮಂಗೆ ಗೆಲವಕ್ಕೆ!

ಮುದ್ದ—ಇಂತು ರಾಮನಂ ನೀಂ ಪರಸುವ ಪರಕೆಯೆ ಸೊಗಸು ಬಲ್ಸೊಗಸು. ಇನ್ನೆತ್ತಂ ನಿರಾಮಯಂ ನಿರಾಕುಳಂ ಸುಭಿಕ್ಷಂ ಮಂಗಳಂ.

೧೬ ಕಥೋಪಸಂಹಾರಂ.

ಮುದ್ದ—ಇಂತು ರಾಘವನ ಜನ್ನಗುದುರೆ ಬರಿಸಂಬರಂ ಚರಿಸಿ ಖುರಪುಟದ ತುಳಿತಕ್ಕೆ ನಾಡಂ ಮೇಣ್ ಕಾಡಂ ಪಾವನಂಗೆಯ್ಯುತುಂ ಅಯೋಧ್ಯೆಗೆ ಬಿಜಯಂಗೆಯ್ದುದು. ಕಟ್ಟಾಯಸದ ನಿಚ್ಚವಯಣಮುಂ, ಬನ್ನವಟ್ಟಯ ಬಳಲ್ಕೆಯುಂ ಗಾಳುಗೂಳರೊಳ್ ಪೊಣರ್ವ ನಿಟ್ಟುರದ ಸೆಣಸಾಟಮುಂ ರಾಮಸೇನೆಗೆ ಮುಡಿದುದು. ಈಗಳ್ ತಂತಮ್ಮ ಬಿಡಿಂಗೈದಿವಂದು ಬೀರರೆಲ್ಲರ್ ನೇಹಂ ಮಿಗೆ ತಮ್ಮ ಇಷ್ಟಮಿತ್ರರೊಳ್ ಬಿನದದಿನಿರ್ದರ್.

ಮನೋ— ಅಂತಪ್ಪೊಡೆ ನೀಂ ಪೇಳ್ವ ನಲ್ಗತೆ ಮುಗಿಯೆವಂದುದು.

ಮುದ್ದ—ಉ! ಎಂತೆಂತೊ ರಗಳೆಯ ಪಾಳ್ಗತೆ ಕಡೆಗಂಡುದು.

ಮನೋ —ಚಿಃ! ಶ್ರೀರಾಮಪುಣ್ಯಚರಿತಮಂ ಪಾಳ್ಗತೆಯುಂದಿಳಿಕೆಯ್ವಾ?

ಮುದ್ದ—ಶ್ರೀರಾಮಚರಿತಮನಿಳಿಸಿ ನುಡಿದೆನಿಲ್ಲಂ; ಪುರುಳಿಲ್ಲದ ಎನ್ನ ಬರುವಣ್ಣನೆಯ ಬೇಸರಿಕೆಯ ಪಾಳ್ಗಬ್ಬಮಂ ಪೊಳ್ಳೆಂದು ನುಡಿದೆಂ.

ಮನೋ-ತಮ್ಮೊಡಮೆಯುಂ ತಾಮೆ ಪೊಗಳ್ವರೆ ಬಲ್ಲರ್? ನಿನಗಮೇಂ ನಿರಹಂಕೃತಿಯೊ ನಿನ್ನ ಜಾಣ್ಮೆಯೊಳ್!

ಮುದ್ದ—ಏನೆನ್ನ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ?

ಮನೋ—ಎನಗೊರ್ವಳ್ಗೆಂದೊಡೇಂ? ನಾಡೊಳೆಲ್ಲರ್ಗಂ.

ಮುದ್ದ—ಎನ್ನೊಳೊಂದಭಿಮಾನದಿನಿಂತುಸಿರ್ವೆಯಕ್ಕುಂ.

ಮನೋ—ಎನ್ನರಸ! ಅಂತಲ್ತು; ನಿನ್ನ ಪೆಸರೆಂತಂತು ಕಬ್ಬಮುಂ ಮುದ್ದುಮುದ್ದಾಯ್ತು ಜಗಕೆ.

ಮುದ್ದ—ಎನ್ನಾಣೆ?

ಮನೋ—ನಿನ್ನಾಣೆ; ತಡೆಯೇಂ? ಕಮ್ಮಲರ್ ಮಗಮಗಿಸದೇಂ ಪೋಕುಂ? ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು. ಬಣ್ಣನೆಯ ನುಡಿಯಲ್ತು; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ.

ಮುದ್ದ—ಅಂತಪ್ಪೊಡೆ ತಾರೆಲೆ ನೀನೆಂದ ಮೆಚ್ಚಿನುಡುಗೊರೆಯುಂ.

ಮನೋ—(ಕಣ್ಬೆಗಡುಗೊಂಡರಂತೆ ನಟಿಸಿ)—ಇನ್ನೇಂ ಜಾಣನೋ? ನೀನರಿಯುದರಂತೆ ಮಿಣ್ಣನಿರ್ದು ಎನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ, ನಿನಗೇನೆಂಬೆನೊ?

ನಿನ್ನಾ ಬಣ್ಣವಾತಿಗೆ ಮಾರುವೋದೆಂ; (ವಿಚಾರದಿಂ) ಅಯ್ತಾಯ್ತು, ಪೇಳ್ವ ಕತೆಗೆ ಮಂಗಳಮಂ ಮಾಡು. ಉಡುಗೊರೆ ಬಳಿಕ್ಕಮಲ್ತೆ?

ಮುದ್ದ— ಬರಿದೆ ಮಂಗಳಮಕ್ಕುಮೆ? ಹೋಳಿಗೆ ತುಪ್ಪಮಂ ತಿನವಡಿಸ ಬೇಡಾ?

ಮನೋ— ಹೋಳಿಗೆ ತುಪ್ಪಕ್ಕೇಂ ಕೊರತೆ? ರಾಘವನ ಯಜ್ಞಪರಿ ಸಮಾಪ್ತಿಯೆಂತಾಯ್ತು ಪೇಳ್.

ಮುದ್ದ—ಒಳ್ಳಿತು ಕೇಳ್. ಅಂತು ರಾಘವಂ ಸತೀಸುತರ್ವೆರಸು ಅಯೋಧ್ಯೆಗೆ ಪೋಪುದುಂ ಕೆಲವಾನುಂ ದಿನಕೆ ಜನ್ನಗುದುರೆಯುಂ ಪೊಳಲ್ಗೆ ನಡೆತಂದುದು. ಕಾಪಿನ ಬಲ್ಪಡೆಯುಂ ಬಳಿಸಾರ್ದುವಂದ್ಪುದು. ಶತ್ರುಹಪ್ರಮುಖವೀರರುಂ ತೆರಳ್ದುವಂದರ್. ಎಂ ಕಪ್ಪಕಾಣ್ಕೆಗಳೊ! ಪೊನ್ನೇಂ! ಪೊಂದೊಡವೇಂ! ರನ್ನಮೇಂ! ಬಗೆವಗೆಯ ಪಟ್ಟುಡೆಗಳೇಂ! ಕತ್ತುರಿಯೇಂ! ಕಪ್ಪುರಮೇಂ! ಜಾತ್ಯಶ್ವಂಗಳೇಂ, ಭದ್ರಗಜಂಗಳೇಂ! ಬೆಂಗೆ ಬೆಂಗೆ ಪೂಡಿದಂತಿರೂರುದ್ದಮಾಗಿ ಓರಣದಿಂ ಬರ್ಪ ಬಂಡಿಗಳೇಂ! ಇಂತು ಸಡಗರದಿಂ ಬಂದ ಲಕ್ಷ್ಮಿನಿಧಿ ಶತ್ರುಘ್ನ ಪುಷ್ಕಲಾದ್ಯರಂ ರಾಘವಂ ಪುಷ್ಕಲಂ ಮನ್ನಿಸಿ ಸರ್ವರಂ ಬಿಡಾರಕ್ಕೆ ಬೀಳ್ಕೊಟ್ಟಂ.

ಇಂತು ಸರ್ವಸಂಭಾರಮೇರ್ಪಟ್ಟುದು. ಬಂದ ವಿಪ್ರರ್ಗೊಂದು ಸಭೆ; ಮುನಿಜನಂಗಳ್ಗೊಂದು ಸಭೆ; ರಾಜನ್ಯರ್ಗೊಂದು ಸಭೆ; ಪುರದ ಪುರಂಧ್ರಿಯರ್ಗೊಂದು ಸಭೆ; ಈಗಳ್ ಯಾಗಶಾಲೆಯೊಳೆಣ್ದೆಸೆಯೊಳಂ ಬಾಗಿಲೊಳಿರ್ವರ್ ಮುನಿಗಳ್ ರಕ್ಷೋಘ್ನಸೂಕ್ತಮಂ ಪಠಿಸುತೆ ಕಾವಲರೆಸೆದರ್. ಮತ್ತಮೀರೆಣ್ಬರ್ ಯಾಜಕರೋರೊಂದು ದೆಸೆಯೊಳ್ ಸಾಮಗಾನಮಂ ಪಾಡುತುಂ ಉದ್ಗಾತೃಗಳುಂ ತಂತ್ರದಧ್ವರ್ಯುಗಳುಂ ಹೋತಾರರುಂ ಓರೊಂದು ದೆಸೆಯೊಳೆಸೆದರ್; ಈಗಳ್ ಜೀಳ್ವಜನ್ನಕ್ಕೆ ಪೂರ್ಣಾಹುತಿ. ವೇದಘೋಷಂ, ವಾದ್ಯಘೋಷಂ ದಿಕ್ತಟಮಂ ತುಂಬಿದುದು. ಕೊಂಡದೊಳಿನ್ನೆಬರಂ ಎಡೆವಿಡದೆ ಚಟಚಟಿಪ ಯಜ್ಞೇಶ್ವರಂ ನಾಲಗೆಗಳಂ ನೀಡಿಕೊಂಡಿರ್ದಂ.

ಈಗಳ್ ಮಂಗಳಂ; ದೇವತೆಗಳ್ ಮೆಯ್ದೋರಿ ತಂತಮ್ಮ ಹಸುಗೆಯುಮನಂತಣಿಂ ಕೊಂಡರವರ್ಗಂ ಮಂಗಳಂ. ಋತ್ವಿಜರೆಲ್ಲರ್ ಕೊಳಗಮುತ್ತಂಇರ್ಬಳ್ಳರನ್ನಮಂ ಪೊನ್ನಹೇರಂ ಚೆನ್ನಾಕಳ್ಗಳಂ ಪ್ರತಿಗ್ರಹಿಸಿ ರಾಮನಂ ಪರಸಿ ಪೀಳ್ಕೊಂಡರವರ್ಗಂ ಮಂಗಳಂ. ಮುನಿಗಳೆಲ್ಲರ್ ನರಲೀಲೆಯ ಪರಬೊಮ್ಮನಂ

ಕಣ್ಣಾಣಿಯೆ ಕಂಡೆವೆಂಬ ಸಂತಸದಿಂ ನಲಿನಲಿಯುತೆ ತಮ್ಮಾಶ್ರಮಕ್ಕೆ ಪೋದರ ವರ್ಗಂ ಮಂಗಳಂ. ಮೂಗುದ್ದಮುಂಡು ತೇಗಿ ಕೊಟ್ಟ ದಕ್ಷಿಣೆಯುಂ ಪೊತ್ತುಬ್ಬ ಸಂ ಬಡುತೆ ನಡೆದರ್ ಪಾರ್ವರವರ್ಗಂ ಮಂಗಳಂ. ಪುರಂಧ್ರಿಯರ್ ಸೀತಾರಾಮರಂ ಕಂಡು ಸಂತಸಂದಾಳ್ದಿ ತಾಂ ತಮಗೆ ಮಾತುಗುಟ್ಟುತೆ ಪೋದರವರ್ಗಂ ಮಂಗಳಂ. ಮಾಸಾವಂತರ್ ರಾಘವಂಗೆರಗಿ ಆತನಡಿಯಾಣತಿವಡೆದು ತಂತಮ್ಮ ಪುರಕೆ ಬಿಜ ಯಂಗೆಯ್ದರವರ್ಗಂ ಮಂಗಳಂ. ಇಂತು ಶ್ರೀರಾಘವಂ ಸೀತಾಸಮೇತಂ ಜನ್ನಮಂ ಬೇಳ್ದು ತನ್ನ ಬೆಳ್ಗಸದಿಂ ದೆಸೆಗಳಂ ಬೆಳಗಿ ಸೋದರರ್ವೆರಸು ಪಲವುಂ ಪಗಲರ ಸುಗೆಯ್ಯುತುಮಿರ್ದನವಂಗಂ ಮಂಗಳಂ ಶುಭಂ ಭದ್ರಂ ಕಲ್ಯಾಣಂ.

ಮುದ್ದಣಂ—ಕತೆಗೆ ಮಂಗಳಮಂ ಪೇಳ್ದೆನಿನ್ನೇನುಮುಳಿದುದಿಲ್ಲಂ; ಈಗ ಳುಳಿದುದೊಂದೆ, ನಿನ್ನುಡುಗೊರೆ.

ಮನೋ—ಉಡುಗೊರೆಯು ಕಾಟಕ್ಕಿನ್ನೆತ್ತವೋಪೆಂ? ನೀನೇನಂ ಬೇಡು ವಯ್?

ಮುದ್ದ—(ಪುಸಿಮುನಿಸಿಂ) ಬೇಡುವೊಡೇಂ ತಿರಿಕನೆ? ಮೆಚ್ಚಿತ್ತೊಡದನೆ ಕೈಕೊಳ್ವೆಂ.

ಮನೋ—ಆನೆಂತುಂ ಪರಾಧೀನೆ. ಮೆಣೆನಗೊಡಮೆಯಾವುದು? ಏನ ನೀವೆನೆಂತೀವೆಂ?

ಮುದ್ದ—ಏನೊ! ಎಂತೊ! ಆಂ ಮೆಚ್ಚುವಂತುಂ, ಕತೆಯು ಪುರುಳ್ಗೊಳ ವಂತುಂ, ನಾಲ್ವರ್ ತಲೆದೂಗುವಂತುಂ ಉಡುಗೊರೆಗೆಯ್ದೊಡಾಯ್ತು.

ಮನೋ—ಅಂತಪ್ಪೊಡಿಂತಿದು. ನಿನ್ನೀ ಕಬ್ಬಮನೋದುವ ಜಾಣರೇ ವಗೆಯುಡುಗೊರೆಯನೀಯೆಂಬರಾವಗೆ ಮೆಚ್ಚನೀವೆಂ.

ಮುದ್ದ—ಅಂತಾನುಮಕ್ಕೆ.

ಧರೆಯುರಿಯೆ ಜೀವರಾಶಿಗೆ
ಪಿರಿಯುಂ ನರನಾದಮಾದನಾತ್ಮಂ ತನ್ನೊಳ್ ॥
ದೊರೆಕೊಂಡಿರ್ಪಿನಮಂತದು
ಪರಿನಿರ್ಮಲಮಾಗೆ ಪೆರ್ಮೆಯಿರ್ಮೆಯ್ವಡೆಗುಂ ॥

ಶ್ರೀ ರಾಮಾಶ್ವಮೇಧಸಾರಸಂಗ್ರಹಂ
ಸಂಪೂರ್ಣಂ.

ಶ್ರೀರಾಮಾಶ್ವಮೇಧಸಾರಸಂಗ್ರಹದ ಟಿಪ್ಪಣಿ.

(೧) ಕವಿಯು ತಾನು ರಚಿಸಬೇಕೆಂದಿದ್ದ ರಾಮಾಶ್ವಮೇಧ ಗ್ರಂಥದ ಆರಂಭವನ್ನು ಹೊಸ ರೀತಿಯಿಂದ ಮಾಡಬೇಕೆಂದು ಅಖಂಡಕಾಲವೆಂಬುವದನ್ನು ಒಬ್ಬ ಮಹಾಪುರುಷನೆಂದೂ, ವರ್ಷಾಸಮಯವು ಆತನ ಜಾಡ್ಯದಶೆಯೆಂದೂ, ಕಲ್ಪಿಸಿ ವಿಶಿಷ್ಟಪ್ರಕಾರದಿಂದ ವರ್ಷರ್ತುವನ್ನು ವರ್ಣಿಸುವನು. ಗುಣಂ=ಸ್ವಸ್ಥತೆ; ಅಣಂ=ಸ್ವಲ್ಪವೂ. ನಿಸ್ತೇಜಂ=ಕಾಂತಿರಹಿತನು. (ಸೂರ್ಯಚಂದ್ರ ರೂಪತೇಜಸ್ಸು ಇಲ್ಲದವನು. ಮೋಡಗಳಿಂದ ಸೂರ್ಯಚಂದ್ರರು ಆಗ ಮರೆಯಾಗುವರು.) ಜಡಂ= ಜಾಡ್ಯವುಳ್ಳವನು; ಆಲಸ್ಯವುಳ್ಳವನು. (ಹಗಲು ದೊಡ್ಡವಿದ್ದ ವರ್ಷಾಕಾಲವು ಸಾವಕಾಶವಾಗಿ ಗಮಿಸುವಂತೆ ಕಾಣುವದರಿಂದ ಜಾಡ್ಯದ ಆರೋಪವನ್ನು ಮಾಡಿರುವನು.) ಗುಡುಗನ್ನು ಆತನ ಹೊಟ್ಟೆಯೊಳಗೆ ಗುಡುಗುಟ್ಟುವದನ್ನಾಗಿ ಕಲ್ಪಿಸಿರುವನು. ಮುಗಿಲ್ದೆರೆ=ಮೋಡವೆಂಬ ಪರದೆ. ಬಾಸಣಿಸು=ಮುಚ್ಚು. ಪುಗಲ್-ಪುಗು ಧಾ—ಪ್ರವೇಶಿಸಲು. ಅಣತಿ-ತ್ಸ-ಆಜ್ಞಪ್ತಿ=ಅಪ್ಪಣೆ. ಕಾಲಪುರುಷ ನಿಗೆ ಆಕಾಶಲಕ್ಷ್ಮಿಯು ಮಡದಿ. ಆಕೆ ಪತಿಯ ಅನಾರೋಗ್ಯಕಾಲದಲ್ಲಿ ಚಿಂತೆ ಯಿಂದ, ಚಂಚಲದೃಷ್ಟಿಯಿಂ=ಚಂಚಲವಾದ ದೃಷ್ಟಿಯಿಂದ (ಮಿಂಚೆಂಬ ಕಣ್ಣಿ ನಿಂದ; ಚಂಚಲಾ=ಮಿಂಚು.) ಸಿಡಿಲೆಂಬವನು ಕಾಲಪುರುಷನ ಸೇವಕನು. ಆತನು ಪರ್ವತಗಳಿಗೆರಗುವದು ಮೂಲಿಗೆಮರ್ದಂ (ಮೂಲಿಕೆಯ ಮದ್ದನ್ನು)= ಗಿಡಮೂಲಿಕೆಯ ಔಷಧವನ್ನು ಉಯ್ವೊಡೆ=ಒಯ್ಯುವದಕ್ಕೋಸ್ಕರ ಇರಬಹುದು. ಕಾಲಪುರುಷನಿಗೆ ಅಂತಹ ಕುತ್ತಂ=ರೋಗವು ಏನು? ಅಜೀರ್ಣದಿಂದಾದ ವಾಂತಿರೋಗವು. ಸುಗ್ಗಿ=ವಸಂತರ್ತು, ಬೇಸಿಗೆ. ಉಂಡುದಂ=ಉಂಡನೀರನ್ನು. ಕಾರ್=ಮಳೆಗಾಲ.

ವರ್ಷಾಕಾಲದಲ್ಲಿ ನವಿಲುಗಳ ಸ್ಥಿತಿಯು ಆನಂದಮಯವಾಗಿರುವದರಿಂದ ಅವು ಕಾಲಪುರುಷನಲ್ಲಿ ಸಹಾನುಭೂತಿಯಿಲ್ಲದವುಗಳೆಂದು ವರ್ಣಿಸುವನು. ಸೋಗೆನವಿಲ್=ಗಂಡುನವಿಲು. ಸೋಗೆ=ನವಿಲು; ನವಿಲಿನ ಗರಿ. ಆತಂಗಂ= ಆ ಕಾಲಪುರುಷನಿಗೂ. ಪಗೆ=ಹಗೆತನವು. ಕಟ್ಟಾಸುರ-ಕಡಿದು+ಆಸುರ=ಅತಿಶ

ಯಾದ ಉಗ್ರತೆ. ಗಾಸಿ + ಗೆಯ್=ಪೀಡಿಸು. ನವಿಲುಗಳಿಗೆ ಮೇಘೋದಯ ವೂ ಮಳೆಗಾಲವೂ ಸುಖಕರವು. ಬೇಸಗೆಯು ಕಷ್ಟಕರವು. ಪೆರವರ=ಅನ್ಯರ ಪೆರತು ಶಬ್ದದ ಷಷ್ಠೀ ಬ. ವ. ಕಿಡುದೆಸೆ=ದುರ್ದಶೆ. ಎಡೆಗುಡದಿರ್=ಅಸ್ಪದ ಕೊಡಬೇಡ. ಉಳಿದು=ಬಿಟ್ಟು. ಇರ್ಕೆ=ಸ್ಥಾನ. ಕಡೆಗಣ್ಚಿ=ತಿರಸ್ಕರಿಸಿ. ಮುಸ್ತ್ರ-ಮುದು ಧಾ—ಮುದುಕನಾದ, ಅಸ್ತಕ್ಕೆ ಸಮೀಪಿಸಿದ. ಪೊಳ್ತು=ಸೂರ್ಯ. ಪೈಪೆರ್ಚು=ಉಬ್ಬು, ಮೈಯುಬ್ಬಿಸು. ಅಸ್ತಸಮಯದಲ್ಲಿ ಬಿಂಬವು ದೊಡ್ಡದಾಗಿ ಕಾಣಿಸುವದು. ಇದರ್ಕೆಯೆ=ಇದಕ್ಕಾಗಿಯೇ ನಿನಗೆ ವಿಜಾತಿಯು ಬಂದದ್ದಲ್ಲದೆ ಅಧೋಗತಿಯೂ ಒದಗಿತು. ವಿಜಾತಿ=ವಿಲಕ್ಷಣಜಾತಿ (ವಿ + ಜಾತಿ=ಪಕ್ಷಿಜಾತಿ) ಅಧೋಗತಿ=ಕೀಳಾದ ಸ್ಥಿತಿ, (ನೆಲದ ಮೇಲೆ ಗತಿ; ನವಿಲುಗಳು ಪಕ್ಷಿಗಳಾಗಿದ್ದರೂ ವಿಶೇಷವಾಗಿ ಭೂಚರಗಳು.)

ಚಾತಕ ಪಕ್ಷಿಗಳು ಮೋಡಗಳಿಂದ ಬೀಳುವ ನೀರನ್ನು ಮಾತ್ರ ಕುಡಿಯುವವು; ನೆಲಕ್ಕೆ ಮುಟ್ಟಿದ ನೀರನ್ನು ಕುಡಿಯುವದಿಲ್ಲವಂತೆ. ಆದದರಿಂದ ಅವು ಮಳೆಗಾಲದಲ್ಲಿ ಆಕಾಶದಲ್ಲಿ ನೀರ ಹನಿಗಳಿಗಾಗಿ ಬಾಯ್ದೆರೆದು ಸಂಚರಿಸುವವು. ಚಾತಕಗಳು ಕಾಲಪುರುಷನ ದುರವಸ್ಥೆಗಾಗಿ ಬಾಯ್ಬಿಡುವವೆಂದು ವರ್ಣಿಸುವನು. ಚಾದಗೆ-ತ್ಸ-ಚಾತಕ ಪೆರರ=ಅನ್ಯರ (ಪೆರತು-ಷ. ಬ. ವ.). ಸಿರ್ಕು-ತೊಂದರೆ, ಮರುಕ=(ಮರುಗು ಧಾ.+ಅ ಪ್ರತ್ಯಯ) ವ್ಯಸನ. ನಿನ್ನನ್ನ=ನಿನ್ನಂಥವ. ಒಳರ್ + ಏ=(ಉಳ್ ಧಾ. ರೂಪ.) ಇರುತ್ತಾರೆಯೇ? ನಿರ್ನೆರಂ=ನಿಷ್ಕಾರಣವಾಗಿ, ಅಳಲು=ಶೋಕಿಸು. ಆವೊರಾದೊಡಂ=ಯಾರಾದರೂ; ಏವರ್=(ಏಗೆಯ್ವರ್ ಇದರ ಸಂಕ್ಷಿಪ್ತರೂಪ.) ಏನಮಾಡುವರು. ಕತಿಪಯ=ಕೆಲವು. ಒರೆಯ=ಒಡೆಯ, (ಕಾಲಪುರುಷ). ಗ್ರಹ=ಮಂಗಳಾದಿಗ್ರಹ. ಎರ್ದೆಗಿಡು=ಎದೆಗುಂದು. (ಎರ್ದೆ=ಶಿಥಿಲೋಚ್ಚಾರದ ಶಬ್ದವು. ಎರ್ದೆ-ತ್ಸ=ಹೃದಯ.)

ಬಗ್ಗಿಸು-ಕೂಗು. ಸೆಳೆ + ಕೊಂಬು=ಸೀರಾದ ಟೊಂಗೆ. ಮೂಗು=ಮೂಗ + ಉ. (ಮೂಗ-ತ್ಸ-ಮೂಕ) ಮೂಕತನ. ಮೂಗು + ಪಟ್ಟು=ಮೂಕತನವನ್ನು ಹೊಂದಿ. ಕಣ್ಮರಲ್=(ಮರಲ್=ಪುಷ್ಪ) ಹೂವಿನಂತಿರುವ ಕಣ್ಣು. ಬೆರಗುವಡು=ಬೆರಗಾಗು. ಜಡಭರಿತ=ಜಾಡ್ಯವುಳ್ಳವ (ಜಲಭರಿತ). ಸೋಂಬ=ಸೋಮಾರಿ.

(೨) ತಾಮ್ರತುಂಡ=ಕೆಂಪಾದ ಮುಖವುಳ್ಳದ್ದು, ಗಿಳಿ. ಗೊಣಗು=ಗುಣು ಗುಟ್ಟು. ಪಂಡಿತವಕ್ಕಿ=ಗಿಳಿಗೆ ಪಂಡಿತಪಕ್ಷಿಯೆಂದು ಹೆಸರುಂಟು. ದಕ್ಷಿಣದೇಶದಲ್ಲಿ ವೈದ್ಯರಿಗೂ ಪಂಡಿತರೆನ್ನುವರು. ನೀರ್ಗುತ್ತ=ನೀರಜೇನೆ. ಮರ್ದು=ಔಷಧ. ಮಾಂಬಳಂ=ಮಾವು + ಪಳಂ (ಫಲ-ದ್ಭ-ಪಳ) ಮಾರ್ನುಡಿ=ಉತ್ತರಕೊಡು. ಪೀಗು=ಸೊಕ್ಕು. ಕೂರಿದರ್=(ಕೂರು-ಪ್ರೀತಿಸು) ಪ್ರೀತಿಸಿದವರು. ಕತ=ಕಾರಣ. ಪಂಜರ-ತ್ಸ-ಮಾರ್ಜಾರ. ಸಾಪ=ಶಾಪ.

ಉಳಿಗ=ಶಕುನದ ಹಕ್ಕಿ. ಸಗುಣ-ತ್ಸ-ಶಕುನ. ಸಂದೆಯ-ತ್ಸ-ಸಂದೇಹ. ಕಣಂ-ಅವ್ಯಯ. ಸ್ವಲ್ಪವೂ ಇದು ಅಧಿಕ್ಯಾರ್ಥದಲ್ಲಿಯೂ ಇರುವದು.

ಪಶ್ಚಿಮಾನಿಲ=ಪಶ್ಚಿಮದಿಕ್ಕಿನಗಾಳಿ. ಹರಿಮೇಖಲೆ=ಇಂದ್ರಜಾಲ. ಊದು-ಪೀಸು. ಮೊಲ್ಲೆ-ಮಲ್ಲಿಗೆ. ನಾಗವಲ್ಲಿ=ವೀಳೆಯದೆಲೆಯ ಬಳ್ಳಿ. ಬೆಳ್ಸುಳಿ=ಬಿಳಿದು + ಸುಳಿ. ಗರಿವೂ-ಕೇದಗೆ. ಗರಿಗಟ್ಟು=ಗರಿಗಳನ್ನು ಬಿಡು.

ಪಡುಗಡೆ=(ಪಡುವಣಕಡೆ) ಪಶ್ಚಿಮದಿಕ್ಕು. ಮಳೆಗಾಲದ ಆರಂಭದಲ್ಲಿ ಪಶ್ಚಿಮದಿಕ್ಕಿನಲ್ಲಿ ಏಳುವ ಮೋಡಗಳ ಪಡೆಗೆ ಹೊಗೆಯೆಂದು ಶಂಕಿಸುತ್ತಾನೆ. ವಡಬಂ=ವಡವಾಗ್ನಿ. ಸಮುದ್ರದಲ್ಲಿರುವ 'ವಡವಾ' ಆಕಾರದ ಅಗ್ನಿಯು. ತೀಡು-ಬೀಸು. ದಳ್ಳಿಸು-ಪ್ರಜ್ವಲಿಸು. ಎಡೆಗೊಂಡ-ಆಶ್ರಯಹೊಂದಿದ. ಬೆಟ್ಟುಗಳು (ಪರ್ವತಗಳು) ಪೂರ್ವಕಾಲದಲ್ಲಿ ರೆಕ್ಕೆಯುಳ್ಳವಾಗಿರಲು ಅವುಗಳಿಂದ ಲೋಕಕ್ಕೆ ಪೀಡೆಯಾಗುವದನ್ನು ಕಂಡು ಇಂದ್ರನು ವಜ್ರಾಸ್ತ್ರದಿಂದ ಅವುಗಳ ರೆಕ್ಕೆಗಳನ್ನು ತರಿಯುವದಕ್ಕೆ ತೊಡಗಲು ಕೆಲವು ಬೆಟ್ಟಗಳು ಅಂಜಿ ಸಮುದ್ರದಲ್ಲಿ ಮುಳುಗಿ ಅಡಗಿಕೊಂಡವೆಂದು ಪುರಾಣಕಥೆ. ಕಿರ್ಚು-ಬೆಂಕೆ ಚುರ್ಚು-ಜ್ವಲಿಸು, ಸುಡು. ಸೆರಗು=ಸಹಾಯ. ಪಾರ್-ನಿರೀಕ್ಷಿಸು; ಗೆಂಟು-ದೂರ. ಕೈಗೇಣ್=ಕೈಗತ್ತಿ. ಬರ್ದಿಲ=ಸ್ವರ್ಗ.

ಸಗ್ಗಿಗರ ಅಣ್ಣ=ದೇವತೆಗಳ ಒಡೆಯ ಇಂದ್ರ; ಸ್ವರ್ಗ-ದ್ಭ-ಸಗ್ಗ. ಬಿಸರ, ತ್ಸ-ವಿಸರ=ಹಬ್ಬುಗೆ. ಮುನ್ನೀರ್=ಸಮುದ್ರ. ಕೋಡು=ತಂಪಾಗು. ಗೀಳಿಡು=ಆಸೆಗಳ ಕೂಗುಪಿಕೆ; ನಿಡುವಲ್=ನಿಡಿದು+ಪಲ್=ಉದ್ದವಾದ ಹಲ್ಲು, ಭರಿಕೆಯ್=ಸೊಂಡಿಲು. ಬಲ್ಸರಿ=ದೊಡ್ಡಮಳೆ. ಪೇರುಕ್ಕೆವ-ಪಿರಿದು+ಉಕ್ಕೆವ (ಉಕ್ಕೆವ-ತ್ಸ-ಉತ್ಸವ.) ಮಹೋತ್ಸವ. ಪೊಚ್ಚ-ಹೊಳೆ. ಪಸದನ-ತ್ಸ-ಪ್ರಸಾಧನ=ಅಲಂಕಾರ.

ಬಳ್ಳಿವೊದರ್=ಬಳ್ಳಿಯಹೊದರು. ಮಡಲ್=ಹಬ್ಬು. ಸಪಿರ್=ಕೂದಲು, ರೋಮಾಂಚ. ಪಸಲೆ=ಹುಲ್ಲಿನಿಂದ ಹಚ್ಚಗೆ ಆದ ನೆಲ. ತಿರೆ-ತ್ಸ-ಸ್ಥಿರಾ=ಪೃಥ್ವಿ.

(೨) ಮೊಳಗು=ಗುಡುಗಿನ ದನಿ. ದನಿಗೆತ್ತು=ದನಿಯೆಂದುಭಾವಿಸಿ. ಗಿರು=ಭಾವಿಸು. ಬಿಗುರ್=ಅಂಜು. ಕರ್ಮಡು=ಕರಿಯ ಮಡುವು. ಪಸುರ್ವುಲ್=ಪಸುರ್ + ಪುಲ್. ಮೆಲ್ಕೊತ್ತು=ಮೆಲುಕಾಡಿಸು. ಪಟ್ಟು=ಮಲಗಿ, ಪಡು ಧಾ. ಮಲಗು. ಕಾಳ್ಕೋಣವಳಗ=ಕಾಡು+ಕೋಣ + ಬಳಗ. ಸೋನೆ=ಸಣ್ಣಮಳೆ. ಕಣಸು=ಮರಿ. ಲಲ್ಲೆಗೆಯ್=ಪ್ರೀತಿಸು. ಬಿರುಸರ=ಕರ್ಕಶವಾದ ಸಪ್ಪಳ. ಕೊಡಂಕೆ=ಕಿವಿ. ನಿಮಿರ್=ನೆಟ್ಟಗೆ ನಿಲ್ಲು, ಪ್ರಸರಿಸು. ಕೊಕ್ಕರಿಸು=ಸೆಟೆದು ನಿಲ್ಲು. ತಳನೋಟ=ಚಂಚಲದೃಷ್ಟಿ. ಜಡಿ=ಸಂತತವಾದ ಮಳೆ. ಕಡುಸುಗಿ=ಬಹಳ ಅಂಜು. ಕುಳಿರ್ವೆಲರ್=ಕುಳಿರ್+ಎಲರ್=ತಂಗಾಳಿ. ಕೋಡು=ಶೈತ್ಯ. ಕಿರುವರಿ=ಕಿರಿಯವಾದ ಮರಿ. ಎರಂಕೆ=ರೆಕ್ಕೆ. ಪುದುಗಿ=ಹುದುಗಿಸಿ. ಬಳ್ಳಿವರಿವ ಮಿಂಚು=ಬಳ್ಳಿಯಂತೆ ಕಾಣುವ ಮಿಂಚು. ತಳ್ಳಂಕ=ಭಯ. ಮೆಯ್ಗರೆ=ಅಡಗು. ತಂಡ=ಸಮೂಹ. ಬೈಗುಂಬೊಳ್ತು=ಬೈಗ+ಪೊಳ್ತು; ಸಂಧ್ಯಾಕಾಲ. ಕಬ್ಬಿಗ=(ಕಾವ್ಯ-ಧ್ಭ-ಕಬ್ಬ) ಕಬ್ಬ + ಇಗ=ಕಾವ್ಯಮಾಡುವವ, ಕವಿ. ಬಲ್ಲಹ-ತ್ಸ-ವಲ್ಲಭ.

ಮಳೆಗಾಲದ ಆರಂಭದಲ್ಲಿ ಹಗಲುಗಳು ದೊಡ್ಡವು. ಸೋನೆ=ಸಣ್ಣಮಳೆ ಸ್ತ್ರೀಯರ್ಗೆ...ಗಹನಂ=ಸ್ತ್ರೀಯರಿಗೆ ನಲ್ಲತೆಯನ್ನು ಕೇಳುವ ಬಯಕೆಯುಂಟಾದ ಬಳಿಕ ಅದನ್ನು ಪೂರಯಿಸುವದು ಯಾವ ದೊಡ್ಡ ಮಾತು?

ಭೋಜಪ್ರಬಂಧ—ಭೋಜ ಮತ್ತು ಕಾಲಿದಾಸ ಇವರ ವಿಷಯವಾಗಿಯೂ ಭೋಜರಾಜನ ಆಸ್ಥಾನದಲ್ಲಿನ್ನು ಬೇರೆ ಕವಿಗಳ ವಿಷಯವಾಗಿಯೂ ಪ್ರಚಲಿತವಾಗಿದ್ದ ಕಥೆಗಳನ್ನೊಳಕೊಂಡದ್ದು. ವಿಕ್ರಮವಿಜಯವೆಂಬುವದು ಒಬ್ಬ ಅರಸನ ಚರಿತ್ರೆಯು. ಮಹಾವೀರಚರಿತವೆಂಬುವದು ಒಂದು ನಾಟಕವು. ಈ ಗ್ರಂಥಗಳು ಮನೋರಂಜಕವಾಗಿದ್ದರೂ ಪಾರತ್ರಿಕಫಲವನ್ನುಂಟುಮಾಡಲಾರವೆಂದು ಮನೋರಮೆಯು ಇವುಗಳ ನಿರಾಕರಣಮಾಡಿರುವಳು.

'ಇಸ್ಸಿ' ಎಂಬುದು ಆ ಗ್ರಂಥಗಳ ನಿರಾಕರಣವನ್ನು ತೋರಿಸುವದಕ್ಕಾಗಿ ಉಳಿದೊಡಂ, ಅಳಿದೊಡಂ=ಬದುಕಿದ್ದರೂ. ಸತ್ತರೂ—ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಎಂದು ಅರ್ಥ.

ರಾಮಾಯಣಂಗಳ್ = ವಾಲ್ಮೀಕಿರಾಮಾಯಣ, ಅಧ್ಯಾತ್ಮರಾಮಾಯಣ, ಅದ್ಭುತರಾಮಾಯಣ, ಶೇಷರಾಮಾಯಣ, ಆನಂದರಾಮಾಯಣ. ಮು.

ಹೃದ್ಯಮಪ್ಪ ಗದ್ಯದೊಳ್—ಮೂಲದಲ್ಲಿ ಪದ್ಯಂ ವಧ್ಯಂ, ಹೃದ್ಯಮಪ್ಪ ಗದ್ಯದೊಳ್ ಪೇಳ್ವುದು ಎಂಬುದಾಗಿ ಹೇಳಿದ್ದಾನೆ. ಪದ್ಯವು ವಧ್ಯವು ಲೋಪ ಮಾಡಬೇಕಾದದ್ದು ಎಂದೂ ಪದ್ಯಕ್ಕಿಂತ ಗದ್ಯವು ಹೃದ್ಯವಾದದ್ದೆಂದೂ ಕವಿಯು ಅಭಿಪ್ರಾಯಪಡುತ್ತಾನೆ. ಈ ಕವಿಯು ಗದ್ಯವೆಂದರೆ ಗದ್ಯಕಾವ್ಯವೆಂದು ಅಂದರೆ ಕಾವ್ಯಮಯವಾದ ಗದ್ಯವೆಂದು ಹೀಗೆ ಒಂದುವೇಳೆ ಹೇಳಿರಬಹುದು. ಬಾಣ ಕಾದಂಬರಿ ಮೊದಲಾದವು ಪದ್ಯಕಾವ್ಯವನ್ನು ಸಹ ಕೆಲವೆಡೆಯಲ್ಲಿ ಮೀರಿರ ಬಹುದು. ಆದರೂ ಕಾವ್ಯವು ಪದ್ಯಮಯವಾಗಿರುವದು ಅತ್ಯಂತ ಇಷ್ಟವಾ ದದ್ದು. ಕಾವ್ಯವು ಪದ್ಯದಲ್ಲಿಯೇ ಅತ್ಯಂತ ಮನೋವೇಧಕವಾಗುವದು. ಕಾಲಿ ದಾಸಾದಿಗಳು ಪದ್ಯಕಾವ್ಯಸೃಷ್ಟಿಯಿಂದಲೇ ಜಗತ್ತಿನಲ್ಲಿ ಮಾನ್ಯರಾಗಿರುವರು. ಈ ಕವಿಯು ನೀರಸವಾದ ಕೆಲವು ಪದ್ಯಕಾವ್ಯಗಳನ್ನು ಉದ್ದೇಶಿಸಿಯಾಗಲಿ, ಸುಕು ಮಾರಮತಿಗಳಿಗೆ ಪದ್ಯಕಾವ್ಯಗಳಿಗಿಂತ ಗದ್ಯವು ಅವಗಾಹನೆಗೆ ಯೋಗ್ಯವಾಗುವ ದೆಂದಾಗಲಿ ಹೀಗೆ ಅಭಿಪ್ರಾಯಪಟ್ಟಿರಬಹುದು.

(೪) ಕನ್ನಡ ಗ್ರಂಥಗಳಲ್ಲಿ ಉದ್ದುದ್ದವಾದ ಸಂಸ್ಕೃತ ಸಮಾಸಗಳನ್ನು ಸೇರಿಸುವದು ಕವಿಗೆ ಸಮ್ಮತವಿಲ್ಲವೆಂದು ತೋರುವದು. ಯಾಕಂದರೆ ಸ್ವಸ್ತಿಶ್ರೀ ಮತ್ಸುರಾಸುರೇಂದ್ರ... ಇತ್ಯಾದಿಯಾಗಿ ಆರಂಭಿಸತೊಡಗಿ ಕೂಡಲೆ ಮನೋ ರಮೆಯಿಂದ ಅದಕ್ಕೆ ತಡೆಯನ್ನು ತಂದುಕೊಂಡಿದ್ದಾನೆ. ಮತ್ತು ಆಕೆಯ ಬಾಯಿಂದ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯಂ ಪೇಳ್ವುದೇಂ ಎಂಬು ದಾಗಿ ಅದು ತಿಳಿಯಲಿಲ್ಲವೆಂದು ವ್ಯಕ್ತಪಡಿಸಿರುವನು. ಸಂಸ್ಕೃತ ಪ್ರಾಚುರ್ಯ ದಿಂದ ಒಂದುವೇಳೆ ಶೋಭೆಯುಂಟಾದರೂ ಸಾಮಾನ್ಯರಿಗೆ ತಿಳಿಯುವದಿಲ್ಲವೆಂದ ಬಳಿಕ ಆ ಮೇರೆಗೆ ರಚನೆಮಾಡುವದು ಸರಿಯಲ್ಲವೆಂಬುವದನ್ನು ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು ಎಂಬ ವಾಕ್ಯದಿಂದ ತೋರ್ಪಡಿಸಿ ದ್ದಾನೆ. ಆದರೂ ಸಂಸ್ಕೃತ ಶಬ್ದಗಳನ್ನು ಪೂರ್ಣವಾಗಿ ತ್ಯಜಿಸಿದರೆ ಶೋಭೆಯು ಕಡಿಮೆಯಾಗುವದೆಂದು ಕವಿಯ ಅಭಿಪ್ರಾಯವು; ಆದದರಿಂದಲೇ ಸಕ್ಕದಂ ಬಂದೆ (ಸಂಸ್ಕೃತ ಶಬ್ದಗಳು ಸೇರಲು) ರನ್ನವಣಿಯುಂ ಪೊನ್ನಿಂ ಬಿಗಿದಂತೆ

ಬಸೆಗುಂ ಎಂದು ಹೇಳಿದ್ದಾನೆ. ನಡುನಡುವೆ ಸಕ್ಕದದ ನಲ್ನುಡಿಗಳನ್ನು ಬೆರಸಿರ್ಪೆ ತಾನು ಹೇಳಿದ್ದೇನೆಂದು ಹೇಳುತ್ತಾನೆ. ಸಂಪೂರ್ಣವಾಗಿ ಸಂಸ್ಕೃತ ಶಬ್ದಗಳನ್ನು ಬಿಟ್ಟು ಕಾವ್ಯವನ್ನು ರಚಿಸುವದು ಶಕ್ಯವಿಲ್ಲವೆಂದೂ ಹೀಗೆ ಹೇಳಿರಬಹುದು. ಸಂಸ್ಕೃತ ಶಬ್ದಗಳು ನಡುನಡುವೆ ಸೇರಿಸಿದರೆ ಕರ್ಪೂರಣಿಸರದಲ್ಲಿ ಚೆಂಬವಳಗಳನ್ನು ಅಲ್ಲಲ್ಲಿ ಪೋಣಿಸಿದಂತೆ ಭಾಷೆ ಅಂದವಾಗುವದೆಂದು ಹೇಳಿರುವನು.

ಚೈತನ್ಯರಾಯುಂ=ಚಿದ್ರೂಪವಾದ ಬ್ರಹ್ಮವು, ಮಾಯಾಸಂಬಂಧದಿಂದ ಜಗದ್ರೂಪವಾಗಿ ಭಾಸವಾಗುವದು. ಮಾಯಾಬ್ರಹ್ಮರ ಸಮಾಗಮವೇ ಮದುವೆ. ಬಾಂದಳ-ಬಾನ್ ಎಂಬ ತಳಿ=ಆಕಾಶವೆಂಬ ಕೊಡೆ. ಸೊನ್ನೆವೆಟ್ಟು=ಸ್ವರ್ಣಪರ್ವತ, ಮೇರು. ಸೀಮಂತರತ್ನ=ಬೈತಲೆಮಣಿ. ನೇಸರಬಳಿಯು=ಸೂರ್ಯವಂಶದ. ಅಬ್ಜಂ=ಚಂದ್ರ (ಅಪ್+ಜ). ಬಾಂಗೆ=ಆಕಾಶಕ್ಕೆ. ಬಳಿ+ಅರ=ವಂಶಧರ್ಮ. ತೋಳ್ಪೆರ=ತೋಳ (ಸಾಮರ್ಥ್ಯದ) ಸಹಾಯ. ಪಳನುಡಿ=ವೇದ. ಯಶಃಶೇಷಂ=ಕೀರ್ತಿರೂಪದಿಂದ ಉಳಿದವನು=ಲೋಕಾಂತರಗತನು. ನಾಲ್ಕು ಉಪಾಯಂಗಳು=ಸಾಮದಾನಭೇದದಂಡಗಳು.

(೫) ಪುರುಷಾರ್ಥಗಳು=ಪುರುಷರಿಂದ ಅಪೇಕ್ಷಿಸಲ್ಪಡುವಂಥವು: ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು ನಾಲ್ಕು. ಮೈಗೊಂಡು=ಮೈಯಂ+ಕೊಂಡು: ಶರೀರವನ್ನು ಧರಿಸಿ. ಒಗೆ-ಧಾ-ಹುಟ್ಟು. ಪಿರಿಯಂ=ಕನ್ನಡದಲ್ಲಿ ವಿಶೇಷ್ಯವು ಯಾವ ವಿಭಕ್ತಿಯಲ್ಲಿದ್ದರೂ ವಿಶೇಷಣವು ಪ್ರಥಮೆಯಲ್ಲಿರಬಹುದು. ಎಳೆ-ತ್ಸ-ಇಲಾ=ಭೂಮಿ. ಗುರು=ಬೃಹಸ್ಪತಿ. ಬೆಂಗದಿರ=ಬೆಚ್ಚನೆ+ಕದಿರ್ಗಳ್ ಅವಂಗೆ: ಬಿಸಿಯು ಕಿರಣಗಳುಳ್ಳವ, ಸೂರ್ಯ. ತಣ್ಗದಿರ=ಚಂದ್ರ; ಪೊಡರ್ಪು=ಸ್ಫುರಣ. ಗುಣ್ಪು=ಗಾಂಭೀರ್ಯ.

ಸರ್ವಮಂಗಳಾಶ್ರಯಂ=ಸರ್ವಮಂಗಳ+ಆಶ್ರಯ, ಸರ್ವಮಂಗಳಾ (ಪಾರ್ವತಿ) ಆಶ್ರಯ, ಲಕ್ಷ್ಮಿ=ಲಕ್ಷ್ಮೀದೇವಿ, ಸಂಪತ್ತು. ಸರಸ್ವತಿ=ಸರಸ್ವತೀದೇವಿ, ವಿದ್ಯೆ. ಪಳಿಗಜ್ಜಂ=ಪಳಿ+ಕಜ್ಜಂ=ಸೂಕ್ಷ್ಮವಸ್ತ್ರದ ಕೆಲಸ; (ನಿಂದ್ಯವಾದ ಕೆಲಸ). ಪಟ್ಟಸಾಲಿಗ=ರೇಶಿಮೆ ಬಟ್ಟೆಯ ನೆಯ್ಗಾರ. ಇಳಿನೇಹ=ಇಳಿವ+ನೇಹ (ತ್ಸ-ಸ್ನೇಹ.) ಇಳಿಯುವ ಎಣ್ಣೆ; ಕಡಿಮೆಯಾಗುವ ಸ್ನೇಹ. ತಾಣದೀವಿಗೆ=ತ್ಸ-ಸ್ಥಾನದೀಪಿಕಾ=ದೀಪವಿಡುವ ಕಂಬ. ಕೀಳ್ಗೈಮೆ=ಕೀಳಾದಗೆಯ್ಮೆ=

ದುಷ್ಕೃತ್ಯ; ಕೀಳ್=ಕಡಿವಾಣದೊಳಗಿನ ಮುಳ್ಳು; ಆ ಕೀಳಿನ ಕೆಲಸ; ಮಧು ಪಾನಂ=ಮದ್ಯಪಾನ; ಮಕರಂದಪಾನ. ಆರಡಿ=ಆರು + ಅಡಿಗಳು ಉಳ್ಳದು; ತುಂಬಿ; ಮತ್ತು ತೊಂದರೆ; ಪಾದರಿ-ತ್ಸ-ಪಾಟಲಿಯೆಂಬ ಹೂಗಿಡ: ಮತ್ತು ಜಾರಿಣಿ. ಎರಡು ಇರ್+ಸಾಸಿರಂ; ಯಕಾರ ಲಕಾರಗಳನ್ನುಳಿದ ವ್ಯಂಜನಗಳ ಮುಂದಿನ ಸಕಾರಕ್ಕೆ ಚ, ಛ ಕಾರಗಳ ಆದೇಶವು ಆಗುವದು. ಸೇಸ-ತ್ಸ-ಶೇಷ. ಅರ್ತಂ+ ಸಮರ್ಥನು, ಅರ್-ಧಾ-ಸಮರ್ಥನಾಗು. ಗಾಂಪ=ಮೂಢ. ಕಾಲುರಿಚಂ=ಕಾ ಲೂರ್ (ಹಳ್ಳಿ) + ಇಚ=ಹಳ್ಳಿವಾಡದವ. ಅಳವೆ?=ಸಾಧ್ಯವೇ?

ನಾಲಡಿ=ನಾಲ್ಕು+ಅಡಿ=ನಾಲ್ಕು ಹೆಜ್ಜೆ. ಅರ್ಘ್ಯ=ಪೂಜೆಗೋಸ್ಕರ ಕೊ ಡುವ ನೀರು, ಹೂವು ಮುಂತಾದ್ದು. ಪಾದ್ಯ=ಕಾಲಿಗೆ ನೀರು. ಮಧುಪರ್ಕ= ಜೇನುತುಪ್ಪ ಮೊಸರುಗಳ ಮಿಶ್ರಣ.

ಮಾನಿಸ-ತ್ಸ-ಮಾನುಷ=ಮನುಷ್ಯ. ಮಾರ್ಪಾಟ-ಮಾರ್ಪಡುವಿಕೆ=ಚರ್ಯೆ. ಕಂದು=ಬಾಡುವಿಕೆ; ಕುಂದು=ಕುಗ್ಗುವಿಕೆ; ಬೇವಸ=ವ್ಯಸನ. ಮರುಕ=ಕಷ್ಟ. ಮಾಂಜಿಸು=ಮರೆಮಾಡು. ಬಿನ್ನಣ-ತ್ಸ-ವಿಜ್ಞಾನ=ಕೌಶಲ. ಸನ್ನಣ-ತ್ಸ-ಸಂಜ್ಞಾನ= ಗುರುತು. ಮನಸ್ಸಿನಲ್ಲಿ ಉಂಟಾದ ಕಷ್ಟವನ್ನು ಹೊಸ ಮಾತನ್ನಾಡಿಯೂ, ಸುಳ್ಳು ನಗೆ ನಕ್ಕೂ ಮರೆಮಾಡುವದುಂಟು.

ಸಾಜ-ತ್ಸ-ಸಹಜ. ಜಿಗಿವಡೆದ-ಜಿಗಿ+ಪಡೆದ, ಪ್ರತಿಬಂಧವನ್ನು ಹೊಂದಿದ. ಒಗೆ=ಮನಸ್ಸು. ಪರಂಪರೆ=ಸಾಲು. ಪೊದೆ=ಆಚ್ಛಾದಿಸು.

(೬) ಆಮರ್ಚುಗುಂ=ಬಿಗಿದಿರುವದು; ಸಡಿಲ್ಚು=ಸಡಿಲಾಗು. ಲೋಪಾ ಮುದ್ರೆ=ಅಗಸ್ತ್ಯಮುನಿಯು ಒಂದು ಸ್ತ್ರೀರೂಪವನ್ನು ನಿರ್ಮಿಸಿ ಅದನ್ನು ವಿದರ್ಭ ರಾಜನಿಗೆ ಪಾಲನೆಗಾಗಿ ಕೊಟ್ಟಿದ್ದನು, ಮುಂದೆ ವಿದರ್ಭರಾಜನು ಸಂತಾನಾರ್ಥ ವಾಗಿ ಕನ್ಯಾಪೇಕ್ಷಿಯಾದ ಅಗಸ್ತ್ಯನಿಗೆ ಆ ಕನ್ಯೆಯನ್ನು ಮದುವೆಮಾಡಿಕೊ ಟ್ಟನು. ಆ ಕನ್ಯೆಯೇ ಲೋಪಾಮುದ್ರೆ. ಸೊಲ್=ನುಡಿ. ಲೋಗ-ತ್ಸ-ಲೋಕ= ಜನ. ತಿರೆ-ತ್ಸ-ಸ್ಥಿರಾ. ಪೃಥ್ವಿ. ತಿಣ್ಪು-ಭಾರ, ಕಷ್ಟ. ನಾರಾಯಣಂ... ಪುಟ್ಟಿದಂಗೆ= ಇಲ್ಲಿ ಪುಟ್ಟಿದ ಎಂಬುದನ್ನು ವಿಶೇಷ್ಯವಾಗಿಟ್ಟುಕೊಂಡುದರಿಂದ ನಾರಾಯಣಂ ಎಂಬುದು ವಿಶೇಷಣಸ್ಥಾನದಲ್ಲಿದ್ದುದರಿಂದ ಪ್ರಥಮೆಯಲ್ಲಿದೆ. ಕಂಗಳ=ಕುರುಡ. ಬಾಗುಳ್-ತ್ಸ-ವ್ಯಾಕುಲ-ಕಷ್ಟ. ಒಂದೆಕೊಡೆಯೊಳ್=ಏಕಚ್ಛತ್ರ. ಈಗುಂ-ಈ

ಧಾತು-ಕೊಡುವರು. ಪೊನ್ನೊಡೆಯ=ಐಶ್ವರ್ಯಾಧಿಪತಿ=ಕುಬೇರ. ಬಯಕೆವಟ್ಟಲ್=ಬಯಕೆ + ಬಟ್ಟಲ್=ಅಕ್ಷಯಪಾತ್ರೆ ಬೇಡಿದುದನ್ನು ಕೊಡುವಂಥದು. ಮಾರಿ=ಮೃತ್ಯುದೇವತೆ. ಕಾಳರಕ್ಕಸಿ=ಕಾಲರಾಕ್ಷಸಿ. ಪ್ರಳಯಕಾಲದ ರಾಕ್ಷಸಿ. ಕೂರ್ವಾಳ್=ಕೂರ್+ತೀಕ್ಷ್ಣವಾದ ಖಡ್ಗ. ಪಡೆವಳ=ಪಡೆ + ವಳ=ಸೇನಾಪತಿ. ಗುರು,ಕವಿ=ಬೃಹಸ್ಪತಿ, ಶುಕ್ರ ದೇವರಾಜಮಂತ್ರಿ, ದೈತ್ಯರಾಜಮಂತ್ರಿ, ಬಳಿ+ಓಜ=ಉಪಾಧ್ಯಾಯ=ದ್ಭ-ಒವಝ್ಝು, ಓಜ.) ವಂಶದಗುರು, ಪುರೋಹಿತ. ಮೊಲನಸಿಂಗ. ಮಳಲತೈಲ ಇವು ಅಸಂಭವ ವಸ್ತುಗಳು. ನೇಹಿಗ=ನೇಹ (ತ್ಸ-ಸ್ನೇಹ)+ಇಗ=ಸ್ನೇಹಿತ. ಐವಾಯ್ವುಲಿ=ಐದು ಬಾಯುಳ್ಳ ಹುಲಿ. ಕೈವಲ್ಯಸುಂದರೀ ವದನಾರವಿಂದ ಮಕರಂದಪಾನ=ಮೋಕ್ಷಲಕ್ಷ್ಮಿಯ ಮುಖಕಮಲದ ಮಕರಂದವನ್ನು ಆಸ್ವಾದಿಸುವದು; ಮೋಕ್ಷಸುಖಾಸ್ವಾದವೆಂದು ಅರ್ಥವು. ಅಳಲುರಿ=ಅಳಲ್+ಉರಿ=ದುಃಖಾಗ್ನಿ. ಪೊಂದು-ಸಾಯು. ಪೊಂದಿದರಲ್ಲ=ಪೊಂದಿದರಲ್ಲದೆ; ಅಲ್ಲದೆ ಎಂಬ ನಿಪಾತದ 'ದೆ' ಲೋಪವಾಗುವದೂ ಉಂಟು. ಮೊನೆ-ಯುದ್ಧ ಬಲ್ಮೆ=ಸಾಮರ್ಥ್ಯ. ಎತ್ತಣ್ಣು=ಎತ್ತಣದು ಎಂಬುದನ್ನು ಎತ್ತಣ್ತು ಎಂದೂ ಉಚ್ಚರಿಸುವರು. ರಘುಃಕುಲಪಯೋಧಿರಾಕಾಸುಧಾಕರ=ರಘುರಾಜರವಂಶವೆಂಬ ಸಮುದ್ರಕ್ಕೆ ಪೌರ್ಣಿಮೆಯ ಚಂದ್ರನೆನಿಸಿದವ. ಸೂರ್ಯವಂಶದಲ್ಲಿ 'ರಘು' ಎಂಬವನು ಪ್ರಸಿದ್ಧನಾಗಿ ಹೋದನು. ಅದರಿಂದ ಆ ವಂಶಕ್ಕೆ ರಘುವಂಶವೆನ್ನುವರು. ರಾಕಾ=ಪೌರ್ಣಿಮೆ. ಸುಧಾಕರ=ಅಮೃತಕಿರಣ-ಚಂದ್ರ. ಸಮುದ್ರವು ಚಂದ್ರನಿಂದ ಉಕ್ಕೇರುವದು. ಹಾಗೆ ರಘುವಂಶಕ್ಕೆ ಆಹ್ಲಾದಕನೆಂದು ಭಾವವು. ತಗುಗುಂ=ತಗು ಥಾ-ಯೋಗ್ಯವಾಗುವದು. ಪೊಂಬಜ್ಜ=ಪೊನ್ನಪಜ್ಜ. ಚಿನ್ನದ ಆಭರಣ. ಪಣ್=ಸಜ್ಜುಮಾಡು, ತಯಾರಿಸು. ಬಣ್ಣ-ಬಂಗಾರದ ಬಣ್ಣ ಒರೆ; ರಾವಣಾದಿಗಳನ್ನು ಕೊಂದು ಬಳಿಕ ಅವರ ವಂಶವನ್ನು ಕೇಳಿದ್ದು ಬಂಗಾರದ ಆಭರಣವನ್ನು ತಯಾರಿಸಿ ಬಳಿಕ ಆ ಬಂಗಾರದ ಬಣ್ಣವನ್ನು ಕೇಳಿದಂತಾಯಿತು. ಅಳಿರಕ್ಕಸ=ಅಳಿವ+ರಕ್ಕಸ=ದುಷ್ಟರಾಕ್ಷಸ.

(೭) ದೇವರ್ಷಿವಿರ್-ವಿರ್ ಬಹುವಚನದ ಆಗಮವು; ಉದಾ: ಅತ್ತೆವಿರ್. ಪಡಿಯರ-ಪಡಿ (ಬಾಗಿಲು)+ಅರ (ನಿಯುಕ್ತ ಎಂಬರ್ಥದಲ್ಲಿ ತದ್ಧಿತ ಪ್ರತ್ಯಯ)=ದ್ವಾರಪಾಲಕ. ಮೂಗುದುದಿ-ಮೂಗಿನ ತುದಿ. ನಿಗ್ರಹ=ಶಿಕ್ಷೆ; ಅನು

ಗ್ರಹ=ದಯಮಾಡುವದು. ವಲಂ-ನಿಶ್ಚಯ. ತೊದಳ್-ಸುಳ್ಳು,-ತೊದಲು. ಮನಕೆ ಏರುವುದು=ಮನಸ್ಸಿಗೆ ಬರುವುದು. ಅನಿಪಿರಿದು=ಅನಿತು+ಪಿರಿದು. ದೂಸರು=ನಿಮಿತ್ತ. ಮರುವುಟ್ಟು=ಮರು+ಪುಟ್ಟು=ತಿರುಗಿ ಹುಟ್ಟುವಿಕೆ. ಮಾನಸಪುತ್ರ=ಮನಸ್ಸಿನಲ್ಲಿ ಹುಟ್ಟಿದ ಮಗ. ಒಳರ್=(ಉಳ್ ಧಾತುವಿನ ರೂಪವು) ಇದ್ದರು. ಶೂರ್ಪಣಖೆ=(ಶೂರ್ಪ+ನಖ) ಮೊರದಂತೆ ಉಗುರುಳ್ಳವಳು.

ಪೊಲ್ಲದ-ನಿಂದ್ಯ. ರಿಕ್ಕಟ=ವ್ಯರ್ಥ, ಅಯೋಗ್ಯ. ಬಳಿ-ವಂಶ. ಪೆಣ್ಣೆವ=(ಪೆಣ್ + ನೆವ) ಹೆಂಗಸಿಗಾಗಿ. ವ್ಯಾ. ಣಕಾರದ ಮುಂದಿನ ನಕಾರಕ್ಕೆ ಣಕಾರಾದೇಶವಾಗುವದು. ತಿಣ್ಣ-ಭಾರ; ಕಷ್ಟ. ಬ್ರಹ್ಮದ್ರೋಹಿ-ಬ್ರಾಹ್ಮಣನಿಗೆ ಕೇಡು ಬಗೆಯುವವನು.

ಜಿತವಾತಾಪಿ-'ವಾತಾಪಿ' ರಾಕ್ಷಸನು 'ಇಲ್ವಲ'ಎಂಬವನ ತಮ್ಮನು. ಒಮ್ಮೆ ಇಲ್ವಲನು ತನಗೆ ಇಂದ್ರಸಮಾನ ಪುತ್ರನಾಗುವ ವರವ ಕೊಡಬೇಕೆಂದು ಒಬ್ಬ ಬ್ರಾಹ್ಮಣನನ್ನು ಕೇಳಿದನು. ಬ್ರಾಹ್ಮಣನು ಕೊಡಲಿಲ್ಲ, ಆದದರಿಂದ ಆತನು ಬ್ರಾಹ್ಮಣದ್ವೇಷಿಯಾದನು. ಮತ್ತು ವಾತಾಪಿಗೆ ಮೇಷರೂಪವನ್ನು ಧರಿಸಹೇಳಿ ದಾರಿಯಲ್ಲಿ ಹೋಗುವ ಬ್ರಾಹ್ಮಣರನ್ನು ಕರೆಕರೆದು ಅವರಿಗೆ ಮೇಷರೂಪಿ ವಾತಾಪಿಯನ್ನು ಕೊಯ್ದು ಅಡಿಗೆ ಮಾಡಿ ಊಟಮಾಡಿಸಿ ಬಳಿಕ "ವಾತಾಪಿಯೇ ಬಾ" ಎಂದು ಕರೆಯುವನು. ವಾತಾಪಿಯು ಬ್ರಾಹ್ಮಣರ ಹೊಟ್ಟೆಯ ಬಗಿದು ಹೊರಗೆ ಬರುವನು. ಒಮ್ಮೆ ಅಗಸ್ತ್ಯಋಷಿಯು ಗರ್ತದಲ್ಲಿ ಲಂಬಮಾನರಾದ ತನ್ನ ಪಿತೃಗಳನ್ನು ನೋಡಿದನು. ಅವರು ಅಗಸ್ತ್ಯನಿಗೆ ನೀನು ಪುತ್ರೋತ್ಪಾದನ ಮಾಡಿದರೆ ತಮ್ಮ ಉದ್ಧಾರವಾಗುವದೆಂದು ಹೇಳಿದರು. ಅಗಸ್ತ್ಯನು ಒಬ್ಬ ಕನ್ಯೆಯನ್ನು ನಿರ್ಮಿಸಿ ವಿದರ್ಭರಾಜನಿಗೆ ಪಾಲನೆಗಾಗಿ ಕೊಟ್ಟಿದ್ದನು. ಈಗ ವಿದರ್ಭರಾಜನು ಸಂತಾನಾರ್ಥವಾಗಿ ಕನ್ಯಾಪೇಕ್ಷಿಯಾದ ಅಗಸ್ತ್ಯನಿಗೇ ಆ ಕನ್ಯೆಯನ್ನು ಕೊಟ್ಟನು. ಈ ಕನ್ಯೆಯ ಹೆಸರು ಲೋಪಾಮುದ್ರೆ. ಈಕೆ ಋತುಕಾಲದಲ್ಲಿ ತನಗೆ ಮಹಾರ್ಹ ವಸ್ತ್ರಾಭರಣಗಳು ಬೇಕು ಎಂದು ಪತಿಯನ್ನು ಕೇಳಿಕೊಂಡಳು. ಅಗಸ್ತ್ಯನು ಮೂರುಜನ ರಾಜರ ಬಳಿಗೆ ಹೋದರೂ ಬೇಕಾದಷ್ಟು ಧನವು ದೊರೆಯದಿರಲು ಶ್ರೀಮಂತನಾಗಿದ್ದ ಇಲ್ವಲನ ಬಳಿಗೆ ಬಂದನು. ಇಲ್ವಲನು ಎಂದಿನಂತೆ ವಾತಾಪಿಮಾಂಸವನ್ನು ಅಗಸ್ತ್ಯನಿಗೆ ಬಡಿಸಿ ವಾತಾಪಿಯೇ

ಎಂದು ಕೂಗಲು ಅಗಸ್ತ್ಯನು "ಜೀರ್ಣನಾಗು" ಎಂದು ಹೇಳಿ ಜೀರ್ಣಿಸಿ ಬಿಟ್ಟನು. ಅಂದಿನಿಂದ ಜಿತವಾತಾಪಿಯೆನಿಸಿದನು.

ಕೊಡನಕುವರಂ=(ಕುಂಭಯೋನಿ)=ಉರ್ವಶಿಗೆ ಮೋಹಿತರಾದ ಮಿತ್ರ, ವರುಣ ಎಂಬ ದೇವತೆಗಳ ಸ್ಖಲಿತವೀರ್ಯದಿಂದ ಕುಂಭದಲ್ಲಿ ಹುಟ್ಟಿದದರಿಂದ ಅಗಸ್ತ್ಯನಿಗೆ ಈ ಹೆಸರು ಬಂದಿತು. ಮಿತ್ರವರುಣರಿಂದ ಹುಟ್ಟಿದದರಿಂದ ಮೈತ್ರಾವರುಣಿ ಎಂದೂ ಹೆಸರು ಬಂದಿರುವದು.

ಬಿಂಜದ ಓಜಂ=ವಿಂಧ್ಯಪರ್ವತದ ಗುರು, ಅಗಸ್ತ್ಯ. ಮೇರುವಿಗೆ ಚಂದ್ರ ಸೂರ್ಯರು ಸುತ್ತುವಂತೆ ನನಗೇಕೆ ಸುತ್ತು ಹಾಕಬಾರದೆಂಬ ಈರ್ಷ್ಯೆಯಿಂದ ವಿಂಧ್ಯನು ಗಗನಮಂಡಲದಲ್ಲಿ ಬೆಳೆಯ ತೊಡಗಲು ಸೂರ್ಯಚಂದ್ರರ ಗತಿಗೆ ಅಡ್ಡಿಯಾಗಲು ದೇವತೆಗಳು ಅಗಸ್ತ್ಯನನ್ನು ಪ್ರಾರ್ಥಿಸಲು ಆತನು ವಿಂಧ್ಯನ ಬಳಿಗೆ ಬಂದನು. ಆಗ ವಿಂಧ್ಯನು ಗುರುಭಕ್ತಿಯಿಂದ ಬಾಗಿ ನಮಸ್ಕರಿಸಲು ನಾನು ಮರಳಿ ಬರುವವರೆಗೆ ಹೀಗೆಯೇ ಬಾಗಿರು ಎಂದು ಹೇಳಿ ದಕ್ಷಿಣಕ್ಕೆ ಹೋದವನು ಮತ್ತೆ ಉತ್ತರಕ್ಕೆ ಹೋಗಲೇ ಇಲ್ಲ.

(೮) ಪೋ=ಹೋಗು ಎಂಬರ್ಥದ ರೂಪವು. ಏವೆಂ=(ಏಗೆಯ್ವೆಂ ಎಂಬುದರ ಸಂಕ್ಷಿಪ್ತರೂಪ) ಏನಮಾಡಲಿ. ಏಂ ಬಟ್ಟೆ=ಯಾವದಾರಿ: ಜನ್ನ-ತ್ಸ=ಯಜ್ಞ. ಏಳಲಾಟಿಪ=ಏಳಲಿಚ್ಛಿಸುವ.

ಉಮ್ಮಳ=ತಳಮಳ. ಬಿಂಜ=ವಿಂಧ್ಯಪರ್ವತ, ಅಗಸ್ತ್ಯಋಷಿಯು ವಿಂಧ್ಯ ಪರ್ವತನ ಗುರು. ಉಪಟಳ=ಬಾಧೆ; ಬಾರ್ತೆ-ತ್ಸ=ವಾರ್ತೆ: ಬಾರ್ತೆಗೆಟ್ಟು=ಕ್ಷೇಮ ತಪ್ಪಿ. ಬರ್ದಿಲರ್=ದೇವತೆಗಳು. ಬರ್ದಿಲ (ಸ್ವರ್ಗ.) ನಿತ್ಯ ಶಿಥಿಲಶಬ್ದ. ಸಂಯುಕ್ತಾಕ್ಷರೋಚ್ಚಾರವನ್ನು ಶಿಥಿಲವಾಗಿ ಮಾಡಬೇಕು. ಪಂತಿದೇರ=(ಪಂತಿ-ತ್ಸ-ಪಂಕ್ತಿ=ಹತ್ತು) ಪಂತಿಯಲ್ಲಿ ತೇರು ಯಾವನಿಗೋ ಅವನು; ಅಂದರೆ ಹತ್ತು ದಿಕ್ಕುಗಳಲ್ಲಿ ಯಾವನ ರಥವು ಸಾಗುವದೋ ಅವನು; ದಶರಥ ಎಂಬದಕ್ಕೆ ಸಮಾನ. ಸೈತಿಟ್ಟು=ಸಮಾಧಾನಪಡಿಸಿ; ಮರಲ್ಚು=ತಿರುಗಿ ಕಳುಹು. ಬಂಡಣ=ಯುದ್ಧ. ಸೈಮಿನಿ=(ತ್ಸ-ಸಂಯಮಿ (ಮ) ನಿ) ಯಮನ ರಾಜಧಾನಿ.

ಎಗ್ಗ=ಮೂಢ. ಬ್ರಹ್ಮಹತ್ಯಾ=ಬ್ರಾಹ್ಮಣನ ಕೊಲೆ. ಎಂಗೆ=(ಎನ್+ಗೆ) ಮಾತಾಡಲಿ: ಎನ್ ಧಾತುವಿನ ವಿಧ್ಯರ್ಥದ ರೂಪ. ಅಜ್ಞಾನಕೃತ=ತಿಳಿಯದೆ

ಮಾಡಿದಂಥದು. ಅಜ್ಞಾನಕೃತ ಪಾಪಕ್ಕೆ ದೋಷವಿಲ್ಲದ್ದರಿಂದ ಪ್ರಾಯಶ್ಚಿತ್ತವಿಲ್ಲ ವಾದರೂ ಆ ಕೃತ್ಯವು ತನ್ನಿಂದ ಘಟಿಸಿದ್ದರಿಂದ ಮನಸ್ಸಿಗುಂಟಾದ ವ್ಯಾಕುಲತೆ ಯನ್ನು ನೀಗುವದಕ್ಕಾಗಿ ಸಣ್ಣದೊಂದು ಪ್ರಾಯಶ್ಚಿತ್ತವು. ಪ್ರಾಯಶ್ಚಿತ್ತ=ಪಾಪ ನಿವಾರಕ ಕರ್ಮವು. ಪುಂಗವ=(ಪುಮ್ + ಗೌ.) ಎತ್ತು. ಪುಂಗವ ಸಿಂಹ ಮೊದಲಾದ ಶಬ್ದಗಳು ಪುರುಷವಾಚಕಗಳ ಮುಂದೆ ಸೇರಿ ಶ್ರೇಷ್ಠ ಎಂಬರ್ಥವ ಕೊಡುವವು. ರಘುಪುಂಗವ=(ರಘು=ರಘುವಂಶದ ರಾಜರು) ರಘುವಂಶದ ರಾಜರಲ್ಲಿ ಶ್ರೇಷ್ಠ. ಕಿಟ್ಟಿ=(ಕಿಟ್ಟು ಧಾ.) ಮುಟ್ಟಲು. ಅಳಿಗೆಯ್ಮೆ=ಕೆಟ್ಟಕೆಲಸ.

ಕೂರ್ಮೆ=ಪ್ರೀತಿ. ತಳ್ಕೈಸು=ಅಪ್ಪಿಕೊಳ್ಳು. ಉಬ್ಬೆಗ (ತ್ಸ-ಉದ್ವೇಗ)= ವ್ಯಾಕುಲತೆ. ತೊಡಂಕು=ತೊಡಕು, ಅಡ್ಡಿ. ಬೆದಕು=ಹುಡುಕು. ಬೇಳ್ದು=ಯಜ್ಞ ಮಾಡಿ; ಬೇಳ್ (ಧಾ)=ಹೋಮಮಾಡು. ಬೆಳ್ಜಸ=ಬಿಳಿದು+ಜಸ (ಯಶಸ್). ದೆಸೆ + ಪೆಂಡಿರ್=ದಿಗಂಗನೆಯರು. ಪಸದನ (ತ್ಸ-ಪ್ರಸಾಧನ) =ಅಲಂಕಾರ. ಬರ್ದಿಲ+ಪೆಣ್= ಅಪ್ಸರಃ ಸ್ತ್ರೀ. ಸಪ್ತತಂತು=ಯಜ್ಞ. ಪಂಚಮಹಾಪಾತಕ= ೧ ಬ್ರಹ್ಮಹತ್ಯೆ; ೨ ಮದ್ಯಪಾನ; ೩ ಸ್ವರ್ಣಚೌರ್ಯ; ೪ ಗುರುತಲ್ಪಗಮನ; ೫ ಪೂರ್ವೋಕ್ತಪಾತಕಿಗಳ ಸಂಸರ್ಗ.

ಪಡಲಿಡು= ಹರಡಿಬೀಳು. ದೂರಹೋಗು. ಕ್ಷಾಮ=ಬರಗಾಲ. ಡಾಮ ರ=ದೈವಿಕವಿಪತ್ತು. ಬೇರುಡಿದು=ಬೇರುಮುರಿದು. ಸಂದೆಗ=ತ್ಸ-ಸಂದೇಹ.

(೯) ಪೆಡಂಮೆಟ್ಟುಗುಂ = (ಪೆರಗು+ಮೆಟ್ಟು+ಗುಂ) =ಹಿಮ್ಮೆಟ್ಟುವದು. ಪೆರಗು ಶಬ್ದಕ್ಕೆ ಪೆಡ ಎಂಬಾದೇಶವಾಗುವದು. ಅದರ ಮುಂದೆ ಅನುಸ್ವಾರವು ಸೇರಿ ಈ ರೂಪವಾಗಿದೆ. ನೆರೆ (ಧಾ)=ಸೇರು, ಪೂರ್ಣವಾಗು. ತಗುಬಗೆಯೊಳ್=ತಕ್ಕ ಮನಸ್ಸಿನಿಂದ, ಏಕಮನಸ್ಸಿನಿಂದ; ಇವರೊಳ್ = ಇವುಗಳಲ್ಲಿ. ಸಂಕೆ-ತ್ಸ=ಶಂಕಾ. ಬಲ್ಪಡೆ=ಬಲ್ಲಿತು+ಪಡೆ. ಕೆಂಕ=ಕೆಂಪು. ಕೊಡಂಕೆ=ಕಿವಿ. ಬೇಸಗೆ=ತ್ಸ-ವೈಶಾಖ. ಬಳಿವಿರುದುಮಂ=(ಬಳಿ + ಬಿರುದು + ಉಮ್+ಅಮ್)=ವಂಶದ ಬಿರುದನ್ನೂ; ವ್ಯಾ. ಸಮುಚ್ಚಯಾರ್ಥದ ಉಮ್ ಎಂಬುದು ದ್ವಿತೀಯೆಯಲ್ಲಿ ವಿಭಕ್ತಿಪ್ರತ್ಯಯಕ್ಕೂ ಪ್ರಕೃತಿಗೂ ನಡುವೆ ಬರುವದು. ಅಗ್ಗಳಿಕೆ=ಗೌರವ, ಹೆಚ್ಚಳ. ಬರೆದ+ಓಲೆ ಯುಂ. ಒರ್ಕಾಲಂ=ಒಂದು + ಕಾಲಂ, ಒಂದು ವರ್ಷ. ವ್ಯಾ. ಪೂರ್ವಪದವಾದ ಒಂದು ಶಬ್ದಕ್ಕೆ ಒರ್ ಆದೇಶವಾಗುವದು. ತೊಳಲ್=ಸಂಚರಿಸು. ಯುಜಮಾ

ನಂ=ಯಜ್ಞಮಾಡುವವ. ಯಜಮಾನನು ಯಜ್ಞದೀಕ್ಷೆಯಲ್ಲಿ ಮೃಗಶೃಂಗ=(ಚಿಗುರೆಯ ಕೋಡು) ವನ್ನು ಧರಿಸಬೇಕಾಗುವದು. ಮೈಗೆ ನವನೀತ (ಬೆಣ್ಣೆ) ವನ್ನು ತೊಡೆದುಕೊಳ್ಳಬೇಕಾಗುವದು; ಬ್ರಹ್ಮಚರ್ಯದಿಂದ ಇರಬೇಕಾಗುವದು. ನವೆ=ಸೊರಗು; ದೀನ=ದರಿದ್ರ. ಬಧಿರ=ಕಿವುಡ. ಐದೆ=ಸುವಾಸಿನಿ. ಗಂಡನು ಳ್ಳಾಕೆ; ಬ್ರತ=ತ್ಸ-ವ್ರತ. ಉಳಿ=ಬಿಡು. ನಿನಗಕ್ಕೆಮ=ನಿನಗೆ + ಅಕ್ಕೆ + ಎಮ. ಅಕ್ಕೆಮ=ಒಳ್ಳೆಯದು; ಆಗಲಿ. ಎಮ ಎಂಬ ನಿಪಾತವು ಒಪ್ಪಿಗೆ ಎಂಬ ಅರ್ಥದಲ್ಲಿ ಇರುವದು.

ಸರಯೂ=ಅಯೋಧ್ಯೆಯ ಹತ್ತರ ಹರಿದ ಹೊಳೆ. ಸಂದೋಹ=ಸಮೂಹ.

(೧೦) ಲಾಲಸಾ=ಬಯಕೆ. ತಳ್ವದೆ=ತಡಮಾಡದೆ.

ತಪೋವೃದ್ಧಿ=ತಪಸ್ಸಿನ ಬೆಳಿಗೆ. ಋಷಿಗಳಿಗೆ ತಪೋವೃದ್ಧಿಯನ್ನು ಕೇಳುವದು; ಇತರರಿಗೆ ಕುಶಲವೇ ಕ್ಷೇಮವೇ ಎಂದು ಕೇಳುವಂತೆ ಶಿಷ್ಟಸಾಂಪ್ರದಾಯವಾಗಿದೆ. ಬ್ರಾಹ್ಮಣಂ ಕುಶಲಂ ಪೃಚ್ಛೇತ್ ಕ್ಷತ್ರಬಂಧು ಮನಾಮಯಂ। ಗೋಪ್ರದಾನ=ಆಕಳನ್ನು ಕೊಡುವದು. ತಪಸಿ=ತ್ಸ-ತಪಸ್ವಿನ್-ಋಷಿ. ನಿರವಿಸು=ನಿರೂಪಿಸು, ವಿವರಿಸಿ ಹೇಳು.

ವಸಂತನು ಕೋಗಿಲೆ ಮೊದಲಾದವುಗಳ ಉಬ್ಬಸ ಮೊದಲಾದ ರೋಗಗಳನ್ನು ಕಳೆದು ವೈದ್ಯನಂತೆ ಬಂದನೆಂದು ಉತ್ಪ್ರೇಕ್ಷಿಸುವನು. ಮಾಮರ=ಮಾವು+ಮರ; ಎಳದಳಿರ=ಎಳೆಯ ಚಿಗುರಿನ. ಪಿಳಿದು=ಹಿಂಡಿ. ಕಳಕಂಠ=ಮಧುರಧ್ವನಿಯುಳ್ಳದ್ದು, ಕೋಗಿಲೆ. ವಸಂತಋತುವು ಬರುವದಕ್ಕೆ ಮುಂಚೆ ಕೋಗಿಲೆಗಳಿಗೆ ಕೂಗಲಿಕ್ಕೆ ಬಾರದಿರುವದು ಅವುಗಳಿಗೆ ಉಬ್ಬಸರೋಗವೆಂದು ಹೇಳಿದ್ದಾನೆ. ಕಲ=ಮಧುರ. ಅರನೇರಿಲು=ದೊಡ್ಡ ನೇರಿಲಹಣ್ಣು. ಸಣ್ಣ ನೇರಿಲ ಹಣ್ಣಿಗೆ ನಾಯಿನೇರಿಲವೆನ್ನುವರು. ದೋರೆವಣ್=ಅರ್ಧಪಕ್ವವಾದ ಹಣ್ಣು. ಗಿಳಿಗಳ ತೊದಲುನುಡಿಯ ರೋಗವು ನೇರಿಲಹಣ್ಣಿನ ರಸದಿಂದ ಹೋಯಿತು. ಈ ಸೀಮೆಯಲ್ಲಿ (ಧಾರವಾಡ.) ವಸಂತದ ಆರಂಭಕ್ಕೆ ನೇರಿಲಹಣ್ಣುಗಳಾಗುವದಿಲ್ಲ. ಜೇಷ್ಠಾಂತ್ಯದಲ್ಲಿ ಆಗುವವು. ಕಾರವಾರ ಮಂಗಳೂರು ಸೀಮೆಗಳಲ್ಲಿ ವಸಂತದಲ್ಲಿ ಆಗುವವಂತೆ. ಕವಿಯು ಮಂಗಳೂರ ನಾಡಿನವನಿರಬಹುವೆಂದೆನಿಸುವದು. ಶಿಶಿರಋತುವಿನಲ್ಲಿಯೇ ಸಂಪಗೆಯು ಹೂಗಳಾಗುವದರಿಂದಲೂ,

ತುಂಬಿಗಳಿಗೆ ಆ ಹೂಗಳ ವಾಸನೆಯು ತಡೆಯುವದಿಲ್ಲವಾದದರಿಂದಲೂ ಆಗ ತುಂಬಿಗಳಿಗೆ ಶಿರೋಭ್ರಮಣ (ತಲೆಸೂಲಿ) ವಾಗಿತ್ತೆಂದೂ, ಅದನ್ನು ವಸಂತನು ಕಳೆದನೆಂದೂ ಹೇಳುವನು. ಲೆಪ್ಪ-ತ್ಸ=ಲೇಪ್ಯ. ಲೆಪ್ಪಂಬಳಿದು=ಲೇಪನವಾಗಿ ತೊಡೆದು. (ತಲೆಗೆ). ಅದಿರ್ಮುತ್ತೆ=ಇರವಂತಿಗೆ (ವಾಸಂತಿ). ಸುರಯಿ= ಸುರಗಿ. ಪೊಸಬಂಡಂ=ಹೊಸ ಮಕರಂದವನ್ನು; ಒಡಲ್ಗೆ ಇತ್ತು=ಹೊಟ್ಟೆಯಲ್ಲಿ ಕೊಟ್ಟು. ಅಳಿಯಿಸು=ಅಳಿ+ಇಸು=ನಾಶಮಾಡು. ಬೆಜ್ಜ-ತ್ಸ=ವೈದ್ಯ. ವಸಂತದ ಆರಂಭದಲ್ಲಿ ದಕ್ಷಿಣದಿಂದ ಸುಳಿಗಾಳಿಯು ಬೀಸತೊಡಗುವದು. ವಸಂತನು ಬರಲು ಆತನ ಗೆಳೆಯನಾದ ದಕ್ಷಿಣಾನಿಲನೂ ತನ್ನ ಮಿತ್ರನಿಗೆ ನೆರವಾದನೆಂದು ಹೇಳುವನು. ಚೆಂದಳಿರ್=ಕೆಚ್ಚನೆ+ತಳಿರ್. ಕೆಂಪಾದ ತಳಿರು. ಕೆಚ್ಚನೆ ಶಬ್ದಕ್ಕೆ ಚೆನ್ ಎಂಬ ರೂಪವಾಗುವದು. ನನೆ=ಮೊಗ್ಗೆ; ಮರಲ್=ಹೂ. ಸುಗ್ಗಿ=ವಸಂತ ಕಾಲ. (ಧಾನ್ಯಾದಿಗಳು ಮಾಗಿ ಬರುವ ಕಾಲಕ್ಕೂ ಸುಗ್ಗಿ ಎನ್ನುವರು.)

ಯಜ್ಞಿಯ=ಯಜ್ಞದ. ಅಂತರಿಂ=(ಅವ್ಯಯ) ಅಕಾರಣದಿಂದ.

ಸೀತಾಪರಿತ್ಯಾಗದ ಕಥೆಯನ್ನು ಮನೋರಮೆಯ ಜಿಜ್ಞಾಸಾತೃಪ್ತಿಗಾಗಿ ಹೇಳಿದಂತೆ ಆರಂಭಿಸುತ್ತಾನೆ. ನೋಂಪಿ=ನೋನ್+ಪಿ=ವ್ರತ, ಧರ್ಮಕೃತ್ಯ.

ಮರುವುಟ್ಟಿಂ......ಅಟ್ಟೆ—ರಾವಣಕುಂಭಕರ್ಣರು ಸನಕಾದಿಗಳ ಶಾಪದ ಮೇರೆಗೆ ಮುಂದಿನ ಜನ್ಮದಲ್ಲಿ ಶಿಶುಪಾಲದಂತವಕ್ರರಾದರು. ಶರಣ=ಭಕ್ತ.

(೧೧) ಪೆರಂಗೆ ಇರ್ಕುಮೇ...ಉಮ್ಮಳಂ=ಎರಡನೆಯವನಿಗೆ ಇಷ್ಟೊಂದು ತಳಮಳವಿರುವದೇ? ಆದರೆ ಪುತ್ರಹೀನರ್ಗೆ......ಇರ್ಕುಂ. ಅಪತ್ಯ=ಸಂತಾನ. ಕಂಡರಿಸು=ಕಟ್ಟಿಗೆಯಲ್ಲಿ ಕೆತ್ತು. ಬೇಳ್ಮರನ=ಬಿಳಿಯ ಕಟ್ಟಿಗೆಯ; ಪಾಪೆ=ಬೊಂಬೆ (ಗೊಂಬೆ). ಸಜ್ಜೆವನೆ=ಮಲಗುವ ಮನೆ (ಶಯ್ಯಾ-ಧ್ಭ-ಸಜ್ಜೆ).

ಸೀತಾರಾಮಂ=ರಾಮನಿಗೆ ಸೀತೆಯಲ್ಲಿರುವ ಪ್ರೇಮಾತಿಶಯವನ್ನು ತೋ ರ್ಪಡಿಸಲೋಸುಗ ಸೀತಾರಾಮನೆಂದು ಹೇಳಿದ್ದು. ದಿಗ್ಭ್ರಮೆ=ದಿಕ್ಕು ತಪ್ಪುವದು. ನಡೆಗಂಬಂ=(ನಡೆವ+ಕಂಬಂ) ನಡೆಯುವ ಕಂಬವು. ಸ್ತಬ್ಧನಾಗಿ ಇತರ ಅವ ಯವಗಳ ಚಲನವಲನವಿಲ್ಲದೆ ಬರುತ್ತಿದ್ದದರಿಂದ ಕಂಬವು ನಡೆದಂತೆ ಆಗ ರಾಮನು ಕಾಣಿಸುತ್ತಿದ್ದನು. ಪೆಂಡವಾಸ=ಪೆಂಡಿರ ವಾಸ. ಅರಿಸಮಾಸವಾದರೂ ಪ್ರಾಚೀನ ಕವಿಪ್ರಯುಕ್ತವಾದುದರಿಂದ ದೋಷವಿಲ್ಲ. ಬೇವಸ=ವ್ಯಸನ, ಕಷ್ಟ.

(ಕಂದ)—ಬಿತ್ತಿನ ಸಹಜಾತರ್=ಬೆನ್ನಲ್ಲಿ ಬಿದ್ದ ಅಣ್ಣತಮ್ಮಂದಿರು. ಅಂತುಟು (ಹಾಗೆ)+ಅಣಕಿಸೆ; ದೂಸರು=ಕಾರಣ.

ಪಡಿನುಡಿಗುಡೆಯುಂ=ಉತ್ತರ ಕೊಡಲಿಕ್ಕೂ: ಜೀಪಿತೇಶನ ಮೇಲ್ನುಡಿಗೆ ಉತ್ತರ ಕೊಡದಿರುವದು ಪ್ರೇಮಕ್ಕೆ ಅನುಚಿತವು; ಮಕ್ಕಳಾಗಲಿಲ್ಲವೆಂಬ ದುಃಖವೆಂದು ಹೇಳುವದಕ್ಕೆ ನಾಚಿಕೆಯು ಅಡ್ಡಿಯಾಗಿತ್ತು. ಇದರಿಂದ ಉತ್ತರಕೊಡುವದಕ್ಕೂ ಕೊಡದಿರುವದಕ್ಕೂ ಸಮರ್ಥಳಾಗಲಿಲ್ಲ. ಮಾಲಿಪ+ಅಂದು=ಓರೆಗಣ್ಣಿನಿಂದ ನೋಡಿದಾಗ. ಮಾಲಿಸು=ಕಟಾಕ್ಷಹಾಕು. ಕಲ್ಪಾಂಘ್ರಿಪ=ಕಲ್ಪವೃಕ್ಷ. ಅಂಘ್ರಿಪ=ಬೇರುಗಳಿಂದ ಪಾನಮಾಡುವಂಥದು, ಮರ. ಪೆತ್ತು+ಓವ=ಹಡೆದು ಸಲಹುವ. ಸೈಪು=ಪುಣ್ಯ. ನಿರ್ನೆರಂ=ನಿಷ್ಕಾರಣವಾಗಿ.

(೧೨) ಅಲ್ತೇ (ಅಲ್ತು+ಏ)+ಇದು=ವ್ಯಾ. ನಿ. ನಿಪಾತಗಳಿಗೆ ಸ್ವರವು ಪರವಾಗಲು ಪ್ರಕೃತಿಭಾವವಾಗುವದು. ಅಯ್ಯನೆಪ್ರಮಾಣಂ=ತಂದೆ ದಶರಥನು ಪುತ್ರಕಾಮೇಷ್ಟಿಯಿಂದ ದೇವತಾನುಗ್ರಹದಿಂದ ಮಕ್ಕಳನ್ನು ಪಡೆದನು. ಸಗ್ಗಿಗ=ಸಗ್ಗ (ತ್ಸ-ಸ್ವರ್ಗ)+ಇಗ=ದೇವತೆ.

ಅವನೀಸುತೆ=ಸೀತೆ; ಜನಕರಾಜನು ಯಜ್ಞಮಂಟಪಕ್ಕೋಸ್ಕರ ಭೂಮಿಯನ್ನು ಹಸನಮಾಡುವಾಗ ಆ ಭೂಮಿಯಲ್ಲಿ ಒಂದು ಕೂಸು ದೊರೆಯಿತು. ಆ ಕೂಸೇ ಸೀತೆ. ೧ ನಾಡೆ=ನಾಡು+ಎ=ದೇಶವೇ. ೨ ನಾಡೆ (ಅವ್ಯಯ) ಚೆನ್ನಾಗಿ. ಓಲಾಡು=ಈಸಾಡು. ಉಕ್ಕೆವ=ತ್ಸ-ಉತ್ಸವ. ಒಸಗೆವರೆ=ಒಸಗೆ+ಪರೆ=ಮಂಗಳವಾದ್ಯ. ಮೊಳಗು=ಧ್ವನಿಮಾಡು.

ಬೈಗುಂಬೊಳ್ತು=ಬೈಗು+ಪೊಳ್ತು (ಅನುಸ್ವಾರಾಗಮ) ಸಾಯಂ=ಸಂಧ್ಯಾಕಾಲ. ಪ್ರಾತಃಸಂಧ್ಯಾಕಾಲಕ್ಕೂ ಬೈಗು ಎಂದು ಹೆಸರು. ಮೊಗಸಾಲೆ=ಮನೆಯ ಮುಂಭಾಗ. ಕಟ್ಟೆರಕ=ಕಡಿದಾದ ಎರಕ.=ಅತ್ಯಂತ ಪ್ರೇಮ. ರಿಸಿವೆಂಡಿರ್=ಋಷಿಗಳ ಹೆಂಡಿರು. ಒಡನಾಟದಿನಾನುಂ=ಸಹಕ್ರೀಡೆಯಿಂದಾದರೂ.

ಸಪ್ತಾಶ್ವಂ=ಏಳು ಕುದುರೆಗಳುಳ್ಳವನು, ಸೂರ್ಯನು; ಸೂರ್ಯನ ರಥಕ್ಕೆ ಏಳು ಕುದುರೆಗಳನ್ನು ಹೂಡಿರುವರಂತೆ; ಒಂದು ಕುದುರೆಯಿದ್ದು ಅದಕ್ಕೆ ಸಪ್ತ ಎಂಬ ಹೆಸರಿರುವದೆಂದು ಕೆಲವರು. ನಿಚ್ಚವಯಣ=ತ್ಸ-ನಿತ್ಯಪ್ರಯಾಣ. ಮೆಯ್ಗರ್ಚಿ=ಮೆಯ್ಯಂ ಕರ್ಚಿ=ಮೈದೊಳೆದು. ಪಡುವೆಟ್ಟು=ಪಡುವಣ ಬೆಟ್ಟ=ಅಸ್ತಾಚಲ.

ಮೊಗ್ಗುರೆ=ಮರೆಯಾಗು. ಇನಿಯು=ಪ್ರಿಯ. ಚರಮದಿಕ್ಕಾಂತೆ=ಪಶ್ಚಿಮದಿಕ್ಕೆಂಬ ಸ್ತ್ರೀಯು. ರನ್ನವಟ್ಟಲು=ರತ್ನಕೆತ್ತಿದ ಬಟ್ಟಲು. ಸಾಮಾನ್ಯವಾಗಿ ರತ್ನವೆಂದಾಗ ಕೆಂಪುಬಣ್ಣದ ರತ್ನವೆಂದು ಕವಿಸಂಕೇತವು. ಸಂಜೆಗೆಂಪು=ಸಂಧಿಪ್ರಕಾಶ. ಪದ್ಮಿನಿ (ಕಮಲಲತೆ) ಗೆ ಪಶ್ಚಿಮದಿಗಂಗನೆ ಸವತಿ. ಆಕೆಯ ಪಿಸುಣ್ಗೆ=(ಪಿಶುನ-ದ್ಭ-ಪಿಸುಣ್.) ಚಾಡಿಗೆ.

(೧೩) ಎರೆಯಂ=ಪತಿಯು. ಮಾರುವೋದಂ=ಪಶವಾದನು. ಸಂಜೆಯ ಮುಂದೆ ಕಮಲಿನಿಯು ಬಾಡುವಳು; ಆಗ ಕಮಲಗಳು ಮುಗಿದುಕೊಳ್ಳತೊಡಗಲು ಅವುಗಳಲ್ಲಿ ಕುಳಿತ ತುಂಬಿಗಳು ಹಾರಿಹೋಗುವವು. ಅವು ಹಾರಿಹೋಗುವಾಗ ಕಮಲಿನಿಯು ಕಡೆಯಿಂದ ಸೂರ್ಯನ ಬಳಿಗೆ ದೂತರಾಗಿ ಹೋಗುವಂತೆ ಕಾಣಿಸಿತೆಂದು ಹೇಳುವನು. ನಿನಗೆ ಇನಿಯನೊಳ್ ಮುನಿಸು ಬೇಡಗಡಾ. ಎಂದನ್ನವು. ಬೇಟ=ವಿರಹ (ಪ್ರೀತಿ); ಸೂಡು (ಸುಡು ಧಾತುವಿನ ಭಾವಕೃದಂತ)=ಸಂತಾಪ. ಬಸಂಗೆಡು=ಪರಾಧೀನವಾಗು. ಇಂದು ನಿಂದು=ಈ ದಿವಸ ವಸತಿ ಮಾಡಿ. ದೂದುಪೋಪುವು ಎನೆ (ದೂದು=ದೌತ್ಯ.) ದೌತ್ಯಕ್ಕೋಸ್ಕರ ಹೋಗುವವೋ ಎನಿಸಲು. ಮುಯ್ಯೀರಡಿ=ಮೂರು ಎರಡು (ಆರು) ಅಡಿಗಳುಳ್ಳದ್ದು. ಷಟ್ಪದ=ತುಂಬಿ. ಜಗುಳ್ದುದು=ಸರಿಯಿತು. ಮೇಪು=ಮೇವು, ಗ್ರಾಸ. ತಣಿ=ತೃಪ್ತಿಹೊಂದು. ಕುವಿ=ಕಿಲಿಪಿಲಿ ಮಾಡು. ನೀಡ=ಗೂಡು. ಸೇರೆಗೈ=ಬೊಗಸೆ. ಸಂಧ್ಯಾಮಂಡಪ=ಸಂಧ್ಯಾವಂದನೆಗಾಗಿ ಜಲಾಶಯದ ಬಳಿಯಲ್ಲಿ ಕಟ್ಟಿಸಿದ ಮಂಟಪ. ವೈಹಾಳಿ=ಸವಾರಿ. ಬಾಹುಜ=ಕ್ಷತ್ರಿಯ, ಬಾಹು+ಜ; ವಿರಾಟ್‌ಪುರುಷನ ಬಾಹುಗಳಿಂದ ಕ್ಷತ್ರಿಯರು ಜನಿಸಿದರಂತೆ. ಬೇರ-ತ್ಸ-ವ್ಯವಹಾರ. ಅವಸರ=ಸಮಯ, ಪ್ರಸಂಗ. ಮೆಯ್ದೆಗೆದು=ಸಂಬಂಧವನ್ನು ಬಿಟ್ಟು. ಬಣಂಜಿಗ-(ವಣಿಜ್-ದ್ಭ-ಬಣಜು, ಬಣಂಜು)=ಬಣಜು+ಇಗ=ವ್ಯಾಪಾರಿ. ನೆರವಿ=ಗುಂಪು. ಪೊಸವರದು-ಪೊಸಪರದು=ಹೊಸ ವ್ಯಾಪಾರ. ಬವಸಿನ (ಬವಸು-ತ್ಸ-ವ್ಯವಸಾಯ)=ಬೇಸಾಯದ. ತವಿಸಿ=ಮುಗಿಸಿ (ತವು-ಧಾ ನಾಶವಾಗು.) ಬೇಸರ್ಗೆ=ಬೇಸರದ ಮೂಲಕ. ಕುಡಿಯರ್=ಶೂದ್ರರು. ಸುಮ್ಮಾನ=ಸುಖ. ಒತ್ತಂ=ಸಮೀಪವನ್ನು. ಮುಚ್ಚಂಜೆ=ಮೂರು ಸಂಜೆ. ವ್ಯಾ. ಮೂರಕ್ಕೆ ಮು ಆದೇಶವೂ ಅದರ ಮುಂದಿನ ಸಕಾರಕ್ಕೆ ಚಕಾರಾದೇಶವೂ ಆ ಚಕಾರಕ್ಕೆ ದ್ವಿತ್ವವೂ ಆಗಿ ಮುಚ್ಚಂಜೆ ಎಂದು ರೂಪವಾಗುವದು. ತಿಟ್ಟು=ದಿನ್ನೆ. ಓವರಿ=ಇಳಕಲು. ಬಿಸುಗೈಯ್ಯಂ=ಬೆಚ್ಚನೆ ಕೈಗಳ್

ಅವಂಗೆ ಆತಂ-ಉಷ್ಣಕರ, ಸೂರ್ಯ. ಬೇಹುಕಾರ=ದೂತ. ಅರಿಲ್=ನಕ್ಷತ್ರ ನಕ್ಷತ್ರಗಳೂ, ದೀಪಗಳೂ ಇವು ಪ್ರಕಾಶಸಾದೃಶ್ಯದಿಂದ ಸೂರ್ಯನ ಬೇಹುಕಾರ ರೆಂದು ಹೇಳಿರುವನು. ಸಂಕಿನ (ಸಂಕು-ದ್ಭ-ಶಂಖ) ಶಂಖದ, ರಜನೀಮುಖಂ= ರಾತ್ರಿಯ ಆರಂಭ; ಸಂಧ್ಯಾಕಾಲ.

ಅರಸುಗೆಯ್ಮೆ=ರಾಜಕೃತ್ಯ. ಮರೆರೂವು=ಮರೆ + ರೂವು (ತ್ಸ-ರೂಪ). ವೇಷವನ್ನು ಬದಲಿಸಿಕೊಳ್ಳುವದು. ಪುಳು (ಹುಳು=ಕ್ಷುದ್ರ.) ವಾನಿಸರ್=ಕ್ಷುದ್ರ ಮನುಷ್ಯರು. ನಾಮಂ=ಹೆಸರು; "ರಾಮ" ಎಂಬುದು. ತಾರಕಮಂತ್ರ= (ಸಂಸಾರಸಾಗರದಿಂದ) ದಾಟಿಸುವ ಮಂತ್ರ. ಕಾಶಿಯಲ್ಲಿ ಮೃತನಾಗುವ ಮನುಷ್ಯನ ಕಿವಿಯಲ್ಲಿ ಪರಮೇಶ್ವರನು ತಾರಕಮಂತ್ರೋಪದೇಶಮಾಡುವನೆಂದೂ, ಅದರಿಂದ ಆ ಮನುಷ್ಯನಿಗೆ ಮೋಕ್ಷವಾಗುವದೆಂದೂ ಪುರಾಣಪ್ರಸಿದ್ಧವಾಗಿದೆ. ಮುಮ್ಮೆಯ್=ಮುನ್+ಮೆಯ್=ಪೂರ್ವಜನ್ಮ.

(೧೪) ನಿಗುಂಬಿಸು=ಒಟ್ಟುಗೂಡು. ಮಿಳ್ತು-ತ್ಸ=ಮೃತ್ಯು. ಪಾರೆ=ನಿರೀಕ್ಷಿಸಿಕೊಂಡಿರಲು. ತೆಗಳಿಸು=ಹಳಿ. ನುಡಿಯ ಜಾಣ್ಮೆಗೆ=ಮಾತಿನ ಜಾಣತನಕ್ಕೆ, ಜಾಣತನದ ಮಾತುಗಳನ್ನಾಡುವದಕ್ಕೆ. ಭಂಗಿ=ಮುಖಚರ್ಯೆ, ಕೃತಿ. ಪಾದಾವನತಶಿರಂ=ಪಾದಗಳ ಮೇಲೆ ಬಾಗಿಸಿದ ತಲೆಯುಳ್ಳವನು. ಪೆಯ್ವೆತ್ತು ಇರೆ= ಎದುರಿಗೆ ಇರಲು ಎಂಬರ್ಥ. ಪೆಳರು=ಅಂಜು. ಬಯ್ತಿಡು=ಬಚ್ಚಿಡು. ಗಾವಿಲ-ತ್ಸ=ಗ್ರಾಮಿಣ, ಹಳ್ಳಿಯವ. ಅರಿಯಮೆ=ಅರಿ+ಅಮೆ=ಅಜ್ಞಾನ. ಬಲ್ಲರ ಬಲ್ಲಹಂ= ಬಲ್ಲವರಲ್ಲಿ ಶ್ರೇಷ್ಠನು. ಬಲ್ಲಹ-ತ್ಸ-ವಲ್ಲಭ. ಅಸಗ=ಅಗಸ. ಕಳ್ದುವಂದಳ್=ಕದ್ದು ಬಂದವಳು.

ಮುಂಗಾರ್=ಕಾರ (ಮಳೆಗಾಲದ) ಮುಂದು; ಮಳೆಗಾಲದ ಆರಂಭ. ಮಂಡಲೇಶ್ವರ=ಸಾರ್ವಭೌಮ. ಮರವಟ್ಟು=ಸ್ತಬ್ಧನಾಗಿ. ಪೊಂಜುರಿಗೆ= ಪೊನ್+ಸುರಿಗೆ=ಭಂಗಾರದ ಕಿರುಗತ್ತಿ. ವ್ಯಾ. ನಿ. ಯ, ಲಕಾರಗಳನ್ನು ಬಿಟ್ಟು ಳಿದ ವ್ಯಂಜನಗಳ ಮುಂದಿನ ಸಕಾರಕ್ಕೆ ಕೆಲವೆಡೆಯಲ್ಲಿ ಚಕಾರಾದೇಶವೂ ಕೆಲವೆಡೆಯಲ್ಲಿ ಜಕಾರಾದೇಶವೂ ಆಗುವವು. ವಿಲಗ=ಕಷ್ಟ. ಏಳಿಸು=ನಿಂದಿಸು. ಕೆಯ್ವೊಲ=ಕೆಯ್+ಪೊಲ=ಕ್ಷೇತ್ರ; ಗದ್ದೆ. ಕುರುಂಬುಲ್=ಕಿರಿದು+ಪುಲ್=ವ್ಯಾ. ನಿ. ಕಿರಿದು ಶಬ್ದಕ್ಕೆ ಸಮಾಸದಲ್ಲಿ ಕುರು ಎಂಬಾದೇಶವಾಗುವದು; ನಡುವೆ ಅನುಸ್ವಾರಾಗಮವಾಗಿ ಈ ರೂಪವಾಯಿತು. ಪೂತೆ=ಶುದ್ಧಳು. ಶತ್ರುಹ-ತ್ಸ=ಶತ್ರು

ಹನ್. ಶತ್ರುಘ್ನ ಎಂಬಂತೆ ಮತ್ತೊಂದು ರೂಪವು. ಸೌಮಿತ್ರಿ=ಸುಮಿತ್ರೆಯ ಮಗ; ಲಕ್ಷ್ಮಣ.

(೧೦೪) ಕಿರುಗೂಸು=ಕಿರಿದು+ಕೂಸು. (ಕೂಸು ಶಬ್ದವು ಹೆಣ್ಣುಮಗಳು ಎಂಬ ಅರ್ಥದಲ್ಲಿಯೂ ಉಂಟು.) ರಾಘವ=ರಘುರಾಜನ ವಂಶದವ; ರಾಮಚಂದ್ರ. ಪಾವಕಪಾವನೆ=ಅಗ್ನಿಶುದ್ಧಳು. ಮನಂದಂದಾಯ್=ಮನಮಂ ತಂದಯ್=ಮನಸ್ಸನ್ನು ಮಾಡಿದೆ. ತಗುಗುಂ+ಏ=ಯೋಗ್ಯವಾಗುವದೇ? ನರಿ...... ಪೋಕುಮೆ?=ನರಿಯು ಕೂಗಿದರೆ ಸ್ವರ್ಗಲೋಕವು ಹಾಳಾಗುವದೇ? ನರಿಗಳ ಕೂಗುವಿಕೆಗೆ ಊಳಿಡು ಧಾತುವು ಪ್ರಯೋಗಿಸಲ್ಪಡುವದು. ಕೂಳಂ... ಆಡುವುದೆ?=ನೀಚನು ದೂಷಿಸಿದರೆ ನೀನೂ ಒಂದು ಆಡುವುದೆ? ರೋಡಿಸು=ಅಪಹಾಸಮಾಡು. ಪುದುವಾಳ್=ಕೂಡಿ ಬಾಳುವೆಮಾಡು. ಫಣಿ=ಹಾವು. (ಹೆಡೆ ಉಳ್ಳದ್ದು.) ನಿರ್ಮೋಕ=ಪರೆ. ಕೈಗಟ್ಟಿ=ಕೈಯಂ ಕಟ್ಟಿ; ಕೈಕಟ್ಟಿಕೊಂಡು. ಅಣುಗ=ವತ್ಸ, ಪ್ರಿಯ, ಹುಡುಗ. ಕುಂಭೀಪಾಕ=ಈ ಹೆಸರಿನ ಒಂದು ನರಕವು. ರೌರವ=ಈ ಹೆಸರಿನದೊಂದು ನರಕವು. ಪಾಪಿ ಕೈವಲ್ಯಲಕ್ಷ್ಮಿಯುಂ ಬಿಡುವಂತಿರೆ=ಪಾಪಿಷ್ಠನು ಮೋಕ್ಷಲಕ್ಷ್ಮಿಯನ್ನು ಬಿಡುವ ಹಾಗೆ. ನಿರ್ಘೃಣಂ+ಆಂ=ನಿರ್ದಯನಾದ ನಾನು. ಭಾಗ್ಯಲಕ್ಷ್ಮಿ=ಐಶ್ವರ್ಯಲಕ್ಷ್ಮಿ, ಸೀತೆ. ಚಲ=ಹಟ. ಪೀಸಂ=ಸ್ವಲ್ಪವೂ. ಬೀರದ ಮೆಯ್ಗೊಂಡು=ಶೌರ್ಯದ ಸ್ವರೂಪವನ್ನು ಧರಿಸಿ. ಮುನ್ನಂ ಭಾರ್ಗವಂ=ಪೂರ್ವಕಾಲದಲ್ಲಿ ಜಮದಗ್ನಿಋಷಿಯು ಪ್ರಸೇನಜಿತ್ ಎಂಬ ಅರಸನ ಮಗಳಾದ ರೇಣುಕೆಯನ್ನು ಮದುವೆಯಾದನು. ಜಮದಗ್ನಿಗೆ ಪರಶುರಾಮನನ್ನು ಹಿಡಿದು ಐದುಜನ ಗಂಡುಮಕ್ಕಳಾದರು. ಒಂದಾನೊಂದು ದಿವಸ ರೇಣುಕೆಯು ಸ್ನಾನಕ್ಕಾಗಿ ಜಲಾಶಯಕ್ಕೆ ಹೋದಾಗ ಅಲ್ಲಿ ಸಪತ್ನೀಕನಾಗಿ ಜಲಕ್ರೀಡೆಯಲ್ಲಿದ್ದ ಚಿತ್ರರಥನೆಂಬ ಒಬ್ಬ ಅರಸನನ್ನು ಕಂಡು ಮನಸೋತು ಪರವಶಳಾದಳು. ಮುಂದೆ ಹೇಗೋ ಪ್ರಯತ್ನದಿಂದ ಮನೆಗೆ ಬಂದಳು. ಜಮದಗ್ನಿಯು ಹೆಂಡತಿಯ ಧೈರ್ಯಸ್ಖಲನೆಯನ್ನು ಜ್ಞಾನದೃಷ್ಟಿಯಿಂದ ನೋಡಿ ಕುಪಿತನಾಗಿ ತನ್ನ ಮಕ್ಕಳಲ್ಲಿ ಒಬ್ಬೊಬ್ಬರನ್ನು ಕುರಿತು ರೇಣುಕೆಯನ್ನು ಕೊಲ್ಲ ಹೇಳಿದನು. ನಾಲ್ವರು ಮಾತೃವಧೆಗೆ ಹೇಸಿ ತಂದೆಯ ಮಾತನ್ನು ಕೇಳಲಿಲ್ಲ. ಎಲ್ಲಕ್ಕೂ ಕಿರಿಯವನಾದ ರಾಮನು ತಂದೆಯ ಅಪ್ಪಣೆಯಾದ ಕೂಡಲೆ ತಾಯಿಯನ್ನು ಹೇಗೆ ಕೊಲ್ಲಲಿ ಎಂಬ ಮೋಹಕ್ಕೆ ಒಳಗಾಗದೆ ಪರಶು (ಕೊಡಲಿ)

ವಿನಿಂದ ತಾಯಿಯ ತಲೆ ಹಾರಿಸಿದನು. ಭಾರ್ಗವಂ=ಭೃಗುಋಷಿಯ ವಂಶದಲ್ಲಿ ಹುಟ್ಟಿದವನು, ಪರಶುರಾಮನು. ಮಾತೆ ರೇಣುಕೆಯಂ=ಎಂಬಲ್ಲಿ ಮಾತೆ ಇದಕ್ಕೆ ವಿಶೇಷಣವಾದದರಿಂದ ಪ್ರಥಮ ಬಂದಿದೆ. ಬಿಸುಳ್ವೆನೊ=ಬಿಡುವೆನೊ, ಚೆಲ್ಲುವೆನೊ? ಬಿಸುಡು ಧಾತುವಿನ ರೂಪ. ಪೇಳ್=ವಿಧ್ಯರ್ಥ ಮ. ಪು. ಏ. ವ. ದೋಹದ=ಸ್ತ್ರೀಯರು ಗರ್ಭಿಣಿಯರಾದಾಗ ಆಗುವ ಬಯಕೆ.

ದಿಮ್ಮನೆ=ಕ್ರಿಯಾನುಕರಣಾವ್ಯಯ. ಅರಂಗೆಟ್ಟುದು=ಧರ್ಮವು ಕೆಟ್ಟಿತು. ರಾತ್ರಿಯೆಲ್ಲಾ ಸೀತಾಪರಿತ್ಯಾಗದ ನಿರ್ಣಯವಾಗುವದರೊಳಗೆ ಬೆಳಗಾಯಿತು. ಬೆಳಗಿನ ಲಕ್ಷಣಗಳನ್ನೇ ಸೀತಾತ್ಯಾಗರೂಪವಾದ ಅಧರ್ಮಮೂಲಕ ಆಯಾ ವಸ್ತುಗಳಿಗೆ ವ್ಯಥೆಯುಂಟಾದ ಲಕ್ಷಣಗಳೆಂದು ವರ್ಣಿಸುವನು. ತಾರೆಗಳು ಈ ಅಧರ್ಮವನ್ನು ನೋಡಲಾರದೆ ದೆಸೆಗೆಟ್ಟವು, ದಿಕ್ಕೆಟ್ಟವು. (ಅದೃಶ್ಯವಾದವೆಂದರ್ಥ) ಚಂದ್ರನು ಕಳೆಗೆಟ್ಟನು. ಮೋರೆಯ ಬಾಡಿಸಿದನು; (ನಿಸ್ತೇಜನಾದನು.) ಜಂಪತಿವಕ್ಕಿ=ಚಕ್ರವಾಕ ಪಕ್ಷಿಗಳು; ಕಂಗೆಟ್ಟುವು=ಮುಂದುಗಾಣದಾದವು, (ಅತಿಶಯ ಉತ್ಸುಕವಾದವು; ಬೆಳಗಾಗುವ ಹೊತ್ತಿಗೆ ರಾತ್ರಿಯೆಲ್ಲಾ ವಿರಹದಿಂದ ಬಳಲಿದ ಚಕ್ರವಾಕ ಪಕ್ಷಿಗಳು ತಮ್ಮ ಪ್ರಿಯರನ್ನು ಕೂಡಿಕೊಳ್ಳುವದಕ್ಕೆ ಇನ್ನು ಎಷ್ಟು ಕಾಲವೋ ಎಂದು ಉತ್ಸುಕವಾಗುವದು ಸ್ವಾಭಾವಿಕವು.) ಜಂಪತಿವಕ್ಕಿ=ತ್ಸ-ದಂಪತಿಪಕ್ಷಿ, ಚಕ್ರವಾಕಗಳು ಹಗಲೆಲ್ಲಾ ಜೋಡಿಯಾಗಿರುವದರಿಂದ ಅವಕ್ಕೆ ಈ ಹೆಸರು ಬಂದಿದೆ. ರಾತ್ರಿಯಲ್ಲಿ ಈ ಹಕ್ಕಿಗಳು ಬಂದನ್ನೊಂದು ಅಗಲುವವು. ಕೋವಳೆ-ತ್ಸ=ಕುವಲಯಿನೀ-ಚಂದ್ರವಿಕಾಸಿ ಕಮಲಲತೆ.

(೧೬) ಕಮಲಿನಿ=ಸೂರ್ಯವಿಕಾಸಿ ಕಮಲಲತೆ. ಬಾಯ್ವಿಟ್ಟಳ್=ಬೆಳಗ್ಗೆ ವಿಕಾಸಕ್ಕೆ ಆರಂಭವಾಗುವಾಗ ದಳಗಳು ದೂರ ದೂರ ಸರಿಯ ಹತ್ತುವದನ್ನು ಶೋಕದ ಬಾಯ್ಬಿಡುವಿಕೆ ಎಂದು ವರ್ಣಿಸಿರುವನು. ಅನ್ನೆಯ=ತ್ಸ-ಅನ್ಯಾಯ ಗಲಬೆ=ಗೊಂದಲ; ಗಲಭಾ ಅರೇಬಿಕ್ ಶಬ್ದ. ಅಡಿ=ಮೂಲ ಕುಳಿರ್ಗಾಳಿ=ಶೀತವಾದ ಗಾಳಿ. ಉಪ್ಪವಡಿಸು=ಏಳು, (ಪವಡಿಸು=ಮಲಗು) ಮೂಡುವೆಟ್ಟು=ಮೂಡುವ (ಉದಯಿಸುವ) + ಬೆಟ್ಟು; ಉದಯಾಚಲ; ಕೋಡುಗಲ್=ಪರ್ವತಶೃಂಗ.

ಕಾಲ್ಯ=ಪ್ರಾತಃಕಾಲದ ಕೃತ್ಯ. ವಿಶ್ವಲೋಚನ=ಜಗತ್ತಿನಕಣ್ಣು; ಸೂರ್ಯ.

ತೊಳಚಿ=ತ್ಸ-ತುಲಸೀ. ತುರುಚೆ=ಕಾಡುಕಸ. ಜಾಳ್=ಹುರುಳಿಲ್ಲದವ. ಪಂಚಮ= ಚಂಡಾಲ. ರಾಯ + ತವಸಿ=ರಾಜರ್ಷಿ.

ಕನ್ನೆವಾಡ=ಕನ್ಯಾಂತಃಪುರ; ಹೆಣ್ಣುಮಕ್ಕಳಿರುವ ಉಪ್ಪರಿಗೆ. ಕಲ್ಮನಂ= ಕಲ್ಲಿಂತೆ (ಗಟ್ಟಿಯಾದ) ಮನಸ್ಸುಳ್ಳವ.

ಮೇಣ್ + ಒರ್ಮೆಯುಂ=ಮತ್ತೊಮ್ಮೆಯೂ; ವನವಾಸಕಾಲದಲ್ಲಿ ಒಮ್ಮೆ ಪುಣ್ಯಾಶ್ರಮಗಳ ದರ್ಶನವಾಗಿತ್ತು. ಕಣ್ಣೊಳೆ ಬೆಳಗಪ್ಪುದುಂ=ಒಮ್ಮೆ ಮುಚ್ಚಿದ ಕಣ್ಣನ್ನು ತೆರೆಯುವದರೊಳಗೇ ಎಂದರ್ಥ. ಪಡಿ=ಬಾಗಿಲು, ಕದ. ತೂರು=ಬದಿಗೆ ಸರಿಸು, ತಿರಸ್ಕರಿಸು. ನಲ್ಲಂ=ಪ್ರಿಯನು; ಪತಿಯು.

ಕವಡು=ತ್ಸ-ಕಪಟ. ಪಾಲ್ಗಡಲೊಳ್...ಬಗೆದಾದಳ್=ತನ್ನ ಬಯಕೆಯನ್ನು ಪೂರ್ಣಮಾಡಿದನೆಂದು ತಿಳಿದಳಲ್ಲದೆ ತನ್ನನ್ನು ತ್ಯಾಗಮಾಡಿದ್ದನ್ನು ಭಾವಿಸಲಿಲ್ಲ. ಕಾಳ್ಮಿಗ=ಕಾಡು + ಮಿಗ (ತ್ಸ-ಮೃಗ). ಊರ್ಮಿಳೆ=ಲಕ್ಷ್ಮಣನ ಹೆಂಡತಿ.

(೧೭) ವಾರ್ಧಿ=(ವಾರ್+ಧಿ) ಜಲಸಂಚಯಸ್ಥಾನ; ಸಮುದ್ರ. ಬಸ್ನ= ಚಸ್ನ. ಬಾಯನ=ತ್ಸ-ವಾಯನ=ಬಾಗಣ. ಮುತ್ತೈದೆಯರು ಮಂಗಲ ದ್ರವ್ಯಗಳನ್ನೂ ಅಕ್ಕಿ ಮೊದಲಾದ ಆಹಾರ ದ್ರವ್ಯಗಳನ್ನೂ ಮೊರದಲ್ಲಿಟ್ಟು ಮುತ್ತೈದೆಗೆ ಕೊಡುವದಕ್ಕೆ ಬಾಗಣವೆನ್ನುವರು. ದುಷ್ಕೃತಿಯುಂ ಕಟ್ಟಿದೆಯೊ?=ದುಷ್ಕರ್ಮವನ್ನು ಕಟ್ಟಿಕೊಂಡೆಯೋ (ಮಾಡಿದೆಯೊ?) ಸೂಳೈಪ=ಧ್ವನಿಮಾಡುವ. ಕಾಳೆಗವರೆ=ಕಾಳೆಗ+ಪರೆ=ರಣವಾದ್ಯ. ಕಿಳಿರ್=ಹೇಷಿಸು. ಚಂಡಭಂಡನ=ಭಯಂಕರವಾದ ಯುದ್ಧ. ಗಂಡುಗಲಿ=ಶೂರಪುರುಷ. ಪೆಣ್ಗೊಲೆಗೆ ಎಂತು ಅಂತು—ಹೆಂಗಸಿನ ಕೊಲೆಗೆ ಹೇಗೋ ಹಾಗೆ. ಈಗ ಸೀತೆಯನ್ನು ವನದಲ್ಲಿ ಬಿಟ್ಟುಬರುವದೆಂದರೆ ಕೊಲೆ ಮಾಡಿದಂತೆಯೇ ಸರಿ. ನೀಮುಂ ಏನಂ ಆಚರಿಸಿದಿರಯ್=ಯಾವ ದುಸ್ಕರ್ಮವನ್ನು ಮಾಡಿದ್ದಿರಿ. ಯಾವನ ಮನೆಯಲ್ಲಿ ಪೋಷಣೆ ಹೊಂದಿದಿರೋ ಆ ಒಡೆಯನ ಪತ್ನಿಯನ್ನು ವನದಲ್ಲಿ ಬಿಟ್ಟುಬರುವ ಕೀಳ್ಮೆಯನ್ನು ಈಗ ಮಾಡುವಿರಿ. ಕೊಲೆಗ=ಕೊಲೆ + ಗ ಕೊಲೆಮಾಡುವವ. ತೂಂಕು=ತುರುಕು, ನೂಕಿಸು. ಈರೇಳ್ಗಾಲಂ=ಎರಡು (ಇರ್) + ಏಳ್+ಕಾಲಂ=ಹದಿನಾಲ್ಕು ವರ್ಷ. ತ್ರಿಕರಣ=ಕಾಯ, ವಾಕ್ಕು, ಮನಸ್ಸು.

ಐರದಾಳಿ=ಮಾಂಗಲ್ಯದ ತಾಳಿ; ಬಿಚ್ಚೋಲೆ=ತಾಡಪತ್ರದ ಓಲೆ. ಕರ್ಮಣಿ=ಕರಿದು + ಮಣಿ; ಕಮ್ಮೆಣ್ಣೆ=ಕಮ್ಮಿತಾದ (ಸುಗಂಧವಾದ) ಎಣ್ಣೆ. ಕಾವಿಗಪ್ಪಡ=ಕೆಂಪು ಬಣ್ಣದ ಬಟ್ಟೆ. ಕಪ್ಪಡ-ತ್ಸ=ಕರ್ಪಟ=ಬಟ್ಟೆ. ಕರಂಡ=ಪೆಟ್ಟಿಗೆ, ಡಬ್ಬಿ. ಜಿತಾತಿಕಾಯ=ಲಕ್ಷ್ಮಣ. ಅತಿಕಾಯರಾಕ್ಷಸನನ್ನು ಗೆದ್ದವನು. ಅತಿಕಾಯನು ರಾವಣನ ಮಗನು. ರಾವಣನಂತೆ ಬಹು ಬಲಿಷ್ಠನು. ವಿಭೀಷಣನಿಂದ ಈತನ ಪರಾಕ್ರಮವನ್ನು ಕೇಳಿ ಲಕ್ಷ್ಮಣನು ಈತನ ಶಿರಸ್ಸನ್ನು ಛೇದಿಸಿದನು.

(೧೮) ಧರೆಯಂ+ಎನೆ=ಭೂಮಿಯನ್ನೋ ಎಂಬಂತೆ. ವಾಗೆ=ಕಡಿವಾಣ. ಕಸೆಗೋಲ್=ಕಸೆ (ತ್ಸ-ಕಶಾ)+ಕೋಲ್, ಚಾಕರ್ಕೋಲು (ಚಬಕ).

ನಳ, ನಳಕೂಬರ, ಮಾತಲಿ ಈ ಮೂವರು ಅಶ್ವಹೃದಯವನ್ನು ಬಲ್ಲವರಾಗಿ ಸಾರಥಿತನದಲ್ಲಿ ಬಲ್ಲಿದರು. ನಳಕೂಬರ=ಕುಬೇರನ ಮಗ; ಮಾತಲಿ=ಇಂದ್ರನ ಸಾರಥಿ. ಪಾರುಂಬಳಿ=ಚಕ್ರ, ಗಾಲಿ. ಪ್ರತಿಕೂಲಪವನ=ಎದುರಿನಿಂದ ಬೀಸುವ ಗಾಳಿ. ಬೆನ್ನ ಕಡೆಯಿಂದ ಬೀಸುವದು ಅನುಕೂಲಪವನ. ಅನುಕೂಲಪವನವು ಶುಭಸೂಚಕವೆಂದೂ, ಪ್ರತಿಕೂಲಪವನವು ಅಶುಭಸೂಚಕವೆಂದೂ ತಿಳಿಯುವರು. ಊಣೆಯ=ತ್ಸ=ಊನತಾ. ನ್ಯೂನತೆ. ಎದುರುಗಾಳಿಗೆ ಪತಾಕೆಯು ಹಿಂದುಳಿದು ವಿಮುಖವಾದಂತೆ ಕಾಣುವದು.

ತ್ರಿಪಥಗೆ=ಗಂಗೆ; ಭಗೀರಥಮಹಾರಾಜನ ಪ್ರಾರ್ಥನೆಯ ಮೇರೆಗೆ ಶಿವನು ದೇವಗಂಗೆಯನ್ನು ತಲೆಯ ಮೇಲೆ ಧರಿಸಿ ಹಿಮಾಲಯದಲ್ಲಿ ಬಿಂದುಸರದಲ್ಲಿ ಬಿಡಲು ಅಲ್ಲಿ ಏಳು ಪ್ರವಾಹಗಳುಂಟಾದವು; ಮೂರು ಪಶ್ಚಿಮದಿಕ್ಕಿಗೂ ಮೂರು ಪೂರ್ವದಿಕ್ಕಿಗೂ ಹೋದವು. ಏಳನೆಯ ಪ್ರವಾಹವು ಭಗೀರಥನ ಬೆನ್ನಹತ್ತಿತು. ಈ ಮೇರೆಗೆ ಮೂರು ದಾರಿಗಳನ್ನು ಹಿಡಿದದರಿಂದ (ತ್ರಿ + ಪಥ + ಗ) ತ್ರಿಪಥಗೆ ಎಂಬ ಹೆಸರು ಗಂಗೆಗೆ ಬಂದಿತು. ಕಣ್ಣಳತೆ=ದೃಷ್ಟಿಹರಿಯುವವರೆಗಿನ ಅಂತರ. ಪೊಚ್ಚ=ಹೊಳೆ. ಕೈಯಳತೆ=ಕೈಯಿಂದ ಕಲ್ಲು ಮೊದಲಾದುದನ್ನು ಒಗೆದರೆ ಅದು ಹೋಗುವವರೆಗಿನ ಅಂತರ. ದರ್ಶನಸ್ತುತಿ=ಕಂಡಕೂಡಲೆ ಮಾಡುವ ಸ್ತೋತ್ರ; ಪೂಜೆಮಾಡಿದ ತರುವಾಯ ಸ್ತೋತ್ರಮಾಡುವದೂ ಉಂಟು, ಬೈತ್ರ-ತ್ಸ-ವಹಿತ್ರ=ತೆಪ್ಪ. ಲೋಕಪಾವನೆಯಾದ ಗಂಗೆಗೂ ಕೂಡ ಮಹಾಪತಿವ್ರತೆಯಾದ ಸೀತಾದೇವಿಯು ತನ್ನನ್ನು ಮನ್ನಿಸುವದಕ್ಕೆ ಬಂದಳೆಂದು ಸಂತೋಷವಾಯಿತೋ

ಎಂಬಂತೆ (ಗಂಗೆಯು) ಸಂತೋಷಚಿಹ್ನಗಳನ್ನು ವರ್ಣಿಸಿ ಸೀತಾದೇವಿಯು ಮಾಹಾತ್ಮ್ಯವನ್ನು ವ್ಯಕ್ತಪಡಿಸಿರುವನು. ಪ್ರವಾಹದಲ್ಲಿ ತೆಪ್ಪದ ಮೇಲೆ ಕುಳಿತು ಹೋಗುವಾಗಿನ ಸ್ಥಿತಿಯನ್ನು ವರ್ಣಿಸುವನು. ಕಂಕಣ=ಬಳೆ, (ಕಂ+ಕಣ= ನೀರಹನಿ.) ತೆರೆಗೈ=ತೆರೆಯೆಂಬ ಕೈ. ಬೆಳ್ನಗೆ-ನೊರೆಯೇ ಬೆಳ್ಳಗೆ ಕಾಣುವ ನಗೆ. ಮೆಯ್ವೆರ್ಚು=ಮೆಯ್‌+ಪೆರ್ಚು=ಉಬ್ಬು. ಸ್ವಾಗತಮಂ (ಸು+ಆಗತ) ಕೇಳ್ವಂ= ಸುಖಾಗಮನವೇ ಎಂದು ಕೇಳಿಯೂ. ಮುತ್ತಪಿರಿಯರಂ ಉದ್ಧರಿಸಿದ ಭಾಗೀರಥಿ= ರಾಮಚಂದ್ರನ ಪೂರ್ವಜನಾದ ಸಗರನ ಅರುವತ್ತುಸಾವಿರ ಜನ ಮಕ್ಕಳು ಕಪಿಲ ಋಷಿ ಶಾಪದಿಂದ ಭಸ್ಮೀಭೂತರಾಗಿರಲು ಈ ವಂಶದ ಭಗೀರಥಮಹಾರಾಜನು ತಪಸ್ಸಿನಿಂದ ಪರಮೇಶ್ವರನನ್ನು ಮೆಚ್ಚಿಸಿ ಗಂಗೆಯನ್ನು ದೇವಲೋಕದಿಂದ ಮನುಷ್ಯಲೋಕಕ್ಕೆ ತಂದನು. ಆ ಗಂಗೆಯು ಆ ಸಗರಪುತ್ರರ ಭಸ್ಮದ ಮೇಲೆ ಹಾಯಲು ಅವರು ಉದ್ಧಾರವಾದರು. ಭಗೀರಥನಿಂದಲೇ ಗಂಗೆಗೆ ಭಾಗೀರಥಿ ಎಂಬ ಹೆಸರು ಬಂದಿತು.

ಪಾರೋಡ=ತೆಪ್ಪ. ಕರೆ=ದಂಡೆ; ಆತರ=ಹೊಳೆದಾಟಿಸಿದ್ದಕ್ಕಾಗಿ ಕೊಡುವ ಹಣ. ಪುಳಿಲ್-ತ್ಸ-ಪುಳಿನ; ಮಳಲಿನ ಪ್ರದೇಶ. ಮಧ್ಯಾಹ್ನದಲ್ಲಿ ಸೂರ್ಯನು ನೆತ್ತಿಯಮೇಲೆ ಬರಲು ಒಂದೇ ಕಡೆಗೆ ನಿಂತಂತೆ ಕಾಣುವನು. ಆದರಿಂದ ಆತನು ಈ ವರೆಗಿನ ಪ್ರಯಾಣದ ಬಳಲಿಕೆಯಿಂದ ಗಂಗಾಜಲವನ್ನು ಕುಡಿಯುವದಕ್ಕೆ ನಿಂತಿರುವನೋ ಎಂದು ಉತ್ಪ್ರೇಕ್ಷಿಸುವನು.

(೧೯). ಮಾರ್ಪೊಳೆ=ಪ್ರತಿಫಲಿಸು. ಸೂರ್ಯಕಿರಣಗಳು ಪ್ರತಿಫಲಿಸಲು ಮೊದಲೇ ಶುಭ್ರಳಾದ ಗಂಗೆಯು ಪಾಲ್ದೊರೆ (ಹಾಲಿನ ಹೊಳೆ) ಎಂಬಂತೆ ತೋರಿದಳು. ತಡಿ (ತ್ಸ-ತಟೀ)=ದಂಡೆ. ಹರಿಣಗಳು ನೀರು ಕುಡಿಯುವ ಸ್ವಭಾವವನ್ನು ವರ್ಣಿಸುವನು. ಮುಸುಂಡು=ಮೊಸಡಿ. ಗೊಣಸು=ಚಿಗರೆಯ ಮರಿ. ಫೇನ=ನೊರೆ; ತೂರಲ್ಗೊಂಬು=ದಟ್ಟವಾದ ಟೊಂಗೆ. ಮೊಗಸು=ಕೆಲಸಕ್ಕೆ ಹತ್ತು. ಚೆನ್ನಸುಗೆ=ಕೆಚ್ಚನೆ+ಅಸುಗೆ (ತ್ಸ-ಅಶೋಕ)=ಕೆಂಪು ಅಶೋಕ. ತೀರ್ಥ=ಪವಿತ್ರಜಲ; ಇಲ್ಲಿ ಗಂಗಾಪ್ರವಾಹವೇ ತೀರ್ಥ. ವಿಹಗ=ಪಕ್ಷಿ; ನೇರದಿಂ= ಚೆನ್ನಾಗಿ. ಒರೆ=ಹೇಳು.

ಒರ್ತಡವೆಯೆ=ಒಮ್ಮೆಗೇ. ಪೆಣ್ಗಳ ಬಾಳ್ತೆ (ಬಾಳುವೆ) ಬಾಳ್ತೆಯೇ=ಬಹಳ ಕಷ್ಟಮಯವಾದುದೆಂದರ್ಥ.

(೨೦) ಮಿಡಿ-ಬೆರಲಿನಿಂದ ಚಿಮ್ಮು. ಅಳಲ್=ದುಃಖವು; ಔಂಕುಗುಂ= ಅಮುಕುವದು. ದುಃಖದಿಂದ ಕೊರಲ ಸಿರಗಳು ಉಬ್ಬಿ ಬಿಗಿದಿರುವದೆಂದು ಅರ್ಥವು. ಮುಂಗತೆಯಂ+ಆನುಂ-ಮುಂದಿನ ಕಥೆಯನ್ನಾದರೂ.

ಪೆಣ್ಣೊಡಲಲ್ತೆ ಎಂತುಂ ಸೈರಿಪೆಂ-ಸ್ತ್ರೀ ಶರೀರವು ಕಷ್ಟವನ್ನು ಸಹಿಸಬ ಹುದಂತೆ.

ವೈಖಾನಸ (ವಿ+ಖನ್+ಅಸ) ಕಂದಮೂಲಗಳನ್ನು ಅಗಿಯುವವ, ಋಷಿ. ಮುತ್ತೈದೆ=ಮುತ್ತ+ಐದೆ. ಮುದುಕೆಯಾದ ಸುವಾಸಿನಿ; ಚಂದ್ರಶಾಲೆ= ಬೆಳದಿಂಗಳು ಬೀಳುವ ಮೇಲುಪ್ಪರಿಗೆ. ಶತಪದ=ನೂರು ಹೆಜ್ಜೆ, ಊಟವಾದ ಬಳಿಕ ನೂರು ಹೆಜ್ಜೆಗಳನ್ನು ನಡೆಯಬೇಕೆಂದು ಆರೋಗ್ಯಶಾಸ್ತ್ರಜ್ಞರು ಹೇಳು ವರು. ಕಾಪಥ=ಕೆಟ್ಟದಾರಿ. ತವಕ=ಸಂಭ್ರಮ. ಮನಸ್ಸಿನಲ್ಲಿ ಹುಟ್ಟಿದ ಸಂಭ್ರ ಮವು ಬೇಕಾದಂಥ ಕಠಿಣಕಾರ್ಯಗಳನ್ನಾದರೂ ಮಾಡತೊಡಗಿಸುವದು. ಹಮ್ಮಯಿಸು=ಮೂರ್ಛೆಹೊಂದಿ ಬೀಳು. ಮುಚ್ಚೆದಿಳಿದು=ಮುಚ್ಚೆಯಿಂ ತಿಳಿದು. ಶ್ವಾಪದ=(ಶ್ವ+ಆಪದ್=ನಾಯಿಯಿಂದ ಹೇಗೆ ಆಪತ್ತು ಒದಗಬಹುದೋ ಹಾಗೆ ಆಪತ್ತನ್ನು ಒದಗಿಸುವಂಥ ಪ್ರಾಣಿ) ಹಿಂಸ್ರಪಶು. ಬಟ್ಟೆದಪ್ಪಿದಯ್=ದಾರಿಯು ತಪ್ಪಿದೆ. ಕಮಲಮಂ ಉಳಿದು=ಮಕರಂದದಿಂದ ತುಂಬಿದ ಕಮಲವನ್ನು ಬಿಟ್ಟು; ಮಧುಭ್ರಾಂತಿಯಿಂ=ಮಕರಂದದ ಭ್ರಮೆಯಿಂದ. ಕಿಂಶುಕಕ್ಕೆ=ಮುತ್ತಲಹೂವಿಗೆ. ಭ್ರಮರಿ=ಹೆಣ್ದುಂಬಿ. ಮುತ್ತಲಹೂವಿನಲ್ಲಿ ಮಕರಂದಲಾಭವಿಲ್ಲವೆಂಬದಿಷ್ಟೇ ಅಲ್ಲದೆ ಆ ಹೂವಿಗಾಗಿ ಅಡವಿಯ ಸೇರಿದ್ದೊಂದು ಹಾನಿ. ಪುಣ್ಯಮೂರ್ತಿ ರಾಮಚಂದ್ರನನ್ನು-ಸಂಪೂರ್ಣ ಸುಖಸ್ಥಾನವನ್ನು-ಬಿಟ್ಟು ಸುಖಭ್ರಾಂತಿಯಿಂದ ಪುಣ್ಯಾಶ್ರಮಕ್ಕೆ ಬಂದಂತಾಯಿತೆಂದು ಶೋಕಿಸುವಳು.

(೨೧) ಏನಕ್ಕುಂ ಬಗೆಯ=ಏನಾಗಿರಬಹುದು ತಿಳಿದುನೋಡು. ಅಗ್ರ ಭವ=ಅಣ್ಣ. ಮರುಕ=(ಮರುಗು+ಅ)=ವ್ಯಥೆ. ಶಶ್ವದ್ಗಳದಶ್ರುಧಾರಾಸಿಕ್ತಕ ಪೋಲಂ=ಒಂದೇಸವನೆ ಉದುರುವ ಕಣ್ಣೀರ ಹನಿಗಳಿಂದ ತೋದ ಗಲ್ಲಗಳುಳ್ಳ ವನು. ಮಡಿವಳ=ಮಡಿ+ವಳ=ಮಡಿ (ಶುದ್ಧವಸ್ತ್ರ) ಗಳನ್ನು ಮಾಡುವವ, ಅಗಸ. ಅಭದ್ರ=ಅಮಂಗಳ; ಅಯೋಗ್ಯ. ಕುಂದಿಟ್ಟು=ಕುಂದನ್ನು (ದೋಷವನ್ನು) ಆರೋಪಿಸಿ. ದೇವರಂ=ಒಡೆಯ ರಾಮಚಂದ್ರನನ್ನು ಕುರಿತು: ಚುನ್ನ=ಕೀಳ್ನುಡಿ.

ಇದೆಕೊಳ್ಳಿಂ=ಇಕ್ಕೊಳ್ಳಿರಿ. ಅಗ್ರಜನ್ಮ=ಅಣ್ಣ. ನಚ್ಚಿನ=ನಂಬಿಗೆಯ; ಮೈದುನನೆಂ ಲಕ್ಷ್ಮಣನೆಂ=ಮೈದುನನಾದ ಲಕ್ಷ್ಮಣನಿರುತ್ತೇನೆ, ಎಂ=ಎಂಬುವದು. ಉ. ಪು ಆಖ್ಯಾತ ಪ್ರತ್ಯಯವು. ಆ ಪ್ರತ್ಯಯಗಳು ನಾಮಗಳ ಮೇಲೆಯೂ ಹತ್ತಿ ಕೆಲ ವೆಡೆಯಲ್ಲಿ ಆ ರೂಪಗಳು ವಿಶೇಷಣದಂತೆ ಆಗುವವು; ಕೆಲವೆಡೆಯಲ್ಲಿ ಕ್ರಿಯಾಪದ ದಂತೆ ವಾಕ್ಯಸಮಾಪ್ತಿಯನ್ನು ಮಾಡುವವು. ಒಸಗೆ=ಮಂಗಲಕಾರ್ಯ.

ಸೊಲ್ಲು=ನುಡಿ; ಬೀರ-ತ್ಸ ವೀರ್ಯ; ಶೌರ್ಯ. ಹರವಸ-ತ್ಸ ಪರವಶ= ಆವೇಶ; ಇದೆಕೊಳ್ಳಿ...ಇತ್ಯಾದಿಯಾದ ಲಕ್ಷ್ಮಣನ ಮಾತು ಶೌರ್ಯಾವೇಶದಿಂದ ಆಡಿದಂತೆ ಇರುತ್ತದೆ. ಪಳಯಿಸನೆ?=ಹಳಹಳಿಸಲಿಲ್ಲವೆ? ನೋಯನೆ?=ವ್ಯಥೆ ಪಡಲಿಲ್ಲವೆ? ಜಗದೊಳ್...ಪಳಂಗಿದರ್ಗೆ ರೂಢಿಯಾದವರಿಗೆ; ದುಃಖವನ್ನು ಮೇಲೆ ಮೇಲೆ ಅನುಭವಿಸಿ ಅದರ ರೂಢಿಯಾದವರಿಗೆ. ಪಳಗು=ಬಳಕೆಯಾಗು ಉದಾ: ಪಳಗಿದ ಆನೆ. ಈಲಾದ ಆನೆ ಎಂದರ್ಥ, ರೋಸ=ತ್ಸ-ರೋಷ; ಸಿಟ್ಟು, ಆವೇಶ. ಈ ಕಾರಣದಿಂದ. ಪಾಷಾಣಕಠಿಣ=ಪಾಷಾಣದಂತೆ ಕಲ್ಲಿನಂತೆ ಕಠಿಣ. ಮಮ್ಮಲ=ಮಲಮಲ.

ದೇವರಂ=ತ್ಸ-ದೇವೃ. ನ್ಯಾ-ಪಿತ್ರಾದಿ ಶಬ್ದಗಳು ಕನ್ನಡಕ್ಕೆ ಬರುವಾಗ ಕೊನೆಯ ಋಕಾರಕ್ಕೆ ಅರ ಆದೇಶವನ್ನು ಹೊಂದುವವು; ಉಳಿದ ಋಕಾರಾಂತ ಗಳು ‘ ಅರ ’ ಆದೇಶವನ್ನು ಹೊಂದುವವು. ಉದಾ: ಪಿತರ; ಭರ್ತಾರ. ವಾಕ್ಯ ಮಾರ್ಗಣಂ-ಮಾತೆಂಬ ಬಾಣವು, ಕೋಟರ=ಹೊದರು. ಹಮ್ಮದಂ ಬೋಗು= ಹಮ್ಮದ (ತ್ಸ-ಪ್ರಮಾದ) + ಪೋಗು=ಮೂರ್ಛೆಹೊಂದು. ಒಳ್ಕು=ಧಾ-ಪ್ರವ ಹಿಸು, ಹರಿ. ಅರ್ಜಿ=ಝರಿ. ಸೆಟ್ಟೆಲೆ=ಕುಂಬಳ ಎಲೆ. ಕಡೆ+ಪೋಳ್ತು (ಹೊತ್ತು). ದೊನ್ನೆ=ತ್ಸ-ದ್ರೋಣ. ಬೈತಲೆ=ತಲೆಯ ಮುಂದು; ಶೇಖರಿಸು=ಭೂಷಣವನ್ನಾಗಿ ಮಾಡು, ಏರಿಸು.

ಸಪರ್ಯೆ=ಪೂಜೆ. ಅಳವು + ಕಳಿದ=ಅಳತೆದಪ್ಪಿದ. ಅಸಕಳಿ=ಮೀರಿ ಹೋಗು.

(೨೨) ಕೂರ್ಮೆ+ಕಡಲ್=ಪ್ರೀತಿಸಮುದ್ರ. ಬರತುದೇ=ಒಣಗಿತೇ. ತಿಂಗ ಳ್=ಚಂದ್ರ. ಕಣ್ಣೆವೆಮುಚ್ಚಿ-ಸುಂಗುವಕಾಲದ ಸ್ಥಿತಿಯನ್ನು ತೋರಿಸುವದು. ಕರ್ಮಡು=ಕರಿದು+ಮಡು=ಬಹಳ ಆಳವಾದ ಜಲಾಶಯಭಾಗ. ಬಾರ್ತೆ-ತ್ಸ-

ವಾರ್ತೆ=ಕ್ಷೇಮ. ಮಜ್ಜೀವಿತೇಶ=ನನ್ನ ಪ್ರಾಣಪತಿ. ಕೂಳಂ=ನೀಚನು. (ಅಗಸನು) ಬಾಳ್ಗೊಲೆ=ಜೀವನ್ಮೃತಿ (ಬದುಕಿದ್ದರೂ ಸಾವು) ಬದುಕಿದ್ದರೂ ಪತಿಯಿಂದ ತ್ಯಕ್ತಳಾದದರಿಂದ ಸತ್ತಂತೆಯೇ ಎಂದು ಭಾವಿಸುವಳು. ಊರೊಳ್ ಮಾರಿ...ಕುಡುವರೇ? ಊರೊಳಗೆ ಮಾರಿ (ಮೃತ್ಯುದೇವತೆಯು) ಪಿಡುಗಾದರೆ ಮನೆಯ ಹೋರಿಯನ್ನು ಯಾರಾದರೂ ಬಲಿಗೊಡುವರೇ? ಮನೆಯ ಹೊರಗಿನ ಬಾಧೆಗೆ ಮನೆಯವರನ್ನು ಹಿಂಸಿಸುವದೇ? ಪಾಲ್ಸುಳಿತುದೆಂದಾವಂ ಪೊಯ್ವರೆ?-ದೋಷವು ಯಾರಲ್ಲಿಲ್ಲವೋ ಅವರಿಗೆ ಶಿಕ್ಷೆಯೇ? ಪಟ್ಟವಣೆ=ಪಟ್ಟ+ಮಣೆ=ಸಿಂಹಾಸನ.

ಎಳವೆ=ಬಾಲ್ಯ. ಘನಶ್ಯಾಮಲ=ಮೋಡದಂತೆ ಶ್ಯಾಮವರ್ಣದ; ಸೊಬಗುತ್ವ-ಸೌಭಾಗ್ಯ. ಉಗು=ಹೊರಚೆಲ್ಲು. ಕಡುಗೆಡೆ=ಅತ್ಯಂತಸ್ನೇಹ. ಚೆನ್ನ=ಸುಂದರ. ಪಂಚಾಸ್ಯ-ಸಿಂಹ. ಪುಂಡರೀಕ=ಹುಲಿ. ಭಲ್ಲೂಕ=ಕರಡಿ; ವೃಕ=ತೋಳ; ಸೂಕರ=ಹಂದಿ. ಯಾವಜ್ಜೀವಂ=ಜೀವವಿರುವವರೆಗೆ. ಅಣೆಗಟ್ಟು=ನೀರಿನ ಪ್ರವಾಹವನ್ನು ತಡೆಯುವ ಒಡ್ಡು ಮುಂ.

(೨೩) 'ಹಾರಾಮಾ ಹಾರಾಮಾ ಜಾರಿಪರಾರೆಂದು ಸೀತೆ ಬಾಯಿಳಿದಳ್' ಈ ವಾಕ್ಯವು ಅಭಿನವ ಪಂಪನ ರಾಮಾಯಣದಲ್ಲಿದೆ. (ಅ. ೯. ಪ. ೧೩.) ಬಿನ್ನನೆ=ಸುಮ್ಮನೆ. ಕುರುಂಬನ ಕುತ್ತಕ್ಕೆ...ಮದ್ದಾಯ್ತು-ಕುರುಬನ ರೋಗಕ್ಕೆ ಕುರಿಯ ಪಿತ್ತರಸವೇ ಔಷಧವಾಯಿತು. ಅಂದರೆ ಆತನ ಸ್ವಾಧೀನದಲ್ಲಿರುವ ಕುರಿಯೇ ಪಿತ್ತರಸಕ್ಕಾಗಿ ಮರಣಹೊಂದಬೇಕಾಗುವದು. ಪಾಡು=ಅವಸ್ಥೆ. ಹದಿಬದೆತ್ವ-ಪತಿವ್ರತಾ. ಸಮಂತು=(ಅವ್ಯಯ) ಹಾಗೆಯೇ. ಪೂರ್ವಸಂಚಿತ=ಪೂರ್ವಜನ್ಮದ ಕರ್ಮ.

ಕಿಳ್ಮೊಗಂ=ಕೆಳಗೆ ಮೊಗ ಮಾಡಿದವನು. ನೇಣ್=ಹಗ್ಗ. ಈಳ್ಗುಂ=ಜಗ್ಗುವದು. ಪಾಪೆಯುಂ...ಪೊಚ್ಚರದಾಯ್ತು ಬೊಂಬೆಗೆ ನಮಸ್ಕರಿಸಿದ ಹಾಗೆ ವ್ಯರ್ಥವಾಯಿತು. ನಿಶ್ಚೇತನವಾದದ್ದೂ, ದೇವತಾ ಸಾನ್ನಿಧ್ಯವಿಲ್ಲದ್ದೂ ಆದ ಬೊಂಬೆಗೆ ನಮಸ್ಕರಿಸಿದರೆ ಏನು ಫಲ? ಮನ್ನೊಡಲ್=ಪೂರ್ವಜನ್ಮ. ಅಳಿಗೆಯ್ಮೆ=ದುಷ್ಕರ್ಮ. ಬೆಸುಗೆ=ಬಿಸು+ಗೆ=ಸಂಬಂಧ.

(೨೪) ಬಳುವಳಿ=ಹೆಣ್ಣುಮಕ್ಕಳು ಗಂಡನ ಮನೆಗೆ ಹೋಗುವಾಗ ತವರು ಮನೆಯವರು ಕೊಟ್ಟ ವಸ್ತುಗಳು. ಎಕ್ಕಸರ=ಏಕಾವಳಿ, ಒಂದೆಳೆಯ ಹಾರ. ಪಿಂಡುಗಂಕಣಂ—ಬಳೆಯಂತಹ ಕೈಯಾಭರಣ. ಪರ್ಜುಗುಡು=ಹಂಚಿ ಕೊಡು. ಪೂರ್ಣಪಾತ್ರ=ಉಡುಗೋರೆ. ಅನುವಿಂಗೆ=ಅನುಕೂಲತೆಗೆ. ದವ್ಮ ಣೀ=ತ್ಸ-ಧರ್ಮಪಾನೀಯ. ಕವಿಲೆದುರು=ಕವಿಲೆ (ತ್ಸ-ಕಪಿಲಾ) + ತುರು= ಹೊಂಬಣ್ಣದ ಆಕಳು. ಅಬ್ಬೆ=ತ್ಸ-ಅಂಬಾ; ತಾಯಿ. ವಜ್ರಪಂಜರ=ವಜ್ರದ ಪಂಜ ರವು ಹೇಗೆ ಒಳಗಿದ್ದ ಹಕ್ಕಿಯನ್ನು ನಿರ್ಭಯವಾಗಿ ಕಾಪಾಡುವದೋ ಹಾಗೆ ಕಾಪಾಡುವದೆಂಬ ಅರ್ಥ.

ಡೋಲಾಯಮಾನ—(ಡೋಲಾ=ತೊಟ್ಟಿಲು.) ತೊಟ್ಟಿಲಂತೆ ತೂಗಾ ಡುವ. ದೆಸೆವಳ=ದಿಕ್ಪಾಲಕ. ನಿಮಿ=ಜನಕರಾಜನ ಒಬ್ಬ ಪ್ರಸಿದ್ಧ ಪೂರ್ವಜ. ರಾಜ ಯೋಗಿ=ರಾಜನೂ ಯೋಗಿಯೂ ಆದವನು; ರಾಜಋಷಿ. ದೆಸೆವಲಿ=ದೆಸೆ + ಬಲಿ=ದಿಗ್ಬಲಿ. ಬಳಿವಳ್ಳಿ=ವಂಶವೆಂಬ ಲತೆ. ಮಡಲ್=ಹಬ್ಬು. ಶಾಕಂಭರಿ=ವನ ದೇವಿ. ಮಾರೊಡ್ಡಿ=ಎದುರಾಗಿ. ನಡೆವ+ಅಟ್ಟೆ+ಎನೆ=ನಡೆಯುವ ದಡವೋ ಎಂಬಂತೆ; ಚೇತನ ಲಕ್ಷಣಗಳಿಲ್ಲದೆ ಕೇವಲ ದೇಹವು ನಡೆಯುತ್ತಿತ್ತೆಂದು ಅಭಿ ಪ್ರಾಯವು.

(೨೫) ಸೀತಾವೃತ್ತಾಂತವು ಅಪ್ರಸ್ತುತವಲ್ಲವೆಂಬುವದನ್ನು ಇಲ್ಲಿ ಮುದ್ದಣ ಮನೋರಮೆಯರ ಸಂವಾದವು ತೋರಿಸುವದು.

ಪಳನುಡಿ (ಹಳೆಯ ನುಡಿಗಳು=ವೇದಗಳು ಉಪನಿಷತ್ತುಗಳು) + ಪೆಂಡಿ ರ=ಪಳನುಡಿಗಳೆಂಬ ಸ್ತ್ರೀಯರ. ಬೈತಲೆವಣಿ=ಬೈತಲೆಯಲ್ಲಿರುವ ರತ್ನ. ಬೆಲೆ+ ಕಟ್ಟಿ. ಉಪನಿಷತ್ತುಗಳೆಂಬ ಸ್ತ್ರೀಯರಿಗೆ ಬೈತಲೆಯ ರತ್ನದಂತೆ ಅಲಂಕಾರಪ್ರಾಯ ವಾಗಿರುವದು ಬ್ರಹ್ಮವು. ಅದರ ಬೆಲೆಯನ್ನು ಕಟ್ಟಿ ಎಂದರೆ ಅದರ ಸ್ವರೂಪವು ಇಂಥದೆಂದು ಜ್ಞಾನಮಾಡಿಕೊಂಡು. ತತ್ವಮಂ=ಬ್ರಹ್ಮತತ್ವಜ್ಞಾನವನ್ನು. ಪುದು ವಾಳ್ವಿನಂ=ಅನುಕೂಲರಾಗಿ ಬಾಳುತ್ತಿರಲು. ಸುಖದುಃಖಂಗಳ್...ಪರಿವರ್ತಿ ಸುಗುಂ. ಸುಖವಾದ ಬಳಿಕ ದುಃಖ, ದುಃಖವಾದ ಬಳಿಕ ಸುಖ ಹೀಗೆ ಜಗತ್ತಿ ನಲ್ಲಿ ಕ್ರಮವಿರುವದು. नीचैर्गच्छत्युपरि च दशा चक्रनेमिक्रमेण.

ಅಳ್ಕರು=ಪ್ರೀತಿ.

ವೇದಪುರುಷ=ವೇದವೆಂಬ ಪುರುಷನು. ವೇದಗಳ ಪಠನ, ಜ್ಞಾನ ಇವು ಗಳ ಮಹಿಮೆಯಿಂದ ವೇದಮೂರ್ತಿಯಾಗಿ ವೇದಪುರುಷನಂತೆ ತೋರುವವ. ಮುದುಪು=ಮುಪ್ಪು. ಪರಿಜು=ವೇಷ. ಮೆಯ್ಗೊಂಡು=ಶರೀರವನ್ನು ಧರಿಸಿ. ಪಸು ಳೆ+ಬಿಸಿಲ್=ಎಳವಿಸಿಲು. ಬೆಳ್ಗೆಂಪು=ಬಿಳಿಯ ಛಾಯೆಯು ಕೆಂಪು. ಪೊಗರ್= ಕಾಂತಿ. ಕೂಟ=ಶಿಖರ. ಬೆಳ್ಮುಗಿಲ+ಆಗಸ=ಬಿಳಿಯ ಮೋಡವುಳ್ಳ ಆಕಾಶ. ಭಸಿತ + ಉದ್ಧೂಳಿತ=ವಿಭೂತಿಯಿಂದ ಲಿಪ್ತವಾದ. ಕಾವ=ಕಾಮ. ಮುನಿಯ ಜೋಲುಹುಬ್ಬು ಮುರಿದ ಕಾಮನ ಕಬ್ಬುಬಿಲ್ಲಂತೆ ಅಂದವಾಗಿತ್ತು. ನೆರ= ಸಹಾಯ. ಮುರಿದು=ವಕ್ರವಾಗಿ. ತುರುಗೆವೆ=ತುರುಗಿದ (ದಟ್ಟವಾದ) ಎವೆ. ಅರೆದೆರೆದ ಕಣ್=ಮುಪ್ಪಿನಿಂದ ಅರ್ಧ ತೆರೆದಂತೆ ಇರುವ ಕಣ್ಣು. ಅಚ್ಚಿ-ತ್ಸ= ಅಕ್ಷಿ. ನೀಳ್ದ=ಉದ್ದವಾದ. ನಾಸಾಪುಟ=ಮೂಗಿನ ಸೊಳ್ಳೆ. ಯೋಗಿಗಳ ನೋಟವು ನಾಸಾಗ್ರದಲ್ಲಿರುವದು. ಭಾರತಿ=ಸರಸ್ವತಿ. ಗೊರವ=ಮುನಿ, ಶಿವ. ಹಾಲಾಹಲ=ಕಾಲಕೂಟ ವಿಷ. ಕರ್+ಬೆಳಗು+ತುರುಗಲ್=ಕರಿಯ ಪ್ರಕಾಶ ಸಮೂಹ. ಏಕಮುಖೀರುದ್ರಾಕ್ಷ=ಒಂದು ಮುಖವುಳ್ಳ ರುದ್ರಾಕ್ಷ; ಹಲವು ಮುಖ ಗಳುಳ್ಳ ರುದ್ರಾಕ್ಷಗಳಿರುವವು. ತೆರಂಬೊಳೆ=ವಿಶೇಷವಾಗಿ ಹೊಳೆ. ಜೋಗಗೆಳ ಯರ್=ಯೋಗದ ಗೆಳೆಯರು. ಎಣ್ಬರ್=ಎಂಟುಮಂದಿ; ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ, ಸಮಾಧಿಗಳೆಂಬಿವು ಎಂಟು. ಏರಿವರ್ಪನ್ನಂ=ಹತ್ತಿ ಬರುತ್ತಿರಲು. ಅರುವಗೆಗಳ್=ಆರು ಜನ ವೈರಿ ಗಳು, (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ.) ಇಳಿವೋದ= ಇಳಿದು ಹೋದ ಎಲ್ಗಳ=ಎಲುವುಗಳ. ಯಮನಿಯಮಾದಿಗಳು ಹತ್ತಿ ಬರುವ ದಕ್ಕೂ ಕಾಮಕ್ರೋಧಾದಿಗಳು ಇಳಿದು ಹೋಗುವದಕ್ಕೂ ನಿಚ್ಚಣಿಕೆಗಳೆಂಬ ಹಾಗೆ ಪಕ್ಕೆಯೆಲುವುಗಳು ತೋರುತ್ತಿದ್ದವು. ಮಾಯೆದಾವು-ತ್ಸ=ಮಾಯಾದಾಮ= ಮಾಯೆಯೆಂಬ ಹಗ್ಗ.

(೨೬) ಪುರಿ=ಹುರಿ, ಸೆರೆ-ತ್ಸ--ಸಿರಾ=ರಕ್ತನಾಡಿ. ವಲ್ಕಲ=ನಾರುಮಡಿ. ತೊವಲುಡೆಯ—ತೊವಲು ಉಡೆ (ವಸ್ತ್ರ) ಯಾವನಿಗೋ ಅವನು=ಶಿವ; ಕೃತ್ತಿ ವಾಸ. ಚರ್ಮವಸ್ತ್ರ. ಪುತ್ತಿನ ಪುತ್ರ=ವಾಲ್ಮೀಕಿ. ವಲ್ಮೀಕದಿಂದ-ಪುತ್ತಿನಿಂದ-ಹುಟ್ಟಿ ದವ. ನೀನಾರ್ಗೆ=ನೀನು ಯಾರವಳು, ಯಾರ ಮಗಳು. ಬೋಸರಿಸು=ಕಪಟದ ಆದರ ತೋರಿಸು. ಕಾಣ್ + ಆ=ತಿಳಿಯೈ.

ಕವಲ್=ಇಬ್ಭಾಗ, ಶಾಖೆ; ಬರ್ದುಂಕು-ಬಾಳ್ವೆ. ಅಳಿಮೆಯ್=ಕ್ಷುದ್ರ ಶರೀರ. ಬಾವಿ, ದಾವು (ತ್ಸ-ದಾಮ) ಗಳ್ಗೆ ಒಪ್ಪಿಸಿ-ಬಾವಿಯು ಬಿದ್ದು, ಇಲ್ಲವೆ ಉರ್ಲು ಹಾಕಿಕೊಂಡು.

(೨೭) ಭ್ರೂಣ + ಹತ್ಯಾ=ಗರ್ಭಸ್ಥ ಶಿಶುವಿನ ಕೊಲೆ.

ಕೂಡುವಳಗ=ಕೂಡಿದ ಬಳಗ. ನಿಚ್ಚದಂದುಗ=ನಿತ್ಯದ ಕಷ್ಟ. (ಶಿವನ ಮತ್ತು ಆತನ ಬಳಗದವರ ವಾಹನಗಳಾದ ಬಸವ, ಸಿಂಹ, ನವಿಲು, ಗಣಪತಿಯ ಹಾವು ಇವುಗಳ ಪರಸ್ಪರ ದ್ವೇಷಮೂಲಕವಾದ ಕಲಹದಿಂದಾದ ಕಷ್ಟ). ಮಿಡುಗು=ವ್ಯಸನ. ನಂಜುಂಡ=ವಿಷವನ್ನು ಕುಡಿದ. ಬಾನ್ನವಿರಂ=ಬಾನೊಳ್ (ಆಕಾಶದಲ್ಲಿ) ನವಿರ್ (ಕೂದಲು) ಉಳ್ಳವನು; ಇಲ್ಲವೆ ಬಾನೇ ನವಿರಾಗಿ ಉಳ್ಳವನು: ವಿರಾಟ್‌ಪುರುಷನಿಗೆ ಆಕಾಶವೇ ಕೂದಲು ಸೂರ್ಯಚಂದ್ರರೇ ಕಣ್ಣುಗಳು; ಖಿರಿವೊಡೆ-ಖಿರಿತ + ಪೊಡೆ (ಹೊಟ್ಟೆ). ಬಾವು=ಹಾವು. ತಾಂ-ಆ ಬಸವ ಮೊದಲಾದವು. ಇರ್ಪುವೆನೆ=ಇರುವವೋ ಎಂದೆನಿಸಲು. ತಪೋವನದ ಋಷಿಗಳ ಸಾತ್ವಿಕ ಗುಣದ ಸಂಕ್ರಮಣವು ಹಿಂಸ್ರಪಶುಗಳಿಗೂ ಆಗಿ ಅವೂ ತಾಮಸವೃತ್ತಿಯನ್ನು ಬಿಟ್ಟು ಇದ್ದವೆಂದು ತಾತ್ಪರ್ಯವು. ಇಡಿಕಿರಿ=ದಟ್ಟಾಗ್ಗಿ. ಪೀಲಿ=ಗರಿ. ತಾಂಡವ=ದೊಡ್ಡ ಕುಣಿತ. ವಾಲ್ಮೀಕಿ-ವ್ಯಾಳ (ಸರ್ಪ) ವೂ ವಲ್ಮೀಕದಲ್ಲಿ ವಾಸಿಸುವದಾಗಿ ವಾಲ್ಮೀಕಿಯೆನಿಸಿಕೊಂಡದರಿಂದ ನೃತ್ಯ ಮೊದಲಾದವುಗಳಲ್ಲಿ ಸಭ್ಯನಂತೆ ನೋಡುವದಕ್ಕೆ ಅರ್ಹವಾಗಿತ್ತೆಂದು ವರ್ಣಿಸಿರುವನು. ಗೋಣ್ + ನವಿರ್. ಪಟ್ಟೆ (ಪಡು=ಮಲಗು) + ಒಂದು. ಒರಲ್=ದುಃಖದಿಂದ ಒದರು. ಕಡವೆ=ಒಂದು ಅಡವಿಯ ಪಶು.

ಮುಂದೆ ಆಶ್ರಮದ ಹೋಮಗಂಧವುಳ್ಳ ಗಾಳಿಯು ಬೀಸತೊಡಗಿದುದನ್ನು ಇಂತು ವರ್ಣಿಸುವನು:-ವಾಯುವಿಗೆ ಎಲ್ಲ ದೇವತೆಗಳಂತೆ ಹವಿರ್ಭಾಗವು ಸಂದರೂ ಮತ್ತೆ ಹೋಮದ್ರವ್ಯಗಳ ಗಂಧವನ್ನು ಅಪಹರಿಸುವನಲ್ಲಾ ಎಂಬ ಕೋಪದಿಂದ ಅಗ್ನಿಯು ಕಿಡಿಕಿಡಿಯಾಗಲು ವಾಯುವು ಅಗ್ನಿಯ ಈ ಮತ್ಸರಕ್ಕೆ ಮುನಿದು ಅಗ್ನಿಯನ್ನು ಹೊಯ್ದು ಆತನ ಧೂಮರೂಪ ಧ್ವಜವನ್ನು ಮುರಿದುದಲ್ಲದೆ ಈ ಪ್ರಕಾರವನ್ನು ಮೊದಲೇ ಮುನಿಗೆ ದೂರುವದಕ್ಕೆ ಬಂದನೋ ಎಂಬಂತೆ ಕಾಣುತ್ತಿತ್ತು. ಎಮ್ಮಂದಿಗರ್ + ಎಮ್ಮ+ಅಂದ + ಇಗ=ನಮ್ಮಂಥವರು. ಪಸುಗೆ=ವಿಭಾ

ಗ, ಪಾಲು; ಚರು=ಹೋಮದ ಅನ್ನ. ಜನ್ನ (ತ್ಸ=ಯಜ್ಞ)+ಕೊಂಡ (ತ್ಸ=ಕುಂಡ). ಕಿನಿಸು=ಕೋಪ. ಪುರೋಡಾಶ=ಒಂದು ತರದ ಹೋಮದ್ರವ್ಯ. ನರು+ಕಂಪು+ಪೊರೆದ=ಸುವಾಸನೆ ಬೆರೆತ.

(೨೮) ಮುಗಿಲ್ದೇರ್=ಮೋಡವೆಂಬ ರಥ. ಉಪಕಂಠ=ಸಮೀಪಪ್ರದೇಶ. ಮಳ್ತಿ=ಮತ್ತಿ. ಸವುದೆ=ಹೋಮಕ್ಕೆ ಬೇಕಾದ ಕಟ್ಟಿಗೆ. ತ್ಸ=ಸಮಿಧ್. ಇರ್ಪೆ=ಇಪ್ಪೆ. ಬೆಲ್ಲವತ್ತ=ತ್ಸ=ಬಿಲ್ವಪತ್ರ. ಶೌಚ=ಶುದ್ಧಿ. ಹಸ್ತಪಾದ ಪ್ರಕ್ಷಾಲನ ಮು.

ಪ್ರಾಚೇತಸ=ಪ್ರಚೇತಸ್ ಎಂಬ ಋಷಿಯ ಮಗ; ವಾಲ್ಮೀಕಿ. ಒಲ್ಮೆ+ಕಾಪು=ಪ್ರೀತಿಯ ರಕ್ಷಣ. ಎಳ್ತರದ ಬಲ್ಮೆಯೋ=ಹೆಚ್ಚಿನ ಸಾಮರ್ಥ್ಯವೇ. ನೋಂತೆಯೊ=ಪೂಜಿಸಿದೆಯೊ. ನೋನ್-ಧಾ=ವ್ರತವನ್ನಾಚರಿಸು.

(೨೯) ಬಳವಿ ಬಳೆ+ಅವಿ=ತಾರುಣ್ಯ; ಕೆಳವೆ=ಮುಪ್ಪು. ತಕ್ಕೊರ್ಮೆ=ಸ್ತುತಿ. ನೋಂಪಿ=ವ್ರತ. ಸೊಮ್ಮು= ಸುಖ.

ಕುಂಭಸಂಭವ=ಅಗಸ್ತ್ಯ. ಸ್ವರ್ಣ=ಚಿನ್ನ.

ಬ್ರಹ್ಮ=ಯಜ್ಞಕರ್ಮವು ವಿಧಿಯಂತೆ ನಡೆದಿದೆಯೋ ಇಲ್ಲವೋ ಎಂಬುವದನ್ನು ನೋಡುವದಕ್ಕಾಗಿ ಮೇಲೆ ಕುಳಿತ ಶ್ರೋತ್ರಿಯ ಬ್ರಾಹ್ಮಣ. ಆಚಾರ್ಯ. ಯಜಮಾನನಿಂದ ನಿಯುಕ್ತನಾಗಿ ಆತನು ಮಾಡಬೇಕಾದ ಹೋಮಾದಿ ಕಾರ್ಯಗಳನ್ನೆಲ್ಲ ಮಾಡುವ ಬ್ರಾಹ್ಮಣ.

ಅಧ್ವರ್ಯು=ಯಜುರ್ವೇದವನ್ನು ಬಲ್ಲ ಋತ್ವಿಜ. ಉದ್ಗಾತೃ=ಸಾಮವೇದವನ್ನು ಬಲ್ಲ ಋತ್ವಿಜ. ಹೋತಾರ=ತ್ಸ=ಹೋತೃ-ಋಗ್ವೇದವನ್ನು ಬಲ್ಲ ಋತ್ವಿಜ. ಋತ್ವಿಜ=ಯಜಮಾನನ ಸಲುವಾಗಿ ಹೋಮಕಾರ್ಯವನ್ನು ಮಾಡುವವ. ಬರೆದ+ಓಲೆಯಂ=ಬರೆದ ಪತ್ರವನ್ನು. ಛಪ್ಪನ್ನದೇಶ=೫೬ ದೇಶ. ಛಪ್ಪನ್ನ—ಎಂಬ ಮರಾಠಿ ಶಬ್ದವು ದೇಶಶಬ್ದದ ಹಿಂದೆ ಪ್ರಯೋಗಿಸಲ್ಪಡುವದು ಕನ್ನಡದಲ್ಲಿ ರೂಢಿಯುಂಟು. ಪೋದೊರೆದ=ಪೋಗಲ್ ತೊರೆದ. ನೆರಂಗೂಡುವ=ಸಹಾಯವಾಗಿ ಕೂಡುವ. ನಾಡ+ಎರೆಯ=ಅರಸು. ಕೊಟ್ಟಜ=ಕಪ್ಪ. ಪೊಣರ್ಕೆ=ಕಾಳಗ.

(೩೦) ಗೆಲ್ಲ (ಜಯ)+ಪೆಣ್=ಜಯಲಕ್ಷ್ಮಿ. ತೊಲ್ಲೆಯ=ಮಾಲೆ. ಕೀರ್ತಿರೂಪವಾದ ಮಾಲೆ. ಸೂಡಿ=ಮುಡಿಸಿ. ಆಂ, ತಾಂ ಎಂಬ ಆಕೆವಾಳರ (ಶೂರರ) ಜಂಗುಳಿ=ಸಮೂಹ. ಕಡೆಗಣ್ಬು=ಹೀಯಾಳಿಸು. ಹರಿಹರ...ಎಣೆ

ಸರ್ವೇ. ಕವಿಯು ತಾನು ಅದ್ವೈತ ಮತದವನೆಂಬುವದನ್ನು ತೋರ್ಪಡಿಸುವ ಉದ್ದೇಶ್ಯದಿಂದಾಗಲಿ, ಹರಿಹರ ಭೇದವನ್ನು ಮುಂದು ಮಾಡಿ ಕೆಲವರು ಹೋರಾಡುವದನ್ನು ನೋಡಿ ಅದು ಸರಿಯಲ್ಲವೆಂಬ ತನ್ನ ಅಭಿಪ್ರಾಯವನ್ನು ತೋರ್ಪಡಿಸುವ ಉದ್ದೇಶ್ಯದಿಂದಾಗಲಿ ಈ ವಾಕ್ಯವನ್ನು ಇಲ್ಲಿ ಸೇರಿಸಿರಬಹುದು ಪಶುಜೀವನ—ಪರರಿಗೆ ಕಷ್ಟ ಕೊಡದಂಥ ಉಪಜೀವನ; (ಪಶುಗಳಿಂದ ಯಾರಿಗೂ ತೊಂದರೆಯಿಲ್ಲ.) ವ್ಯಾಘ್ರಜೀವನ=ಪರರನ್ನು ಹಿಂಸಿಸಿ ಉಪಜೀವಿಸುವದು. (ಹುಲಿಗಳು ಬೇರೆ ಪ್ರಾಣಿಗಳನ್ನು ಕೊಂದು ಬದುಕುವವು). ವ್ಯಾಳಜೀವನ=ಪರರನ್ನೂ ಹಿಂಸಿಸುವದು, ತಾನೂ ತೊಂದರೆ ಪಡುವದು. ಪುತ್ತನ್ನು (ಹುತ್ತವನ್ನು) ಏರುವದೂ, ಹುಲ್ಲು ಕಚ್ಚುವದೂ, ಬಾಯಲ್ಲಿ ಬೆರಲನ್ನಿಟ್ಟುಕೊಳ್ಳುವದೂ ಶರಣಾಗತರ ಲಕ್ಷಣ. ಸೀತಾ + ಅವರಜ=ಸೀತೆಯ ತಮ್ಮ. ತಾಟಕೆಯು ಸ್ತ್ರೀಯಲ್ಲವೋ. ರಾಮಲಕ್ಷ್ಮಣರು ವಿಶ್ವಾಮಿತ್ರನ ಯಜ್ಞದ ಸಂರಕ್ಷಣಕ್ಕಾಗಿ ಹೊರಟಾಗ ದಾರಿಯಲ್ಲಿ ಈ ಹೆಸರಿನ ರಾಕ್ಷಸಿಯು ಎದುರಿಗೆ ಬಂದಳು. ಪರಹಿಂಸಕಳಾದುದರಿಂದ ಸ್ತ್ರೀಯಾದರೂ ರಾಮಚಂದ್ರನು ಅವಳನ್ನು ಕೊಂದನು.

ಭಾರ್ಗವ—ಪರಶುರಾಮನು ಬ್ರಾಹ್ಮಣನಲ್ಲವೆ? ಸೀತಾಸ್ವಯಂವರಾನಂತರದಲ್ಲಿ ರಾಮಚಂದ್ರನು ಅಯೋಧ್ಯೆಗೆ ಹೊರಟಾಗ ದಾರಿಯಲ್ಲಿ ಪರಶುರಾಮನು ತನ್ನ ಹೆಸರಿನ ಕ್ಷತ್ರಿಯನಾವನೆಂದು ಸಂಹರಿಸುವ ಬುದ್ಧಿಯಿಂದ ಎದುರಿಸಲು ರಾಮಚಂದ್ರನು ಆತನಲ್ಲಿರುವ ವಿಷ್ಣು ತೇಜಸ್ಸನ್ನೆಲ್ಲ ಅಪಹರಿಸಿ ಸೋಲಿಸಿದನು. ಆಗ ಪರಶುರಾಮನು ತಪಸ್ಸಿಗಾಗಿ ಹಿಮಾಲಯಕ್ಕೆ ಹೊರಟು ಹೋದನು.

ವಾಲಿ—ರಾಮಚಂದ್ರನು ವನವಾಸದಲ್ಲಿರುವಾಗ ಸುಗ್ರೀವನೊಡನೆ ಸಖ್ಯವನ್ನು ಮಾಡಿಕೊಂಡ ಬಳಿಕ ವಚನ ಕೊಟ್ಟ ಮೇರೆಗೆ ವಾಲಿಯನ್ನು ಕೊಲ್ಲಬೇಕಾಯಿತು. ಆಗ ವಾಲಿಸುಗ್ರೀವರಿಗೆ ಮಲ್ಲಯುದ್ಧ ಮಾಡಹೇಳಿ ಅವರು ಯುದ್ಧ ಮಾಡುತ್ತಿರುವಾಗ ರಾಮನು ದೂರದಿಂದ ವಾಲಿಗೆ ಬಾಣಹೊಡೆದು ಕೊಂದನು. ಇದು ಧರ್ಮಯುದ್ಧವಾಗಲಿಲ್ಲವೆಂದು ಲಕ್ಷ್ಮೀನಿಧಿಯು ಆಕ್ಷೇಪಿಸುತ್ತಾನೆ.

ತಾಂಡವ—ದರಶಥನು ಶಬ್ದವೇಧಿಯಾಗುವಷ್ಟು ಬಿಲ್ಗಾರಿಕೆಯಲ್ಲಿ ಜಾಣನಾದುದರಿಂದ ಜಲಪಾನಸಕ್ತಗಜಭ್ರಾಂತಿಯಿಂದ ಜಲಪೂರಣಸಕ್ತನಾದ ಒಬ್ಬ

ಮುನಿತನಯನನ್ನು ಕೊಂದನು. ತಾಂಡವನೆಂಬವನಾರೋ ತಿಳಿಯಲಿಲ್ಲ. ಮೂಲದಲ್ಲಿ “ **पित्रातव हतोविप्रः पितृभक्ति परायणः** ” ಎಂಬುದಾಗಿ ಒಬ್ಬ ಮುನಿತನಯನನ್ನು ಕೊಂದ ವಿಷಯವಾಗಿ ಆಕ್ಷೇಪಿಸಿದಂತೆ ಕಂಡುಬರುವದು.

ಶೂರ್ಪಣಖೆ—ಶೂರ್ಪ + ನಖ=ಮೊರದಂತೆ ಉಗುರುಗಳುಳ್ಳಾಕೆ. ರಾವಣನ ತಂಗಿ. ರಾಮಲಕ್ಷ್ಮಣರು ದಂಡಕಾರಣ್ಯದಲ್ಲಿರುವಾಗ ಈಕೆ ಬಂದು ರಾಮಲಕ್ಷ್ಮಣರಿಗೆ ಮೋಹಿತಳಾಗಿ ಕಾಮವಿಕಾರದಿಂದ ಪೀಡಿಸತೊಡಗಿದ್ದರಿಂದ ಲಕ್ಷ್ಮಣನು ಆಕೆಯ ಕಿವಿಮೂಗುಗಳನ್ನು ಹರಿದು ಕಳುಹಿದನು.

ಲವಣಾಂತಕ—ಲವಣನೆಂಬ ದೈತ್ಯನಿಗೆ ಯಮಶತ್ರುಘ್ನ. ರಾಮಚಂದ್ರನ ಪಟ್ಟಾಭಿಷೇಕವಾದ ತರುವಾಯ ಈ ದೈತ್ಯನು ಪೀಡೆಕೊಟ್ಟದ್ದರಿಂದ ರಾಮನ ಅಪ್ಪಣೆಯ ಮೇರೆಗೆ ಶತ್ರುಘ್ನನು ಹೋಗಿ ಈತನನ್ನು ಸಂಹರಿಸಿದನು. ಕುಂಬಿಡು=ನಮಸ್ಕರಿಸು. ತುಳಿಲ್ಗೆಯ್=ನಮಸ್ಕರಿಸು.

(೩೧) ಮಹಾರಥಿಕ=ಹತ್ತುಸಾವಿರಜನ ಬಿಲ್ಲಾರರೊಡನೆ ಏಕಕಾಲದಲ್ಲಿ ಯುದ್ಧಮಾಡಲು ಶಕ್ತಿಯುಳ್ಳವನೂ, ಶಸ್ತ್ರಾಸ್ತ್ರನಿಪುಣನೂ ಆದ ರಥಿಕನಿಗೆ ಮಹಾರಥಿಕನೆನ್ನುವರು. ಅಕ್ಷೌಹಿಣೀಸೇನೆ-೨೧೮೭೦ ಆನೆಗಳು, ೨೧೮೭೦ ರಥಗಳು, ೬೫೬೧೦ ಕುದುರೆಗಳು, ೧೦೯೩೫೦ ಕಾಲಾಳುಗಳು ಇಷ್ಟು ಉಳ್ಳ ಸೇನೆ.

ಪಳಹ, ಡೌಡೆ, ಮವುರಿ ಮೊದಲಾದವು ರಣವಾದ್ಯಗಳು. ರೇಣುಜಾತಂ=ಧೂಳಿಯ ಸಮೂಹವು. ಸತ್ತಿಗೆ-ತ್ಸ-ಛತ್ರಿಕಾ-ಕೊಡೆ, ಡಾಳಿಸು=ಬೀಸು. ಪಂತಿ-ತ್ಸ-ಪಂಕ್ತಿ. ಕಿಳಿರ್=ಹ್ರೇಷಿಸು. ಓರಣ-ಸಾಲು. ಕಡಿತಲೆ=ಒಂದು ತರದ ಕತ್ತಿ; ಸುರಗಿ=ಸಣ್ಣಕತ್ತಿ (ಕಠಾರಿ.) ಕೊಂತ-ತ್ಸ-ಕುಂತ. ಸೂಳ-ತ್ಸ-ಶೂಲ. ಮೂಡಿಗೆ=ಬತ್ತಳಿಕೆ. ದೆಕ್ಕಾಳ=ಆರ್ಭಟ. ಉಗ್ಗಡಣೆ=ದೊಡ್ಡದನಿ. ಜೋದ-ತ್ಸ-ಯೋಧ. ಮಾವತಿಗ=ಆನೆಯ ಮೇಲೆ ಹತ್ತಿದವ. ಗೋಳಾಯಿಲ-ತ್ಸ-ಘೋಟಾರೂಢ. ಅಶ್ವಾರೋಹಿ.

ವಿಷಯ=ದೇಶ. ತೋಡು + ಗಿರಡೆ=ಸಮಾನವೆಂದು ತಿಳಿಯುವೆ. ಗರಗರಿಕೆ=ಸೊಂಪು.

(೩೨) ಕಳಿವೂ=(ಕಳಿತ ಪೂ.) ಈ ಅಸುದೆಸೆಯುಂ (ದುಃಸ್ಥಿತಿಯನ್ನು) ಕಂಡು ಚಿಂತೆಯಿಂದ ಬೆಳರ್ತು (ಬೆಳ್ಳಗಾಗಿ) ನಂಟು ಮೊರೆಯ=ನಂಟುತನದ

ಸಂಬಂಧದ ಕಾಲ್ದೊರೆ=ಸಣ್ಣ ಪ್ರವಾಹ. ಪುಳಿಲ್‍ದೊರೆ=ಉಸುಕಿನತೊರೆ. ನೀರಿಲ್ಲದೆ ಉಸುಕು ಮಾತ್ರ ಉಳಿದದ್ದೆಂದು ಅರ್ಥ. ಸೀಕರಿವೋಗು=ಸುಟ್ಟು ಕರಕಾಗು. ಬೆಂದ ಸುಣ್ಣಂ=ಸುಟ್ಟ ಸುಣ್ಣ. ಮುಮ್ಮುರಿ=ಕಡಲೆಯು ಹುರಿಯುವಾಗ ಬೆರಸುವ ಮಳಲು; ಬಯಲ್ದೊರೆ=ಬಯಲಲ್ಲಿ ಕಾಣುವ ತೊರೆ-ಬಿಸಿಲ್ಗುದುರೆ, ಮೃಗಜಲ. ಗಳ-ತ್ಸ-ಗಲ; ಕಂಠ.

ಮುಂದೆ ಕೊಳವು ಕಾಣಿಸಿತು. ಅದರ ಸುತ್ತಲು ಬಿದುಗಲ್ಲ (ವಿಧು-ದ್ಭ-ಬಿದು+ಕಲ್=ಚಂದ್ರಕಾಂತಶಿಲೆ) ಪಾದವಟ್ಟಿಗೆ (ಪಾವಟ್ಟಿಗೆ) ಇತ್ತು. ಅದು ಅತಿಶಯ ಬೆಳ್ಳಗಿದ್ದದರಿಂದ ಚಂದ್ರರಿಂದ ಮಾಡಿದಂತೆ ಇತ್ತೆಂದು ವರ್ಣಿಸುವನು. ಹೊಸ ಹೊಸ ಚಂದ್ರರು ಉದಯಿಸುವರೆಂದು ಶ್ರುತಿಯಿರುವದರಿಂದ ಸೃಷ್ಟಿಯ ಆದಿಕಾಲದಿಂದ ಅನಂತ ಪೌರ್ಣಿಮೆಗಳಲ್ಲಿ ರಾಹುವು ಚಂದ್ರರನ್ನು ನುಂಗಿರುವನೆಂದೂ ಅವುಗಳನ್ನೆಲ್ಲ ಹೊರದೆಗೆದು ಮಾಡಿದಂತೆ ಇರುವದೆಂದೂ ವರ್ಣಿಸಿರುವನು. ತಾಳ್=ರಾಹು. ಪೇರೊಡಲ್=ಪಿರಿದು+ಒಡಲ್. (ಎಷ್ಟೋ ಚಂದ್ರರನ್ನು ನುಂಗಿರುವದರಿಂದ ಅವನ ಒಡಲು ಪಿರಿದಾಗಿರಬೇಕು.) ಬೆಳ್ವಕ್ಕ=ಬಿಳಿದು+ಪಕ್ಕ (ತ್ಸ-ಪಕ್ಷ)=ಶುಕ್ಲಪಕ್ಷ. ತುಂಬುವೆರೆ=ತುಂಬಿದ+ಪೆರೆ=ಪೂರ್ಣಚಂದ್ರ. ಒಟ್ಟೈಸು=ರಾಶಿಮಾಡು. ಮೂಸೆ (ತ್ಸ-ಮೂಷಾ) ಲೋಹಗಳನ್ನು ಕರಗಿಸುವ ಪಾತ್ರೆ. ಎರೆ=ಎರಕಹೊಯ್ಯು. ಏರಿ=ದಂಡೆ; ನಿಡುಮರಂಗಳ=ನಿಡಿಯವಾದ ಮರಗಳ ಇರುಂಬು=ದಟ್ಟಗೆ. ಬೆಳರ್ಮಣ್=ಬಿಳಿಯ ಮಣ್ಣು. ಬಿಳಿಯ ಮಣ್ಣಿನ ಕಡಾಯದೊಳಗೆ ನೀಲಿಯ ರಸವನ್ನು ತುಂಬಿದಂತೆ ಕಾಣುತ್ತಿತ್ತು. ಕಳಿಂದಜೆ=ಕಳಿಂದ+ಜೆ=ಯಮುನೆ. ಕಳಿಂದವೆಂಬುವದು ಹಿಮಾಲಯದಲ್ಲಿ ಒಂದು ಬೆಟ್ಟ. ಅಲ್ಲಿಂದ ಯಮುನಾನದಿಯು ಹೊರಟಿದೆ. ಕಾರಿರುಳ್=ಕತ್ತಲೆಯ ರಾತ್ರಿ. ರಯ್ಯ-ತ್ಸ=ರಮ್ಯ. ಕಮಲೆ=ಲಕ್ಷ್ಮಿ. ಕತ್ತುರಿಬೊಟ್ಟು=ಕಸ್ತೂರಿಯ ಹಣೆಬೊಟ್ಟು. ಪರಮೆ+ಮರಿ=ತುಂಬಿಯ ಮರಿ. ಕೋಶ=ಬೀಜಕೋಶ. ಬಿಳ್ತುಗೆತ್ತು=ಬೀಜವೆಂದು ಭಾವಿಸಿ. ಕರ್ದಂಕು (ಶಿಥಿಲೋಚ್ಚಾರ.)=ಕುಕ್ಕು. ಅವ್ವಳಿಸು=ಆತುರಪಡು, ಚಲಿಸು. ಬಿಗುರ್ಪಿಂ=ಅಂಜಿಕೆಯಿಂದ. ಅಲೆಪ=ಸಂಚಾರ. ಅಲೆ-ಧಾ.+ಪ. ಪಗಲ್+ಪೆಣ್=ದಿನಲಕ್ಷ್ಮಿ. ಕೈಪಿಡಿ=ಕನ್ನಡಿ.

ಸುಗ್ಗಿ=ವಸಂತ. ಪೊನಲ್ (ಪ್ರವಾಹ)+ಪರಿ=ಕೋಡಿಬಿದ್ದು ಹರಿ. ಹೊಸ್ಕರಣಿ-ತ್ಸ=ಪುಷ್ಕರಿಣಿ. ಚೆಂಬೊಗರ್=ಕೆಚ್ಚನೆ+ಪೊಗರ್=ಕೆಂಪುಕಾಂತಿ.

(೩೩) ಚೆನ್ನಸುಗೆ=ಕೆಚ್ಚನೆ ಅಸುಗೆ(ತ್ಸ=ಅಶೋಕ) ಕೆಂಪು ಅಶೋಕದ ಮರ. ಪೊಲ್=ಹೊಲಿ. ಸಮಕಟ್ಟು=ರಚಿಸು. ಮಲಂಗು=ಲೋಡು. ಅಡಿಪಿಡಿದು ಮುಡಿವರೆಗಂ=ಬೊಡ್ಡೆಯಿಂದ ತುದಿಯವರೆಗೆ. ಬಕ್ಕೆವಲಸು=ಹಲಸಿನ ಒಂದು ಜಾತಿ. ಇನಿಯನಪ್ಪ ಇನನ. ಪೊನ್+ಕಳಸ. ಸುಲಿಪಲ್ ಸುಲಿದ+ಪಲ್=ತಿಕ್ಕಿದ ಹಲ್ಲು. ಅರೆ+ಬಿರಿದ. ಮಧುಲಕ್ಷ್ಮಿ=ವಸಂತಲಕ್ಷ್ಮಿ. ದೀವಿಗೆ+ಕಂಬ=ದೀಪದ ಕಂಬ. ಉಳ್ಳಲರ್=ಅರ್ಧ ವಿಕಾಸವಾಗು. ನನೆ+ಏರು=ಮೊಗ್ಗೆ ಬಿಡು. ಅಳುಂಬ=ಅಧಿಕ; ಬನಗಾಳಿಯು ಕಂಪಿನಿಂದ ಬೆರೆದು, ನರುಮಿಂ (ಸುವಾಸನೆಯಿಂದ) ಪೊರೆದು, ಸೌಸವದಿಂ ನೆರೆದು, ಅದರ್ಗಂತಿ (ಒಂದು ಲತೆ)ಯನ್ನು ತಟ್ಟಿ(ಮುಟ್ಟಿ) ಮಾಧವಿ (ವಾಸಂತೀಲತೆ)ಯನ್ನು ಮುಟ್ಟಿ ಬೀಸಿತು. ನಿರಿಗ=ಇಮ್ಮಾವು=ಸಂಸ್ಕೃತದಲ್ಲಿ —ರಸಾಲ. ಕಾರ=ಮಳೆಗಾಲದ. ಕರ್ಮುಗಿಲ್=ಕರಿಯ ಮೋಡ. ಮೇಳಂಬ=ತುಂಬಿ. ಪೂ+ತೊಂಗಲ್=ಹೂಗೊಂಚಲು. ಪನಿವ=ಸೋರುವ. ತನಿಜೇನ್=ಸವಿಯಾದ ಮಕರಂದ. ಸೋನೆ=ಸಣ್ಣ ಮಳೆ. ಕಾರ್+ಗೆತು=ಮಳೆಗಾಲವೆಂದು ಭಾವಿಸಿ. ಮಳೆಗಾಲವು ನವಿಲುಗಳಿಗೆ ಆನಂದದಾಯಕವು.

ಮಾಧವ=ವಸಂತ.

ಕಿಸು+ಪೊನ್=ಚಿನ್ನ. ಪಿಂಜರಿ=ಬೆಳ್ಳಿ. ಚಂದವ=ತ್ಸ=ಚಂದ್ರಮಸ್. ಮೂವಳಸು=ಮೂರು+ಬಳಸು=ಮೂರು ಸುತ್ತು. ಕರ್ಮಣಿ=ನೀಲರತ್ನ. ಪಳಿಕು=ತ್ಸ=ಸ್ಫಟಿಕ. ದಾರವಂದ=ತ್ಸ=ದ್ವಾರಬಂಧ, ಚೌಕಟ್ಟು. ಪಡಿ=ಕದ ಮಣಿಸತ್ತಿಗೆ=ರತ್ನ ಖಚಿತವಾದ ಕೊಡೆ, ಮೊಗಮಂಟಪ=ಮುಖಮಂಟಪ.

(೩೪) ಅವಳಗುಳಿಯು=ಅವಳ್+ಅಗುಳಿಯು=ಜೋಡು ಅಗುಳಿಯ ನಂದ್ಯಾವರ್ತ=दक्षिणानुगतालिंदत्रयं यत् पार्श्वपामुखम। पूजनीयोत्त रच्छायं नंद्यावर्त वर्द्धन्त तत। ಈ ಲಕ್ಷಣದ ನೃಪಾದಿಗೃಹ ವಿಶೇಷ. ತೋರಣ=ಹೊರಬಾಗಿಲು.

ಅಲಂಪು=ಸಂತೋಷ. ಚೊಕ್ಕಳ=ಸ್ವಚ್ಛತೆ. ಮುತ್ತಮಂತು=ಮುದುಕನಾದ ಮಂತ್ರಿ. ಬೆಂಚೆ=ಕೆರೆ. ಏವಂದಳ್=ಎಂ+ಬಂದಳ್=ಏಕೆ ಬಂದಳು.

ತರಗೆಲೆ=ಒಣಎಲೆ. ಗೆಂಟು=ದಿಕ್ಕು. ಮೆಯ್ಗಣ್ಣ=ಮೆಯ್ಯೊಳ್ ಕಣ್ಗಳ್ ಅವಂಗೆ ಅತಂ; ಇಂದ್ರ. ಗೌತಮ ಮುನಿಯ ಶಾಪದಿಂದ ಇಂದ್ರನ ಮೈ ಮೇಲೆ ರಂಧ್ರಗಳಾಗಲು ಮುಂದೆ ಅವೇ ಕಣ್ಣುಗಳಾದವು. ತರಿಸಂದು=ನಿಶ್ಚಯಿಸಿ. ಅವ

ವೊರೆ=ಯಾವ ಸಂಬಂಧ. ಬೇಳ್ವ=ಹೋಮಮಾಡುವ. ಬೋಳೆಯರ್=ದೇವತೆಗಳು. ಜೋಗ+ಬಟ್ಟೆ=ಯೋಗ ಮಾರ್ಗ.

(೩೫ ಕಣ್+ಆರೆ=ಕಣ್ಣು ತೃಪ್ತಿಬಡುವಂತೆ. ಮೂಗವಲಿಂ=ಮೂರು ಕವಲುಗಳಿಂದ-ಸರಸ್ವತಿ, ಲಕ್ಷ್ಮಿ, ಪಾರ್ವತಿ ಎಂಬ ಭೇದದಿಂದ.

ಒಡಮೆ=ಒಡೆಯ+ಮೆ=ಒಡೆತನ.

(೩೬) ಎಳ್ಬಟ್ಟೆ=ಓಡಿಸಿ.

ಬಿರ್ದು=ಔತಣ. ಸೇವಾಳ=ಉಡುದಾರ. ಅಗ್ಗಿವೊಗ=ತ್ಸ-ಅಗ್ನಿಮುಖ=ದೇವತೆ. ಅಗ್ನಿಯಲ್ಲಿ ಹೋಮ ಮಾಡಿದ್ದನ್ನು ಭುಂಜಿಸುವದರಿಂದ ದೇವತೆಗಳಿಗೆ ಅಗ್ನಿಯೇ ಬಾಯಿ. ಬಾಣಸು=ಅಡಿಗೆ. ನರು + ನೆಯ್=ಸುವಾಸನೆಯ ಹವಿಸ್ಸು. ಬಲಿ + ಕೂಳ್=ಬಲಿಯ ಅನ್ನ.

(೩೭) ಬಾಸೆವಕ್ಕಿ=ಮಾತಾಡುವ ಹಕ್ಕಿ, ಗಿಳಿ. ಸಗ್ಗದ ಆವಂ=ಸ್ವರ್ಗದ ಆಕಳನ್ನು, ಕಾಮಧೇನುವನ್ನು. ಎಡೆಗೆಯ್ದು=ಸ್ಥಾನವನ್ನು ಮಾಡಿ. ಏಗಳ್ + ಎಂತು + ಏಂ. ಜಂಟಿದೇವರ್=ಜೋಡಿಯಾಗಿರುವ ದೇವತೆಗಳು= ಅಶ್ವಿನೀ ಕುಮಾರರು.

ಹೂನ್ಯ-ತ್ಸ=ಪುಣ್ಯ. ಮೊಗಸು=ಆರಂಭಿಸು. ಗರವಟ್ಟೆ=ಯಜ್ಞ. ನೋಳ್=ಮುಂದೆಹೋಗು, ಹೊಗು. ವೈಶ್ವಾನರ=(ಎಲ್ಲ ಮನುಷ್ಯರಿಗೆ ಸಂಬಂಧಿಸಿದವ) ಅಗ್ನಿ. ಮರ್ಬು=ತಮಸ್ಸು, ರಾಕ್ಷಸ. ಜಂಕಣೆ=ಬೆದರಿಕೆ. ಅಂತರ್ವತ್ನಿ=(ಅಂತರ್+ವತ್ + ನಿ) ಗರ್ಭಿಣಿ. ಪತಿಪರಾಯಣೆ=ಪತಿ + ಪರ + ಅಯನ=ಪತಿಯೇ ಎಲ್ಲಕ್ಕೂ ಹೆಚ್ಚಿನ ಗತಿಯು ಯಾವಳಿಗೋ ಆಕೆ, ಪತಿವ್ರತೆ. ಭಯ+ಉದ್ವಿಗ್ನೆ=ಅಂಜಿಕೆಯಿಂದ ವ್ಯಾಕುಲಳು.

(೩೮) ಕರುತ್ತ+ಉರಿದು=ಮತ್ಸರಿಸಿ, ಸಂತಾಪಗೊಂಡು. ರಕ್ಕೆ-ತ್ಸ=ರಕ್ಷಾ. ಮರುಳ್=ಪಿಶಾಚ, ರಾಕ್ಷಸ. ತೋರಿದೆನಲ್ಲ=ತೋರಿದೆನಲ್ಲದೆ. ಆಣ್ಮ=ಒಡೆಯ. ಪಿಡಿದುದಂ ಗಿಡಿದುಂ=ಹಿಡಿದದ್ದನ್ನು ನುಂಗಿದರೂ, ಮುಟ್ಟಿದ್ದನ್ನು ಸುಟ್ಟು ಬೂದಿ ಮಾಡಿದರೂ. ಮಡಿ=ಶುದ್ಧ. ಚ್ಯವನ=ಚ್ಯು-ಧಾ=ಜಾರಿದವ. ಏರುಂಬೆರೆ–ಏರುವ+ಪೆರೆ=ಬೆಳಿಗೆಯ ಚಂದ್ರ. ಬಳವಿ-ಬಳೆ+ಅವಿ=ಬೆಳಿಗೆ. ಬೆಳೆ ಧಾತುವನ್ನು ಸಸ್ಯಗಳ ಅಭಿವೃದ್ಧಿಯಲ್ಲಿಯೂ, ಬಳೆ ಧಾತುವನ್ನು ಸಸ್ಯ ಭಿನ್ನ ಪ್ರಾಣ್ಯಾದಿಗಳ ಅಭಿವೃದ್ಧಿಯಲ್ಲಿಯೂ ಪ್ರಯೋಗಿಸುವರು. ಸಾಂಗ=ಅಂಗಗಳಿಂದ ಸಹಿತವಾದ. ವೇದಾಂಗ

ಗಳು=ಶಿಕ್ಷೆ, ಕಲ್ಪ, ವ್ಯಾಕರಣ, ನಿರುಕ್ತ, ಜ್ಯೋತಿಷ, ಛಂದಸ್ಸು ಎಂಬ ಆರು. ಮುಯ್ಪು=ಹೆಗಲು. ಬಳಲ್ವಂದರ್=ಬಳಲ್ದಪಂದರ್ (ಹಂದರ) ಪೊನ್+ಬೆಟ್ಟ=ಮೇರುಪರ್ವತ. ತಳ್ಪಲ್=ತಪ್ಪಲು.

ರೇವಾ=ನರ್ಮದೆ. ಕ್ಷೇತ್ರವಿಧಿ=ಕ್ಷೇತ್ರದಲ್ಲಿ ಮಾಡಬೇಕಾದ ಧರ್ಮಕೃತ್ಯ; ಎಣೆವರೆಯ–ಎಣೆ+ಪರೆಯ (–ತ್ಸ ಪ್ರಾಯ)=ಸಮವಯಸ್ಸು. ಗೆಡೆ=ಗೆಳೆ, ಸ್ನೇಹ. ತೆತ್ತಿಸು-ಹತ್ತಿಸು; ಸೆಳೆ=ಬೆತ್ತ, ಸಲಾಕೆ.

(೩೯) ಉಲ್ಕಾಪಾತ=ಆಕಾಶದಿಂದ ತಾರೆಗಳು ಬೀಳುವದು. ಸರಿ=ಮಳೆ. ಗೋರೆ=ಸೂಸಲು. ಉತ್ಪಾತ=ಭಾವಿ ಅನಿಷ್ಟಸೂಚಕ ಭೂಕಂಪಾದಿ ದೈವಿಕ ನಿಮಿತ್ತ. ಅಡಿ=ಮೂಲ, ಕಾರಣ. ಕವಲ್ವರಿ=ಎರಡು ಭಾಗವಾಗಿ ಹರಿ. ಕುರಿಮಾನಿಸನೆಂ=ಕ್ಷುದ್ರ ಮನುಷ್ಯನು. ಆಧಿ=ಮಾನಸಿಕ ವ್ಯಥೆ. ವ್ಯಾಧಿ=ಶಾರೀರಿಕ,ರೋಗಾದಿ; ಕೋಳುವೋಗು=ಸೂರೆಯಾಗಿ ಹೋಗು. ಮರೆಗೊಳ್=ಶರಣುಹೋಗು, ಎಮತು=ಎಮ್ಮದು ಎಂಬುದರ ರೂಪ.

ತುಂಬು+ಬಳಗ=ತುಂಬಿದ ಬಳಗ. ತವಿಸು=ಸೊರಗಲು.

(೪೦) ಪಳು+ಮಾನಿಸ=ಅಡವಿಯ ಮನುಷ್ಯ. ಅಸಿಯೊಡಲ್=ನಾಜೂಕಾದ ಶರೀರ. ಸಸಿನ=ಕಷ್ಟ. ಸೋರ್ಮುಡಿ=ಬಿಚ್ಚಿದ ಹೆಳಲು. ಬೀಳ್=ಸಸಿ. ಕೈಸೆ=ಪಾಪಿಷ್ಠ. ಪೆಣ್ ಒಡಮೆ ಇದು ನ್ಯಾಸಂ ಅಲ್ತೇ=ಕನ್ಯಾರೂಪವಾದ ಒಡವೆಯು ಇಡುಗಂಟು ಅಲ್ಲವೇ; अर्थो हि कन्या परकीय एव ಎಂದು ಕಾಲಿದಾಸನು ಹೇಳಿರುವನು. ಕೊಡೆಗೂಸು=ಕೊಡುವ ಕೂಸು, ಹೆಣ್ಣು. ತಿರಿ+ಕುಳಿ=ಭಿಕ್ಷುಕ. ಅರವೆಂಡಿರ್=ಅರಸು + ಪೆಂಡಿರ್=ಅರಸರ ಹೆಂಗಸರು.

ಮಾನವಿ=ಮನುಕುಲದಲ್ಲಿ ಹುಟ್ಟಿದಾಕೆ.

(೪೧) ಬರ್ದಿಲ+ಬೆಜ್ಜ (ತ್ಸ-ವೈದ್ಯ)=ದೇವಲೋಕದ ವೈದ್ಯ. ಅಶ್ವಿನೀಕುಮಾರರು. ಸುರಪ=ಇಂದ್ರ. ಪಂತಿ-ತ್ಸ=ಪಂಕ್ತಿ. ಬೇಳಲ್=ಹೋಮಮಾಡಲು. ಕೈವೊಯ್ದಂ=ಕೈಮೇಲೆ ಕೈಹಾಕಿದನು. ಬೆಂಚೆ=ಕೆರೆ. ಅಳ್ದು=ಅದ್ದು. ಮುಳುಗಿಸು. ಪಡಿವರಿಜು=ಪ್ರತಿಕೃತಿ. ಪೊನ್+ಪಾಪೆ=ಚಿನ್ನದ ಗೊಂಬೆ. ಬಿಚ್ಚಳಿಸು=ವಿಂಗಡಿಸು; ಹರಡು. ಒಳನೋಟ=ಅಂತಜ್ಞಾನ. ಕರುವಿಟ್ಟ=ಎರಕಹೊಯ್ದು. ಕಡವರ=ಚಿನ್ನ. ರೂವು (ತ್ಸ-ರೂಪ) + ಎಸೆ. ಯೂಥನಾಥ=ಸಲಗ. ಪುರೋಧಸ=ಪುರೋಹಿತ.

(೪೨) ಪಾವುಡೆ=ಉಡುಗೊರೆ. ಸೂಳ=ಜಾರ.

ಪೂಣ್+ಕೆ=ಪ್ರತಿಜ್ಞೆ. ಅಮಳ್ (ತ್ಸ-ಯಮಲ=ಅವಳಿಜವಳಿ)+ದೇವರ್= ಅಶ್ವಿನೀ ಕುಮಾರರು; ಇವರು ಅವಳಿಜವಳಿಯಾಗಿ ಹುಟ್ಟಿದವರು. ಸಂಜ್ಞೆಯೆಂಬ ಸೂರ್ಯಪತ್ನಿಯು ಹೆಣ್ಣು ದುರೆಯಾಗಿರಲು ಅವಳಲ್ಲಿ ಅಶ್ವರೂಪವನ್ನು ಧರಿಸಿದ ಸೂರ್ಯನಿಂದ ಹುಟ್ಟಿದ ಕುಮಾರರು. ಕುರುಂಬು=ಮತ್ಸರಪಡು. ಬಜ್ಜರ (ತ್ಸ-ವಜ್ರ) + ಕೈದು=ವಜ್ರಾಯುಧ.

ಮುಡಿ=ಮುರಿ, ನಾಶವಾಗು.

(೪೩) ಎಡೆ+ಕೆಡೆದು=ಸಮೀಪದಲ್ಲಿ ಎರಗಿ. ಅರಿಕೆ=ತಿಳುವಳಿಕೆ, ಪ್ರಸಿದ್ಧಿ. ನಿಟ್ಟಿಸು=ನೋಡು.

ಬದ್ದಬದಸು=ಬದ್ಧದ್ವೇಷ. ಬಿಂದ-ತ್ಸ=ವೃಂದ; ಸಮೂಹ. ಬಾಂದಳ-ಬಾನ್+ತಳ=ಆಕಾಶ ಸ್ಥಳ.

(೪೪) ಏವೊಳ್ತುಂ—ಆವುದು + ಪೊಳ್ತು + ಉಂ=ಯಾವಾಗಲೂ. ಪಾಸರೆ=ಪಾಸು+ಅರೆ=ಹಾಸುಗಲ್ಲು. ಪೋಳ್ + ಕಡಿ + ಪೋದ=ಹೋಳಾಗುವಂತೆ ಛೇದನಹೊಂದಿದ. ಜಾದು=ಗೈರಿಕಾದಿಧಾತು; ಪಡಿದಿಂಗಳ್=ಪ್ರತಿಚಂದ್ರ. ಬೆಟ್ಟುವಗೆಯ—(ಬೆಟ್ಟು+ಪಗೆ+ಅ) ಪರ್ವತದ್ವೇಷಿ=ಇಂದ್ರ. ಪಗೆಯಿಂ=ವೈರದಿಂದ. ಕುಳಿಸ-ತ್ಸ-ಕುಲಿಶ=ವಜ್ರಾಯುಧ. ಕಡಿಕಂಡ=ತುಣುಕು. ಅಚ್ಚ + ಪಳಿಕು=ಸ್ವಚ್ಛ ಸ್ಫಟಿಕ. ಗಂಡಶೈಲ=ಪರ್ವತದಿಂದ ಉರುಳಿದ ಬಂಡೆ. ಬಾಣಸು=ಅಡಿಗೆ. ಸಿದ್ಧರಸ=ಪಾರದದಿಂದ ಸಿದ್ಧವಾದ ರಸ. ಪರುಸ (ತ್ಸ-ಸ್ಪರ್ಶ) ಕಲ್=ಸ್ಪರ್ಶಶಿಲೆ. ಇದರ ಸ್ಪರ್ಶವಾದರೆ ಲೋಹಗಳು ಸುವರ್ಣವಾಗುವವೆಂದು ಆಖ್ಯಾಯಿಕೆಯಿದೆ.

ಕರ್ವಟ್ಟೆ=ಕರಿದು ಬಟ್ಟೆ. ಕಾರೊಡಲ=ಕರಿಯ ಮೈಯು; ಪುತ್ತೆನೆ=ಪುತ್ತು+ಎನೆ; ಬವಸು-ತ್ಸ=ವ್ಯವಸಾಯ; ಬೆಸನ-ತ್ಸ=ವ್ಯಸನ. ತನ್ನ ಅರಮಂ=ಧರ್ಮವನ್ನು. ಬಳಿವೋಕ=ಸಮೀಪದಲ್ಲಿ ಹೋಗುವವ. ಕೂಸು=ಹೆಣ್ಣು; ಸಾರೂಪ್ಯ=ಸಮಾನವಾದ ಆಕಾರ. ಸಂಕು-ತ್ಸ=ಶಂಖ. ಬಟ್ಟೆ + ಕೈದು=ಚಕ್ರಾಯುಧ. ಗಜೆ-ತ್ಸ=ಗದಾ.

ಕಾಂಚೀದಾಮ=ಉಡೆಸೂಲು, ಸೊಂಟಕ್ಕೆ ಕಟ್ಟುವ ಪಟ್ಟಿ.

(೪೫) ಕೈದು + ಪೊತ್ತರ=ಆಯುಧಧಾರಿಗಳ. ಅಟ್ಟೆ=ದಡ, ದೇಹ. ಬೀರಸಿರಿ-ತ್ಸ=ವೀರಶ್ರೀ. ಅಣಿಯರಂ=ಅಧಿಕವಾಗಿ. ಏರುಂಜಸ-ಏರುವ+ಜಸ=ಅಭಿವರ್ಧಮಾನವಾದ ಕೀರ್ತಿ. ಸಿರಿವೊಳ್ತು=ಪ್ರಾತಃಕಾಲ. ಎನಿತು+ಪಿರಿದೊ=ಎನಿವಿರಿದೊ. ಮಾಯೆದಾವು=ಮಾಯಾಪಾಶ. ಆಂ ಎನಗೆ ಎಂಬ ಬೆಮೆ (ತ್ಸ-ಭ್ರಮ) ನಾನು, ನನಗೆ ಎಂಬ ಭ್ರಾಂತಿ. ಬರುವಾಳ್ಕೆ=ಬರಿದು + ಬಾಳ್ಕೆ.

ಮದುರ್ಣಿಸು=ಔಷಧದ (ಪಥ್ಯದ) ಊಟ. ದೇಶಿಗ=ಉಪದೇಶಕ, ಗುರು. ಬೆಳರ್ಮೆಯ್ಯಂ=ಬಿಳಿಯ ದೇಹವನ್ನು. ಪಕ್ಕಿದೇರ, ಪಕ್ಕಿ ತೇರ್ ಆವಂಗೆ=ಗರುಡವಾಹನ, ವಿಷ್ಣು. ಬಾಂಬೊಚ್ಚದಲೆಯ ಬಾನ್+ಪೊಚ್ಚಂ (ಆಕಾಶದ ಹೊಳೆ, ಗಂಗೆ) ತಲೆಯೊಳ್ ಆವಂಗೆ=ಗಂಗಾಧರ, ಶಿವ.

(೪೬) ಪೊಂಬಸಿರ=ಪೊನ್ (ಸುವರ್ಣಾಂಡವು) ಬಸಿರ್ (ಗರ್ಭವು, ಉತ್ಪತ್ತಿಸ್ಥಾನವು) ಆವಂಗೆ. ಸುವರ್ಣಮಯವಾದ ಅಂಡದಿಂದ ಬ್ರಹ್ಮನು ಹುಟ್ಟಿದನು. तदण्डमभवद्धैमं सहस्रांशुसमप्रभम् । तस्मिन् जज्ञे स्वयं ब्रह्मा सर्वलोकपितामहः । इति मनुः । ಪುಟ್ಟು ಕಟ್ಟುಗೆಟ್ಟುದು=ಜನ್ಮವು ತಪ್ಪಿತು; ಪುಟ್ಟು+ಉಳಿವು+ಅಳಿವು=ಹುಟ್ಟು ಬದುಕು ಸಾವು. ಒಡಲೆಂಬ ಓಡ (ತೆಪ್ಪ). ಪುಟ್ಟು=ಹುಟ್ಟು ಹರಗೋಲಿಗೆ ನೀರು ಕಡಿಯುವ ಸಾಧನ.

ಮೂರುಂಗವಲ=ಮೂರು ಕವಲುಗಳುಳ್ಳ. ಶ್ರೀವೈಷ್ಣವರ ನಾಮವು ಮೂರು ಕವಲುಗಳುಳ್ಳದ್ದು ಇರುವದು. ಪಕ್ಕಣ=ಬೇಡರ ಹಳ್ಳಿ. ಕಿಳ್ಬರಿ=ಕಿಬ್ಬರಿ; ಕೆಳಭಾಗ. ದೇವಾರ-ತ್ಸ=ದೇವಾಗಾರ. ಬಾಜಣೆ-ತ್ಸ=ವಾದನ. ಗಂದರ-ತ್ಸ=ಗಂಧರ್ವ, ಗಾಯನ. ಕುಂಚ=ಚಾಮರ; ಬಿಜ್ಜಣಿಗೆ-ತ್ಸ=ವ್ಯಜನಿಕಾ-ಬೀಸಣಿಕೆ. ಸಿಕ್ಥಕ=ಅನ್ನದ ಅಗಳು; ತುತ್ತು.

(೪೭) ಬಂದಭವದ=ಈಗ ಬಂದಿರುವ ಜನ್ಮದ; ಅಣಿ=ಸಜ್ಜು, ಸಿದ್ಧತೆ.

(೪೮) ಕೋಳ್ಕೆಸರ್=ಕೋಡುವ ಕೆಸರ್, ತಂಪಾಗಿರುವ ಕೆಸರು. ಮೆಯ್ಗರ್ಚಲ್=ಮೆಯ್ಯನ್ನು ತೊಳೆದುಕೊಳ್ಳುವದಕ್ಕೆ. ಸಾಳಿಗ್ರಾಮಂ=ಸಾಲಗ್ರಾಮ, ಶಾಲಿಗ್ರಾಮ, ಶಾಲಗ್ರಾಮ ಮೊದಲಾದ ಹಲವು ರೂಪಗಳು ಕಂಡುಬರುವವು. ಶಾಲಗ್ರಾಮ ಪರ್ವತದಲ್ಲಿ ಹುಟ್ಟಿದ ವಿಷ್ಣು ಸಾನ್ನಿಧ್ಯವುಳ್ಳ ಶಿಲೆ ಎಂದು ಶಾಲಗ್ರಾಮ ಶಬ್ದದ ವ್ಯುತ್ಪತ್ತಿ. ಅರ+ಗ್ರಾಮ=ಚಕ್ರಸಮೂಹ; ಸ + ಅರಗ್ರಾಮ=ಚಕ್ರಸಮೂಹದಿಂದ ಕೂಡಿದ್ದು. ರೇಫಸ್ಥಾನದಲ್ಲಿ ಲಕಾರವು ಬಂದು ಸಾಲಗ್ರಾ

ಮ ಎಂದಾಯಿತೆಂದು, ಸಾಲಗ್ರಾಮ ಶಬ್ದದ ವ್ಯುತ್ಪತ್ತಿಯನ್ನು ಹೇಳುವರು.

ಒಗೆತನ=ಬಾಳುವೆ. ಪೇಳ್ದ+ಅರನಂ. ವೊತ್ತ=ರಾಶಿ. ನೇರಿದರ್=ಬಳ್ಳಿಯವರು.

(೪೯) ನಾಲಗೆ-ನಾಲ್ಕು ಅಗೆ=ನಾಲ್ಕು ಅಕ್ಷರರೂಪವಾದ ಅಂಕುರಗಳು. ಕ್ಷೇತ್ರಸಂಖ್ಯೆ=೧೨. ಮೇಷಾದಿ ರಾಶಿಗಳಿಗೆ ಕ್ಷೇತ್ರವೆಂಬ ಹೆಸರಿರುವದರಿಂದ ರಾಶಿ ಸಂಖ್ಯೆ ಹನ್ನೆರಡು.

ಸಬುದ-ತ್ಸ=ಶಬ್ದ. ಗಂಗಾಸಾಗರ ಸಂಗಮ=ಗಂಗೆಯು ಸಮುದ್ರಕ್ಕೆ ಕೂಡಿದ ಸಂಗಮಸ್ಥಾನ.

ನೀರವೆಣ್ಣ ಜಾಣ್ಮೆ=ರನ್ನಬಂಡಾರಿಯನ್ನೇ, ರತ್ನಾಕರನನ್ನೇ ಹುಡುಕಿ ಬೆರೆದಿರುವದು ಜಾಣ್ಮೆ. ನೀರವೆಣ್=ನದಿ.

(೫೧) ಮಿಂಟೆ=ಗುಂಡುಕಲ್ಲು; ಅಂಟುವಲೆ ವೊದಲಾದುವು ಬಲೆಯ ಪ್ರಕಾರಗಳು. ಜಾಯಿಲ=ನಾಯಿ; ಕುತ್ತುರು=ಹೊದರು. ಮರೆ=ಚಿಗರಿ.

ಕುತ್ತು=ಘಾತಿಸು.

ಅಡಗು=ಮಾಂಸ; ಬಸೆ-ತ್ಸ=ವಸಾ; ನೆಣ.

ಬಾಳ-ತ್ಸ=ಭಾಲ; ಹಣೆ. ಏರುಗೊಂಡ=ಗಾಯಹೊಂದಿದ; ಎಕ್ಕಲ=ಹಂದಿ; ಪಂದೆ=ಹೇಡಿ; ಬೆರ್ಚು=ಬೆದರು; ಹೊಲಗಳಲ್ಲಿ ಹಕ್ಕಿ ವೊದಲಾದವುಗಳ ಅಂಜಿಕೆಗಾಗಿ ನಿಲ್ಲಿಸಿದ ಹುಲ್ಲಿನಿಂದ ಮಾಡಿದ ಪುರುಷಾಕೃತಿ. ಬೆದರ್ಚು=ಅಂಜಿಸು. ಪೆರ್ಕಳಿಕೆ=ಹೆಚ್ಚಳ.

(೫೨) ಎಕ್ಕತುಳ=ಒಂದೇ ಹೋಲಿಕೆ; ಏಕಶಬ್ದಕ್ಕೆ ಎಕ್ಕ ಎಂಬ ರೂಪವಾಗುವದು. ಕೆಕ್ಕೆ=ಕೆನ್ನೆ.

ದಾವು-ತ್ಸ=ದಾಮ; ಟಾವು-ತ್ಸ=ಸ್ಥಾನ; ಪ್ರಾಣವು ಬೇಡಾದವರು ಉರ್ಲು ಹಾಕಿಕೊಳ್ಳುವರು; ಬಾವಿ ವೊದಲಾದ ಜಲಾಶಯಗಳಲ್ಲಿ ಹಾರುವರು; ನಾಲಿಗೆ ನಿಡಿದಾದರ್ಗೆ=ಬಿರುನುಡಿಗಳನ್ನಾಡುವವರಿಗೆ. ಬಿರುನುಡಿಯುವರಿಗೆ ನಾಲಿಗೆ ಉದ್ದವಾಗಿದೆಯೇ ಎಂದು ಕೇಳುವದುಂಟು.

(೫೩) ಸಬಳಿಗ=ಸಬಳ+ಇಗ; ಸಬಳ ಎಂಬ ಆಯುಧ ಹಿಡಿದವ; ಹರಿಗೆ=ಗುರಾಣಿ; ರಾವುತ=ಅಶ್ವಾರೋಹಿ. ಸಾದಿ=ಗಜಾರೋಹಿ, ಮಾವುತ. ತುಳಿಲಾಳ್=ವೀರ. ಕೊಂಚೆಗಟ್ಟು=ಕ್ರೌಂಚಪಕ್ಷಿಯ ಆಕಾರದ ವ್ಯೂಹ.

ಅರುಮೊಗ=ಆರು ಮೊಗಗಳುಳ್ಳವ ಷಣ್ಮುಖ.

ಕೇಶಾಕೇಶಿ=ಒಬ್ಬರ ಕೂದಲುಗಳನ್ನೊಬ್ಬರು ಹಿಡಿದು ಮಾಡುವ ಯುದ್ಧ.

(೫೪) ಕಡಿಯೆಲ್=ಕಡಿದ ಎಲುವು. ಒಗ್ಗು=ರಾಶಿ. ಪಂದೊವಲ್=ಪಚ್ಚನೆ+ತೊವಲ್=ಹಸಿದೊಗಲು. ಚಾರ್=ಚರ್ಮವನ್ನು ಹರಿ. ಕಿತ್ತಿಲಿ+ಕಿರಿದು=ಇಲಿ; ಸಣ್ಣ ಇಲಿ. ಕೊತ್ತಿ=ಬೆಕ್ಕು. ಸಣ್ಣ ಇಲಿಯನ್ನು ಹಿಡಿಯಲು ದುಡುಕಿದ ಬಲ್ಲ ಬೆಕ್ಕಿಗೆ ನಡುವೆ ಇದ್ದ ಹಡಲಿಗೆಯು ದೊಡ್ಡ ಗುಡ್ಡವೇ? ಸಹಜವಾಗಿ ಹಡಲಿಗೆಯನ್ನು ಹಾರಿ ಇಲಿಯನ್ನು ಹಿಡಿಯುವದು. ಅಣುಮ-ತ್ಸ=ಹನುಮತ್. ಅಣುವಂ ಬಗೆದು=ಅತ್ಯಲ್ಪವೆಂದು ಭಾವಿಸಿ. ಮಂಕಡ-ತ್ಸ=ಮರ್ಕಟ. ಎರ್ದೆವಡಿ=ಎಗೆಯೆಂಬ ಬಾಗಿಲು.

(೫೫) ಗನ್ನಗತಕ=ಗನ್ನ+ಕತಕ ತ್ಸ-ಘನಕೃತಕ; ಬಹಳ ಮೋಸ.

(೫೬) ಕೋಡದೆ=ಶೀತವಾಗದೆ. ಪಾವು+ಅಡರದೆ; ನೆಲ್=ಬತ್ತ. ಒಡಲ್+ಇಜ=ಅಂಗಜ, ಕಾಮ. ಚೂಳಿ=ಕಿವಿಯ ಕೆಳಭಾಗ. ಬೆರಕೆ+ಬೆಳಗು=ನಾನಾ ವರ್ಣದ ಮಿಶ್ರಪ್ರಕಾಶ. ದೇಗುಲಗಳು ಕರ್ವೊಗೆಯ ಮುಗಿಲೊಡ್ಡಿನಿಂದಲೂ, ಮಣಿಕಲಶದ ಪ್ರಕಾಶದ ಇಂದ್ರಧನುಷ್ಯದಿಂದಲೂ, ಭೇರೀಧ್ವನಿಯ ಗುಡುಗಿನಿಂದಲೂ ಮಳೆಗಾಲದ ಭ್ರಾಂತಿಯನ್ನು ಹುಟ್ಟಿಸಿ ನವಿಲುಗಳಿಗೆ ಸಂತೋಷಕರವಾಗಿದ್ದವು. ಕೀಳ=ಶೂದ್ರ.

(೫೭) ಘಟ್ಟಿವಳ್ತಿ=ಗಂಧದ ಘಟ್ಟಿಯನ್ನು ತೇಯುವ ಹೆಂಗಸು. ಗಂದಿಗವಸರ=ಗಂಧದ ಅಂಗಡಿ. ಸೊನ್ನೆ=ಪೂಜ್ಯ (೦); ಬಂಗಾರ; ಬೆಳ್ಳಿ=ಶುಕ್ರಗ್ರಹ; ರೌಪ್ಯ. ಕರ್ವೊನ್=ಕರಿಯ ಗೊಬ್ಬರ; ಕಬ್ಬಿಣ. ಕಿಸುರ್=ಕೆಂಪುಬಣ್ಣ; ತಾಮ್ರ. ದೂಸಿಗವರದ=ಜವಳಿಯ ವ್ಯಾಪಾರಿ. ತಿಸುಳಿ-ತ್ಸ=ತ್ರಿಶೂಲಿನ್=ಶಿವ. ತೆಂಗಿನಕಾಯಿ ಮೂರು ಕಣ್ಣುಳ್ಳದ್ದಾಗಿಯೂ, ಮೇಲೆ ತೊಗಲಿನಂಥ ಹೊದಿಕೆಯುಳ್ಳದ್ದಾಗಿಯೂ ಇರುವದು. ನೀರುಳ್ಳಿಯು ಹರನಂತೆ ಜಡೆಯೂ (ಕೆಳಗೆ ಬೇರು) ಹರಿಯಂತೆ ಪೀತಾಂಬರ (ಪೀತವರ್ಣದ ಮೇಲಿನ ಪರೆ) ವುಳ್ಳದ್ದೂ ಇರುವದು. ಕಂಬಚ್ಚು=ತಂತಿಯನ್ನೆಳೆಯುವದು; ಅಡಗಲ್ಲ ಮೇಲೆ ಸುತ್ತಿಗೆಯಿಂದ ಹೊಡೆಯುವಾಗ "ಕೊಟ್ಟಂ ಕೆಟ್ಟಂ" ಎಂಬಂತಹ ಶಬ್ದವಾಗುವದು; ಕೊಟ್ಟವನು-ವಸ್ತಗಳಿಗಾಗಿ ಬಂಗಾರವನ್ನು ಕೊಟ್ಟವನು ಕೆಟ್ಟನು, ಅಕ್ಕಸಾಲಿಗರು ಅಪಹರಿಸುವರು

ಈ ಅರ್ಥದಿಂದ ಹೇಳಿರುವನು. ಅಗೆ=ಈ ಹೆಸರಿನ ಒಂದು ತರದ ಪೊಳೆ; ಮೂಲೆಯೆಬ್ಬಿಸುವಾಗ ಉಪಯೋಗವಾಗುವದು. ಬೆಟ್ಟು=ಗಾಢವಾಗಿ ಪ್ರವೇಶಿಸು. ಬೋಳೆಯರ ಓಜ=ಬೃಹಸ್ಪತಿ; ಚುಕ್ಕಿ=ಶುಕ್ರಾಚಾರ್ಯ. ಜಕ್ಕರ (ಯಕ್ಷರ) ಅರಸ=ಕುಬೇರ. ಮೈಗಣ್ಣ=ಇಂದ್ರ.

(೫೮) ಸಗ್ಗದ ಬಾಗಿಲ್ ತೆರೆಯದು=ಅಪುತ್ರನಿಗೆ ಸದ್ಗತಿಯಿಲ್ಲವೆಂದು ಶಾಸ್ತ್ರವಚನವುಂಟು. ನರಕಮಂ–ಮಗನಿಲ್ಲದವನಿಗೆ ಪುತ್ ಎಂಬ ನರಕವಾಗುವದು. ಈ ನರಕದಿಂದ ಮಗನು ರಕ್ಷಿಸುವನಾದದರಿಂದ ಮಗನಿಗೆ (ಪುತ್+ತ್ರ) ಪುತ್ರ ಎಂಬ ಹೆಸರಿದೆ.

ನವಿರ್+ಕುಳಿ=ರೋಮಕೂಪ. ನಡೆಮಾಡ—ನಡೆವ+ಮಾಡ=ವಿಮಾನ. ರೋಡಿಗ=ದುಷ್ಟ.

(೫೯) ಬೇಹು=ಸಂತಾಪ. ಸೂರ್ಯಸುತ=ಸೂರ್ಯನ ಮಗ, ಯಮ.

(೬೦) ಪುತ್ರವಾನ್‌ಭವ=ಮಕ್ಕಳುಳ್ಳವನಾಗು.

ಆಂಕೆ=ಅನ್ + ಕೆ=ಆಶ್ರಯ. ಗುಡಿಗಟ್ಟಿ=ಗುಡಿಗಟ್ಟಿದಂತೆ ಸೆಟೆದು ನಿಲ್ಲಲು ಹರ್ಷವನ್ನು ಸೂಚಿಸಲು ಎಂದು ಅರ್ಥ.

ಮಣ್ಮಳಿವೋಗಿ=ಮಣ್ಮಳಿ (ರೂಪುಗೆಟ್ಟ ಸಾವು) ಯನ್ನು ಹೊಂದಿ.

(೬೧) ನಿಮ್ಮಳಿಕೆ=ನಿಮ್ಮಳ (ತ್ಸ-ನಿರ್ಮಲ) + ಇಕೆ=ಸ್ವಚ್ಛತೆ. ಬಳಿಕೆಯ್=ಬೆಂಬತ್ತು.

ಅಹಮಹಮಿಕೆ=(ಅಹಂ=ನಾನು) ನಾನು ಮುಂದೆ ನಾನು ಮುಂದೆ ಎಂಬ ಭಾವ. ಕೇರಿ=ಹಾರಿಸಿ; ಸೂರುಳ್=ಪ್ರತಿಜ್ಞೆಮಾಡು.

(೬೨) ರೊಬ್ಬೆ=ಹೊಲಸು; ನೀಟದ=ಚಾಚಿದ (ನೀಡು–ಚಾಚು=ನೀಟ) ಕೀಳಿಲ್=ಕೆಳಗಿನ ನೆಲ. ಬಟ್ಟಚ್ಚಿ=ಬಟ್ಟೆತಾದ ಅಚ್ಚಿ (ತ್ಸ-ಅಕ್ಷಿ)=ದುಂಡಗಣ್ಣು. ಹೈತಿಗೆ–ತ್ಸ=ಪೈತೃಕ, ಶ್ರಾದ್ಧ. ಸಡ್ಡೆ-ತ್ಸ=ಶ್ರದ್ಧೆ. ಸಮ್ಮಂ (ತ್ಸ-ಶರ್ಮ) ಗುಂದಿದ, ಸುಖಗೆಟ್ಟ, ನಾಚಿಕೆಗೆಟ್ಟ. ಪುಚ್ಚ=ಕೇಡು. ಬಾಳ್ಸಬ=ಬಾಳ್+ಸಬ (ತ್ಸ-ಶವ)=ಜೀವಂತಹೆಣ. ರೆಪ್ಪಿ=ಹೊಡೆದು. ಸೊಪ್ಪಿ=ನಿವಾರಿಸಿ. ಆವಂ ಎಂಬದಕ್ಕೆ ಆವೊಂ ಎಂಬ ಹಳೆಯ ರೂಪವುಂಟು. ಪೆಣ್ಗಳ್ಳ=ರಾವಣ.

(೬೩) ಭಾರತಿ=ಭರತಪುತ್ರ; ಪುಷ್ಕಲ. ಪಂಚತ್ವ=ಮರಣ. ಪಾಂಗಿನ=ರೀತಿಯ.

(೬೪) ಪೊಂಪುಳಿ=ರೋಮಾಂಚ.

ಸೊಮ್ಮು+ಪೆರ್ಚೆ=ಸುಖ ಹೆಚ್ಚಿ. ಕಿಚಿಕಿಲ್=ಹ್ರೇಷಿಸು. ಟೆಬ್ಬರಿಸಿದ=ಕುಂಠಿತವಾಗಿ ಮಾಡಿದ. ಪೊಚ್ಚ+ಪೆಣ್=ನದಿಯೆಂಬ ಸ್ತ್ರೀಯು. ಕಿಸ್ನೆಲ=ಕೆಳಗು+ನೆಲ=ಪಾತಾಳ ಲೋಕ. ತಾಂಟು=ಸಂಘಟ್ಟಿಸು.

(೬೫) ನರೆ=ಬಿಳುಪಾಗು; ಜೇಂಕರಿಸು=ಕೊಂಡಾಡು.

(೬೬) ಕಪರ್ದಿ (ಕಪರ್ದ=ಜಡೆಮುಡಿ.)=ಶಿವ.

ಗಂಗೋತ್ತಮಾಂಗಂ=ಗಂಗೆ ಉತ್ತಮಾಂಗದಲ್ಲಿ (ಶಿರದಲ್ಲಿ) ಅವಂಗೆ, ಆತಂ=ಶಿವನು. ಬೋಳಯಿಸು=ಮೈಮೇಲೆ ಕೈಯಾಡಿಸು. ಸನ್ನೆವರೆ=ಸನ್ನೆ+ಪರೆ (ವಾದ್ಯ).

(೬೭) ಪಾವು+ಅಡರ್ದಂತೆ=ಹಾವು ಮೈಯನ್ನೇರಿದಂತೆ.

ದಪ್ಪಗಂ (ತ್ಸ-ದರ್ಪಕ=ಕಾಮ) ಪಗೆ ಅವಂಗೆ ಆತಂ. ದಪ್ಪಗವಗೆಯು-ಶಿವ,

ಗಜಾಸುರ—ಪೂರ್ವದಲ್ಲಿ ಒಬ್ಬ ಗಂಧರ್ವನು ತನ್ನ ಸತಿಯೊಡನೆ ವಿಮಾನದಲ್ಲಿ ಸಂಚರಿಸುತ್ತ ಕಾವೇರೀತೀರದಲ್ಲಿ ತಪವ ಗೈಯುತ್ತಿದ್ದ ಅಗಸ್ತ್ಯ ಮುನಿಯನ್ನು ಕಂಡು ಹಾಸ್ಯವಾಡಿ ತನ್ನ ಸತಿಯ ಮುಡಿಯ ಹೂವಿನಿಂದ ಹೊಡೆಯಲು ಋಷಿಯು ಕೆರಳಿ ನೀನು ಮತ್ತಗಜವಾಗು ಎಂದು ಶಾಪವಿತ್ತನು. ಈ ಗಂಧರ್ವನೇ ಗಜಾಸುರನೆಂದೆನಿಸಿ ಹರಿಬ್ರಹ್ಮೇಂದ್ರಾದಿ ದೇವತೆಗಳನ್ನೆಲ್ಲ ಯುದ್ಧದಲ್ಲಿ ಗೆದ್ದು ಓಡಿಸಲು ಶಿವನು ಲೀಲೆಯಿಂದ ಆತನನ್ನು ಸಂಹರಿಸಿ ಆ ಗಜಾಸುರನ ತೊಗಲನ್ನು ಹೊದೆದು ಕೊಂಡನು.

ಜಲಂಧರ—ಇಂದ್ರನು ದೈತ್ಯರನ್ನೆಲ್ಲ ಗೆದ್ದ ಬಳಿಕ ತನಗೆ ವೈರಿಯು ಬೇಕೆನಲು ಶಿವನ ಕೆಂಡಗಣ್ಣಿನ ಕಿಡಿಯು ಸಮುದ್ರದಲ್ಲಿ ಜಲಂಧರನೆಂಬ ಹೆಸರಿನಿಂದ ದೈತ್ಯನಾಗಿ ಹುಟ್ಟಿತು. ಜಲಂಧರನು ಸುರರ ಮೇಲೆ ದಂಡೆತ್ತಿ ಬರಲು ಅವರೆಲ್ಲ ಸೋತು ವೈಕುಂತಕ್ಕೆ ಬಂದರು. ಜಲಂಧರನು ಹರಿಬ್ರಹ್ಮಾದಿಗಳನ್ನೆಲ್ಲ ಸೆರೆಯಲ್ಲಿಟ್ಟು ಗರ್ವಿಸಿ ಕೈಲಾಸದ ಮೇಲೆ ಸಾಗಿ ಬರಲು ಶಿವನು ಜಲಂಧರನನ್ನು ಸಂಹರಿಸಿದನು. ಆ ದೈತ್ಯನ ಜೀವಜ್ಯೋತಿಯು ಶಿವನ ಹಸೆಗಣ್ಣಲ್ಲಿ ಐಕ್ಯವಾಯಿತು.

ಬಾಂಬೊಳಲ್=ಬಾನ್+ಪೊಳಲ್=ಆಕಾಶದೊಳಗಿನ ಪಟ್ಟಣ; ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಎಂಬ ಮೂವರು ರಕ್ಕಸರು ಬ್ರಹ್ಮನ ವರದಿಂದ

ಆಕಾಶದಲ್ಲಿ ಮೂರು ಪೊಳಲುಗಳನ್ನು ಕಟ್ಟಿಕೊಂಡು ಉದ್ಧತರಾಗಿದ್ದರು. ಇವರೇ ತ್ರಿಪುರಾಸುರರು. ದೇವತೆಗಳಿಗೆಲ್ಲ ನೋರಿನಿಂತ ಇವರನ್ನು ಶಿವನು ಸಂಹರಿಸಿದನು.

ಹನುಮಂತನು ಸಮುದ್ರಲಂಘನ ಮಾಡುವಾಗ ಸುರಸೆ ಎಂಬ ರಾಕ್ಷಸಿ, ಸಿಂಹಿಕೆ ಎಂಬವಳು ಮತ್ತು ಲಂಕಾಧಿದೇವತೆ ಈ ಮೂವರು ಆತನ ಗತಿಯನ್ನು ಪ್ರತಿಬಂಧಿಸಿದರು. ಸಿಂಹಿಕೆ ಎಂಬವಳಿಗೆ ಕವಿಯು ಸಿಂಹಿಣಿ ಎಂದು ಅಂದಿರುವನು. ಈಕೆ ರಾಹುವಿನ ತಾಯಿ. ಮಾರುತಿಯ ಛಾಯೆಯನ್ನು ಹಿಡಿದು ಆತನನ್ನು ಪ್ರತಿಬಂಧಿಸಿದಳು. ಮಾರುತಿಯು ತೀಕ್ಷ್ಣವಾದ ನಖಗಳಿಂದ ಆಕೆಯನ್ನು ಸೀಳಿ ಮುಂದೆ ಸಾಗಿದನು. ಲಂಕೆಯ ಬಳಿಯಲ್ಲಿ ಬಂದ ಬಳಿಕ ಲಂಕಾಧಿದೇವತೆಯು ಒಳಹೋಗಗೊಡಲಿಲ್ಲ. ಈಕೆಗೆ ಕವಿಯು ಲಂಕಿಣಿ ಎಂದು ಅಂದಿರುವನು. ಈಕೆಯನ್ನು ಗುದ್ದಿಗುದ್ದಿ ಸೋಲಿಸಿ ಲಂಕೆಯನ್ನು ಪ್ರವೇಶಿಸಿದನು. ಮಹಿರಾವಣನು ಪಾತಾಳಲಂಕೆಯಲ್ಲಿ ರಾಮಲಕ್ಷ್ಮಣರನ್ನು ಕದ್ದೊಯ್ದು ಇರಿಸಿದ್ದನು. ಅಲ್ಲಿಗೆ ಮಾರುತಿಯು ಹೋಗಿ ಯುಕ್ತಿಯಿಂದ ಅಹಿರಾವಣ ಮಹಿರಾವಣರನ್ನು ಕೊಂದು ರಾಮಲಕ್ಷ್ಮಣರನ್ನು ಸಂರಕ್ಷಿಸಿಕೊಂಡು ಬಂದನು.

ಕಚ್ಚಿರಿದ=ಜೋಡಿಯಾಗಿ ಸಂಧಿಸಿದ. ಜನ್ನ (ತ್ಸ-ಯಜ್ಞ)+ಪಗೆಯ=ಯಜ್ಞ. ಧ್ವಂಸಿ=ಶಿವ. ದಕ್ಷಪ್ರಜಾಪತಿಯು ಶಿವನ ಲಕ್ಷ್ಯವಿಡದೆ ಯಜ್ಞಮಾಡುತ್ತಿರಲು ಅಲ್ಲಿಗೆ ಶಿವಪತ್ನಿಯಾದ ಸತಿಯು ಹೋಗಲು ದಕ್ಷನು ಶಿವನನ್ನು ನಿಂದಿಸಿದನು. ಆಗ ಸತಿಯು ತನ್ನ ತನುವ ನೀಗಲು ರುದ್ರಕೋಪದಿಂದ ವೀರಭದ್ರನವತರಿಸಿ ದಕ್ಷಯಜ್ಞವನ್ನು ಹಾಳುಮಾಡಿದನು.

ಬಿಗುರ್ವರಿಜ=ಬಿಗುರ್ವ (ಜನರು ಅಂಜುವ) ಪರಿಜು (ವೇಷ) ಅವಂಗೆ ಆತಂ, ಭೈರವ.

(೬೮) ತ್ರ್ಯಂಬಕ-ತ್ರಿ+ಅಂಬಕ=ಮುಕ್ಕಣ್ಣ. ಪಳಗ-ತರಗೆಲೆ.

(೬೯) ಅಂಡಗಾಯ್ತ-ಅಧಿಕಾರಿ. ಮುಸುಂಡು ನೀಡಿದಾಗುವದು, ಬಾಲವು ಮುರುಟುವುದು ಮೊದಲಾದವು ಅವರ ಚಿಂತೆಯ ಲಕ್ಷಣಗಳು. ತುಂತುರ್ವನಿಗಳೊಡವೆರೆದ, ತನಿಗಂಪಿಂ ಪೊರೆದ ಕಿರುಗಾಳಿ ಎಂದು ಗಾಳಿಯಲ್ಲಿ ಶೈತ್ಯ ಸೌರಭ್ಯ ಮಾಂದ್ಯ ಗುಣಗಳನ್ನು ಹೇಳಿರುವನು. ಮೊಡವಿ-ಮೊಡಿಬಕ್ಕಿ. ಕುಲಪತಿ— ಹತ್ತು ಸಾವಿರ ಮುನಿಗಳಿಗೆ ಅನ್ನಾದಿಗಳನ್ನು ಕೊಟ್ಟು ಅಧ್ಯಯನ ಹೇಳಬಲ್ಲ ಋಷಿಶ್ರೇಷ್ಠ. ಮಾಲಿಸಿ=ಕಡೆಗಣ್ಣಿಂದ ನೋಡಿ.

(೩೦) ತಿಸುಳಿಗೆಯ್ಯಂ=ತ್ರಿಶೂಲಹಸ್ತ, ಶಿವ. ಜೋಸೆ-ತ್ಸ-ಯೋಷಾ, ತರುಣಸ್ತ್ರೀ. ಅಘಮರ್ಷಣ-ಪಾಪನಾಶಕ ಮಂತ್ರ, ಜಪ, ಸ್ನಾನ ಮುಂ, ಮುಕ್ಕುಳಿಸು—ಉಗುಳು; ಜಕ್ಕುಳಿಸು-ಪ್ರೇಮಭಾಷಣ ಮಾಡು. ಮತ್ತು-ಮದ. ಕಳ್ಬಣಿ=ನಾಯಿ; ಇರುಳ್ ಕಂಡ ಬಾವಿಯೊಳ್ ಪಗಲ್ ಬಿಳ್ದಂತೆ—ಮೊದಲೇ ಅಂದರೆ ಯಾವಾಗ ಜ್ಞಾತವಾಗಿರಬಾರದೋ ಆವಾಗಲೇ ಜ್ಞಾತವಾದ ವಿಷಯದಲ್ಲಿ ಹಿಂದುಗಡೆ ಅಜ್ಞಾನದಿಂದ ದೋಷವನ್ನು ಮಾಡುವದು ಈ ಅಭಿಪ್ರಾಯದಲ್ಲಿ ಈ ದೃಷ್ಟಾಂತವು. ಬಾಡಬ-ಬ್ರಾಹ್ಮಣ, ಕುದುರೆ; ಸಾಲಿಗಂ ಮೂಲಿಗನಾದ ಸಂತಸ-ಸಾಲಮಾಡಿದವನು ತಾನೇ ಮೂಲಿಗನು ಅಂದರೆ ಮೂಲಧನ (ಭಂಡವಲ) ವುಳ್ಳವನು ಆದರೆ ಯಾವ ಸಂತೋಷವೋ ಆ ಸಂತೋಷ.

(೩೧) ಪೊಂಗು-ವಿಕಾಸ. ಬಾಂಗೂಂದಲ-ಬಾನ್ + ಕೂದಲ್ + ಅ-ವ್ಯೋಮಕೇಶ-ಶಿವ. ಅಚ್ಚಸರ-ಅಕ್ಷಮಾಲೆ. ಧನ್ಯರೆವು-ಧನ್ಯರಾದೆವು. ಅಟಮಟಿಸು—ಮೋಸಮಾಡು. ಜವನಿಕೆ-ತೆರೆ, (ಪರದೆ) ನಿಮಗೆ ಧರ್ಮಂ ಕರ್ಮಮೆ. ಕರ್ಮವೇ ನಿಮಗೆ ಧರ್ಮವು; ನೀವು ಕರ್ಮವನ್ನು ಮಾಡುತ್ತಲೇ ಇರತಕ್ಕದ್ದೆಂದುಅಭಿಪ್ರಾಯ. ಪೂವೊರ್ಕುಳ=ಪೂ+ಪೊರ್ಕುಳ್ + ಅ=(ಬ.ವ್ರೀ.) ಕಮಲನಾಭ, ವಿಷ್ಣು; ಗಂಗಾವರ್ತಸನಾಭಿ=ಗಂಗಾನದಿಯ ಆವರ್ತಕ್ಕೆ (ಸುಳಿಗೆ) ಸಮಾನವಾದ-ತಗದೇರ=ಅಗ್ನಿ. ನೇಣ್ಗಯ್ಯ=ವರುಣ. ಇಲ್ಲಿ=ಈ ಲೋಕದಲ್ಲಿ.

(೩೨) ಭಂಗುರಮಪ್ಪಕರ್ಮ—ಕರ್ಮವು ಕರ್ತೃಜನ್ಯವಾದದರಿಂದ ಕರ್ಮಜನ್ಯ ಫಲವಾದರೂ ಭಂಗುರವೆಂದು ಅಭಿಪ್ರಾಯ. ಕಣ್ಬೆಗಡಿನ-ಕಣ್ಣಿನ ಭ್ರಾಂತಿಯ, ಕಣ್ಣಿಗೆ ಚಂದವೆಂದು ತೋರುವ. ಬರ್ದಿನ ಪೊರ್ದಿನ ಮುನ್ನಮೆ-ಮರಣದ ಸಂಬಂಧವಾಗುವದಕ್ಕೆ ಮುಂಚೆಯೆ.

(೩೩) ನೀಳ್ದ ಅಂಗದ-ನಿಡಿದಾದ ವ್ಯೆಯ; ಅಂಗದನು ರಾವಣನ ಬಳಿಗೆ ರಾಮನ ದೂತನಾಗಿ ಹೋಗಿದ್ದನು. ಬಿತ್ತರಿಗೆ-ಸಿಂಹಾಸನ, ಅಚ್ಚುಳಾಯ್ತು-ಸೇವಕ. ಬಿಲ್ಲುಂಬೆರಗು=ಬಹಳ ಆಶ್ಚರ್ಯ.

(೩೪) ನಿಯೋಗಿ—ಸೇವಕ; ದೆಖ್ಖಾಳ-ಆಡಂಬರ; ಅತಿರಥ—ರಥಾತಿಕ್ರಮಕಾರಕ; "अमितान्योधयेद्यस्तु संप्रोक्तोऽतिरथस्तु सः" ಈ ಲಕ್ಷಣದ ವೀರ. ಅರ್ಧರಥ-ಅರ್ಧರಥಿಕನು; ಸಾಮಾನ್ಯ ತರದ ರಥಿಕನು. ಸಾಟಿ-ಸಾಟಿ ಎಣೆ ತೊಣೆ ಈ ಶಬ್ದಗಳು ಸಾದೃಶ್ಯಾರ್ಥಕಗಳು. ಕಿತವ-ವಂಚಕ. ಅಲೆ ಕರ್ಮಂ

ಎಂತು ಅಂತು ಕೊರ್ವಂ ಪಿಳಿದು ಎಂದನ್ವಯ. ತೋಟಿಗ=(ತೋಟಿ+ಗ) ಕಲಹಕಾರ. ಗರುವಿಕೆಗೆ ತೊಡೆ-ಗೌರವಕ್ಕೆ ಜೋಡಿಯುಂಟೇ? ಜನ್ಯ-ಕಾಳಗ. ಚಂಪಕ ಪುಷ್ಪವು ತುಂಬಿಗಳಿಗೆ ತಲೆವೇನೆಯನುಂಟು ಮಾಡುವದು.

(೨೫) ಪ್ರಾಣಂಗಳ್ಗೆ ದರ್ವೀಕರಂ—ಪ್ರಾಣವಾಯುವಿಗೆ ಸರ್ಪವು (ವಾಯುಭಕ್ಷಕ) ದರ್ವೀಕರ-ಸವುಟು ಕೈಯಲ್ಲಿ ಉಳ್ಳವ; ಅಡಿಗೆಯವನೆಂದೂ ಅರ್ಥವು. ಅಡುಕಳ-ಅಡಿಗೆಯ ಮನೆ. ಸುಂಟಿಗೆ—ಮಾಂಸ. ಚವಲಂಬ-ರೆಪ್ಪೆ. ಸವಗ=ಕವಚ. ಪುಗ್ಗು=ಗರ್ವ. ಹೂಟಿಗ=ಕಲಹಕಾರ. ಪಿಳ್ಕು=ಹಿಡಿಕೆ. ಪುಂಖಾನುಪುಂಖ=ಗರಿಗೆ ಹೊಂದಿಗರಿ ಆಗುವಂತೆ. ಪುಣಂಬು=ಬಾಣ. ವಾರುವ=ಕುದುರೆ. ಪೇರಡಿ=ನಾಯಿ.

(೨೬) ಅಡಿಮುಡಿಯೊಂದಾಗೆ ಮಣಿದು=ತಲೆಯು ಪಾದಕ್ಕೆ ಹತ್ತುವಂತೆ ಮಣಿದು ಬಣಗು=ಡಂಭ. ಬೆನಕನಂ... ಕುಂಬಿಟ್ಟೆಂ=ಬೆನಕನ (ವಿನಾಯಕನ) ವಾಹನವೆಂದು ಕ್ಷುದ್ರವಾದ ಇಲಿಗೆ ಕುಂಬಿಟ್ಟೆಂ (ನಮಸ್ಕರಿಸಿದೆನು.) ಬಾನ ಮೀನಂ-ಆಕಾಶದ ನಕ್ಷತ್ರವನ್ನು. ಎನತ್ತು (ಎನ್ನ) ಅಪರಾಧಂ ಎನಿತು? ಎಂದನ್ವಯ.

(೨೭) ಬಾಳ್ಗೆಟ=ಬಾಳುವೆಗೆಟ್ಟ. ಎರೆವರ್=ತಿರುಕರು.

(೨೮) ಸೀಮಂತೋನ್ನಯನ=ಗರ್ಭಿಣಿಯ ಗರ್ಭಕ್ಕೆ ಸಂಸ್ಕಾರ ಮಾಡುವ ಒಂದು ವೈದಿಕ ಕರ್ಮ. ಚೊಲ್ಲೆಯ= ದಂಡೆ. ಸತ್ತಿನ= ಸತ್ವದ.

(೨೯) ಪುತ್ತಿನ ಪುತ್ರ=ವಾಲ್ಮಿಕಿ. ಅಲಂಬಾಲಕರ್ = ಜೋಲಾಡುವ ಮುಂಗುರುಳುಳ್ಳವರು. ಬೆಲ್ಲವತ್ತ-ತ್ಸ=ಬಿಲ್ವಪತ್ರ. ಗುಂಡಿಗೆ=ಕಮಂಡಲು. ಚಿಣ್ಣರ್=ಬಾಲಕರು.

ಚೌಲ=ಚಂಡಿಕೆ ಬಿಡಿಸುವದು; ಮೋಡ=ಮೇಘ; ಮತ್ತು ಮೂಢಭಾವ. ಬೋಸರಿಸು=ಕಪಟಾದರ ಮಾಡು.

(೩೦) ಅರ್ತು=ಅರದು ಎಂಬರ್ಥದ ರೂಪವು. ಉತ್ತರಿಗೆ=ಉತ್ತರೀಯ, ಹೊದ್ದುಕೊಳ್ಳುವ ವಸ್ತ್ರ. ಮಾಣಿ=ಬಾಲಕ-ತ್ಸ=ಮಾಣವಕ. ತುರುವಳ=ದನಗಾಹಿ. ಕಣ್ಮೂರಿರವೇಡಾ? ಮೂರು ಕಣ್ಣಿರಬೇಡವೇ? ಅಸಾಧಾರಣತೆಯಿರಬೇಕಲ್ಲವೇ ಎಂದು ಅಭಿಪ್ರಾಯ. ಪೊಟ್ಟೆಯೊಳೆ ಕೆಲೆವ ಅಧಟು=ತತ್ತಿಯಲ್ಲಿರು

ವಾಗಲೇ ಗರ್ಜಿಸುವ ಸಾಮರ್ಥ್ಯ. ಚಿಕ್ಕ ಬಾಲಕ... ...ವಾಗಲೇ ಇಷ್ಟೊಂದು ಸಾಮರ್ಥ್ಯ.

(೮೧) ಪ್ರಾಯ=ವಯಸ್ಸು. ನಿರ್ಧನರ್ ಅಪ್ಪಿನಂ=ಬಡವರಾಗಿರುತ್ತಿರಲು. ನಾರಿ=ಹೆದೆ.

ಅರಿಗಜಾಂಕುಶ=ಅರಿಗಳೆಂಬ ಗಜಗಳಿಗೆ ಅಂಕುಶಸ್ವರೂಪನಾದ.

(೮೨) ಬವರಿಗ=ವೈರಿ; ಮರೆಗೊಣಸು=ಚಿಗರೆಯ ಮರಿ. ಪಲ್ಲಮರಿ=ಆನೆ. ಬೆಸೆ=ಅರಳೆಯ ಹಿಂಜುವ ಬಿಲ್ಲು. ಕರಡ=ತ್ಸ=ಕರಟ, ಕಾಗೆ.

(೮೩) ರೋಡಿಸು=ತಿರಸ್ಕರಿಸು. ಏಡಿಸು=ಅಣಕಿಸು. ತಂದೆಮಕ್ಕಳ ಮೊದಲಾಯ್ತೆ?=ತಂದೆಮಕ್ಕಳು ಹೋರಾಡುವದಕ್ಕೆ ಇದೇ ಆರಂಭವಾಯಿತೇ? ತಳಿರ್ತ ಅಸುಗೆಯುಂ=ಚಿಗುರಿದ ಅಶೋಕಮರವನ್ನು (ಅಶೋಕದ ಚಿಗುರೆಲೆ ಕೆಂಪಗಿರುವವು.) ಕೆಂಪಗಾದದ್ದನ್ನು; ರಕ್ತ ಬಂದದ್ದನ್ನು.

(೮೪) ಒರೆ=ಸ್ರವಿಸು.

(೮೫) ಮರೆನುಡಿ=ಆಕಾಶವಾಣಿ. ಸಿಗ್ಗಿನೊಳಾದರ್ ನಾಚಿಕೆಬಟ್ಟರು. ಉರುಗು=ವಕ್ರತೆ ನಿರಾಮಯಂ-ಆರೋಗ್ಯವು. (ಆಮಯ-ರೊಗ).

(೮೬) ನುಡಿಗಬ್ಬ-ವಚನಕಾವ್ಯ. ಕವಿಯು ತನ್ನ ಗ್ರಂಥದ ಪ್ರಾಶಸ್ತ್ಯವನ್ನು ಇಲ್ಲಿಯ ಸಂಭಾಷಣದಿಂದ ವ್ಯಕ್ತಪಡಿಸಿರುವನು.

ಎನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ-ಕಥೆ ಸೊಗಸೆನಿಸಿದರೆ ಉಡುಗೊರೆಯು ನೀವೆನೆಂದು ಮನೋರಮೆ ಮೊದಲು ಹೇಳಿದ್ದಳು. ಈಗ ಆಕೆಯ ಬಾಯಿಂದಲೇ ಕತೆಯು ಸೊಗಸಾದುದೆಂದು ಒಡಂಬಡಿಸಿದನು. ಅದರಿಂದ ಆಕೆ ಹೀಗೆ ಅಂದಳು.

(೮೭) ಪಟ್ಟುಡೆ=ರೇಶಿಮೆ ಬಟ್ಟೆ.

ರಕ್ಷೋಘ್ನಸೂಕ್ತ=ರಾಕ್ಷಸರನ್ನು ನಾಶಗೊಳಿಸುವ ಮಂತ್ರ. ಪೂರ್ಣಾಹುತಿ-ಮುಖ್ಯ ಹೋಮ. ಬಳ್ಳ-ಒಂದು ವಿಧದ ಮಾಪು. ಹೇರು=ಭಾರ—ಕೆಲವೊಂದು ತೂಕ.

(೮೮) ಶ್ಲೋಕ—ಆತ್ಮಂ ದೊರೆಕೊಂಡಿರ್ಪಿನಂ ನರಂ ಜೀವರಾಶಿಗೆ ಪಿರಿಯನಾದಂ. ಆತ್ಮವು ದೋಷರಹಿತವಾಗಿದ್ದರೆ ನರನ ಪಿರಿಯತನವು ಇಮ್ಮಡಿ ಹೆಚ್ಚುವದು.

ಸಂಪೂರ್ಣ.

126